ಶನಿವಾರ, ಸೆಪ್ಟೆಂಬರ್ 16, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ ಜವಾನ್ ಚಲನಚಿತ್ರದ ಯಶಸ್ವಿನ ಸಂತಸವನ್ನು ಮುಂಬೈನಲ್ಲಿ ಹಂಚಿಕೊಂಡ ಶಾರುಖ್‌ಖಾನ್



ಸಮಾಜ ಕಲ್ಯಾಣ ಇಲಾಖೆ

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ

15 ಸೆಪ್ಟೆಂಬರ್ 2023



ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

2,31,66,401 ಜನರಿಗೆ ಧನ್ಯವಾದಗಳು



WORLD BOOK OF RECORDS
LONDON

PROVISIONAL CERTIFICATE

Social Welfare Department
Government of Karnataka
India

Has been adjudicated for largest number of people to read the preamble of the Indian constitution simultaneously at multiple locations of Karnataka in Kannada and English languages on 15 September 2023 under the guidance of Hon'ble Minister Dr. H.C. Mahadevappa.

PREMIUM EDITION

C.No.-WBR/RC/1280/2023
Date: 15th September 2023

Adjudicated by
Iudex International Law

WORLD BOOK OF RECORDS
www.worldbookofrecords.uk

84 ದೇಶ, ಭಾರತದ 507 ಜಿಲ್ಲೆಯಿಂದ

ಭಾರತದ ಸಂವಿಧಾನ ಪೀಠಿಕೆಯ ಜಾಗತಿಕ ವಾಚನದ ವಿಶ್ವ ದಾಖಲೆ

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ , ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಶ್ರೀ ಡಿ. ಕೆ. ಶಿವಕುಮಾರ್, ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವಾದ ಸೆಪ್ಟೆಂಬರ್ 15 ರಂದು ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಸಹಸ್ರಾರು ಮಕ್ಕಳೊಂದಿಗೆ ಸಂವಿಧಾನ ಪೀಠಿಕೆ ವಾಚನ.

ಶುಭ ಕೋರುವವರು :

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ನಿಗಮ ಮಂಡಳಿಗಳು

www.thepreamble-swdkar.in   ThePreambleGoK

ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು; ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

₹45 ಸಾವಿರ ಕೋಟಿಯ ಶಸ್ತ್ರಾಸ್ತ್ರ, ರಕ್ಷಣಾ ಸಾಮಗ್ರಿ ಖರೀದಿಸಲು ಅನುಮತಿ • ಧ್ರುವಾಸ್ತ್ರ ಕ್ಷಿಪಣಿ ಖರೀದಿಗೂ ಅಸ್ತು

ಎಚ್‌ಎಎಲ್: 12 ಯುದ್ಧವಿಮಾನ ಖರೀದಿ

ನವದೆಹಲಿ (ಪಿಟಿಐ): ಸುಮಾರು ₹45 ಸಾವಿರ ಕೋಟಿ ವೆಚ್ಚದಲ್ಲಿ, ಎಚ್‌ಎಎಲ್ ನಿರ್ಮಿತ 12 ಸುಖೋಯ್‌-30 ಎಂಕೆಐ ಯುದ್ಧ ವಿಮಾನಗಳು ಮತ್ತು ಆಕಾಶದಿಂದ ನೆಲದ ಮೇಲೆ ದಾಳಿ ನಡೆಸುವ ಕಡಿಮೆ ವ್ಯಾಪ್ತಿಯ ಧ್ರುವಾಸ್ತ್ರ ಕ್ಷಿಪಣಿ ಸೇರಿದಂತೆ ವಿವಿಧ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಮಗ್ರಿಗಳ ಖರೀದಿಗೆ ರಕ್ಷಣಾ ಸಚಿವಾಲಯ ಶುಕ್ರವಾರ ಅನುಮತಿ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ನೇತೃತ್ವದ ರಕ್ಷಣಾ ಖರೀದಿ ಮಂಡಳಿಯು (ಡಿಎಸಿ) ಒಟ್ಟು ಒಂಬತ್ತು ಖರೀದಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾ ಭದ್ರತೆ, ಸಂಚಾರ, ದಾಳಿಯ ಸಾಮರ್ಥ್ಯ ಮತ್ತು ಯಂತ್ರಸಜ್ಜಿತ ಪಡೆಗಳ ಬಲ ಹೆಚ್ಚಿಸುವ ಸಲುವಾಗಿ ಲಘು ಶಸ್ತ್ರಸಜ್ಜಿತ ವಿವಿಧೋದ್ದೇಶ ವಾಹನಗಳು (ಎಲ್‌ಎಎಂವಿ) ಮತ್ತು ಸಮಗ್ರ ಕಣ್ಗಾವಲು ಹಾಗೂ ದಾಳಿ ವ್ಯವಸ್ಥೆ (ಐಎಸ್‌ಎಟಿ -ಎಸ್) ಖರೀದಿಗೆ ಡಿಎಸಿ ಅನುಮೋದನೆ ನೀಡಿದೆ ಎಂದು ಸಚಿವಾಲಯ ತಿಳಿಸಿದೆ.

ಫಿರಂಗಿ ಬಂದೂಕುಗಳು ಮತ್ತು ರೇಡಾರ್‌ಗಳ ತ್ವರಿತ ಸಜ್ಜುಗೊಳಿಸು-ವಿಕೆ ಮತ್ತು ನಿಯೋಜನೆಗಾಗಿ ಭಾರಿ ವಾಹನಗಳು (ಹೈ ಮೊಬಿಲಿಟಿ ವೆಹಿಕಲ್–ಎಚ್‌ಎಂವಿ), ಬಂದೂಕು ಟೋಯಿಂಗ್ ವಾಹನಗಳ ಖರೀದಿ ಹಾಗೂ ಭಾರತೀಯ ನೌಕಾಪಡೆಗೆ ಸಾಗರ ಕಾರ್ಯಾಚರಣೆಯ ಸಾಮರ್ಥ್ಯ ಹೆಚ್ಚಿಸಲು ಅತ್ಯಾಧುನಿಕ ವ್ಯವಸ್ಥೆ ಇರುವ ಸರ್ವೇಕ್ಷಣಾ ಹಡಗುಗಳ ಖರೀದಿಗೂ ಡಿಎಸಿ ಅನುಮೋದನೆ ನೀಡಿದೆ ಎಂದು ಹೇಳಿದೆ.

ಡಾರ್ನಿಯರ್ ಯುದ್ಧ ವಿಮಾನಗಳ ಕಾರ್ಯಾಚರಣೆಯ ನಿಖರತೆ ಮತ್ತು ವಿಶ್ವಾಸಾರ್ಹತೆ ಖಾತ್ರಿಗೆ ಅವುಗಳನ್ನು ಏವಿಯಾನಿಕ್ ಮೇಲ್ದರ್ಜೆಗೇರಿ-ಸುವ ಭಾರತೀಯ ವಾಯುಪಡೆಯ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ.

‘ಭಾರತೀಯ ರಕ್ಷಣಾ ಉದ್ಯಮವನ್ನು ಉತ್ತೇಜನ’: ದೇಶೀಯ ಅತ್ಯಾಧುನಿಕ ಎಎಲ್‌ಎಚ್ ಎಂಕೆ-4 ಹೆಲಿಕಾಪ್ಟರ್‌ಗಳಿಗೆ ಸ್ವದೇಶಿಯ ನಿಖರ ಮಾರ್ಗದರ್ಶಿ ಅಸ್ತ್ರವಾದ ಆಕಾಶದಿಂದ ನೆಲದ ಮೇಲೆ ದಾಳಿ ನಡೆಸುವ ಕಡಿಮೆ ವ್ಯಾಪ್ತಿಯ ಧ್ರುವಾಸ್ತ್ರ ಕ್ಷಿಪಣಿ ಖರೀದಿಸಲು ಮತ್ತು ಎಚ್‌ಎಎಲ್‌ನಿಂದ 12 ಎಸ್‌ಯು-30 ಎಂಕೆಐ ಯುದ್ಧ ವಿಮಾನಗಳ ಖರೀದಿಗೂ ಅನುಮೋದನೆ ನೀಡಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

‘ಭಾರತೀಯ ರಕ್ಷಣಾ ಉದ್ಯಮವನ್ನು ಉತ್ತೇಜಿಸುವ ನಿಟ್ಟನಲ್ಲಿ ದೇಶದಲ್ಲೇ ಸ್ಥಳೀಯವಾಗಿ ವಿನ್ಯಾಸಗೊಳಿಸಿ, ಅಭಿ-ವೃದ್ಧಿಪಡಿಸಿ ಮತ್ತು ತಯಾರಿಸಿದ (ಐಡಿಎಂಎಂ) ಈ ಎಲ್ಲ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಮಗ್ರಿಗಳನ್ನು ಭಾರತೀಯ ಶಸ್ತ್ರಾಸ್ತ್ರ ತಯಾರಕರು ಮತ್ತು ಮಾರಾಟಗಾರರಿಂದ ಖರೀದಿಸಲಾಗು-ವುದು. ಇದು ‘ಆತ್ಮನಿರ್ಭರ ಭಾರತ’ದ ಗುರಿ ಸಾಧಿಸುವಲ್ಲಿಯೂ ನೆರವಾಗಲಿದೆ’ ಎಂದೂ ರಕ್ಷಣಾ ಸಚಿವಾಲಯ ಹೇಳಿದೆ.

ರಕ್ಷಣಾ ಖರೀದಿ ಮಂಡಳಿಯು ಖರೀದಿಗೆ ಅನುಮೋದನೆ ನೀಡಿರುವ ರಕ್ಷಣಾ ಸಾಮಗ್ರಿ ಮತ್ತು ಶಸ್ತ್ರಾಸ್ತ್ರಗಳ ಪಟ್ಟಿಯಲ್ಲಿರುವ ಡಾರ್ನಿಯರ್ ವಿಮಾನ , ಧ್ರುವಾಸ್ತ್ರ ಕ್ಷಿಪಣಿ –‘ಎಕ್ಸ್’ ಚಿತ್ರಗಳು

ಸುದ್ದಿ 2 ನಿಮಿಷ

17ರಂದು ಪ್ರಧಾನಿ ಮೋದಿಯಿಂದ ಐಐಸಿಸಿ ಉದ್ಘಾಟನೆ

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ದ್ವಾರಕಾದಲ್ಲಿರುವ ಯಶೋಭೂಮಿ ಹೆಸರಿನ ಇಂಡಿಯಾ ಇಂಟ-ರ್‌ನ್ಯಾಷನಲ್ ಕನ್ವೆನ್ಷನ್ ಆ್ಯಂಡ್ ಎಕ್ಸ್‌ಪೊ ಸೆಂಟರ್ (ಐಐಸಿಸಿ) ಅನ್ನು ಭಾನುವಾರ ಉದ್ಘಾಟಿಸ-ಲಿದ್ದಾರೆ. ಇದರೊಂದಿಗೆ ದ್ವಾರಕ ಸೆಕ್ಟರ್ 21ರಿಂದ ದ್ವಾರಕಾ ಸೆಕ್ಟರ್ 25ರವರೆಗೆ ವಿಸ್ತರಿಸಿರುವ ದೆಹಲಿ ಏರ್‌ಪೋರ್ಟ್ ಮೆಟ್ರೊ ಎಕ್ಸ್‌ಪ್ರೆಸ್ ಮಾರ್ಗವನ್ನೂ ಅವರು ಉದ್ಘಾಟಿ-ಸಲಿದ್ದಾರೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ದೇಶದಲ್ಲಿ ಸಭೆಗಳು, ಸಮಾವೇಶಗಳು ಹಾಗೂ ಪ್ರದರ್ಶನಗಳನ್ನು ನಡೆಸಲು ವಿಶ್ವದರ್ಜೆಯ ಮೂಲ ಸೌಕರ್ಯ ಹೊಂದಬೇಕೆಂಬುದು ಮೋದಿ ಅವರ ಧ್ಯೇಯ. ಈ ಧ್ಯೇಯಕ್ಕೆ ಯಶೋಭೂಮಿಯ ಕಾರ್ಯಾಚರಣೆ ಉತ್ತೇಜನ ನೀಡಲಿದೆ’ ಎಂದರು.

‘ಯಶೋಭೂಮಿಯು ಒಟ್ಟು 8.9 ಲಕ್ಷ ಚದರ ಮೀಟರ್‌ಗಿಂತ ಹೆಚ್ಚಿನ ಯೋಜನಾ ಪ್ರದೇಶ ಮತ್ತು 1.8 ಲಕ್ಷ ಚದರ ಮೀಟರ್‌ಗಿಂತಲೂ ಹೆಚ್ಚಿನ ಒಟ್ಟು ನಿರ್ಮಿತ ಪ್ರದೇಶದಲ್ಲಿ ಇದೆ. ಸಮಾವೇಶ ಭವನವು 73 ಸಾವಿರ ಚದರ ಮೀಟರ್‌ನಲ್ಲಿ ನಿರ್ಮಿ-ತವಾಗಿದ್ದು, 15 ಕೋಣೆಗಳಿವೆ. ಸಭಾಂಗಣ, ವೈಭವಯುತವಾದ ಬಾಲ್ ರೂಂ, ಒಟ್ಟು 11 ಸಾವಿರ ಪ್ರತಿನಿಧಿಗಳು ಭಾಗವಹಿಸಬಹು-ದಾದ ಸಾಮರ್ಥ್ಯವಿರುವ 13 ಸಭಾ ಕೋಣೆಗಳಿವೆ’ ಎಂದರು.

‘ತುರ್ತು ಸಂದೇಶ’ ರವಾನೆ ವ್ಯವಸ್ಥೆ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತುರ್ತು ಸಂದರ್ಭಗಳಲ್ಲಿ ಜನರಿಗೆ ಕ್ಷಣಾರ್ಧದಲ್ಲಿ ಎಚ್ಚರಿಕೆ ಸಂದೇಶ ನೀಡುವ, ಜನರ ಸುರ-ಕ್ಷತೆಯನ್ನು ಹೆಚ್ಚಿಸುವ ಉದ್ದೇಶದ ನೂತನ ‘ಎಮರ್ಜೆನ್ಸಿ ಅಲರ್ಟ್’ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗವನ್ನು ದೂರಸಂಪರ್ಕ ಇಲಾಖೆ (ಡಿಒಟಿ) ದೇಶದಾದ್ಯಂತ ಶುಕ್ರವಾರ ನಡೆಸಿತು.

‘ಎಮರ್ಜೆನ್ಸಿ ಅಲರ್ಟ್: ಸೀವಿಯರ್’ ಎಂಬ ಮಾದರಿ ಸಂದೇಶವೊಂದನ್ನು ಎಲ್ಲ ಮೊಬೈಲ್ ಬಳಕೆದಾರರಿಗೆ ರವಾ-ನಿಸಲಾಗಿತ್ತು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಈ ವ್ಯವಸ್ಥೆ-ಯನ್ನು ಜಾರಿಗೊಳಿಸುತ್ತಿದ್ದು, ಪರೀಕ್ಷಾ-ರ್ಥವಾಗಿ ಈ ಸಂದೇಶವನ್ನು ರವಾನಿಸ-ಲಾಗಿತ್ತು. ಇಂಗ್ಲಿಷ್ ಮತ್ತು ಹಿಂದಿಯಲ್ಲಿದ್ದ ಈ ಸಂದೇಶವು ತಲುಪಿದ ನಂತರ ಮೊಬೈಲ್ ಫೋನ್‌ಗಳು ಜೋರಾದ ಶಬ್ದದೊಂದಿಗೆ ಕಂಪಿಸುವ ಮೂಲಕ ಜನರನ್ನು ಎಚ್ಚರಿಸಿದವು.

ಡಿಒಟಿ ಹಾಗೂ ಎನ್‌ಡಿಎಂಎ ಸಹಭಾಗಿತ್ವದಲ್ಲಿ ಈ ತುರ್ತು ಸಂದೇಶ ರವಾನಿಸುವ ‘ಸೆಲ್ ಬ್ರಾಡ್‌ಕಾಸ್ಟ್ ಅಲರ್ಟ್ ಸಿಸ್ಟಮ್’ನ ಪರೀಕ್ಷಾರ್ಥ ಪ್ರಯೋಗ ನಡೆಯಿತು.

ಸನಾತನ ಧರ್ಮ ಒಪ್ಪಿಕೊಂಡಿದ್ದೇವೆ: ಕಮಲ್ ನಾಥ್

ಕಮಲ್ ನಾಥ್

ಭೋಪಾಲ್ (ಪಿಟಿಐ): ‘ಭಾರತ ಹಲವಾರು ಮತಗಳಿಗೆ ಆಶ್ರಯ ನೀಡಿದ್ದು, ಸನಾತನ ಧರ್ಮವು ಯಾವುದೇ ಮತ, ನಂಬಿಕೆಗಳನ್ನು ದೂರವಿಡುವಂತೆ ಯಾರಿಗೂ ಬೋಧಿಸುವುದಿಲ್ಲ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಕಮಲ್ ನಾಥ್ ಶುಕ್ರವಾರ ಹೇಳಿದ್ದಾರೆ.

ಅಶೋಕನಗರದಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಕಮಲ್ ನಾಥ್, ‘ನಾವೆಲ್ಲರೂ ಸನಾತನ ಧರ್ಮವನ್ನು ಒಪ್ಪಿಕೊಂಡಿದ್ದು, ಇದರ ಬಗ್ಗೆ ಪ್ರತಿಯೊಬ್ಬರಿಗೂ ಹೇಳುವ ಅಗತ್ಯ ಇಲ್ಲ’ ಎಂದರು.

ವಿಪಕ್ಷಗಳ ಮೈತ್ರಿಕೂಟ ‘ಇಂಡಿಯಾ’, ಸನಾತನ ಧರ್ಮವನ್ನು ನಾಶ ಮಾಡಲು ಯತ್ನಿಸುತ್ತಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ ಬೆನ್ನಲ್ಲೇ, ಕಮಲ್ ನಾಥ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

‘ನಮ್ಮ ದೇಶದಲ್ಲಿ ಇತರ ಮತಗಳನ್ನು ಪಾಲಿಸುವ ಜನರೂ ಇದ್ದಾರೆ. ಹೀಗಾಗಿ ನಮ್ಮದು ಸನಾತನ ಧರ್ಮದ ರಾಷ್ಟ್ರ ಎಂದು ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ’ ಎಂದೂ ಹೇಳಿದರು.

ಸಂಸ್ಕೃತಿ ನಾಶ ಮಾಡುವುದೇ ‘ಇಂಡಿಯಾ’ ಗುರಿ: ಶರ್ಮಾ

ಪಟ್ನಾ(ಪಿಟಿಐ): ‘ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಗಳು ಸನಾತನ ಧರ್ಮವನ್ನು ಸಂರಕ್ಷಿಸುವ ಸಲುವಾಗಿ ದೇಶದ ಜನರೇ ನಡೆಸುವ ‘ನಾಗರಿಕತೆಯ ಹೋರಾಟ’ವಾಗಲಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಶುಕ್ರವಾರ ಹೇಳಿದ್ದಾರೆ.

ನಗರದ ವಿಮಾನನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯನ್ನು ನಾಶ ಮಾಡುವುದೇ ‘ಇಂಡಿಯಾ’ ಕೂಟದ ಏಕೈಕ ಗುರಿಯಾಗಿದೆ’ ಎಂದು ಟೀಕಿಸಿದರು.

ವಿದೇಶಾಂಗ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಪ್ರತಿಕ್ರಿಯಿಸಿ, ‘ಸನಾತನ ಧರ್ಮವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತದೆ. ಈ ಬಗ್ಗೆ ವಿರೋಧ ಪಕ್ಷಗಳಿಗೆ ನಂಬಿಕೆ ಇಲ್ಲ. ಅವರಿಗೆ ಕುಟುಂಬ ರಾಜಕಾರ-ಣದಲ್ಲಿ ಮಾತ್ರ ನಂಬಿಕೆ ಇದೆ’ ಎಂದರು.

‘ಜನರ ಆಕ್ರೋಶ ಎದುರಿಸಬೇಕಾಗುತ್ತದೆ’

ಜ್ಯೋತಿರಾದಿತ್ಯ ಸಿಂಧಿಯಾ

ಇಂದೋರ್ (ಮಧ್ಯಪ್ರದೇಶ): ‘ಸನಾತನ ಧರ್ಮವೇ ಭಾರತದ ಬುನಾದಿ. ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳುವವರು ಜನರ ಆಕ್ರೋಶಕ್ಕೆ ಗುರಿಯಾಗುತ್ತಾರೆ’ ಎಂದು ಕೇಂದ್ರ ಸಚಿವ ಹಾಗೂ ಬಿಜೆಪಿ ನಾಯಕ ಜ್ಯೋತಿರಾದಿತ್ಯ ಸಿಂಧಿಯಾ ಶುಕ್ರವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸನಾತನ ಧರ್ಮ ಕುರಿತು ತನ್ನ ಅಂಗಪಕ್ಷವೊಂದರ ನಾಯಕರ ಹೇಳಿಕೆಗಳ ಬಗ್ಗೆ ‘ಇಂಡಿಯಾ’ದ ಇತರ ಪಕ್ಷಗಳು ಮೌನ ವಹಿಸಿವೆ ಯಾಕೆ’ ಎಂದು ಪ್ರಶ್ನಿಸಿದರು.

ಸಿಬಿಐ ತನಿಖೆಗೆ ನಿರ್ದೇಶನ ಕೋರಿ ಸುಪ್ರೀಂ ಕೋರ್ಟ್‌ಗೆ ವಕೀಲರ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಪ್ಟೆಂಬರ್ 2 ರಂದು ನಡೆದ ‘ಸನಾತನ ಧರ್ಮ ನಿರ್ಮೂಲನಾ ಸಮಾವೇಶ’ದ ವಿರುದ್ಧ ಸಿಬಿಐ ತನಿಖೆ ಮತ್ತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರ್ದೇಶನ ನೀಡುವಂತೆ ಕೋರಿ ಮದ್ರಾಸ್ ಹೈಕೋರ್ಟ್ ವಕೀಲರೊಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಉದಯನಿಧಿ, ಪೀಟರ್ ಅಲ್ಫೋನ್ಸ್, ಎ.ರಾಜಾ, ಥೋಲ್ ತಿರುಮಾವಲವನ್ ಮತ್ತು ಅವರ ಅನುಯಾಯಿಗಳು ಸನಾತನ ಧರ್ಮ ಅಥವಾ ಹಿಂದೂ ಧರ್ಮದ ಕುರಿತು ಯಾವುದೇ ದ್ವೇಷ ಭಾಷಣ ಮಾಡದಂತೆ ಮಧ್ಯಂತರ ತಡೆಯಾಜ್ಞೆ ಕೋರಿ ಬಿ.ಜಗನ್ನಾಥ್ ಅರ್ಜಿ ಸಲ್ಲಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಅರ್ಜಿಯ ತುರ್ತು ವಿಚಾರಣೆಗೆ ನಿರಾಕರಿಸಿ, ಎಲ್ಲರೂ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಅನುಸರಿಸಬೇಕು ಎಂದು ಹೇಳಿದೆ. ಉದಯನಿಧಿ ಮತ್ತು ಎ.ರಾಜಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ವಕೀಲ ವಿನೀತ್ ಜಿಂದಾಲ್ ಅವರು ನ್ಯಾಯಾಲಯದಲ್ಲಿ ಮತ್ತೊಂದು ಅರ್ಜಿ ಸಲ್ಲಿಸಿದ್ದಾರೆ.

ಸನಾತನ ಧರ್ಮ ನಿರ್ಮೂಲನಾ ಸಮ್ಮೇಳನದಲ್ಲಿ ರಾಜ್ಯ ಸಚಿವರು ಭಾಗವಹಿಸುವುದು ಅಸಂವಿಧಾನಿಕ ಮತ್ತು ಸಂವಿಧಾನದ 25 ಮತ್ತು 26 ನೇ ವಿಧಿಗಳ ಉಲ್ಲಂಘನೆ ಎಂದು ಘೋಷಿಸುವಂತೆ ಜಗನ್ನಾಥ್ ತಮ್ಮ ಮನವಿಯಲ್ಲಿ ಕೋರಿದ್ದಾರೆ. ಕರ್ನಾಟಕದ ಹಿಜಾಬ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ಯಾವುದೇ ಹಿಂದೂ ಧರ್ಮದ ವಿರುದ್ಧ ಈ ಸಮ್ಮೇಳನಗಳು ನಡೆಯಬಾರದು ಎಂದು ತಮಿಳುನಾಡು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡುವಂತೆಯೂ ಅರ್ಜಿಯಲ್ಲಿ ಕೋರಲಾಗಿದೆ.

ಇನ್ನೊಬ್ಬ ವ್ಯಕ್ತಿಗೆ ನಿಪಾ ಸೋಂಕು: ಸಕ್ರಿಯ ಪ್ರಕರಣಗಳ ಸಂಖ್ಯೆ 4ಕ್ಕೆ

ಕೋಯಿಕ್ಕೋಡ್(ಪಿಟಿಐ): ಜಿಲ್ಲೆಯ 39 ವರ್ಷದ ವ್ಯಕ್ತಿಯೊಬ್ಬರಿಗೆ ನಿಪಾ ಸೋಂಕು ತಗಲಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಶುಕ್ರವಾರ ಹೇಳಿದ್ದಾರೆ.

ಆಗಸ್ಟ್ 30ರಂದು ಮೃತಪಟ್ಟಿದ್ದ ಸೋಂಕಿತನೊಂದಿಗೆ ಈತ ನೇರ ಸಂಪರ್ಕಕ್ಕೆ ಬಂದಿದ್ದ ಪರಿಣಾಮ ಸೋಂಕು ತಗುಲಿದೆ. ಇದರೊಂದಿಗೆ ರಾಜ್ಯದಲ್ಲಿ ನಿಪಾ ಸೋಂಕಿನ ಸಕ್ರಿಯ ಪ್ರಕರಣಗಳ ಸಂಖ್ಯೆ ನಾಲ್ಕಕ್ಕೆ ಏರಿದಂತಾಗಿದೆ. ಸೋಂಕಿತರಿಬ್ಬರು ಮೃತಪಟ್ಟಿದ್ದಾರೆ.

ಸೋಂಕಿತರ ಸಂಪರ್ಕದಲ್ಲಿದ್ದವರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಇವರೆಲ್ಲರನ್ನೂ ಪರೀಕ್ಷೆಗೆ ಒಳಪಡಿಸಲು ತೀರ್ಮಾನಿಸಲಾಗಿದೆ ಎಂದು ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಉನ್ನತ ಮಟ್ಟದ ಸಭೆ ಬಳಿಕ ಸಚಿವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸಚಿವರಾದ ಪಿ.ಎ.ಮೊಹ್ಮದ್ ರಿಯಾಸ್, ಅಹ್ಮದ್ ದೇವರಕೋವಿಲ್ ಹಾಗೂ ಎ.ಕೆ.ಶಶಿಧರನ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಿಪಾ ಸೋಂಕಿನ ಲಕ್ಷಣಗಳನ್ನು ಹೊಂದಿದವರನ್ನು ಪರೀಕ್ಷೆಗೆ ಒಳಪಡಿಸಲು ಎರಡು ಹೆಚ್ಚುವರಿ ಪ್ರಯೋಗಾಲಯಗಳನ್ನು ಹೊಂದಿದ್ದೇವೆ. ರಾಜೀವ್‌ಗಾಂಧಿ ಸೆಂಟರ್ ಫಾರ್ ಬಯೋಟೆಕ್ನಾಲಜಿ (ಆರ್‌ಜಿಸಿಬಿ) ಒದಗಿಸಿರುವ ಈ ಮೊಬೈಲ್ ಪ್ರಯೋಗಾಲಯಗಳಲ್ಲಿ ಏಕಕಾಲಕ್ಕೆ 96 ಮಾದರಿಗಳನ್ನು ಪರೀಕ್ಷಿಸಬಹುದಾಗಿದೆ ಎಂದು ವೀಣಾ ಜಾರ್ಜ್ ತಿಳಿಸಿದ್ದಾರೆ.

ಪುಣೆ ಮೂಲದ ಎನ್‌ಐವಿ ಕೂಡ ಒಂದು ಮೊಬೈಲ್ ಪ್ರಯೋಗಾಲಯ-ವನ್ನು ಕಳುಹಿಸಿದ್ದು, ಪರೀಕ್ಷೆ ಹಾಗೂ ದೃಢಪಡಿಸುವಿಕೆಯ ವೇಗ ಹೆಚ್ಚಲಿದೆ ಎಂದು ಹೇಳಿದ್ದಾರೆ.

ಆಫ್ರಿಕನ್ ಚೀತಾ ಪರಿಚಯಿಸುವ ಯೋಜನೆಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತಮ ಪಶುವೈದ್ಯಕೀಯ ಸೇವೆ ಹಾಗೂ ತೀವ್ರ ಮೇಲ್ವಿಚಾರಣೆಯ ಹೊರತಾಗಿಯೂ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನವನದಲ್ಲಿ ಮೂರು ಮರಿಗಳು ಸೇರಿ ಒಂಬತ್ತು ಚೀತಾಗಳ ಸಾವಿನಿಂದ ಭಾರತದಲ್ಲಿ ಆಫ್ರಿಕನ್ ಚೀತಾ ಪರಿಚಯಿಸುವ ಕೇಂದ್ರದ ಯೋಜನೆಗೆ ದೊಡ್ಡ ಹಿನ್ನಡೆಯಾಗಿದೆ ಎಂದು ಶುಕ್ರವಾರ ತಜ್ಞರು ಹೇಳಿದ್ದಾರೆ.

ಚೀತಾ ಪರಿಚಯದ ಯೋಜನೆಯ ಪ್ರಥಮ ವಾರ್ಷಿಕೋತ್ಸವದ ಮುನ್ನಾ ದಿನ ಅವರು ಈ ಅಭಿಪ್ರಾಯ ಹಂಚಿಕೊಂಡಿದ್ದು, ‘ಭಾರತದಲ್ಲಿ ಪಶು ವೈದ್ಯಕೀಯ ಸೇವೆ ಮತ್ತು ಮೇಲ್ವಿಚಾರಣೆ ಒದಗಿಸಲಾಗಿತ್ತು. ಇದು ಸಾವಿನ ಪ್ರಮಾಣ ತಗ್ಗಿಸುವ ಅಂದಾಜು ಇತ್ತು. ಕನಿಷ್ಠ ಪಕ್ಷ ಈ ಪ್ರಾಣಿಗಳನ್ನು ಅರಣ್ಯಕ್ಕೆ ಬಿಡುವ ಅವಧಿವರೆಗಾದರೂ ಸಾವಿನ ಪ್ರಮಾಣ ಶೂನ್ಯಕ್ಕೆ ಇಳಿಯಲಿದೆ ಎಂದು ಭಾವಿಸಲಾಗಿತ್ತು’ ಎಂದು ಪ್ರಿಟೋರಿಯಾ ವಿಶ್ವವಿದ್ಯಾಲಯದ ಪಶುವೈದ್ಯ ವನ್ಯಜೀವಿ ತಜ್ಞ ಆಡ್ರಿಯನ್ ಟೊರ್ಡಿಫ್ ಹೇಳಿದರು.

‘ಉತ್ತಮ ಮೇಲ್ವಿಚಾರಣೆ, ತಜ್ಞರೊಂದಿಗೆ ಸಮನ್ವಯದಿಂದ ಚೀತಾಗಳ ಸಾವಿನ ಪ್ರಮಾಣ ತಗ್ಗಿಸಬಹುದಾಗಿತ್ತು’ ಎಂದು ವಿಜ್ಞಾನಿ ಯಾದವೇಂದ್ರದೇವ್ ಝಾಲಾ ಹೇಳಿದರು.

ಮಹಿಳೆಯರ ಮಾಸಿಕ ಧನಸಹಾಯ ಯೋಜನೆ ಫಲಾನುಭವಿಗಳಿಗೆ ಡೆಬಿಟ್ ಕಾರ್ಡ್ ವಿತರಿಸಿದ ತಮಿಳುನಾಡು ಮುಖ್ಯಮಂತ್ರಿ ಎಂ .ಕೆ ಸ್ಟಾಲಿನ್ –ಪಿಟಿಐ ಚಿತ್ರ

ತಮಿಳುನಾಡು ಮಹಿಳೆಯರಿಗೆ ಪ್ರತಿ ತಿಂಗಳು ₹1,000 ನೆರವು

ಕಾಂಚಿಪುರ(ಪಿಟಿಐ): ತಮಿಳುನಾಡಿ-ನಲ್ಲಿ ಮಹಿಳೆಯರಿಗೆ ಮಾಸಿಕ ₹1,000 ಆರ್ಥಿಕ ನೆರವು ಒದಗಿಸುವ ಡಿಎಂಕೆ ಸರ್ಕಾರದ ಯೋಜನೆಗೆ ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಶುಕ್ರವಾರ ಚಾಲನೆ ನೀಡಿದರು.

ಯೋಜನೆಗೆ ‘ಕಲೈಜ್ಞರ್ ಮಗಳಿರ್ ಉರಿಮೈ ತಿಟ್ಟಂ (ಮಹಿಳೆಯರ ಹಕ್ಕಿಗಾಗಿ ಕಲೈಂಜರ್ ಯೋಜನೆ)’ ಎಂದು ಹೆಸರಿಡಲಾಗಿದೆ. ಇದರ ಅಡಿಯಲ್ಲಿ 1.06 ಕೋಟಿ ಮಹಿಳೆಯರನ್ನು (1,06,50,000) ಫಲಾನುಭವಿಗಳೆಂದು ಸರ್ಕಾರ ಗುರುತಿಸಿದೆ. ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ₹1,000ಗಳನ್ನು ಸರ್ಕಾರ ನೇರವಾಗಿ ವರ್ಗಾವಣೆ ಮಾಡಲಿದೆ.

‘ಇದು ಮಹಿಳೆಯರ ಶ್ರಮಕ್ಕೆ ಸಿಗುವ ಮನ್ನಣೆ’ ಎಂದು ಸ್ಟಾಲಿನ್ ಹೇಳಿದರು. ಇದೇ ಕಾರ್ಯಕ್ರಮದಲ್ಲಿ ಫಲಾನುಭವಿ-ಗಳಿಗೆ ಬ್ಯಾಂಕ್ ಡೆಬಿಟ್ ಕಾರ್ಡ್‌ಗಳನ್ನು ವಿತರಿಸಲಾಯಿತು. ಸಚಿವರು ತಮ್ಮ ಜಿಲ್ಲೆಗಳಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ದ್ರಾವಿಡ ನಾಯಕರಾದ ಸಿ.ಎನ್ ಅಣ್ಣಾದೊರೈ ಅವರ ಜನ್ಮದಿನ ಮತ್ತು ಕರುಣಾನಿಧಿ ಅವರ ಶತಮಾನೋತ್ಸವ (2023-24)ದ ಸಂದರ್ಭದಲ್ಲಿ ಈ ಯೋಜನೆಗೆ ಚಾಲನೆ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಸ್ಟಾಲಿನ್ ಹೇಳಿದರು.

2 ತಿಂಗಳಲ್ಲಿ ಪರೀಕ್ಷಾರ್ಥ ಉಡಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವಸಹಿತ ಗಗನಯಾನಕ್ಕೆ ಮುನ್ನ ನಡೆಸಲು ಉದ್ದೇಶಿಸಿರುವ ಮೊದಲ ಪರೀಕ್ಷಾರ್ಥ ಉಡಾವಣೆ ಇನ್ನು ಒಂದು ಅಥವಾ ಎರಡು ತಿಂಗಳಲ್ಲಿ ನಡೆಯಲಿದೆ ಎಂದು ಇಸ್ರೊ ಅಧಿಕಾರಿಗಳು ತಿಳಿಸಿದರು.

ಮಾನವರನ್ನು ಬಾಹ್ಯಾಕಾಶಕ್ಕೆ ಕಳಿಸುವುದಕ್ಕೆ ಮುಂಚಿತವಾಗಿ ಒಟ್ಟು ನಾಲ್ಕು ಬಾರಿ ಪರೀಕ್ಷಾರ್ಥವಾಗಿ ಉಡಾವಣೆ ನಡೆಸಲು ಉದ್ದೇ-ಶಿಸಲಾಗಿದೆ. ಉಡಾವಣೆ ಮತ್ತು ಬಾಹ್ಯಾಕಾಶದಿಂದ ಸುರಕ್ಷಿತವಾಗಿ ವಾಪಸ್ ಕರೆತರುವ ಪ್ರಯೋಗಗಳನ್ನು ನಡೆಸಲಾಗುವುದು.

ಮೊದಲ ಪರೀಕ್ಷಾರ್ಥ ಉಡಾವಣಾ ವಾಹನ ಟಿವಿ–ಡಿ1, ಎರಡನೆಯದು ಟಿವಿ–ಡಿ2 , ಮೂರನೆಯದು ಟಿವಿ–ಡಿ3 ಮತ್ತು ನಾಲ್ಕನೆಯದು ಟಿವಿ–ಡಿ4 ಈ ರಾಕೆಟ್‌ಗಳ ಮೂಲಕ ಉಡಾವಣೆ ನಡೆಯಲಿದೆ. ಆ ಬಳಿಕ ಎಲ್‌ವಿಎಂ3–ಜಿ2 ನಲ್ಲಿ ರೊಬೋಟಿಕ್ ಉಪಕರಣಗಳ-ನ್ನಿಟ್ಟು ಉಡಾವಣೆ ಮಾಡಲಾಗುವುದು. ಇವುಗಳ ಯಶಸ್ವಿನ ಆಧಾರದಲ್ಲಿ ಮಾನವರನ್ನು ಗಗನಯಾನಕ್ಕೆ ಕಳುಹಿಸುವ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದರು.

ಗಗನಯಾನಿಗಳು ಸುರಕ್ಷಿತವಾಗಿ ಭೂಮಿಗೆ ಬಂದ ಬಳಿಕ ಪಾರಾಗುವ ವ್ಯವಸ್ಥೆಯನ್ನು ಇನ್ನಷ್ಟು ಪಕ್ಕಾಗೊಳಿಸು-ವತ್ತ ಗಮನಹರಿಸಿದ್ದೇವೆ ಎಂದು ಅವರು ತಿಳಿಸಿದರು.

ಆದಿತ್ಯ ಎಲ್‌–1ಕಕ್ಷೆ ಬದಲಾವಣೆ: ಸೂರ್ಯನ ಅಧ್ಯಯನಕ್ಕಾಗಿ ಉಡಾ-ವಣೆಗೊಂಡಿರುವ ಆದಿತ್ಯ ಎಲ್–1ರ ನಾಲ್ಕನೇ ಕಕ್ಷೆ ಬದಲಾವಣೆ ಶುಕ್ರವಾರ ಯಶಸ್ವಿಯಾಗಿ ನಡೆಯಿತು.

ಕಕ್ಷೆ ಬದಲಾವಣೆಯ ವೇಳೆಯಲ್ಲಿ ಮಾರಿಷಸ್, ಬೆಂಗಳೂರು ಮತ್ತು ಪೋರ್ಟ್‌ಬ್ಲೇರ್‌ಗಳಲ್ಲಿರುವ ಇಸ್ರೊ ನಿಲ್ದಾಣಗಳು ಆದಿತ್ಯ ಎಲ್–1 ಚಲನೆಯ ಮೇಲೆ ನಿಗಾ ವಹಿಸಿದ್ದವು. ಇದೀಗ 256 ಕಿ.ಮೀ x 121973 ಕಿ.ಮೀ ಕಕ್ಷೆಯಲ್ಲಿ ಪರಿಭ್ರಮಣ ಆರಂಭಿಸಿದೆ. ಮುಂದಿನ ಕಕ್ಷೆ ಬದಲಾವಣೆ ಇದೇ 19ರಂದು ನಡೆಯಲಿದ್ದು, ಅಂದು ಭೂಕಕ್ಷೆಯಿಂದ ಸೂರ್ಯನ ಲಗ್ರಾಂಜಿಯನ್ ಬಿಂದುವಿನತ್ತ ಪ್ರಯಾಣ ಬೆಳೆಸಲಿದೆ ಎಂದು ಇಸ್ರೊ ತಿಳಿಸಿದೆ.

ಎಡಿಟರ್ಸ್ ಗಿಲ್ಡ್‌ನ ನಾಲ್ವರಿಗೆ ರಕ್ಷಣೆ ವಿಸ್ತರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಮಣಿಪುರದಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾದ (ಇಜಿಐ) ನಾಲ್ವರು ಸದಸ್ಯರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ನೀಡಿದ್ದ ರಕ್ಷಣೆಯನ್ನು ಸುಪ್ರೀಂಕೋರ್ಟ್ ಶುಕ್ರವಾರ ಮತ್ತೆ ಎರಡು ವಾರಗಳ ಕಾಲ ವಿಸ್ತರಿಸಿತು.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗ-ಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಅರ್ಜಿ ವಿಚಾರಣೆ ನಡೆಸಿತು.

ಬೇರೆ ಬೇರೆ ಜನಾಂಗೀಯ ಗುಂಪುಗಳ ನಡುವೆ ವೈರತ್ವ ಬೆಳೆಸಲು ಯತ್ನಿಸಿದ ಆರೋಪವನ್ನು ಇಜಿಐ ಹಾಗೂ ಅದರ ನಾಲ್ವರು ಸದಸ್ಯರ ವಿರುದ್ಧ ಹೊರಿಸಿರುವ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಅರ್ಜಿದಾರರಿಗೆ ನ್ಯಾಯಪೀಠ ಸೂಚಿಸಿತು.

‘ಇಜಿಐ ಹಾಗೂ ಅದರ ನಾಲ್ವರು ಸದಸ್ಯರಿಗೆ ನೀಡಿರುವ ರಕ್ಷಣೆಯನ್ನು ಮತ್ತಷ್ಟು ದಿನಗಳ ಕಾಲ ಸುಪ್ರೀಂಕೋರ್ಟ್ ವಿಸ್ತರಿಸು-ವುದಕ್ಕೆ ಆಕ್ಷೇಪವಿಲ್ಲ. ನ್ಯಾಯಪೀಠ ಇಚ್ಛಿಸಿದಲ್ಲಿ ಅರ್ಜಿಯನ್ನು ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸಬಹು-ದು’ ಎಂದು ಮಣಿಪುರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

ಮಣಿಪುರದಲ್ಲಿ ಭುಗಿಲೆದ್ದಿದ್ದ ಹಿಂಸಾಚಾರಕ್ಕೆ ಸಂಬಂಧಿಸಿದ ವರದಿಗಾರಿಕೆ ಕುರಿತು ಅಧ್ಯಯನ ನಡೆಸುವುದಕ್ಕಾಗಿ ಇಜಿಐ ಅಧ್ಯಕ್ಷೆ ಸೀಮಾ ಮುಸ್ತಾಫ, ಹಿರಿಯ ಪತ್ರಕರ್ತರಾದ ಸೀಮಾ ಗುಹಾ, ಭರತ್‌ಭೂಷಣ್ ಹಾಗೂ ಸಂಜಯ್ ಕಪೂರ್ ಅವರಿದ್ದ ತಂಡ ಕಣಿವೆ ರಾಜ್ಯಕ್ಕೆ ಭೇಟಿ ನೀಡಿತ್ತು.

ಇಜಿಐ ಹಾಗೂ ಈ ನಾಲ್ವರು ಸದಸ್ಯರ ತಂಡ ಪ್ರಕಟಿಸಿದ್ದ ವರದಿ ಪ್ರಚೋದನಕಾರಿಯಾಗಿದೆ ಎಂದು ಆರೋಪಿಸಿದ್ದ ಮಣಿಪುರ ಸರ್ಕಾರ, ಇವರ ವಿರುದ್ಧ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿತ್ತು.

ಭೂಮಿಯ ಪ್ಲಾಸ್ಮಾ ಹಾಳೆಗಳಿಂದ ಚಂದ್ರನಲ್ಲಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ಕಗ್ಗತ್ತಲ ಪ್ರದೇಶದಲ್ಲಿ ಪತ್ತೆಯಾದ ಘನೀಕೃತ ನೀರಿನ ಮೂಲದ ಬಗ್ಗೆ ಹುವೈ ವಿಶ್ವವಿದ್ಯಾಲಯ (ಯುಎಚ್) ಸಂಶೋಧನೆ ನಡೆಸಿದ್ದು, ಹಲವು ಒಳನೋ-ಟಗಳನ್ನು ಒದಗಿಸಿದೆ. ವಿಶೇಷವೆಂದರೆ, ಈ ಅಧ್ಯಯನಕ್ಕೆ ಆಧಾರವಾಗಿದ್ದು ಭಾರತದ ಚಂದ್ರಯಾನ-1ಯೋಜನೆ!

ಮನೋವಾದಲ್ಲಿನ ಹುವೈ ವಿಶ್ವವಿದ್ಯಾಲಯದ ವಿಜ್ಞಾನಿ ಶುವೈ ಲೀ ನೇತೃತ್ವದಲ್ಲಿ ಈ ಸಂಶೋಧನೆ ನಡೆದಿದೆ.

ಭೂಮಿಯ ಪ್ಲಾಸ್ಮಾ ಹಾಳೆಗಳ ಪ್ರಬಲ ಎಲೆಕ್ಟ್ರಾನ್‌ಗಳು ಚಂದ್ರನ ಹವಾಮಾನ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುತ್ತಿವೆ. ಈ ಎಲೆಕ್ಟ್ರಾನ್‌ಗಳೇ ಚಂದ್ರನ ಮೇಲ್ಮೈಯಲ್ಲಿ ನೀರಿನ ರಚನೆ ಸೃಷ್ಟಿಯಾಗಲು ಕಾರಣವಾಗಿರಬಹುದು ಎಂದು ಲೀ ಅವರ ಸಂಶೋಧನೆ ಹೇಳಿದೆ. ಭೂಮಿಯ ಸುತ್ತಲಿನ ಕಾಂತವಲಯದಲ್ಲಿ ಬಂಧಿಯಾದ ಪ್ರಬಲ ಎಲೆಕ್ಟ್ರಾನ್‌ಗಳೇ ಪ್ಲಾಸ್ಮಾ ಎಳೆಗಳ ಪ್ರದೇಶವಾ-ಗಿದ್ದು, ಭೂಮಿಯ ಕಾಂತೀಯ ಕ್ಷೇತ್ರವು ಇವುಗಳನ್ನು ನಿಯಂತ್ರಿಸುತ್ತದೆ.

ಚಂದ್ರನ ಅನ್ವೇಷಣೆಗಾಗಿ ಭಾರತ ಕೈಗೊಂಡ ‘ಚಂದ್ರಯಾನ-1’ನಲ್ಲಿನ ಮಿನರಾಲಜಿ ಮ್ಯಾಪರ್ (ಖನಿಜ ಸಂಪನ್ಮೂಲ ಗುರುತಿಸುವ) ಉಪಕರಣದಿಂದ ಸಂಗ್ರಹಿಸಿದ ದೂರಸಂವೇದಿ ದತ್ತಾಂಶವನ್ನು ವಿಜ್ಞಾನಿಗಳಾದ ಲೀ ಮತ್ತು ಇತರರು ತಮ್ಮ ಅಧ್ಯಯನಕ್ಕೆ ಆಧಾರವಾಗಿಟ್ಟುಕೊಂಡಿದ್ದಾರೆ. ಅಧ್ಯಯನವ-ನ್ನು ‘ನೇಚರ್ ಅಸ್ಟ್ರೋನೊಮಿ’ ಎಂಬ ವಿಜ್ಞಾನ ನಿಯತಕಾಲಿ-ಕೆಯಲ್ಲಿ ಪ್ರಕಟಿಸಲಾಗಿದೆ.

ಚಂದ್ರನಲ್ಲಿ ನೀರಿನ ರಚನೆಗೆ ಪ್ರಾಥಮಿಕವಾಗಿ ಪ್ರೋಟಾನ್‌ಗಳಂತಹ ಪ್ರಬಲ ಕಣಗಳಿಂದ ಕೂಡಿದ ಸೌರ ಮಾರುತಗಳೂ ಕಾರಣವಾಗಿರಬಹುದು ಎಂದು ಅಧ್ಯ-ಯನದಲ್ಲಿ ಉಲ್ಲೇಖಿಸಲಾಗಿದೆ.

ಇ.ಡಿ ಪ್ರಭಾರ ಮುಖ್ಯಸ್ಥ ರಾಹುಲ್

ನವದೆಹಲಿ (ಪಿಟಿಐ): ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಶುಕ್ರವಾರ ಐಆರ್‌ಎಸ್ ಅಧಿಕಾರಿ ರಾಹುಲ್ ನವೀನ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಪ್ರಭಾರ ಮುಖ್ಯಸ್ಥರಾಗಿ ನೇಮಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1993ರ ಬ್ಯಾಚ್‌ನ ಐಆರ್‌ಎಸ್ ಅಧಿಕಾರಿ ನವೀನ್ ಅವರು ನೂತನ ಮುಖ್ಯಸ್ಥರ ನೇಮಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಕಾರ್ಯ ವಹಿಸಲಿದ್ದಾರೆ. ನವೀನ್ ಸದ್ಯ ಜಾರಿ ನಿರ್ದೇಶನಾಲಯದ ವಿಶೇಷ ನಿರ್ದೇಶಕರಾಗಿದ್ದಾರೆ ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ. ಇ.ಡಿ ಮುಖ್ಯಸ್ಥ ಮಿಶ್ರಾ ಅವರ ಅಧಿಕಾರಾವಧಿ-ಯನ್ನು ಜುಲೈನಲ್ಲಿ ಸುಪ್ರೀಂ ಕೋರ್ಟ್ ಸೆ.15 ರವರೆಗೆ ವಿಸ್ತರಿಸಿತ್ತು.

ಎಬಿಸಿ ಅಧ್ಯಕ್ಷರಾಗಿ ಸ್ವಾಮಿ ಆಯ್ಕೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸನ್ ಕೆ. ಸ್ವಾಮಿ

ನವದೆಹಲಿ: ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇ-ಷನ್ಸ್‌ನ (ಎಬಿಸಿ) 2023–24ನೇ ಸಾಲಿನ ಅಧ್ಯಕ್ಷರಾಗಿ ‘ಆರ್.ಕೆ. ಸ್ವಾಮಿ ಹಂಸ ಸಮೂಹ’ದ ಕಾರ್ಯಾಧ್ಯಕ್ಷ ಶ್ರೀನಿವಾಸನ್ ಕೆ. ಸ್ವಾಮಿ ಅವರು ಸರ್ವಾನುಮತದಿಂದ ಆಯ್ಕೆ-ಯಾಗಿದ್ದಾರೆ.

ಶ್ರೀನಿವಾಸನ್ ಅವರು ಪ್ರಸ್ತುತ ಏಷ್ಯನ್ ಫೆಡರೇಷನ್ ಆಫ್ ಅಡ್ವ-ರ್ಟೈಸಿಂಗ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಈ ಹಿಂದೆ ಇಂಟರ್‌ನ್ಯಾಷನಲ್ ಅಡ್ವರ್ಟೈಸಿಂಗ್ ಅಸೋಸಿಯೇಷನ್‌ನ (ಐಎಎ), ಭಾರತ ಚಾಪ್ಟರ್, ಕಾನ್ಫಿಡರೇಷನ್ ಆಫ್ ಏಷ್ಯನ್ ಅಡ್ವರ್ಟೈಸಿಂಗ್ ಏಜೆನ್ಸಿ ಅಸೋಸಿಯೇಷನ್ಸ್, ಅಡ್ವರ್ಟೈಸಿಂಗ್ ಏಜೆನ್ಸಿಸ್ ಅಸೋಸಿಯೇಷನ್ ಆಫ್ ಇಂಡಿಯಾ, ಅಡ್ವರ್ಟೈಸಿಂಗ್ ಸ್ಟಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾ ಸೇರಿದಂತೆ ಹಲವು ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಮಲಯಾಳ ಮನೋರಮಾದ ಮುಖ್ಯ ಸಹ ಸಂಪಾದಕ ಮತ್ತು ನಿರ್ದೇಶಕರಾದ ರಿಯಾದ್ ಮ್ಯಾಥ್ಯೂ ಅವರು ಉಪಾಧ್ಯಕ್ಷರಾ-ಗಿ, ಬೆನೆಟ್, ಕೋಲ್‌ಮನ್ ಅಂಡ್ ಕಂಪನಿ ಲಿಮಿಟೆಡ್‌ನ ಕಾರ್ಯನಿ-ರ್ವಾಹಕ ನಿರ್ದೇಶಕ ಮೋಹಿತ್ ಜೈನ್ ಅವರು ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಮೀಡಿಯಾ ಅಂಡ್ ಒಒಎಚ್ ಆಫ್ ಮ್ಯಾಡಿಸನ್ ಕಮ್ಯುನಿಕೇಷ-ನ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಮತ್ತು ಪಾಲುದಾರರಾದ ವಿಕ್ರಂ ಸುಖುಜಾ ಅವರು ಖಜಾಂಚಿಯಾಗಿ ಅವಿರೋಧವಾಗಿ ಮರು ಆಯ್ಕೆ-ಯಾಗಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಎಚ್.ಬಿ.ಮಸಾನಿ ತಿಳಿಸಿದ್ದಾರೆ.

ವ್ಯವಸ್ಥಾಪನಾ ಸಮಿತಿ ಸದಸ್ಯರು

ಜಾಹೀರಾತು ಏಜೆನ್ಸಿಗಳ ಪ್ರತಿನಿಧಿಗಳು: ಶ್ರೀನಿವಾಸನ್ ಕೆ. ಸ್ವಾಮಿ, ಆರ್. ಕೆ.ಸ್ವಾಮಿ ಲಿಮಿಟೆಡ್– ಅಧ್ಯಕ್ಷ; ವಿಕ್ರಂ ಸಖುಜಾ, ಮ್ಯಾಡಿಸನ್ ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್– ಖಜಾಂಚಿ; ಪ್ರಶಾಂತ್ ಕುಮಾರ್, ಗ್ರೂಪ್ ಎಂ ಮೀಡಿಯಾ ಇಂಡಿಯಾ ಪ್ರೈವೇಟ್ ಲಿಮಿಟೆಡ್; ವೈಶಾಲಿ ವರ್ಮಾ, ಇನಿಶಿಯೇಟಿವ್ ಮೀಡಿಯಾ (ಇಂಡಿಯಾ) ಪ್ರೈವೇಟ್ ಲಿಮಿಟೆಡ್–ಪ್ರತಿನಿಧಿಗಳು.

ಪ್ರಕಾಶಕರ ಪ್ರತಿನಿಧಿಗಳು: ರಿಯಾದ್ ಮ್ಯಾಥ್ಯೂ, ಮಲಯಾಳ ಮನೋರಮಾ ಕಂಪನಿ ಲಿಮಿಟೆಡ್– ಉಪಾಧ್ಯಕ್ಷ; ಮೋಹಿತ್ ಜೈನ್, ಬೆನ್ನೆಟ್, ಕೋಲ್‌ಮನ್ ಅಂಡ್ ಕಂಪನಿ ಲಿಮಿಟೆಡ್– ಕಾರ್ಯದರ್ಶಿ; ಪ್ರತಾಪ್ ಜಿ. ಪವಾರ್, ಸಕಾಳ ಪೇಪರ್ಸ್ ಪ್ರೈವೇಟ್ ಲಿಮಿಟೆಡ್; ಶೈಲೇಶ್ ಗುಪ್ತಾ, ಜಾಗರಣ್ ಪ್ರಕಾಶನ ಲಿಮಿಟೆಡ್; ಪ್ರವೀಣ್ ಸಮೇಶ್ವರ, ಎಚ್‌ಟಿ ಮೀಡಿಯಾ ಲಿಮಿಟೆಡ್; ಧ್ರುವ ಮುಖರ್ಜಿ, ಎಬಿಪಿ ಪ್ರೈವೇಟ್ ಲಿಮಿಟೆಡ್; ಕರಣ್. ದರ್ದಾ, ಲೋಕಮತ ಮೀಡಿಯಾ ಪ್ರೈವೇಟ್ ಲಿಮಿಟೆಡ್; ಗಿರೀಶ್ ಅಗರ್ವಾಲ್, ಡಿ.ಬಿ ಕಾರ್ಪ ಲಿಮಿಟೆಡ್–ಪ್ರತಿನಿಧಿಗಳು.

ಜಾಹೀರಾತು ಪ್ರತಿನಿಧಿಗಳು: ಕರುಣೇಶ್ ಬಜಾಜ್, ಐಟಿಸಿ ಲಿಮಿಟೆಡ್; ಅನಿರುದ್ಧ ಹಲ್ದಾರ್, ಟಿವಿಎಸ್ ಮೋಟಾರ್ ಕಂಪನಿ ಲಿಮಿಟೆಡ್; ಶಶಾಂಕ್ ಶ್ರೀವಾಸ್ತವ, ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್–ಪ್ರತಿನಿಧಿಗಳು.

ಹೈದರಾಬಾದ್: ಚುನಾವಣೆ ಕಾರ್ಯತಂತ್ರ ಚರ್ಚೆ • ನಾಳೆ ಐದು ಗ್ಯಾರಂಟಿ ಘೋಷಣೆ

ಪುನರ್‌ರಚಿತ ಸಿಡಬ್ಲ್ಯುಸಿ ಸಭೆ ಇಂದಿನಿಂದ

ಮಲ್ಲಿಕಾರ್ಜುನ ಖರ್ಗೆ

ಹೈದರಾಬಾದ್ (ಪಿಟಿಐ): ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಪುನರ್ ರಚನೆಗೊಂಡಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಮೊದಲ ಸಭೆ ಹೈದರಾಬಾ-ದ್‌ನಲ್ಲಿ ಶನಿವಾರ ಆರಂಭವಾಗಲಿದೆ.

ಐದು ರಾಜ್ಯಗಳ ವಿಧಾನಸಭೆಗಳು ಹಾಗೂ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗಳ ಕುರಿತು ರೂಪಿಸಬೇಕಾದ ಕಾರ್ಯತಂತ್ರದ ಕುರಿತು ಪಕ್ಷದ ವರಿಷ್ಠರು ಈ ಸಭೆಯಲ್ಲಿ ಚರ್ಚಿಸುವರು ಎಂದು ಮೂಲಗಳು ಹೇಳಿವೆ.

ಭಾರತ ಜೋಡೊ ಯಾತ್ರೆಯ ಯಶಸ್ಸಿನಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂ-ಡಿರುವ ಕಾಂಗ್ರೆಸ್, ಈಗ ಎರಡನೇ ಹಂತದ ಯಾತ್ರೆಗೆ ಸಿದ್ಧತೆ ನಡೆಸುತ್ತಿದೆ. ಈ ಬಗ್ಗೆಯೂ ಎರಡು ದಿನಗಳ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದು ಇವೇ ಮೂಲಗಳು ಹೇಳಿವೆ.

ತೆಲಂಗಾಣ ವಿಧಾನಸಭೆಗೂ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿರುವ ಸಿಡಬ್ಲ್ಯುಸಿ ಸಭೆಗೆ ಮಹತ್ವ ಬಂದಿದ್ದು, ಪಕ್ಷದ ಪ್ರಚಾರ ಕಾರ್ಯಕ್ಕೆ ಶಕ್ತಿ ತುಂಬುವ ಉದ್ದೇಶವನ್ನೂ ಪಕ್ಷ ಹೊಂದಿದೆ.

ಪಕ್ಷದ ನಡೆ ಕುರಿತು ನಿರ್ಣಯ ಕೈಗೊಳ್ಳುವ, 39 ಸದಸ್ಯ ಬಲದ ಸಮಿತಿಯ ಮೊದಲ ದಿನದ ಸಭೆ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಶನಿವಾರ ನಡೆಯಲಿದ್ದರೆ, ಭಾನುವಾರ ನಡೆಯಲಿರುವ ಸಭೆಯಲ್ಲಿ ಸಿಡಬ್ಲ್ಯುಸಿ ಸದಸ್ಯರ ಜೊತೆಗೆ ಪಕ್ಷದ ಎಲ್ಲ ರಾಜ್ಯ ಘಟಕಗಳ ಅಧ್ಯಕ್ಷರು ಹಾಗೂ ಶಾಸಕಾಂಗ ಪಕ್ಷದ ನಾಯಕರು ಪಾಲ್ಗೊಳ್ಳಲಿದ್ದಾರೆ. ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ವಿರುದ್ಧದ ಹೋರಾಟದ ರೂಪುರೇಷೆ ಕುರಿತಂತೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ.

ಭೋಪಾಲ್‌ನಲ್ಲಿ ಮುಂದಿನ ತಿಂಗಳು ಹಮ್ಮಿಕೊಳ್ಳಲು ಉದ್ದೇಶಿಸಿರುವ ‘ಇಂಡಿಯಾ’ದ ಮೊದಲ ಜಂಟಿ ಸಾರ್ವಜನಿಕ ಸಭೆ, ದೇಶದಲ್ಲಿನ ನಿರುದ್ಯೋಗ ಸಮಸ್ಯೆ, ಹಣದುಬ್ಬರ, ಅದಾನಿ ಸಮೂಹದ ವಿರುದ್ಧದ ಆರೋಪಗಳು, ತೆಲಂಗಾಣಕ್ಕೆ ಸಂಬಂಧಿಸಿದಂತೆ ಬಿಆರ್‌ಎಸ್ ನೇತೃತ್ವದ ಸರ್ಕಾರದ ಭ್ರಷ್ಟಾಚಾರದಂ-ತಹ ವಿಷಯಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸೆ.17ರಂದು ‘ತೆಲಂಗಾಣ ರಾಷ್ಟ್ರೀಯ ಏಕೀಕರಣ ದಿನಾಚರಣೆ’ ಅಂಗವಾಗಿ ಪಕ್ಷವು ಬೃಹತ್ ರ‍್ಯಾಲಿ ಹಮ್ಮಿಕೊಂಡಿದೆ. ರ‍್ಯಾಲಿ ಸಂದರ್ಭದ-ಲ್ಲಿಯೇ ಐದು ಗ್ಯಾರಂಟಿಗಳನ್ನು ಘೋಷಿಸುವ ಮೂಲಕ ಚುನಾವಣೆಗೆ ರಣಕಹಳೆ ಮೊಳಗಿಸಲು ಕಾಂಗ್ರೆಸ್ ಮುಂದಾಗಿದೆ.

‘ಹೈದರಾಬಾದ್ ಸಭೆ ನಿರ್ಣಾಯಕ’

ಸಚಿನ್ ಪೈಲಟ್

ನವದೆಹಲಿ(ಪಿಟಿಐ): ಪುನರ್ ರಚಿತ ಸಿಡಬ್ಲ್ಯುಸಿ ಸಮತೋಲನದಿಂದ ಕೂಡಿದೆ. ಅನುಭವಿ ನಾಯಕರ ಜೊತೆ ಯುವ ಮುಖಗಳಿಗೂ ಸಮಿತಿಯಲ್ಲಿ ಸ್ಥಾನ ಕಲ್ಪಿಸಿರುವುದು ಸ್ವಾಗತಾರ್ಹ ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಶುಕ್ರವಾರ ಹೇಳಿದ್ದಾರೆ.

ರಾಜಸ್ಥಾನ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗ-ಳಿಗೆ ಚುನಾವಣೆಗಳು ನಡೆಯಲಿರುವ ಕಾರಣ, ಹೈದರಾ-ಬಾದ್‌ನಲ್ಲಿ ನಡೆಯಲಿರುವ ಸಮಿತಿ ಸಭೆ ನಿರ್ಣಾಯಕವಾಗಲಿದೆ ಎಂದು ಅವರು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಕಳೆದ ತಿಂಗಳು ಪುನರ್‌ರಚನೆಗೊಂಡಿರುವ ಸಿಡಬ್ಲ್ಯುಸಿಯಲ್ಲಿ ಪೈಲಟ್ ಅವರಿಗೂ ಸ್ಥಾನ ಕಲ್ಪಿಸಲಾಗಿದೆ.

‘‘ಇಂಡಿಯಾ’ದಲ್ಲಿಯೇ ಕಾಂಗ್ರೆಸ್ ದೊಡ್ಡ ಪಕ್ಷವಾಗಿದ್ದು, ಮೈತ್ರಿಕೂಟದ ನಾಯಕತ್ವ ವಹಿಸಿಕೊಳ್ಳಬೇಕು. ಆದರೆ, ಮೈತ್ರಿಕೂಟದಲ್ಲಿ ಎಲ್ಲ ಅಂಗಪಕ್ಷಗಳಿಗೆ ಸಮಾನ ಗೌರವ ನೀಡಲಾಗಿದೆ’ ಎಂದಿದ್ದಾರೆ.

ಶನಿವಾರ, ಸೆಪ್ಟೆಂಬರ್ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 258 | ಪುಟ 22
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹಬ್ಬಗಳ ಹೊಸಿಲಲ್ಲಿ ನಿಂತು ಬದಲಾದ ಜಗವನ್ನು ನೋಡುತ್ತಾ...

ಚರ್ಚೆ
ಸನಾತನ ಧರ್ಮವನ್ನು ಸಂರಕ್ಷಿಸಬೇಕಾಗಿದೆಯೇ?

'ದಲಿತರು ಬೆಂಬಲಿಸಿದ್ದು ತಮ್ಮದೇ ನಾಯಕತ್ವಕ್ಕಾಗಿ' 6
ಹುಬ್ಬಳ್ಳಿ 'ಈದ್ಗಾ'ದಲ್ಲಿ 3 ದಿನ ಗಣೇಶೋತ್ಸವಕ್ಕೆ ಅನುಮತಿ 3D

ಸೆನ್ಸೆಕ್ಸ್	ನಿಫ್ಟಿ	₹/$
67,838 ▲	20,192 ▲	83.16 ▼

ತಯಾರಿಕೆ, ಮಾರಾಟ, ವಿಸರ್ಜನೆಗೆ ದಂಡದ ಜತೆ ಜೈಲು • ಜಲಮೂಲಗಳ ರಕ್ಷಣೆಗೆ ಕ್ರಮ

ಪಿಒಪಿ ಗಣೇಶ ಬಳಸಿದರೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ (ಪಿಒಪಿ) ತಯಾರಿಸಿದ ಗಣೇಶ ವಿಗ್ರಹಗಳು, ಭಾರಲೋಹ ಮಿಶ್ರಿತ ರಾಸಾಯನಿಕಯುಕ್ತ ಬಣ್ಣದಿಂದ ಅಲಂಕಾರ ಮಾಡಿದ ಗಣೇಶ ಸೇರಿ ಯಾವುದೇ ವಿಗ್ರಹಗಳ ತಯಾರಿಕೆ, ಮಾರಾಟ ಹಾಗೂ ನೀರಿನಲ್ಲಿ ವಿಸರ್ಜನೆ ಮಾಡುವುದನ್ನು ನಿಷೇಧಿಸಿ ಅರಣ್ಯ ಮತ್ತು ಪರಿಸರ ಇಲಾಖೆ ಆದೇಶ ಹೊರಡಿಸಿದೆ.

ಒಂದು ವೇಳೆ ಈ ಆದೇಶ ಉಲ್ಲಂಘಿಸಿ ಪಿಒಪಿ ವಿಗ್ರಹಗಳ ತಯಾರಿಕೆ, ಮಾರಾಟ ಮಾಡಿದರೆ ಮತ್ತು ನೀರಿನಲ್ಲಿ ವಿಸರ್ಜಿಸಿದರೆ ಅದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಅಪರಾಧಕ್ಕೆ ಕನಿಷ್ಠ ಒಂದೂವರೆ ವರ್ಷ ಹಾಗೂ ಗರಿಷ್ಠ ಆರು ವರ್ಷಗಳ ಕಾರಾಗೃಹವಾಸ ಶಿಕ್ಷೆ ವಿಧಿಸಲಾಗುತ್ತದೆ.

ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ 1974ರ ಅನ್ವಯ ಕಲಂ 33(ಎ) ಅಡಿಯಲ್ಲಿ ಈ ರೀತಿಯ ವಿಗ್ರಹಗಳ ತಯಾರಿಕೆ ಘಟಕಗಳನ್ನು ಮುಚ್ಚುವ ಹಾಗೂ ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವಿದೆ. ಇಂತಹ ಘಟಕಗಳ ಮಾಲೀಕರಿಗೆ ₹1 ಲಕ್ಷದ ವರೆಗೆ ದಂಡ ಮತ್ತು 5 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಅಲ್ಲದೇ, ಇಂತಹ ವಿಗ್ರಹಗಳನ್ನು ಸಾರ್ವಜನಿಕರು ನೀರಿನ ಮೂಲಗಳಿಗೆ ವಿಸರ್ಜಿಸುವುದು ಕೂಡ ಶಿಕ್ಷಾರ್ಹ ಅಪರಾಧವಾಗುತ್ತದೆ ಎಂದು ಆದೇಶ ಹೇಳಿದೆ.

'ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಆದೇಶದ ಪ್ರಕಾರ, ನಮ್ಮ ನೀರಿನ ಮೂಲಗಳನ್ನು ರಕ್ಷಿಸಿಕೊಳ್ಳಬೇಕು. ಪಿಒಪಿ ವಿಗ್ರಹಗಳ ವಿಸರ್ಜನೆಯಿಂದ ಜಲಮೂಲಗಳು ಕಲುಷಿತವಾಗುತ್ತಿವೆ. ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ಜಲ ಕಾಯ್ದೆಯಲ್ಲಿನ ಕಲಂಗಳನ್ನು ಬಳಸಿ ಸೂಕ್ತ ಕ್ರಮ ಜರುಗಿಸಬೇಕು' ಎಂದೂ ಸರ್ಕಾರಗಳಿಗೆ ತಿಳಿಸಿದೆ.

ಇಂತಹ ವಿಗ್ರಹಗಳನ್ನು ನೀರಿನಲ್ಲಿ ವಿಸರ್ಜಿಸಿದಾಗ ಅವು ನೀರಿನಲ್ಲಿ ನಿಧಾನವಾಗಿ ಕರಗುತ್ತವೆ. ಇದರಿಂದ ನೀರಿನಲ್ಲಿರುವ ಆಮ್ಲಜನಕ ಪ್ರಮಾಣ ಇಳಿಕೆಯಾಗುತ್ತದೆ. ಲವಣಾಂಶವು ನೀರಿನಲ್ಲಿ ಶಾಶ್ವತ ಗಡಸುತನ ತರುತ್ತದೆ. ರಾಸಾಯನಿಕಯುಕ್ತ ಬಣ್ಣಗಳಲ್ಲಿರುವ ಭಾರದ ಮತ್ತು ಅಪಾಯಕಾರಿ ಲೋಹಗಳು ನೀರಿನಲ್ಲಿ ಬೆರೆತು ನೀರಿನ ಮೂಲಗಳು ಕಲುಷಿತಗೊಳ್ಳುತ್ತವೆ. ಜಲಚರಗಳು ಸಾವನ್ನಪ್ಪುತ್ತವೆ ಎಂದೂ ಹೇಳಿದೆ.

ಈ ಆದೇಶವನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯ ಅಧಿಕಾರಿಗಳಿಗೆ ರಾಜ್ಯದ ಎಲ್ಲ ಜಿಲ್ಲಾಡಳಿತಗಳು, ಸ್ಥಳೀಯ ಸಂಸ್ಥೆಗಳು, ಪೊಲೀಸ್ ಇಲಾಖೆಗಳು ಸಹಕಾರ ಮತ್ತು ಸಹಭಾಗಿತ್ವ ನೀಡಬೇಕು ಎಂದು ಪರಿಸರ ಇಲಾಖೆ ಮನವಿ ಮಾಡಿದೆ.

1 ಪಿಒಪಿ ಗಣೇಶ ವಿಗ್ರಹಗಳ ಮಾರಾಟ, ವಿಸರ್ಜನೆ ಮಾಡಿದರೆ 1ರಿಂದ 6 ವರ್ಷ ವರ್ಷದವರೆಗೆ ಜೈಲು ಶಿಕ್ಷೆ

2 ಪಿಒಪಿ ವಿಗ್ರಹಗಳನ್ನು ತಯಾರಿಸುವವರಿಗೆ ₹1 ಲಕ್ಷದವರೆಗೆ ದಂಡ ಮತ್ತು 5 ವರ್ಷ ಜೈಲು ಶಿಕ್ಷೆ

3 ತಯಾರಿಕೆ ಘಟಕಗಳನ್ನು ಮುಚ್ಚುವ ಹಾಗೂ ಮುಟ್ಟುಗೋಲು ಹಾಕಲು ಅವಕಾಶ

4 ಜಲಮೂಲ ರಕ್ಷಿಸಲು ಎನ್‌ಜಿಟಿ ನೀಡಿರುವ ಆದೇಶ ಪಾಲನೆಗಾಗಿ ಸರ್ಕಾರದಿಂದ ಆದೇಶ

5 ನದಿ, ತೊರೆ, ಕೆರೆ, ಕಟ್ಟೆ, ಬಾವಿಗಳಲ್ಲಿ ವಿಗ್ರಹ ವಿಸರ್ಜಿಸುವುದು ಶಿಕ್ಷಾರ್ಹ ಅಪರಾಧ

ಮೊದಲ ಬಾರಿ ಆದೇಶ: 4 ಎಫ್‌ಐಆರ್

ಹಿಂದಿನ ವರ್ಷಗಳಲ್ಲಿ ಮಾರ್ಗಸೂಚಿ ಹೊರಡಿಸಿ ಎಚ್ಚರಿಕೆ ನೀಡಲಾಗುತ್ತಿತ್ತು. ಈ ಬಾರಿ ಪಿಒಪಿ ಗಣೇಶ ವಿಗ್ರಹಗಳನ್ನು ನಿಷೇಧಿಸುವ ಆದೇಶವನ್ನೇ ಸರ್ಕಾರ ಹೊರಡಿಸಿದೆ.

ಬೆಂಗಳೂರು ನಗರದಲ್ಲಿ ನಾಲ್ಕು ಕಡೆಗಳಲ್ಲಿ ಪಿಒಪಿ ವಿಗ್ರಹಗಳ ತಯಾರಿಕೆ ಮಾಡಿದವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದ್ದು, ಒಬ್ಬರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

ವಿಧಾನಸೌಧದ ಮುಂಭಾಗ ಶುಕ್ರವಾರ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರು ಸಂವಿಧಾನದ ಪ್ರಸ್ತಾವನೆಯನ್ನು ಓದಿದರು – ಪ್ರಜಾವಾಣಿ ಚಿತ್ರ

'ಮನುಸ್ಮೃತಿ ಜಾರಿ ಯತ್ನ ಮಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಸಂವಿಧಾನವನ್ನು ನಾಶಮಾಡಿ, ಮನುಸ್ಮೃತಿಯನ್ನು ಮರು ಜಾರಿಗೊಳಿಸಲು ಹವಣಿಸುತ್ತಿರುವ ಶಕ್ತಿಗಳ ಬಗ್ಗೆ ಜನರು ಎಚ್ಚರದಿಂದ ಇರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸಂವಿಧಾನ ಪೀಠಿಕೆ' ಓದುವ ರಾಜ್ಯಮಟ್ಟದ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು. ಭಾರತದಲ್ಲಿ ಬೌದ್ಧ ಧರ್ಮದ ಕಾಲದಿಂದಲೇ ಪ್ರಜಾತಂತ್ರ ವ್ಯವಸ್ಥೆ ಇತ್ತು. ಸಂವಿಧಾನ ಜಾರಿಯಾದ ಬಳಿಕ ಇಲ್ಲಿ ಪ್ರಜಾಪ್ರಭುತ್ವ ನೆಲೆಯೂರಿತು. ಶೇಕಡ 95ರಷ್ಟು ಜನರು ಗುಲಾಮರಂತೆ ಬದುಕಬೇಕು ಎಂದು ಪ್ರತಿಪಾದಿಸುವ ಮನುಸ್ಮೃತಿಯನ್ನು ಮತ್ತೆ ತರಬೇಕು ಎಂಬ ಹವಣಿಕೆಯಲ್ಲಿರುವ ಶಕ್ತಿಗಳನ್ನು ಮಣಿಸಲು ಜನರು ಸಜ್ಜಾಗಬೇಕು ಎಂದು ಹೇಳಿದರು.

'ಬಸವಣ್ಣನವರ ಕಾಲದಲ್ಲಿ ಅನುಭವ ಮಂಟಪದ ರೂಪದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದ್ದು ಅಲ್ಲಮ ಪ್ರಭುಗಳು ಇದರ ಮುಖ್ಯಸ್ಥರಾಗಿದ್ದರು. ಸಂವಿಧಾನಕ್ಕೆ ಮೊದಲೇ ಭಾರತದಲ್ಲಿ ಗಣತಂತ್ರ ವ್ಯವಸ್ಥೆ ಜಾರಿಯಲ್ಲಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರೂಪುಗೊಂಡ ನಮ್ಮ ಸಂವಿಧಾನ ಆಧರಿಸಿ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಈ ದೇಶದ ಜನರಿಗೆ ಬದುಕುವ ಶಕ್ತಿ ಮತ್ತು ಭರವಸೆಯನ್ನು ಸಂವಿಧಾನ ನೀಡಿದೆ' ಎಂದರು.

6ನೇ ಪುಟ ನೋಡಿ

ಮೇಲ್ಮನವಿ ನ್ಯಾಯಮಂಡಳಿ ರಚನೆಗೆ ಕೇಂದ್ರ ಅಧಿಸೂಚನೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿಯ 31 ಪೀಠಗಳ ರಚನೆಗೆ ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ಅಧಿಸೂಚನೆ ಹೊರಡಿಸಿದೆ. ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೀಠಗಳ ಸ್ಥಾಪನೆ ಆಗಲಿದೆ.

ಇವು ಜಿಎಸ್‌ಟಿಗೆ ಸಂಬಂಧಿಸಿದ 14 ಸಾವಿರಕ್ಕೂ ಹೆಚ್ಚಿನ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ನೆರವಾಗುವ ನಿರೀಕ್ಷೆ ಇದೆ.

ಈಗ, ಜಿಎಸ್‌ಟಿ ಅಧಿಕಾರಿಗಳು ನೀಡುವ ಆದೇಶದ ಬಗ್ಗೆ ತಕರಾರು ಹೊಂದಿರುವವರು ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಆದರೆ ಹೈಕೋರ್ಟ್‌ಗಳಲ್ಲಿ ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದೊಡ್ಡದಿದೆ. ಅಲ್ಲಿ ಜಿಎಸ್‌ಟಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗೆ ವಿಶೇಷ ಪರಿಣತಿ ಇರುವ ಪೀಠಗಳು ಇಲ್ಲ.

ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ಈಚೆಗೆ ನೀಡಿರುವ ಮಾಹಿತಿ ಪ್ರಕಾರ, ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ತೆರಿಗೆ ಪಾವತಿಸುವಂತೆ ಸೂಚಿಸಿ ನೀಡಿರುವ ನೋಟಿಸ್‌ಗಳಿಗೆ ಸಂಬಂಧಿಸಿದ ವ್ಯಾಜ್ಯಗಳ ಸಂಖ್ಯೆಯು ಜೂನ್ ಅಂತ್ಯದ ಹೊತ್ತಿಗೆ 14,227ಕ್ಕೆ ಏರಿಕೆ ಕಂಡಿದೆ. ಇದು 2021ರ ಮಾರ್ಚ್ ವೇಳೆಗೆ 5,499 ಮಾತ್ರ ಆಗಿತ್ತು.

10ನೇ ಪುಟ ನೋಡಿ

2,454 ಪೊಲೀಸರ ನೇಮಕ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 2,454 ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ನಗರದ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಐಪಿಎಸ್ ಹಿರಿಯ ಅಧಿಕಾರಿಗಳ ವಾರ್ಷಿಕ ಸಮಾವೇಶ'ದಲ್ಲಿ ಪಾಲ್ಗೊಂಡ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗೋಷ್ಠಿಯಲ್ಲಿ ಈ ವಿವರ ನೀಡಿದರು.

ಸಿಸಿಬಿ ಬಲಪಡಿಸಲು 230 ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನಿಯೋಜಿಸಲು ತೀರ್ಮಾನಿಸಲಾಗಿದೆ. 148 ವರ್ಷ ಹಳೆಯದಾದ ಕಮಿಷನರ್ ಕಚೇರಿ ಕಟ್ಟಡ ನವೀಕರಣಕ್ಕೆ ₹3 ಕೋಟಿ, ನಗರ ಸಶಸ್ತ್ರ ಮೀಸಲು ಪಡೆಯ ಪೂರ್ವ ಘಟಕ ಆರಂಭಿಸಲು ₹60 ಕೋಟಿ, ರಾಜ್ಯದಲ್ಲಿ ಪೊಲೀಸ್ ವಾಹನಗಳನ್ನು ಖರೀದಿಸಲು ₹100 ಕೋಟಿ ನೀಡಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರಿನಲ್ಲಿ 11 ಹೊಸ ಠಾಣೆ: ಬೆಂಗಳೂರಿನಲ್ಲಿ ಹೊಸದಾಗಿ 5 ಸಂಚಾರ ಠಾಣೆ (ಚಿಕ್ಕಬಾಣಾವರ ಉತ್ತರ, ಜ್ಞಾನಭಾರತಿ, ಜೆ.ಪಿ.ನಗರ, ಶೇಷಾದ್ರಿಪುರ ಹಾಗೂ ಸಂಜಯನಗರ) ಹಾಗೂ 6 ಮಹಿಳಾ ಠಾಣೆ (ಉತ್ತರ, ಕೇಂದ್ರ, ಪಶ್ಚಿಮ, ಈಶಾನ್ಯ, ಆಗ್ನೇಯ ಹಾಗೂ ವೈಟ್‌ಫೀಲ್ಡ್) ಆರಂಭಿಸಲು ಒಪ್ಪಿಗೆ ನೀಡಲಾಗಿದೆ.

ಇ– ಎಫ್‌ಐಆರ್ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ವಾಹನಗಳು ಕಳವಾದ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ದೂರು ದಾಖಲಿಸಿ ಇ-ಎಫ್‌ಐಆರ್ ಪಡೆದುಕೊಳ್ಳಲು ಪೊಲೀಸ್ ಇಲಾಖೆ ರೂಪಿಸಿರುವ ವ್ಯವಸ್ಥೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಚಾಲನೆ ನೀಡಿದರು.

ದ್ವಿಚಕ್ರ ವಾಹನ, ಕಾರು, ಆಟೊ, ಸರಕು ಸಾಗಣೆ ವಾಹನಗಳು ಕಳವಾದಾಗ ಠಾಣೆಗೆ ಹೋಗುವ ಬದಲು ಆನ್‌ಲೈನ್ ಮೂಲಕವೇ ದೂರು ನೀಡುವ ವ್ಯವಸ್ಥೆ ಇದಾಗಿದೆ. ಇಂಥ ದೂರುಗಳನ್ನು ಆಧರಿಸಿ ಸಂಬಂಧಪಟ್ಟ ಠಾಣೆ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ.

ವಾಹನಗಳ ಮಾಲೀಕರು ಠಾಣೆಗಳಿಗೆ ಅಲೆಯುವುದನ್ನು ತಪ್ಪಿಸುವುದು ಈ ವ್ಯವಸ್ಥೆಯ ಗುರಿಯಾಗಿದೆ.

ದೂರು ದಾಖಲಿಸುವುದು ಹೇಗೆ: ಕರ್ನಾಟಕ ಪೊಲೀಸ್ ಇಲಾಖೆಯ https://ksp.karnataka.gov.in/ ಜಾಲತಾಣಕ್ಕೆ ಭೇಟಿ ನೀಡಬೇಕು.

ಜಾಲತಾಣದ ಎಡಬದಿಯ ಆಯ್ಕೆಯಲ್ಲಿರುವ 'ನಾಗರಿಕ ಕೇಂದ್ರಿತ ತಾಣ' ಆಯ್ಕೆಯನ್ನು ಕ್ಲಿಕ್ ಮಾಡಬೇಕು. ನಂತರ, 'ನಾಗರಿಕ ಕೇಂದ್ರಿತ ಪೋರ್ಟಲ್ ಕರ್ನಾಟಕ ರಾಜ್ಯ ಪೊಲೀಸ್' ಪುಟ ತೆರೆದುಕೊಳ್ಳುತ್ತದೆ. ಬಳಿಕ, ಅಲ್ಲಿಯ ಲಾಗಿನ್ ಬಟನ್ ಒತ್ತಬೇಕು.

'ನ್ಯೂ ಟು ಎಸ್‌ಎಸ್‌ಒ' ಕ್ಲಿಕ್ ಮಾಡಿ, ಆಧಾರ್ ಸಂಖ್ಯೆ ಬಳಸಿಕೊಂಡು ಹೊಸ ಯೂಸರ್ ಐ.ಡಿ ಹಾಗೂ ಪಾಸ್‌ವರ್ಡ್ ಸೃಷ್ಟಿಸಬೇಕು. ನಂತರ, ಕಳವಾದ ವಾಹನದ ವಿವರ ದಾಖಲಿಸಿ ದೂರು ಸಲ್ಲಿಸಬೇಕು. ಇದಾದ ಬಳಿಕ, ಸಂಬಂಧಪಟ್ಟ ಠಾಣೆಗೆ ಸಂದೇಶ ರವಾನೆಯಾಗಲಿದೆ. ನಂತರ, ಸಂಬಂಧಪಟ್ಟ ಠಾಣೆಗಳ ತನಿಖಾಧಿಕಾರಿ ಸಹಿ ಸಮೇತ 'ಇ-ಎಫ್‌ಐಆರ್' ಪ್ರತಿ ಲಭ್ಯವಾಗಲಿದೆ.

6ನೇ ಪುಟ ನೋಡಿ

ಅದಾನಿ ಪವರ್ ಲಿಮಿಟೆಡ್‌ಗೆ ಪರಿಸರ ಅನುಮತಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲಿದ್ದಲು ಉಷ್ಣ ವಿದ್ಯುತ್ ಸ್ಥಾವರದ ಘಟಕಗಳ ಸ್ಥಾಪನೆ ಮತ್ತು ವಿಸ್ತರಣೆಗಾಗಿ ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್‌ಗೆ (ಯುಪಿಸಿಎಲ್) ನೀಡಿದ್ದ ಪರಿಸರ ಅನುಮತಿಯನ್ನು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಅದಾನಿ ಪವರ್ ಲಿಮಿಟೆಡ್‌ಗೆ ವರ್ಗಾಯಿಸಿದೆ.

2017ರಲ್ಲಿ ನೀಡಿದ್ದ ಪರಿಸರ ಅನುಮತಿಯ ವಿಚಾರಕ್ಕೆ ಸಂಬಂಧಿಸಿದ ಮೊಕದ್ದಮೆಯು ಸುಪ್ರೀಂ ಕೋರ್ಟ್‌ನಲ್ಲಿದೆ. ಸುಪ್ರೀಂ ಕೋರ್ಟ್‌ನಲ್ಲಿನ ಮೊಕದ್ದಮೆಯು ಇತ್ಯರ್ಥವಾಗುವುದಕ್ಕೂ ಮುನ್ನವೇ ಸಚಿವಾಲಯವು ಪರಿಸರ ಅನುಮತಿಯನ್ನು ವರ್ಗಾಯಿಸಿರುವುದು ಹಲವು ಪ್ರಶ್ನೆಗಳನ್ನು ಎತ್ತಿದೆ.

ಯುಪಿಸಿಎಲ್ ಈ ಮೊದಲು ಅದಾನಿ ಗ್ರೂಪ್‌ನ ಅಂಗಸಂಸ್ಥೆಯಾಗಿತ್ತು. 600 ಮೆಗಾವಾಟ್‌ನ ಎರಡು ಘಟಕಗಳನ್ನು ಸ್ಥಾಪಿಸಲು ಯುಪಿಸಿಎಲ್‌ಗೆ ಪರಿಸರ ಸಚಿವಾಲಯವು ಪರಿಸರ ಅನುಮತಿ ನೀಡಿತ್ತು.

> **ಕಂಪನಿಯ ಧಾರಣಾ ಸಾಮರ್ಥ್ಯ ಅಧ್ಯಯನ ವರದಿಯು ಘಟಕಗಳ ವಿಸ್ತರಣೆಯನ್ನು ನಿರಾಕರಿಸಿತ್ತು. ಇದರ ಮಧ್ಯೆಯೇ ಪರಿಸರ ಅನುಮತಿ ವರ್ಗಾಯಿಸಿರುವುದು ಕಳವಳಕಾರಿ**
> **ಜನಜಾಗೃತಿ ಸಮಿತಿ**

> **ಎನ್‌ಜಿಟಿ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದೇವೆ. ನಾವು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದಕ್ಕೆ ಬದ್ಧರಾಗಿದ್ದೇವೆ**
> **ಅದಾನಿ ಪವರ್ ಲಿಮಿಟೆಡ್**

10ನೇ ಪುಟ ನೋಡಿ

ಟಿಕೆಟ್ ವಂಚನೆ: ಮತ್ತೊಂದು ಜಾಲ ಪತ್ತೆ

ಬೆಂಗಳೂರು/ಕೊಪ್ಪಳ: ಬೈಂದೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ಉದ್ಯಮಿ ಗೋವಿಂದ ಬಾಬು ಪೂಜಾರಿ ಅವರಿಂದ ₹5 ಕೋಟಿ ಪಡೆದಿದ್ದ ಪ್ರಕರಣದ ಬೆನ್ನಲ್ಲೇ, ಬಿಜೆಪಿ ಟಿಕೆಟ್ ಹೆಸರಿನಲ್ಲಿ ವಂಚಿಸುತ್ತಿದ್ದ ಮತ್ತೊಂದು ಜಾಲ ಪತ್ತೆಯಾಗಿದೆ. 7

ಒಳ ಪುಟಗಳು

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ಗರಿಷ್ಠ 10
ಸುಧಾಕರ್ ಮೇಲಿನ ಎಫ್‌ಐಆರ್‌ಗೆ ಮಧ್ಯಂತರ ತಡೆಯಾಜ್ಞೆ 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಚ್‌ಎಸ್‌ಆರ್‌ಪಿ: ಆನ್‌ಲೈನ್‌ನಲ್ಲೇ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಿಕೊಳ್ಳಲು ಆನ್‌ಲೈನ್ ಮೂಲಕ ನೋಂದಣಿ ಮಾಡಬಹುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

http//transport.karnataka.gov.in ಅಥವಾ www.siam.inಗೆ ಭೇಟಿ ನೀಡಬೇಕು. ಅದರಲ್ಲಿ ಬುಕ್ ಎಚ್‌ಎಸ್‌ಆರ್‌ಪಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ನಿಮ್ಮ ವಾಹನ ತಯಾರಕ ಕಂಪನಿಯನ್ನು ಆಯ್ಕೆ ಮಾಡಬೇಕು. ವಾಹನದ ಮೂಲ ವಿವರಗಳನ್ನು ಭರ್ತಿ ಮಾಡಬೇಕು. ಎಚ್‌ಎಸ್‌ಆರ್‌ಪಿ ಅಳವಡಿಕೆಗಾಗಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಡೀಲರ್ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಬೇಕು. ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸಬೇಕು. ನಗದು ರೂಪದಲ್ಲಿ ಪಾವತಿ ಮಾಡುವಂತಿಲ್ಲ.

ವಾಹನ ಮಾಲೀಕರ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಎಚ್‌ಎಸ್‌ಆರ್‌ಪಿ ಅಳವಡಿಕೆಯ ದಿನಾಂಕ ಮತ್ತು ಸಮಯವನ್ನು ಆಯ್ಕೆ ಮಾಡಿಕೊಳ್ಳಬಹುದು. ನಿಗದಿಪಡಿಸಿದ ಸಮಯಕ್ಕೆ ವಾಹನ ತಯಾರಕರು ಅಥವಾ ಡೀಲರ್ ಸಂಸ್ಥೆಗೆ ಭೇಟಿ ನೀಡಬೇಕು. ವಾಹನ ಮಾಲೀಕರ ಕಚೇರಿ ಆವರಣ ಅಥವಾ ಮನೆಯ ಸ್ಥಳದಲ್ಲಿ ಎಚ್‌ಎಸ್‌ಆರ್‌ಪಿ ಅಳವಡಿಕೆಯ ಆಯ್ಕೆಗೂ ಅವಕಾಶವಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮಾರುಕಟ್ಟೆಯಲ್ಲಿ ರಸ್ತೆ ಬದಿಯ ಮಾರಾಟಗಾರರಿಂದ ನಕಲಿ ಹಾಲೊಗ್ರಾಮ್, ಐಎನ್‌ಡಿ ಮಾರ್ಕ್, ಇಂಡಿಯಾ ಎಂದು ಬರೆದಿರುವ ನಂಬರ್ ಪ್ಲೇಟ್ ಅಳವಡಿಸುವಂತಿಲ್ಲ. ಅವು ಎಚ್‌ಎಸ್‌ಆರ್‌ಪಿಗಳಾಗಿರುವುದಿಲ್ಲ. ಅಸಲಿ ಎಚ್‌ಎಸ್‌ಆರ್‌ಪಿ ಅಳವಡಿಸದೇ ಇದ್ದರೆ ವಾಹನ ಮಾಲೀಕತ್ವ ವರ್ಗಾವಣೆ, ವಿಳಾಸ ಬದಲಾವಣೆ, ಕಂತು ಕರಾರು ನಮೂದು/ರದ್ದತಿ, ಅರ್ಹತಾ ಪತ್ರ ನವೀಕರಣ ಮಾಡಲಾಗುವುದಿಲ್ಲ. 2019 ಏಪ್ರಿಲ್ 1ಕ್ಕಿಂತ ಹಿಂದಿನ ವಾಹನಗಳು ನವೆಂಬರ್ 17ರ ಒಳಗೆ ಎಚ್‌ಎಸ್‌ಆರ್‌ಪಿ ಅಳವಡಿಸಬೇಕು. ಶುಲ್ಕ ಪಾವತಿಸಿದ ಪ್ರಕರಣಗಳಲ್ಲಿ ನಿಗದಿತ ದಿನಾಂಕದಿಂದ 30 ದಿನಗಳವರೆಗೆ ಎಚ್‌ಎಸ್‌ಆರ್‌ಪಿ ರಸೀದಿಯನ್ನು ಪ್ರಸ್ತುತಪಡಿಸುವ ವಾಹನಗಳಿಗೆ ಯಾವುದೇ ದಂಡ ಇರುವುದಿಲ್ಲ ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಲುವೆ ಉಕ್ಕಿದರೆ ಮನೆಗಳಿಗೆ ನುಗ್ಗುವ ಗಲೀಜು

ಊರ ಮಧ್ಯೆ ಕೆ.ಸಿ.ವ್ಯಾಲಿ ಕೊಳಚೆ!

• ಕೆ.ಓಂಕಾರ ಮೂರ್ತಿ

ಕೋಲಾರ: ಊರಿನ ನಡುವೆ ಮನೆಗಳ ಪಕ್ಕದಲ್ಲೇ ಹಾದು ಹೋಗಿರುವ ಕೆ.ಸಿ. ವ್ಯಾಲಿ ಕಾಲುವೆ. ದುರ್ವಾಸನೆ ಜೊತೆಗೆ ನಿತ್ಯ ಸೊಳ್ಳೆ, ನೊಣಗಳ ಹಾವಳಿ. ಮಳೆ ಜೋರಾದರೆ ಮನೆಗೆ ನುಗ್ಗುವ ನೀರು. ಹಸಿರು ಬಣ್ಣಕ್ಕೆ ತಿರುಗಿರುವ ಬಾವಿಯ ಜಲ! –ಇದು, ಕೋಲಾರ ತಾಲ್ಲೂಕಿನ ಲಕ್ಷ್ಮಿಸಾಗರ ಗ್ರಾಮದ ಸ್ಥಿತಿ.

ಕಾಲುವೆಯ ಸುತ್ತ ಬೆಳೆದು ನಿಂತಿರುವ ಆಳುದ್ದದ ಕಳೆ, ಕೆರೆ ಸುತ್ತಲೂ ಒಣಗಿರುವ ತೆಂಗಿನಮರ. ಸದಾ ಶೀತ, ಜ್ವರ ಸೇರಿದಂತೆ ಒಂದಿಲ್ಲ ಒಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು–ಹೀಗೆ ಅಲ್ಲಿನ ಸಮಸ್ಯೆಗಳು ಮುಂದುವರಿಯುತ್ತವೆ.

ಮೊದಲ ಸಂತ್ರಸ್ತ ಗ್ರಾಮ: ಬೆಂಗಳೂರಿನಿಂದ ಕೆ.ಸಿ. ವ್ಯಾಲಿ ಕೊಳಚೆನೀರು ಮೊದಲು ಬಂದು ಸೇರುವುದೇ ಲಕ್ಷ್ಮಿಸಾಗರ ಕೆರೆಗೆ. ನಂತರ ಊರಿನೊಳಗೆ ಕಾಲುವೆ ಮೂಲಕ ಹರಿದು ಉದ್ದಪ್ಪನಹಳ್ಳಿ ಕೆರೆಗೆ ಸೇರುತ್ತದೆ. ಅಲ್ಲಿಂದಲೇ ಸಮಸ್ಯೆ ಆರಂಭ. ಕಾಲುವೆ ಎರಡು ಬದಿಯಲ್ಲಿ ಮನೆಗಳಿವೆ.

ಪ್ರಜಾವಾಣಿ ವಿಶೇಷ

6ನೇ ಪುಟ ನೋಡಿ

ಕೆ.ಸಿ.ವ್ಯಾಲಿ ಪರಿಣಾಮ ಹಸಿರು ಬಣ್ಣಕ್ಕೆ ತಿರುಗಿರುವ ಲಕ್ಷ್ಮಿಸಾಗರ ಗ್ರಾಮದೊಳಗಿನ ಬಾವಿ ನೀರು

ನೀರಿನಲ್ಲಿ ನೊರೆ!

ಲಕ್ಷ್ಮಿಸಾಗರ ಗ್ರಾಮಕ್ಕೆ ಕುಡಿಯಲು ಕೊಳವೆಬಾವಿ ನೀರು ಶುದ್ಧೀಕರಿಸಿ ಪೂರೈಸಲಾಗುತ್ತಿದೆ. ಎರಡು ದಿನ ಪಾತ್ರೆಯಲ್ಲಿಟ್ಟರೆ ನೀರಿನ ಮೇಲೆ ಬಿಳಿ ಬಣ್ಣ ಕಾಣಿಸಿಕೊಳ್ಳುತ್ತದೆ. ನಂತರ ನೊರೆ ರೀತಿ ಕಾಣುತ್ತದೆ, ವಾಸನೆ ಬರುತ್ತದೆ. ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಕೆ.ಸಿ.ವ್ಯಾಲಿ ನೀರು ಮಿಶ್ರಣವಾಗುತ್ತದೆಯೇ ಎಂಬ ಭಯ ಆವರಿಸಿದೆ.

ಲಕ್ಷ್ಮಿಸಾಗರ ಗ್ರಾಮಸ್ಥರು

> **ಯಾರಿಗೆ ಯಾವ ಕಾಯಿಲೆ ಬರುತ್ತದೆಯೋ ಗೊತ್ತಿಲ್ಲ. ಮಕ್ಕಳಿಗೆ ಪದೇ ಪದೇ ಜ್ವರ, ಶೀತ ಬರುತ್ತಿದೆ. ಬಾವಿ ನೀರಿನಲ್ಲಿ ಸ್ನಾನ ಮಾಡಿದರೂ ಮೈ ಕೆರೆತ ಬರುತ್ತದೆ**
> **ಮಂಜುನಾಥ್**
> ಗ್ರಾಮಸ್ಥ

> **ನೀರು ಹರಿಯುವ ಜಾಗದಲ್ಲಿನ ತೆಂಗಿನಮರಗಳು ಒಣಗುತ್ತಿವೆ, ಮೀನುಗಳು ಸಾಯುತ್ತಿವೆ. ದೂರು ನೀಡಿದರೂ ಕೇಳಿಸಿಕೊಳ್ಳುತ್ತಿಲ್ಲ. 3ನೇ ಹಂತದ ಶುದ್ಧೀಕರಣ ಮಾಡಲೇಬೇಕು**
> **ಶಂಕರ್**
> ಲಕ್ಷ್ಮಿಸಾಗರ ಗ್ರಾ.ಪಂ. ಸದಸ್ಯ

56ನೇ ಎಂಜಿನಿಯರ್‌ಗಳ ದಿನ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ರಾಜಕಾರಣಿಗಳಿಗೆ ಸರ್‌ಎಂವಿ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ಮೇಲೆ ಯಾರೂ ಪ್ರಭಾವ ಬೀರಬಾರದು ಎಂದು ವಿಶ್ವೇಶ್ವರಯ್ಯ ಅವರು ಮೈಸೂರು ಆಸ್ಥಾನದಲ್ಲಿ ದಿವಾನರಾದ ಸಮಯದಲ್ಲಿ ಸಂಬಂಧಿಕರಿಗೆ ಕಟ್ಟಪ್ಪಣೆಯನ್ನು ವಿಧಿಸಿದ್ದರು. ಇದು ಇಂದಿನ ರಾಜಕಾರಣಿಗಳು ಅನುಸರಿಸಬೇಕಾದ ಮಾರ್ಗ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ 'ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್' ಆಯೋಜಿಸಿದ್ದ '56ನೇ ಎಂಜಿನಿಯರ್‌ಗಳ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಎಂಜಿನಿಯರ್‌ಗಳ ದಿನವೂ ಹೌದು. ವಿಶ್ವ ಪ್ರಜಾ ಪ್ರಭುತ್ವ ದಿನವೂ ಹೌದು. ಉತ್ತಮ ಸಮಾಜ ನಿರ್ಮಾಣವೇ ಈ ಎರಡರ ಉದ್ದೇಶವಾಗಿದೆ. ಎಂಜಿನಿಯರ್‌ಗಳು ದೇಶದ, ಸಮಾಜದ ನಿರ್ಮಾತೃಗಳು. ಸಮಾಜವನ್ನು, ದೇಶವನ್ನು ಪ್ರಗತಿಯ ದಿಕ್ಕಿನಲ್ಲಿ ಒಯ್ಯುವವರು ಎಂದು ವಿಶ್ಲೇಷಿಸಿದರು.

ಶಿಕ್ಷಣ, ಕೈಗಾರಿಕೆ, ನೀರಾವರಿ ಹೀಗೆ ಅನೇಕ ಕ್ಷೇತ್ರಗಳಲ್ಲಿ ವಿಶ್ವೇಶ್ವರಯ್ಯ ಕೆಲಸ ಮಾಡಿದ್ದರು. ಮುಂದಿನ ಸಮಾಜ ಹೇಗಿರಬೇಕು ಎನ್ನುವ ಗ್ರಹಿಕೆ ಮತ್ತು ದೂರದರ್ಶಿತ್ವವನ್ನು ಹೊಂದಿದ್ದ ಕಾರಣದಿಂದಲೇ ಅವರು ಭಾರತ ರತ್ನ ಪುರಸ್ಕೃತರಾದರು ಎಂದು ನೆನಪಿಸಿಕೊಂಡರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಮಾತನಾಡಿ, '1913ರಲ್ಲಿ ನಿರ್ಮಿಸಲಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ಕಾಲೇಜಿಗೆ ಪ್ರತ್ಯೇಕ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಹಿಂದಿನ ಸರ್ಕಾರ ನೀಡಿತ್ತು.

ನಗರದ ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಸ್ಥೆ ಆಯೋಜಿಸಿದ್ದ 56ನೇ ಎಂಜಿನಿಯರ್‌ಗಳ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್‌ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆಗೆ ಹೂವಿನ ಮಾಲೆ ಹಾಕಿ ನಮಿಸಿದರು. ಸಚಿವ ಎಂ.ಸಿ. ಸುಧಾಕರ್, ಸಂಸ್ಥೆಯ ಕಾರ್ಯದರ್ಶಿ ಎಂ.ಟಿ. ರಂಗಾ ರೆಡ್ಡಿ ಇದ್ದಾರೆ –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಪ್ರಭಾವ ಬೀರದಂತೆ ಸಂಬಂಧಿಕರಿಗೆ ಕಟ್ಟಪ್ಪಣೆ ನೀಡಿದ್ದ ಸರ್‌ಎಂವಿ
- ಅನೇಕ ಕ್ಷೇತ್ರಗಳಲ್ಲಿ ವಿಶ್ವೇಶ್ವರಯ್ಯ ಪರಿಣತರು
- ವಿಶ್ವೇಶ್ವರಯ್ಯ ವಿವಿಗೆ ಸಕಲ ಸೌಲಭ್ಯ ಕಲ್ಪಿಸಲು ಸರ್ಕಾರ ಸಿದ್ಧ

ಆದರೆ, ಅದಕ್ಕೆ ಬೇಕಾದ ಸ್ಥಳ, ಸೌಲಭ್ಯ ನೀಡಿಲ್ಲ. ಈಗಿರುವ 50 ಎಕರೆ ಭೂಮಿ ಸಾಕಾಗುವುದಿಲ್ಲ. 100 ಎಕರೆ ಜಮೀನು ಅಗತ್ಯವಿದೆ. ದೇಶದ ಒಳಿತಿಗಾಗಿ ಕೆಲಸ ಮಾಡಿದವರ ಹೆಸರನ್ನು ಯಾವುದೇ ಸಂಸ್ಥೆಗೆ ಇಟ್ಟಾಗ ಅದು ಗೌರವ ಕಾಪಾಡಿಕೊಳ್ಳುವಂತಿರಬೇಕು. ಹಾಗಾಗಿ ವಿಶ್ವೇಶ್ವರ ವಿಶ್ವವಿದ್ಯಾಲಯಕ್ಕೆ ಬೇಕಾದ ಎಲ್ಲ ಸೌಲಭ್ಯ ಕಲ್ಪಿಸಲಾಗುವುದು' ಎಂದು ತಿಳಿಸಿದರು.

ಸಾಧಕ ಎಂಜಿನಿಯರ್‌ಗಳಾದ ಎಪಿವಿಎಸ್ ಪ್ರಸಾದ್, ಜಯದೇವ ಇ.ಪಿ., ಗೀತಾ ಮಂಜುನಾಥ್, ಸಿ. ಸತ್ಯನಾರಾಯಣ, ಕೃಷ್ಣಕಾಂತ್ ನಾಯಕ್, ಆಶೀಶ್ ಸೋಲಂಕಿ, ಎಸ್.ಎನ್. ಶ್ರೀಧರ್, ಕೆ.ಎನ್. ಸುಬ್ರಹ್ಮಣ್ಯ, ಆರ್.ಎಚ್. ಗೌಡರ್, ಎಚ್. ಕೆ. ಗೋಪಾಲಕೃಷ್ಣ, ತೀರ್ಥಪ್ರಸಾದ್, ಸಿರಿ ಪ್ರಸನ್ನರಾಜ್, ಮಹೇಶ್ ಕೆ., ರುಷಾಲಿ ಪೂವಮ್ಮ, ಸಿ.ಟಿ. ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಎಂ. ಲಕ್ಷ್ಮಣ, ಗೌರವ ಕಾರ್ಯದರ್ಶಿ ಎಂ.ಟಿ. ರಂಗಾ ರೆಡ್ಡಿ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

'ಶತಮಾನಕ್ಕೆ ಒಬ್ಬ ವಿಶ್ವೇಶ್ವರಯ್ಯ ಬೇಕು'

ಬೆಂಗಳೂರು: ಸುಭದ್ರ ದೇಶ ನಿರ್ಮಾಣಕ್ಕೆ ಶತಮಾನಕ್ಕೆ ಒಮ್ಮೆಯಾದರೂ ಸರ್ ಎಂ. ವಿಶ್ವೇಶ್ವರಯ್ಯ ಅವರಂಥವರು ಜನ್ಮತಾಳಬೇಕು ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಶುಕ್ರವಾರ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ ಮತ್ತು 'ಸರ್ ಎಂ.ವಿ. ಸ್ಮಾರಕ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ರಾಷ್ಟ್ರ ಹಾಗೂ ರಾಜ್ಯದ ಅಭಿವೃದ್ಧಿಗೆ ಸರ್ ಎಂ.ವಿ. ಅವರು ತಾವು ಬಯಸಿದ್ದನ್ನು ಮಾಡಿ ತೋರಿಸಿದರು' ಎಂದರು.

ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸಂದರ್ಭದಲ್ಲಿ ಕೆಆರ್‌ಎಸ್ ಜಲಾಶಯ, ಕೈಗಾರಿಕೆಗಳ ನಿರ್ಮಾಣ ಸೇರಿದಂತೆ ಅನೇಕ ಮಹಾನ್ ಕಾರ್ಯಗಳನ್ನು ಮಾಡಿ, ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದರು. ಇಂದು ಬೆಂಗಳೂರು ಐ.ಟಿ-ಬಿ.ಟಿ ಕೇಂದ್ರ ಆಗಲು ವಿಶ್ವೇಶ್ವರಯ್ಯ ಅವರೇ ಕಾರಣ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ಆಧುನಿಕ ಭಾರತ ನಿರ್ಮಾಣ ಮತ್ತು ದೇಶದ ಅಭಿವೃದ್ಧಿಗೆ ಸರ್ ಎಂ.ವಿ ಕೊಡುಗೆ ಅಪಾರ. ಅವರಿಂದಲೇ ಸ್ಥಾಪಿತವಾದ ಈ ಸಂಸ್ಥೆ (ಎಫ್‌ಕೆಸಿಸಿಐ) ದೇಶದ ಅರ್ಥ ವ್ಯವಸ್ಥೆಗೆ ಅಪಾರ ಕೊಡುಗೆ ನೀಡುತ್ತಿದೆ' ಎಂದರು.

ವೋಲ್ವೊ ಸಮೂಹದ ಭಾರತದ ಅಧ್ಯಕ್ಷ ಕಮಲ್ ಬಾಲಿ ಅವರಿಗೆ 'ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಫ್‌ಕೆಸಿಸಿಐ ಶುಕ್ರವಾರ ಆಯೋಜಿಸಿದ್ದ 'ಸಂಸ್ಥಾಪಕರ ದಿನಾಚರಣೆ' ಹಾಗೂ 'ಸರ್ ಎಂ.ವಿ. ಸ್ಮಾರಕ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ವೋಲ್ವೊ ಸಮೂಹದ ಭಾರತದ ಅಧ್ಯಕ್ಷ ಕಮಲ್ ಬಾಲಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ 'ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ' ಪ್ರದಾನ ಮಾಡಿದರು. ಎಫ್‌ಕೆಸಿಸಿಐ ನಿಕಟಪೂರ್ವ ಅಧ್ಯಕ್ಷ ಐ.ಎಸ್. ಪ್ರಸಾದ್, ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ, ಶಾಸಕ ಬಸವರಾಜ ಬೊಮ್ಮಾಯಿ, ಎಫ್‌ಕೆಸಿಸಿಐ ಪದಾಧಿಕಾರಿಗಳಾದ ರಮೇಶ್‌ಚಂದ್ರ ಲಹೋಟಿ ಮತ್ತು ಎಂ.ಜಿ. ಬಾಲಕೃಷ್ಣ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಕೆ. ರಾಮಸ್ವಾಮಿ, ಕಮಲ್ ಬಾಲಿ ಅವರ ಪತ್ನಿ ಜಿನಿ ಬಾಲಿ ಇದ್ದರು. – ಪ್ರಜಾವಾಣಿ ಚಿತ್ರ

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಮತ್ತು ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಸಹಯೋಗದಲ್ಲಿ ನಡೆದ 'ಎಂಜಿನಿಯರ್‌ಗಳ ದಿನ' ಕಾರ್ಯಕ್ರಮದಲ್ಲಿ ಮೋಕ್ಷಗುಂಡಂ ಶೇಷಾದ್ರಿ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

'ಸರ್ ಎಂ. ವಿಶ್ವೇಶ್ವರಯ್ಯ ಜಾತ್ಯತೀತ ವ್ಯಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ ಎಂ. ವಿಶ್ವೇಶ್ವರಯ್ಯ ಅವರು ಅಧ್ಯಯನದಿಂದ ಅಸಾಧಾರಣ ಎಂಜಿನಿಯರ್, ಉತ್ತಮ ಆಡಳಿತಗಾರ ಮತ್ತು ಅರ್ಥಶಾಸ್ತ್ರಜ್ಞ. ಎಲ್ಲಕ್ಕಿಂತ ಹೆಚ್ಚಾಗಿ ದೇಶಭಕ್ತ ಮತ್ತು ಜಾತ್ಯತೀತ ವ್ಯಕ್ತಿಯಾಗಿದ್ದರು' ಎಂದು ಸರ್ ಎಂ. ವಿಶ್ವೇಶ್ವರಯ್ಯ ಅವರ ಕುಟುಂಬದ ಸದಸ್ಯ ಮೋಕ್ಷಗುಂಡಂ ಶೇಷಾದ್ರಿ ಹೇಳಿದರು.

ನಗರದಲ್ಲಿ ಶುಕ್ರವಾರ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಮತ್ತು ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ (ಜಿಎಟಿ) ಸಹಯೋಗದಲ್ಲಿ ನಡೆದ 'ಎಂಜಿನಿಯರ್‌ಗಳ ದಿನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಹಾರಾಜರ ಜನ್ಮದಿನದ ವಾರ್ಷಿಕ ಅನ್ನದಾನ ಸಮಾರಂಭದಲ್ಲಿ ಯಾವುದೇ ಭೇದಭಾವವಿಲ್ಲದೇ ಎಲ್ಲ ಜಾತಿಯವರಿಗೆ ಸಾಮಾನ್ಯ ಪಂಕ್ತಿಯಲ್ಲಿ ಅನ್ನದಾನ ಮಾಡಬೇಕೆಂದು ಆಗ್ರಹಿಸಿದ್ದರು' ಎಂದು ಸ್ಮರಿಸಿದರು.

'ಸರ್ ಎಂ. ವಿಶ್ವೇಶ್ವರಯ್ಯ ಅವರು ತಮ್ಮ ಪಿಂಚಣಿ ಹಣದಲ್ಲಿ ಯುವಿಸಿಇ, ಎಸ್‌ಜೆಪಿ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ಅವರು ಯಾವುದೇ ಹೆಸರು ಅಥವಾ ಖ್ಯಾತಿಯ ನಿರೀಕ್ಷಿಸಿರಲಿಲ್ಲ. ದೇಶವನ್ನು ಅಭಿವೃದ್ಧಿಪಡಿಸಲು ವಿದ್ಯಾವಂತ ನಾಗರಿಕರಿಗೆ ಉದ್ಯೋಗ ಒದಗಿಸಲು ಹಲವಾರು ಕೈಗಾರಿಕೆಗಳನ್ನು ನಿರ್ಮಿಸಿದ್ದಾರೆ. ತಮ್ಮ ಕುಟುಂಬದವರಿಗೆ ಯಾವುದೇ ಸರ್ಕಾರಿ ಕೆಲಸಕ್ಕೆ ಶಿಫಾರಸು ಮಾಡಲಿಲ್ಲ' ಎಂದು ತಿಳಿಸಿದರು.

ಗ್ಲೋಬಲ್ ಕಾಲೇಜಿನ ಶಿವಕುಮಾರ್ ಅವರು ಬರೆದ 'ಸರ್ ಎಂ.ವಿ ಅವರ ಜೀವನ ಮತ್ತು ಕೊಡುಗೆಗಳು' ಕುರಿತ ಪುಸ್ತಕವನ್ನು ಜಿಎಟಿಯ ಪ್ರಾಂಶುಪಾಲ ರಾಣಾ ಪ್ರತಾಪ್ ರೆಡ್ಡಿ ಬಿಡುಗಡೆ ಮಾಡಿದರು.

ಜಿ. ಶಶಿಕುಮಾರ್, ಎನ್‌ಇಎಫ್ ಹೆಚ್ಚುವರಿ ಕಾರ್ಯದರ್ಶಿ ವೆಂಕಟಪ್ಪ, ವಿ. ಎನ್. ರಾಜಶೇಖರ್, ಐಶ್ವರ್ಯ ಮತ್ತು ರಾಜೇಶ್ ಭಟ್ ಇದ್ದರು.

ಶೌರ್ಯ ಜಾಗರಣ ರಥಯಾತ್ರೆ 25ರಿಂದ

ಬೆಂಗಳೂರು: ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) 60ನೇ ವರ್ಷಾಚರಣೆ ಅಂಗವಾಗಿ ಇದೇ 25ರಿಂದ ಅ.10ರವರೆಗೂ ರಾಜ್ಯದಾದ್ಯಂತ ಶೌರ್ಯ ಜಾಗರಣ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಬಜರಂಗದಳದ ರಾಷ್ಟ್ರೀಯ ಸಹಸಂಚಾಲಕ ಸೂರ್ಯನಾರಾಯಣ ತಿಳಿಸಿದರು.

ರಥಯಾತ್ರೆಯು ಇದೇ 25ಕ್ಕೆ ಚಿತ್ರದುರ್ಗದಿಂದ ಆರಂಭವಾಗಲಿದ್ದು, ಅ.10 ರಂದು ಉಡುಪಿ ತಲುಪಲಿದೆ ಎಂದು ಹೇಳಿದರು.

ಕಿದ್ವಾಯಿ: ಅಕ್ರಮದ ತನಿಖೆಗೆ ಸಿ.ಎಂ ಸೂಚನೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಟೆಂಡರ್ ಸೇರಿ ವಿವಿಧ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ತಂಡ ರಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಸಂಸ್ಥೆಯು ಪೆಟ್ ಸ್ಕ್ಯಾನ್ ಟೆಂಡರ್ ಅನ್ನು ಬೆಂಗಳೂರು ಮೆಡಿಕಲ್ ಸಿಸ್ಟಮ್ಸ್ (ಬಿಎಂಎಸ್) ಸಂಸ್ಥೆಗೆ ಕಾರ್ಯಾದೇಶ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ 'ಅಧಿಕಾರಕ್ಕೆ ಮುನ್ನವೇ ಕಾರ್ಯಾದೇಶ!' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ಆ.17ರಂದು ವಿಶೇಷ ವರದಿ ಪ್ರಕಟಿಸಿತ್ತು. ಬಳಿಕ ಸಂಸ್ಥೆಯಲ್ಲಿನ ವೈದ್ಯರು ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಾಲ್ಕು ಪುಟಗಳ ವರದಿ ಸಹಿತ ದೂರು ನೀಡಿ, ತನಿಖೆ ನಡೆಸುವಂತೆ ಒತ್ತಾಯಿಸಿದ್ದರು. ಇದರಿಂದಾಗಿ ಸೂಕ್ತ ತನಿಖೆ ನಡೆಸಿ, ವರದಿ ನೀಡುವಂತೆ ಮುಖ್ಯಮಂತ್ರಿ ಆದೇಶಿಸಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ, ಟೆಂಡರ್‌ಗಳು ಹಾಗೂ ಔಷಧಗಳ ಖರೀದಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಹೀಗಾಗಿ, ಐಎಎಸ್ ಅಧಿಕಾರಿಯ ನೇತೃತ್ವದಲ್ಲಿ ಸಹಕಾರ ಇಲಾಖೆಯ ಒಬ್ಬ ಅಧಿಕಾರಿ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡವನ್ನು ಕೂಡಲೇ ರಚಿಸಿ, ಎರಡು ವಾರಗಳ ಒಳಗೆ ಪಾರದರ್ಶಕ ವರದಿಯನ್ನು ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

'ನನ್ನ ಮಣ್ಣು, ನನ್ನ ದೇಶ' ಪವಿತ್ರ ಮಣ್ಣು ಸಂಗ್ರಹ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ರಾಮಜನ್ಮಭೂಮಿಗೆ ಇಡೀ ದೇಶದಲ್ಲೇ ಪವಿತ್ರ ಮಣ್ಣು ಸಂಗ್ರಹಿಸಿದಂತೆ ದೇಶಕ್ಕಾಗಿ ಜೀವವನ್ನು ಬಲಿದಾನ ಮಾಡಿರುವ ನಮ್ಮ ಯೋಧರ ಸ್ಮರಣಾರ್ಥವಾಗಿ ನಿರ್ಮಿಸಲಿರುವ ಉದ್ಯಾನಕ್ಕೆ ದೇಶದ ಶಕ್ತಿಶಾಲಿ ಮಣ್ಣಿನ ಒಂದು ಜಾಗವಾಗಬೇಕೆಂಬ ಉದ್ದೇಶದಿಂದ ಪವಿತ್ರ ಮಣ್ಣು ಸಂಗ್ರಹಿಸಲಾಗುತ್ತಿದೆ' ಎಂದು ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು.

ಹೆಗ್ಗನಹಳ್ಳಿಯ ಜಿ.ಕೆ.ಡಬ್ಲ್ಯು. ಬಡಾವಣೆಯಲ್ಲಿ ಆಯೋಜಿಸಲಾದ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಹುತಾತ್ಮರ ಸ್ಮರಣಾರ್ಥವಾಗಿ ಉದ್ಯಾನಕ್ಕೆ ಪವಿತ್ರ ಮಣ್ಣು ಸಂಗ್ರಹ 'ನನ್ನ ಮಣ್ಣು, ನನ್ನ ದೇಶ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಂಸದ ಡಿ.ವಿ. ಸದಾನಂದ ಗೌಡ ಅವರು ಶ್ರೀರಾಮ ಮಂದಿರದಲ್ಲಿ ಪೂಜೆ ಸಲ್ಲಿಸಿ ಪವಿತ್ರ ಮಣ್ಣು ಸಂಗ್ರಹಿಸಿದರು. ಶಾಸಕ ಎಸ್. ಮುನಿರಾಜು, ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ಬಿ. ನಾರಾಯಣ್, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಸಂಚಾಲಕ ಕುಮಾರ್, ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ, ಶೆಟ್ಟಿಹಳ್ಳಿ ವಾರ್ಡ್ ಅಧ್ಯಕ್ಷ ಬಿ.ಸುರೇಶ್ ಇದ್ದರು.

ಶಾಸಕ ಎಸ್. ಮುನಿರಾಜು ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಜನರಿಗೆ ಗ್ಯಾರಂಟಿಗಳ ಟೋಪಿ ಹಾಕಿದೆ. ಸರಿಯಾದ ಮಾಹಿತಿ ನೀಡದೆ ಗ್ಯಾರಂಟಿ ಮಾಡಿದ್ದರು. ಈ ಗ್ಯಾರಂಟಿಗಳಿಂದ ಗೊಂದಲ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರ ನೀಡುವ 5 ಕೆ.ಜಿ. ಅಕ್ಕಿ ಜೊತೆಗೆ ರಾಜ್ಯ ಸರ್ಕಾರದ 5 ಕೆ.ಜಿ ಅಕ್ಕಿ ಕೊಡುವುದಕ್ಕೆ ಆಗದೇ ಎಷ್ಟೋ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಿದ್ದಾರೆ' ಎಂದು ಟೀಕಿಸಿದರು.

ರಾಜಸ್ವ ಸಂಗ್ರಹ: ಸಾರಿಗೆ ಕೇಂದ್ರ ಕಚೇರಿಗೆ 2ನೇ ಸ್ಥಾನ

ಬೆಂಗಳೂರು: ಆರ್‌ಟಿಒ ಕೇಂದ್ರ ಕಚೇರಿಯಲ್ಲಿ ಆಗಸ್ಟ್‌ನಲ್ಲಿ ₹109.98 ಕೋಟಿ ರಾಜಸ್ವ ಸಂಗ್ರಹವಾಗಿದ್ದು, ಇದು ದೇಶದಲ್ಲಿಯೇ ಎರಡನೇ ಅಧಿಕ ಸಂಗ್ರಹವಾಗಿದೆ.

ರಾಜಸ್ವ ಸಂಗ್ರಹದಲ್ಲಿ ದೇಶದ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಪುಣೆ ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು ಕೇಂದ್ರ ಕಚೇರಿ ನಂತರದ ಸ್ಥಾನದಲ್ಲಿದೆ. ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದೆ.

ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಚೇರಿಯಲ್ಲಿ ವಾಹನ್-4, ಸಾರಥಿ-4 ತಂತ್ರಾಂಶಗಳ ಮೂಲಕ ಚಾಲ್ತಿಯಲ್ಲಿರುವ ಆನ್‌ಲೈನ್ ಸೇವೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿರುವುದರಿಂದ ದಾಖಲೆ ಮೊತ್ತದ ರಾಜಸ್ವ ಸಂಗ್ರಹಿಸಲು ಸಾಧ್ಯವಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎಲ್. ದೀಪಕ್ ತಿಳಿಸಿದ್ದಾರೆ.

ಕಾರ್ಖಾನೆಯಲ್ಲಿ ಅಗ್ನಿ ದುರಂತ

ತುಮಕೂರು: ನಗರ ಹೊರ ವಲಯದ ವಸಂತನರಸಾಪುರ ಕೈಗಾರಿಕಾ ಪ್ರದೇಶದ ಕೆಮಿಕಲ್ ಕಾರ್ಖಾನೆಯಲ್ಲಿ ಶುಕ್ರವಾರ ಬೆಂಕಿ ಕಾಣಿಸಿಕೊಂಡಿದ್ದು, ಅಪಾರ ಪ್ರಮಾಣದ ನಷ್ಟವಾಗಿದೆ.

ವೀರೇಶ್ ಇಂಡಸ್ಟ್ರೀಸ್ ಫಾರ್ಮಸಿಟಿಕಲ್ ಕಾರ್ಖಾನೆಯಲ್ಲಿ ಅಗ್ನಿ ದುರಂತ ಸಂಭವಿಸಿದೆ.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010-11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560 040
ದೂರವಾಣಿ ಸಂಖ್ಯೆ: 080-23185584, 9538475454, 9980147199.

ಸ್ಥಿರಾಸ್ತಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ **ಶ್ರೀ ನಿಂಗರಾಜು.ಹೆಚ್.ಎಸ್.** ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು(ನಿ-441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/94/2023-24 ದಿನಾಂಕ 16.08.2023 ರ ಮೇರೆಗೆ ದಿನಾಂಕ 04.10.2023 ರ ಬುಧವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ತಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.



ಶ್ರೀ ನಿಂಗರಾಜು. ಹೆಚ್.ಎಸ್

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀ.ನಿಂಗರಾಜು. ಹೆಚ್.ಎಸ್. #22, 4ನೇ ಮುಖ್ಯರಸ್ತೆ, ವಿನಾಯಕ ನಗರ ಹತ್ತಿರ, ರಾಘವೇಂದ್ರ ಹೈ ಸ್ಕೂಲ್, ಕಾಮಾಕ್ಷಿಪಾಳ್ಯ, ಬೆಂಗಳೂರು-560079.	ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಗಂಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಅಸಸ್ಮೆಂಟ್ ನಂ.88/2 ರ ಪೈಕಿ, 16ನೇ ಸಂಖ್ಯೆಯ ಖಾಲೀ ನಿವೇಶನ. ಈ ಕೆಳಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವಪಶ್ಚಿಮ: ಉತ್ತರದಕಡೆ: 30.0 (ಮುವತ್ತು) ಅಡಿಗಳು, ದಕ್ಷಿಣದಕಡೆ: 36.6 (ಮುವತ್ತಾರು ಪಾಯಿಂಟ್ ಆರು) ಅಡಿಗಳು, ಉತ್ತರದಕ್ಷಿಣ: ಪೂರ್ವದಕಡೆ: 36.0(ಮುವತ್ತಾರು) ಅಡಿಗಳು, ಪಶ್ಚಿಮದಕಡೆ: 45.0 (ನಲವತ್ತೈದು) ಅಡಿಗಳು, ಒಟ್ಟು 1348.65 ಚದರ ಅಡಿಗಳು, ಈ ರೀತಿ ಅಳತೆಯುಳ್ಳ ಹಾಗೂ ಈ ಕೆಳಕಂಡ ಚಕ್ಕುಬಂದಿಯುಳ ಖಾಲಿ ನಿವೇಶನ ಈ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. ಚಕ್ಕುಬಂದಿ:-ಪೂರ್ವಕ್ಕೆ:15ನೇ ನಂಬರು ನಿವೇಶನಪಶ್ಚಿಮ:17ನೇ ನಂಬರು ನಿವೇಶನಉತ್ತರಕ್ಕೆ:ರಸ್ತೆದಕ್ಷಿಣಕ್ಕೆ:ಬೇರೆಯವರ ಸ್ವತ್ತು	18,72,781 ಒಟ್ಟು-18,72,781	ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/94/2023-24

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ

ಸ್ಥಳ: ಬೆಂಗಳೂರು
ದಿನಾಂಕ:14.09.2023

ಸಹಿ/- ದೀಪು.ಎಸ್, ಮಾರಾಟಾಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010-11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560 040
ದೂರವಾಣಿ ಶಂಖ್ಯೆ: 080-23185584, 9538475454, 9980147199.

ಸ್ಥಿರಾಸ್ತಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ **ಶ್ರೀ ರವಿಕುಮಾರ್.ಎಂ.** ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು(ನಿ-441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/97/2023-24 ದಿನಾಂಕ 16.08.2023 ರ ಮೇರೆಗೆ ದಿನಾಂಕ 30.09.2023 ರ ಶನಿವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ತಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಶ್ರೀ ರವಿಕುಮಾರ್.ಎಂ.

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀ.ರವಿಕುಮಾರ್. ಎಂ. #16/3, 8ನೇ ಮುಖ್ಯರಸ್ತೆ, 4ನೇ ಕ್ರಾಸ್, ಹೆಗ್ಗನಹಳ್ಳಿ, ಲಕ್ಷ್ಮಣ್ ನಗರ, ಶನಿಮಹಾತ್ಮ ದೇವಸ್ಥಾನದ ಹತ್ತಿರ, ಬೆಂಗಳೂರು-560091.	ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕಿತ್ತನಹಳ್ಳಿ ಗ್ರಾಮದ ಅಸಸ್ಮೆಂಟ್ ನಂ.27/1 ನೇ ನಂಬರು ಸ್ವತ್ತಿನ ಪೈಕಿ, 35 (ಮುವತ್ತೈದು) ನೇ ನಂಬರಿನ, ಈ ಕೆಳಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವಪಶ್ಚಿಮ: ಉತ್ತರದ ಕಡೆ: 65.6 (ಅರವತ್ತೈದು ಪಾಯಿಂಟ್ ಆರು) ಅಡಿಗಳು, ದಕ್ಷಿಣದಕಡೆ: 62.3 (ಅರವತ್ತೆರಡು ಪಾಯಿಂಟ್ ಮೂರು) ಅಡಿಗಳು, ಉತ್ತರ ದಕ್ಷಿಣ: ಪೂರ್ವದ ಕಡೆ: 20 (ಇಪ್ಪತ್ತು) ಅಡಿಗಳು, ಪಶ್ಚಿಮದ ಕಡೆ: 20.3 (ಇಪ್ಪತ್ತು ಪಾಯಿಂಟ್ ಮೂರು) ಅಡಿಗಳು, ಒಟ್ಟು 1288.5 ಚದರ ಅಡಿಗಳು, ಈ ರೀತಿ ಅಳತೆ ಮತ್ತು ಕೆಳಕಂಡ ಚಕ್ಕುಬಂದಿಗೊಳಪಟ್ಟ ನಿವೇಶನ ಹರಾಜು ಪ್ರಕ್ರಿಯೆಗೆ ಸಂಬಂಧ ಪಟ್ಟದಾಗಿರುತ್ತದೆ. **ಚಕ್ಕುಬಂದಿ:** ಪೂರ್ವಕ್ಕೆ: ರಸ್ತೆ ಪಶ್ಚಿಮ: ಬೇರೆಯವರ ಸ್ವತ್ತು ಉತ್ತರಕ್ಕೆ: 34ನೇ ನಂಬರು ನಿವೇಶನದಕ್ಷಿಣಕ್ಕೆ: ಇದೇ 35 ನೇ ನಂಬರು ಪೈಕಿ ದಕ್ಷಿಣಾರ್ಧ ಭಾಗದ ನಿವೇಶನ	14,72,252 ಒಟ್ಟು-14,72,252	ಆದೇಶ ಇಪಿ.ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/97/2023-24

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ

ಸ್ಥಳ: ಬೆಂಗಳೂರು
ದಿನಾಂಕ:14.09.2023

ಸಹಿ/- ದೀಪು.ಎಸ್, ಮಾರಾಟಾಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-310/22-23/1290/2023-24 ದಿನಾಂಕ: 14.09.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಗೋವರ್ಧನ್ ಸಿ.ವಿ. ಬಿನ್ ಸಿ.ಆರ್.ವಿ. ರೆಡ್ಡಿ	ಆನೇಕಲ್	ಜಿಗಣಿ	ಹುಲಿಮಂಗಲ	172/4	1-00	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರೆ ಪ್ರದೇಶದಲ್ಲಿ ಮೂಲಭೂಲ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ, ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'**ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/26/2023-24 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸ್ಥಾಪನೆ: 1966
ನೋಂದಣಿ ಸಂಖ್ಯೆ : ಡಿ.ವೈ.ಆರ್.443

ಪ್ರಧಾನ ಕಛೇರಿ : 080-23151204, 23152073
ಬಸವೇಶ್ವರನಗರ ಶಾಖೆ : 080-23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080-23183734
ಇ-ಮೇಲ್ : contact@rcbl.co ವೆಬ್‌ಸೈಟ್: www.rcbl.co

ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

56ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿನಾಂಕ:31/03/2023ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2022-23ನೇ ಸಾಲಿನ) 56ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು, ದಿನಾಂಕ:17/09/2023 ರಂದು ಭಾನುವಾರ ಬೆಳಿಗ್ಗೆ 09-30 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ "ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ", ಡಾ॥ ರಾಜ್‌ಕುಮಾರ್ ರಸ್ತೆ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560 010 ಈ ವಿಳಾಸದಲ್ಲಿ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ
ಸಹಿ/-
(ಅನುಷ. ಎಂ. ಎನ್)
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಪ್ರ)

ಸ್ಥಳ : ಬೆಂಗಳೂರು
ದಿನಾಂಕ : 16/09/2023

ಭಾರತ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಆರೋಗ್ಯ ಸಂಶೋಧನಾ ಇಲಾಖೆ
2ನೇ ಮಹಡಿ ಐಆರ್‌ಸಿಎಸ್ ಬಿಲ್ಡಿಂಗ್, ರೆಡ್ ಕ್ರಾಸ್ ರೋಡ್, ನವದೆಹಲಿ-110001

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸಂಶೋಧನಾ ಇಲಾಖೆಯಲ್ಲಿನ 03 ಸೈಂಟಿಸ್ಟ್ 'ಸಿ' ಹುದ್ದೆಗಳನ್ನು ಮತ್ತು 02 ಜೂನಿಯರ್ ಹೆಲ್ತ್ ಎಕನಾಮಿಸ್ಟ್ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ತವ್ಯಗಳು ಹಾಗೂ ವೇತನ ಇತ್ಯಾದಿ ವಿವರಗಳನ್ನು ಆರೋಗ್ಯ ಸಂಶೋಧನಾ ಇಲಾಖೆಯ https://www.dhr.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು. ಕಡ್ಡಾಯವಾಗಿ ದಿನಾಂಕ 15.10.2023 ರೊಳಗೆ departmentofhealthresearch@gmail.com ವಿಳಾಸಕ್ಕೆ ಅರ್ಜಿಗಳನ್ನು ರವಾನಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಸಂದಾಯವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

CBC 17301/11/0006/2324

NOTICE INVITING APPLICATIONS FOR ALLOTMENT OF SHOPS AT TB- III. MEG & CENTRE, BANGALORE-560033

1. CO, Trg Bn-III, MEG & Centre, Bangalore-33 invites applications for allotment of various Regimental shops on rental basis at this Bn. Shops would be allotted to the highest bidder based on undermentioned priority in descending order of applications :-
   (a) War widows/widows of Defence personnel killed while on duty
   (b) Disabled Soldiers (c) Ex-Servicemen (d) Spouse/widow of ex-servicemen
2. Details of shops are as under:-

Ser No	Bldg No	Type of Shop	Sqft
(a)	T-26/1	WET Canteen	1887
(b)	T-29/2	General Store	250
(c)	T-29/5	Tailor Shop	250

3. The license fees and rebate will be intimated prior to auction process.
4. Application forms will be available at 'Q' Br of this Bn. The same may be obtained by drawing DDs on all working days :-
   (a) Issue of Application form : 16 Sep 23 to 22 Sep 23 (1000h to 1300h)
   (b) Date of receipt of application : 23 Sep 23 (upto 0930h)
   (c) DD in favour of : Regt Fund Acct TB-III MEG & Centre payable at SBI, TB-III MEG & Centre
   (d) DD Amount : ₹ 500/-(Non refundable).

ಬೆಂಗಳೂರು ವಿಶ್ವವಿದ್ಯಾಲಯ
ಕುಲಸಚಿವರ ಕಛೇರಿ, ಜ್ಞಾನಭಾರತಿ, ಬೆಂಗಳೂರು - 560 056.

ನಂ. ಬಿಯು/ಇ-ಆಡಳಿತ/ಟೆಂಡರ್-ಜಾಹಿರಾತು-06/2023-24 ದಿನಾಂಕ : 15-09-2023

ಇ-ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಕಂಡ ಟೆಂಡರ್‌ಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು **https://kppp.karnataka.gov.in** ನಲ್ಲಿ ದೊರಕಲಿದ್ದು ಬಿಡ್ ದಾಖಲೆಗಳನ್ನು **ದಿನಾಂಕ : 15-09-2023** ರಿಂದ ಟೆಂಡರ್‌ಗಳ ಸ್ವೀಕಾರಕ್ಕೆ ಕೊನೆಯ **ದಿನಾಂಕ : 22-09-2023** ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ.ಸಂ.	ಟೆಂಡರ್‌ಗಳ ವಿವರ
1.	ದೈಹಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಬ್ಲೇಜರ್‌ಗಳ ಪೂರೈಕೆ.
2.	ದೈಹಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಟ್ರ್ಯಾಕ್‌ಸೂಟ್ಸ್‌ಗಳ ಪೂರೈಕೆ.
3.	ದೈಹಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಕ್ರೀಡಾ ಸಮವಸ್ತ್ರಗಳ ಪೂರೈಕೆ.
4.	58ನೇ ವಾರ್ಷಿಕ ಘಟಿಕೋತ್ಸವಕ್ಕೆ ಊಟ ಉಪಹಾರಗಳನ್ನು (Catering Service) ಸರಬರಾಜು ಮಾಡುವ ಬಗ್ಗೆ.

ಸಹಿ/- ಕುಲಸಚಿವರು

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ-562123
E-mail: itstaff_ulb_mnhalli@yahoo.com
ದೂರವಾಣಿ ಸಂಖ್ಯೆ: 080-23718487

ಸಂಖ್ಯೆ: ಮಾ.ನ.ಕಾ/ತಾ.ಶಾ/04/2023-24 ದಿನಾಂಕ: 14-09-2023

ಟೆಂಡರ್ ಪ್ರಕಟಣೆ
Through GOK e-Procurement Portal www.kppp.karnataka.gov.in only)

2023-24ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ವಾರ್ಷಿಕ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್/ಎಲೆಕ್ಟ್ರೀಕಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಇಂಡೆಂಟ್	ಅಂದಾಜು ಮೊತ್ತ ಲಕ್ಷಗಳಲ್ಲಿ	ಇ.ಎಂ.ಡಿ ರೂ.ಗಳಲ್ಲಿ
1.	DMA/2023-24/WS/WORK_INDENT3805	35.00	70,000
2.	DMA/2023-24/WS/WORK_INDENT3806	35.00	70,000
3.	DMA/2023-24/OW/WORK_INDENT3444	25.00	50,000
4.	DMA/2023-24/OW/WORK_INDENT3781	25.00	50,000
	ಕಾಲಾವಧಿ: 12 Months		

ಟೆಂಡರ್ ಸಲ್ಲಿಸುವ ವಿವರಗಳು:- (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **30.09.2023 ಸಂಜೆ 5.00** ಗಂಟೆಯವರೆಗೆ. (2) ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **02.10.2023 ಸಂಜೆ 5:00 ಗಂಟೆಗೆ** ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕದಂದು.

ಸೂಚನೆ:- ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/1297/ಎಎಎ/2023-24

ಜಿ.ರಾಜಶೇಖರ್ ಸ್ಮಾರಕ ಜ್ಞಾನವೇತನ ಸ್ಥಾಪನೆ: ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಹೋರಾಟಗಾರ ಜಿ.ರಾಜಶೇಖರ್ ಸ್ಮರಣಾರ್ಥ ಜ್ಞಾನವೇತನ ಕಾರ್ಯಕಾರಿ ಸಮಿತಿಯು 'ಜಿ. ರಾಜಶೇಖರ್ ಸ್ಮಾರಕ ಜ್ಞಾನವೇತನ' ಸ್ಥಾಪಿಸಿದ್ದು, ಯುವ ಬರಹಗಾರರಿಂದ ಸಂಶೋಧನಾ ಪ್ರಸ್ತಾವನೆ ಆಹ್ವಾನಿಸಿದೆ.

ಜಿ.ರಾಜಶೇಖರ್ ನಿಧನರಾಗಿ ಒಂದು ವರ್ಷವಾಗಿದೆ. ಯು.ಆರ್.ಅನಂತಮೂರ್ತಿ, ಕೆ.ವಿ.ಸುಬ್ಬಣ್ಣ ಬೆಂಬಲದಿಂದ ರಾಜಶೇಖರ್ 'ಕಾಗೋಡು ಸತ್ಯಾಗ್ರಹ'ದಂತಹ ಕೃತಿಗಳನ್ನು ಪ್ರಕಟಿಸಲು ಸಾಧ್ಯವಾಯಿತು. ಚಾರಿತ್ರಿಕ ಆಕರ ಹಾಗೂ ನಿಖರ ಅಧ್ಯಯನದಿಂದ ಈ ಕೃತಿಯು ಸ್ವಾತಂತ್ರ್ಯೋತ್ತರ ಕಾಲದ ಐತಿಹಾಸಿಕ ಜನ ಚಳವಳಿಯ ಪ್ರಮುಖ ದಾಖಲೆಯಾಗಿದೆ. ಇಂತಹ ಕೃತಿಗಳನ್ನು ಕಟ್ಟಲು 'ಜಿ.ರಾಜಶೇಖರ್ ಸ್ಮಾರಕ ಜ್ಞಾನವೇತನ' ಪ್ರಾರಂಭಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಒಟ್ಟು ₹ 80 ಸಾವಿರ ಮೊತ್ತದ ಜ್ಞಾನವೇತನವನ್ನು ಆಯ್ದ ಒಬ್ಬ ಅಭ್ಯರ್ಥಿಗೆ ಆರು ತಿಂಗಳ ಅವಧಿಯಲ್ಲಿ ಹಂತ ಹಂತವಾಗಿ ವಿತರಿಸಲಾಗುತ್ತದೆ. ವೇತನ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಸಂಶೋಧನೆಯ ವಿಷಯ ಹಾಗೂ ಸಂಶೋಧನಾ ವಿಧಾನವನ್ನೊಳಗೊಂಡ ಪ್ರಸ್ತಾವನೆ ಯನ್ನು ಅ.16ರೊಳಗೆ ಸಲ್ಲಿಸಬೇಕು. ಶೈಕ್ಷಣಿಕ ಕ್ಷೇತ್ರದ ತಜ್ಞರು, ಲೇಖಕರನ್ನೊಳಗೊಂಡ ಸಲಹಾ ಮಂಡಳಿ ಒಬ್ಬರನ್ನು ವೇತನಕ್ಕೆ ಆಯ್ಕೆ ಮಾಡುತ್ತದೆ. ಆಯ್ಕೆಯಾದ ಅಭ್ಯರ್ಥಿ ಸಂಶೋಧನೆಗೆ ಆಯ್ದುಕೊಂಡ ಚಾರಿತ್ರಿಕ ವಿಷಯದ ಮೇಲೆ ಸಂಶೋಧನೆ ನಡೆಸಬೇಕು. ಮಹಿಳೆ, ಕಡೆ ಗಣಿಸ್ಪಟ್ಟ ಜಾತಿಗಳು ಹಾಗೂ ಅಲ್ಪ ಸಂಖ್ಯಾತ ವರ್ಗದ ಅಭ್ಯರ್ಥಿ ಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗುತ್ತದೆ ಎಂದು ಹೇಳಿದೆ.

ಲೇಖಕಿ ಎಚ್.ಎಸ್. ಅನುಪಮಾ, ಬರಹಗಾರ ರಹಮತ್ ತರೀಕೆರೆ, ರಂಗ ನಿರ್ದೇಶಕ ರಘುನಂದನ, ಬರಹಗಾರರಾದ ಎನ್.ಎ.ಎಂ.ಇಸ್ಮಾಯಿಲ್, ಡಿ.ಉಮಾಪತಿ, 'ಋತುಮಾನ' ಸಹ ಸಂಪಾದಕ ಕುಂಟಾಡಿ ನಿತೇಶ್ ಹಾಗೂ ಕೆ.ಫಣಿರಾಜ್ ಸಲಹಾ ಮಂಡಳಿಯಲ್ಲಿದ್ದಾರೆ. ಸಲಹಾ ಸಮಿತಿಯ ಆಯ್ಕೆಯೇ ಅಂತಿಮವಾಗಿರಲಿದ್ದು, ಪ್ರಸ್ತಾವನೆಯನ್ನು grskksv@gmail.comಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

'ಮಣ್ಣಿನ ಗಣಪನನ್ನೇ ಪೂಜಿಸಿ'

ಅರಣ್ಯ, ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರದಿಂದ ಹುಟ್ಟಿದ ಗಣಪನಿಗೆ ಶ್ರದ್ಧಾ ಭಕ್ತಿ ಸಮರ್ಪಿಸಲು, ಪರಿಸರ ಸ್ನೇಹಿಯಾದ ಗಣಪತಿ ಮೂರ್ತಿಗಳ ಪೂಜೆಯೇ ಸೂಕ್ತ ಪದ್ಧತಿ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ವಿಧಾನಸೌಧದಲ್ಲಿ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ, ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರ ಜೊತೆಯಲ್ಲಿ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿ ಮಾತನಾಡಿದರು.

'ಗಣೇಶ ಚತುರ್ಥಿಯ ವ್ರತಕಥೆಯಲ್ಲಿ ಮಣ್ಣಿನ ಗಣೇಶನನ್ನು ಪೂಜಿಸಬೇಕು ನಂತರ ನೀರಿನಲ್ಲಿ ವಿಸರ್ಜಿಸಬೇಕು ಎಲ್ಲ ಉಲ್ಲೇಖವಿದೆ. ಆದರೆ, ಇಂದು ಪಿಓಪಿ ಗಣೇಶಪೂರ್ತಿಗಳನ್ನು ಪೂಜಿಸಿ ನೀರಿನಲ್ಲಿ ವಿಸರ್ಜಿಸಲಾಗುತ್ತಿದೆ. ಅದು ನೀರಿನಲ್ಲಿ ಕರಗದೇ ವಿರೂಪವಾಗುತ್ತದೆ ಜೊತೆಗೆ ಪರಿಸರಕ್ಕೆ ತೀವ್ರ ಹಾನಿ ಉಂಟು ಮಾಡುತ್ತದೆ. ಇದು ಭಗವಂತನಿಗೆ ನಾವು ಮಾಡಿದ ಅಪ್ರಚಾರವೂ ಆಗುತ್ತದೆ' ಎಂದು ತಿಳಿಸಿದರು.

ಪರಿಸರ, ಪ್ರಕೃತಿ ಉಳಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸಬೇಕು. ತಮ್ಮ ಮನೆಗಳಲ್ಲಿ ಪರಿಸರ ಸ್ನೇಹಿ ಗಣಪನನ್ನು ಪೂಜಿಸುವಂತೆ ಪಾಲಕರನ್ನು ಒತ್ತಾಯಿಸುವಂತೆ ಮಕ್ಕಳನ್ನು ಪ್ರೇರೇಪಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಕರಾವಳಿ ಜನತೆಗೆ ಅಭಿನಂದನೆ: ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಶೇ 90 ಕ್ಕೂ ಹೆಚ್ಚು ಜನರು ಪರಿಸರ ಸ್ನೇಹಿಯಾದ ಮಣ್ಣಿನ ಗಣೇಶ ಮೂರ್ತಿಗಳನ್ನೇ ಪ್ರತಿಷ್ಠಾಪಿಸಿ, ಪೂಜಿಸುತ್ತಿದ್ದು, ಆ ಜಿಲ್ಲೆಗಳ ಜನತೆಗೆ ಅಭಿನಂದನೆ ಸಲ್ಲಿಸುತ್ತೇನೆ ಮತ್ತು ಇತರ ಜಿಲ್ಲೆಗಳ ಜನರೂ ಇದೇ ಪದ್ಧತಿ ಅನುಸರಿಸುವಂತೆಯೂ ಅವರು ಮನವಿ ಮಾಡಿದರು.

ವಿಷ್ಣುವರ್ಧನ್ ಜನ್ಮದಿನ 18ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ವಿಷ್ಣುವರ್ಧನ್ ಅವರ 73ನೇ ವರ್ಷದ ಜನ್ಮ ದಿನವನ್ನು ಇದೇ 18ರಂದು ಅಭಿಮಾನ್ ಸ್ಟುಡಿಯೊದಲ್ಲಿ ಆಚರಿಸಲಾಗುವುದು ಎಂದು ವಿ.ಎಸ್.ಎಸ್. ಅಭಿಮಾನ್ ಡಾ. ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ತಿಳಿಸಿದೆ.

ಶುಕ್ರವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ರಾಜುಗೌಡ, 'ಈ ಬಾರಿ ವಿಷ್ಣುವರ್ಧನ್ ಜನ್ಮದಿನವನ್ನು ಸರಳವಾಗಿ ಆಚರಿಸ ಲಾಗುವುದು. ಅಭಿಮಾನ್ ಸ್ಟುಡಿಯೊ ದಲ್ಲಿರುವ ಅವರ ಸಮಾಧಿಗೆ ಪೂಜೆ ಸಲ್ಲಿಸಿ, ಅನ್ನದಾನ, ರಕ್ತದಾನ ಶಿಬಿರ ಏರ್ಪಡಿಸಲಾಗಿದೆ' ಎಂದು ತಿಳಿಸಿದರು.

'ವಿಷ್ಣುವರ್ಧನ್ ಸಮಾಧಿಯ ಭೂಮಿಗೆ ಸಂಬಂಧಿಸಿದ ಪ್ರಕರಣವನ್ನು 2023ರ ಆ. 21ರಂದು ಹೈಕೋರ್ಟ್ ವಜಾಗೊಳಿಸಿದೆ. ಆದ್ದರಿಂದ, ಸರ್ಕಾರ ಕೂಡಲೇ ಅಭಿಮಾನ್ ಸ್ಟುಡಿಯೊದ ಮಾಲೀಕರೊಂದಿಗೆ ಸಭೆ ನಡೆಸಿ ವಿಷ್ಣುವರ್ಧನ್ ಸಮಾಧಿಯ 10 ಗುಂಟೆ ಜಾಗದ ಪ್ರಕರಣವನ್ನು ಇತ್ಯರ್ಥ-ಪಡಿಸಬೇಕು' ಎಂದು ಆಗ್ರಹಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಚೊಕ್ಕಸಂದ್ರ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ಕಾಮಗಾರಿ ಕೈಗೊಂಡಿರುವುದರಿಂದ ಇದೇ 16ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ನಗರದ ಚೊಕ್ಕಸಂದ್ರ, ಆವಲಹಳ್ಳಿ, ಗೋಪಸಂದ್ರ, ಘಟ್ಟಹಳ್ಳಿ, ಮುತ್ತಾನಲ್ಲೂರು ಸೇರಿದಂತೆ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

PROPERTY CORNER ಕ್ಲಾಸಿಫೈಡ್ಸ್

ಸೈಟುಗಳು ಮಾರಾಟಕ್ಕಿವೆ

ನೆಲಮಂಗಲ ಹತ್ತಿರ

20x30 ರೂ.4 ಲಕ್ಷದಿಂದ ಆರಂಭ

ಕಿತ್ತನಹಳ್ಳಿ ಹತ್ತಿರ

ರೂ.999 per sq.ft

ಸಂಪರ್ಕಿಸಿ: **7406994547**

REAL ESTATE SELLING

Sites

Banashankari

BSK 6th STAGE, 10th BLOCK, BDA NORTH FACING, SITE FOR SALE 30X40, 1st ALLOTTE, CLEAR TITLE. Genuine Buyers Contact : **8088799686, 9611105595**

BANASHANKARI 6TH STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

30X40, 40X60 Both East Face for Sale in Banashankari 6th Stage. Call: MANOJ- 9731410616

HRBR Layout

HRBR BDA Site Sale 40X60 with Ground & First Site Value 22500/Sft Negotiable, Call: 7349322223

Koramangala

SALE KORAMANGALA 4th B Block 40x60 East-Facing BDA-Site 6 crore Near-BDA Complex & Parallel to 100 feet`Road Call:9845201710

Kanakapura Road

40X60 EAST Facing Site Sale, Nitesh Rio (Adjacent to Vakil Garden City). Kanakapura Road. 9901244511.

Mysore

INDUSTRIAL LAND FOR SALE, 4-14 Acres Industrial Converted Land at KIADB Industrial Area, Kadakola, Mysore, 8150912415, 9986239629

Kempegowda Layout

KEMPEGOWDA LAYOUT BDA COMMERCIAL/ RESIDENTIAL SITE FOR SALE 30X40, 40X60, 50X80 CONTACT UMESH KUMAR: 9945112279

Magadi Road

BEL BHARTHNAGAR 40X60 South Face 2nd Stage 60ft Road Rs. 11000/- Per Sqft Negotiable: 7411685851

Mysore Road

VAISHNAVI ENCLAVE DC-Converted Fully Developed plots in Maargondanahalli Near Kempegowda BDA Layout @ 1999/- per sqft. Contact: 9538344284, 7353776211

AVAILABLE: 30X35,20X36 'E' khata sites Near Kumbalagodu 1.5KM from Mysore-road fully Developed good-location Call: 9844421127

Nagarabhavi

SITE FOR SALE NAGARABHAVI D Group Layout, BDA Khatha 30x50 West Facing. Good Location. 9739113666.

BDA PLOT for Sale 2400 sqft East Facing, opp. MPM Park, Ambedkar Collage, Nagarabavi @ 12000/- sqft. Only genuine buyers call: 9845165177

Rajarajeshwari Nagar

SITE FOR SALE @ 9000/- GATTIGERE SUDARSHAN LAYOUT RAJA RAJESHWARI NAGAR CALL: 9900036544 / 9740252729

Sahakarnagar

SAHAKARANAGAR 1620 sft Site North West Corner Top Location For Sale Contact: 9738111222 9341260828

Vishweshwariah Layout

VISHVESHWARAIAH LAYOUT 6th Block 30x40 N/F 40 feet Road,behind 100 feet Road,7000/- negotiable,very Good Location. 9844533371/ 9341733480

30X40 VISHVESHWARAIAH Layout 2nd Block 100ft Road Parall North 7500 & 40X60 Kempegowda Layout @ 4600 & 20X30 Sites Sale 46 Lak: 8310003509

***30X45 EAST** and North* Residential and Commercial Corner Property Sale VishveswaraiahLayout,Near Nammurathindi Hotel. 7411994069

Vidyaranyapura

NTI SOCIETY Vidyaranyapura North East Corner 40X60 Site Top Location For Sale Contact: 9738111222 9341260828

Mysore

50X80 RESIDENTIAL Site for Sale, SBM Layout, Bogadhi, MYSORE, South Facing, Immediate Settlement. MUDA Approved. 9448364054, 9448365873.

30X45 SOUTH/ west facing corner site for sale at Byatarayanapura, Mysore Road. Brokers Excuse. Contact +919845900432

House

Bommanahalli

SALE GROUND +3 Duplex House North West Corner, Hongasandra, 2.6Cr. `A`Khata. call:9980445588, 7026555599.

J P Nagar

20X30,EF,GF CARPARKING,4BHK, Triplex,1.20Cr,30x40,NF_ 4BHKTriplex 2.80Cr,New 800/1000sft 2BHK 3Units 1.80Cr,2.30Cr:8904210201

Kengeri

LUXURY DUPLEX 4 BHK House, Ground 2 BHK 30x40 Vinayakanagar, Kodipalya, Kengeri, 2.45Cr. 9148914809, 9886763146.

Nagarabhavi

SALE 30X42 east 5 BHK triplex house' with lift Annapoorneshwarinagar, Nagarbavi BDA complex. 9071666699/ 9071666677.

Magadi

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

Flat

Basaveshwaranagar

2 BHK FLAT (North) 2nd Floor BDA Property Basaveswarnagar Water Tank Bus Stop. 60L: 9880443362

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Isro Layout

3/4 BHK New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

Rajajinagar

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

Sanjaynagar

SANJAYNAGAR KALPANA Chawla Road 3-BHK Flat 1770sqft North Facing Semi Furnished Vastu Compliance, Rs.1.85Cr, Owner:9448787599

PLUG & PLAY OFFICE FOR RENT

AVAILABLE AT INDIRANAGAR CMH ROAD

INDEPENDENT BUILDING 9000 Sq.ft

Ground Floor 1st, 2nd & 3rd Floor with **CAFETERIA & TERRACE**

- 65+ 20 work station
- Conference Room
- Training Room
- 6 Nos Cabins
- CENTRALISED AC
- 100 KVA Power with 100%
- Power Backup. Generator.
- UPS and Ample Car Parking
- RENT AS PER MARKET
- 400 meters from Metro Station

Immediately available at: **Indiranagar 80 Feet Road, Near CMH Hospital**

Contact : AASHISU ESTATES

98445 93724 / 99860 39699

Malleshwaram

SALE 3BHK apartment 1755sqft Renaissance Park-3,Malleshwaram West. 1.75 crores Contact: 9342139450

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

Commercial Building

Chickpet

SALE G+1, East South Corner Semi-Commercial 1000sft on Akkamahadevi Road, Sultanpete Area, Verna Developers, 9353128035/ 9916310226 Brokers Excuse.

Mysore Road

MYSORE ROAD Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

‘ಜಯದೇವ ಘಟಕದ ಸಮಯ ವಿಸ್ತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯ ಜಯದೇವ ಹೃದ್ರೋಗ ಸಂಸ್ಥೆಯ ಘಟಕದ ಸಮಯ ವಿಸ್ತರಿಸಿ, ರಾತ್ರಿಯೂ ವೈದ್ಯಕೀಯ ಸೇವೆ ಒದಗಿಸಬೇಕೆಂದು ಶಾಸಕ ಸುರೇಶ್ ಕುಮಾರ್ ಮನವಿ ಮಾಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿರುವ ಅವರು, ‘ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಘಟಕ ಪ್ರಾರಂಭವಾಗಿರುವುದು ಬೆಂಗಳೂರು ಉತ್ತರ ಭಾಗದ ಜನರಿಗೆ ಅನುಕೂಲವಾಗಿದೆ. ಕಳೆದ 11 ತಿಂಗಳು 23 ಸಾವಿರಕ್ಕೂ ಅಧಿಕ ಮಂದಿ ಹೃದ್ರೋಗ ಚಿಕಿತ್ಸೆ ಪಡೆದಿದ್ದಾರೆ. ಆದರೆ, ಘಟಕವು ಪ್ರತಿನಿತ್ಯ ಸಂಜೆ 4 ಗಂಟೆಯವರೆಗೆ ಮಾತ್ರ ಕಾರ್ಯ ನಿರ್ವಹಿಸುತ್ತಿದೆ. ಬಳಿಕ ಯಾವುದೇ ವೈದ್ಯರು ಇರುವುದಿಲ್ಲ. ಇದರಿಂದಾಗಿ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ಬಳಿಕ ಬಂದ ರೋಗಿಗಳಿಗೆ ತುರ್ತು ಚಿಕಿತ್ಸೆಯೂ ಸಿಗುತ್ತಿಲ್ಲ. ಈ ರೀತಿ ಪ್ರಕರಣಗಳು ಗಮನಕ್ಕೆ ಬಂದಿವೆ. ಹೃದಯ ಸಂಬಂಧಿ ಸಮಸ್ಯೆಗಳಿಗೆ ತುರ್ತು ಚಿಕಿತ್ಸೆ ಅಗತ್ಯ. ಆದ್ದರಿಂದ ರಾತ್ರಿಯೂ ಈ ಘಟಕ ಕಾರ್ಯೋನ್ಮುಖವಾಗುವಂತೆ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

ಸುರೇಶ್ ಕುಮಾರ್

ಎರಡು ಪುಸ್ತಕಗಳಿಗೆ ಪ್ರಶಸ್ತಿ

ಬೆಂಗಳೂರು: ಭಾರತೀಯ ಪ್ರಕಾಶಕರ ಒಕ್ಕೂಟ ನೀಡುವ ಅತ್ಯುತ್ತಮ ವಿನ್ಯಾಸ ಮತ್ತು ಮುದ್ರಣಕ್ಕಾಗಿ ನವಕರ್ನಾಟಕ ಪ್ರಕಾಶನದ ಎರಡು ಪುಸ್ತಕಗಳು 2022–23ನೇ ಸಾಲಿನ ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾಗಿವೆ. ವಿಜ್ಞಾನ ಪುಸ್ತಕ ವಿಭಾಗದಲ್ಲಿ ಬಿ.ಎಸ್. ಶೈಲಜಾ ಮತ್ತು ಟಿ.ಆರ್. ಅನಂತರಾಮು ಅವರು ಸಂಪಾದಿಸಿದ ‘ಖಗೋಳ ದರ್ಶನ’ ಮತ್ತು ಮಕ್ಕಳ ಪುಸ್ತಕ ವಿಭಾಗದಲ್ಲಿ ಹೂರ್ ಬಾನು ಅವರ ‘ಗಣಿತ ಕಲಿತ ಗಿಣಿ’ ಪುಸ್ತಕಗಳ ಅತ್ಯುತ್ತಮ ವಿನ್ಯಾಸ ಮತ್ತು ಮುದ್ರಣಕ್ಕೆ ಈ ಪ್ರಶಸ್ತಿ ಬಂದಿದೆ ಎಂದು ಪ್ರಕಟಣೆ ತಿಳಿಸಿದೆ.

‘ಅಧಿಕಾರದಿಂದ ಇಳಿಸಿದವರನ್ನೇ ತಬ್ಬಿದ ಎಚ್‌ಡಿಕೆ’

ಬೆಂಗಳೂರು: ‘ತನ್ನ ನೇತೃತ್ವದ ಸರ್ಕಾರವನ್ನು ಉರುಳಿಸಿದವರನ್ನೇ ಜತೆಯಲ್ಲಿ ಕೂರಿಸಿಕೊಂಡು ಪ್ರತಿಭಟಿಸುವ, ಅವರನ್ನು ತಬ್ಬಿಕೊಳ್ಳುವ ದುಃಸ್ಥಿತಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಬಂದಿದೆ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರದ ವಿವಿಧ ಪಕ್ಷಗಳ ಮುಖಂಡರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ, ಸರ್ಕಾರ ಉರುಳಿಸಿದವರ ಬಳಿ ಏಕೆ ನೆಂಟಸ್ತಿಕೆ ಮಾಡಬೇಕು ಎಂಬ ಪ್ರಶ್ನೆ ಜೆಡಿಎಸ್ ಕಾರ್ಯಕರ್ತರಲ್ಲಿದೆ’ ಎಂದರು.

ಚುನಾವಣೆ ಮುಗಿದು 110 ದಿನಗಳಾದರೂ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಬಿಜೆಪಿಗೆ ಸಾಧ್ಯವಾಗಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಅನುಕೂಲಸಿಂಧು ರಾಜಕಾರಣ ಮಾಡುತ್ತಿವೆ ಎಂದು ದೂರಿದರು.

ಡಾ.ಕೆ. ಶಿವರಾಮ ಕಾರಂತ ಬಡಾವಣೆ: ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್ ಹೇಳಿಕೆ

ಇನ್ನೆರಡು ವಾರಗಳಲ್ಲಿ ನಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ಇನ್ನೆರಡು ವಾರಗಳಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭಿಸಲಾಗುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕಾರಂತ ಬಡಾವಣೆಯಲ್ಲಿ ಈವರೆಗೆ 34 ಸಾವಿರ ನಿವೇಶನಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 29 ಸಾವಿರ ನಿವೇಶನಗಳಿಗೆ ಸಂಖ್ಯೆ ನೀಡಲಾಗುತ್ತಿದೆ. ರಸ್ತೆ, ಚರಂಡಿ, ಕಾಮಗಾರಿ ಮುಗಿದಿದ್ದು, ವಿದ್ಯುತ್, ನೀರು, ಒಳಚರಂಡಿ ಕಾಮಗಾರಿ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

‘ಕಾರಂತ ಬಡಾವಣೆ ನಿರ್ಮಾಣದ ಉಸ್ತುವಾರಿಗೆ ಸುಪ್ರೀಂಕೋರ್ಟ್ ಸಮಿತಿ ನೇಮಿಸಿತ್ತು. ಅದರಂತೆ ವಹಿಸಿಕೊಳ್ಳಲು 2022ರಲ್ಲಿ ಸೂಚಿಸಿತ್ತು. ಅದರಂತೆ ನಮ್ಮ ಸಮಿತಿ ಉಸ್ತುವಾರಿ ನಡೆಸಿದ್ದು, ವಾರಕ್ಕೆ ಎರಡು ಬಾರಿ ಪರಿಶೀಲನೆ ನಡೆಸುತ್ತಿದ್ದೇವೆ’ ಎಂದರು.

‘ಬಡಾವಣೆಗಾಗಿ ಭೂಮಿ ಕಳೆದುಕೊಂಡಿರುವವರಿಗೆ ಪ್ರಥಮವಾಗಿ 60:40 ಅನುಪಾತದಲ್ಲಿ ನಿವೇಶನಗಳನ್ನು ನೀಡಲಾಗುತ್ತದೆ. 5,700 ಕಟ್ಟಡಗಳಲ್ಲಿ ಶೇ 85ರಷ್ಟು ಸಕ್ರಮಗೊಳಿಸಲಾಗಿದೆ. 13 ಬಡಾವಣೆಗಳಿದ್ದವು, ಶಿಕ್ಷಣ ಸಂಸ್ಥೆಗಳಿದ್ದವು ಅವುಗಳನ್ನು ಸಕ್ರಮ ಮಾಡಲಾಗಿದೆ. ಒಂದು ಬೃಹತ್ ಕಟ್ಟಡವನ್ನು ಸಕ್ರಮಗೊಳಿಸಲಾಗಿದೆ. ಕಂದಾಯ ನಿವೇಶನ ಕಳೆದುಕೊಂಡವರಿಗೆ ಸುಮಾರು 2.5 ಸಾವಿರ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಇದೆಲ್ಲ ಮುಗಿದ ಮೇಲೆ, ಸುಮಾರು ನಾಗರಿಕರಿಗೆ ಹಂಚಿಕೆಯಾಗಲಿದೆ. ಗೌರಿ–ಗಣೇಶ ಹಬ್ಬದ ನಂತರ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ಮಾಹಿತಿ ನೀಡಿದರು.

ಸಕ್ರಮಗೊಳಿಸಲಾದ ಕಟ್ಟಡಗಳಿಗೆ ಬಿಡಿಎಯಿಂದ ಸಕ್ರಮ ಪತ್ರ ನೀಡಲಾಗಿದೆ. ಸುಪ್ರೀಂಕೋರ್ಟ್ ಆದೇಶದನ್ವಯ ಸಕ್ರಮಗೊಂಡ ಕಟ್ಟಡಗಳು, ಸಂಸ್ಥೆಗಳು, ಖಾಸಗಿ ಬಡಾವಣೆಗಳ ಮಾಲೀಕರು ಅಭಿವೃದ್ಧಿ ಶುಲ್ಕ ಪಾವತಿಸಬೇಕು. ನಂತರ ಅವರಿಗೆ ಖಾತಾ ಪತ್ರಗಳನ್ನು ಬಿಡಿಎ ನೀಡಲಿದೆ ಎಂದರು.

ಬಿಡಿಎ ಕಾಯ್ದೆಯಂತೆ ಶೇ 15ರಷ್ಟು ಪ್ರದೇಶವನ್ನು ಉದ್ಯಾನ ಮತ್ತು ಆಟದ ಮೈದಾನಕ್ಕೆ ಕಾಯ್ದಿರಿಸಲಾಗಿದೆ. ಸುಪ್ರೀಂಕೋರ್ಟ್ ಆದೇಶದಂತೆ 150 ಎಕರೆಯಷ್ಟು ಜಮೀನನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಗುರುತಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೀಡುವ ನಿವೇಶನಗಳನ್ನು ಇದರಲ್ಲಿ ಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಬಿಡಿಎ ಮಾಜಿ ಆಯುಕ್ತ ಜಯಕರ್ ಜರೋಮ್, ನಿವೃತ್ತ ಐಪಿಎಸ್ ಅಧಿಕಾರಿ ಡಾ.ಎಸ್.ಟಿ. ರಮೇಶ್ ಉಪಸ್ಥಿತರಿದ್ದರು.

ಅಂಕಿ–ಅಂಶ

- **34,000** ಒಟ್ಟು ನಿವೇಶನ
- **15,000** ನಿವೇಶನ ಭೂಮಿ ಕಳೆದುಕೊಂಡ ರೈತರಿಗೆ
- **12,000** ನಿವೇಶನ ನಾಗರಿಕರಿಗೆ ಹಂಚಿಕೆ
- **2,500** ನಿವೇಶನ ಕಂದಾಯ ನಿವೇಶನ ಕಳೆದುಕೊಂಡವರಿಗೆ
- **4,500** ಮೂಲೆ ನಿವೇಶನ ಹರಾಜು

ರೈತರಿಗೆ ನಿವೇಶನ ನೀಡಲು ಆಗ್ರಹ

ಬೆಂಗಳೂರು: 'ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಗಾಗಿ ಜಮೀನು ಕಳೆದುಕೊಂಡ ರೈತರಿಗೆ ಪ್ರೋತ್ಸಾಹ ರೂಪದಲ್ಲಿ ಕೂಡಲೇ ನಿವೇಶನ ಹಂಚಿಕೆ ಮಾಡಬೇಕು’ ಎಂದು ಕರ್ನಾಟಕ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕೆ.ಎನ್. ಲಿಂಗೇಗೌಡ, ‘ಬಿಎಂಐಸಿ ಯೋಜನೆಗಾಗಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. 2003ರ ಆ.22ರಂದು ನಡೆದ ಸಭೆಯಲ್ಲಿ ರೈತರಿಗೆ ಭೂಪರಿಹಾರ ನೀಡಲಾಗಿತ್ತು. ಇದರೊಂದಿಗೆ ನಿವೇಶನವನ್ನೂ ನೀಡುವ ಭರವಸೆ ನೀಡಲಾಗಿತ್ತು. ಅದನ್ನು ಇನ್ನೂ ಈಡೇರಿಸಿಲ್ಲ’ ಎಂದು ದೂರಿದರು.

‘ಬಿಎಂಐಸಿ ಯೋಜನೆ ಅಡಿಯಲ್ಲಿ ಸುಮಾರು 2 ಸಾವಿರ ನಿವೇಶನಗಳನ್ನು ಪ್ರೋತ್ಸಾಹದ ರೂಪದಲ್ಲಿ ಹಂಚಿಕೆ ಮಾಡಬೇಕಾಗಿದೆ. ಈ ಬಗ್ಗೆ ನೈಸ್ ಕಂಪನಿಯವರಿಗೆ ಕೇಳಿದರೆ ಸರ್ಕಾರದಿಂದ ನಮಗೆ ಅನುಮತಿ ಸಿಕ್ಕಿಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ. ಸರ್ಕಾರವು ಸಹ ರೈತರಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ’ ಎಂದು ಹೇಳಿದರು.

WEEKEND CORNER ಕ್ಲಾಸಿಫೈಡ್ಸ್



ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Bannerghatta Road

KAMMANAHALLI MAIN Road, Near Meenakshi Temple, 40x75 Commercial Property for Sale, A Khata. 9980445588, 7026555599.

R T Nagar

2100 SQFT COMMERCIAL/ OLD BUILDING. A-KATHA EF 40FT ROAD NEAR KAVAL BAIRASANDRA 13K PSFT: 9663192081

Commercial Land

Mysore

PRIME COMMERCIAL converted land 88400 Square Feet for Sale/JV on express highway near EXIT POINT near Mysore contact 9731433641/ 9741019028

Agricultural Land

Ramanagar

5 ACRES 27 GUNTAS, BEAUTIFUL COCONUT FARM LAND SALE. NEAR CHENNAPATNA, BETWEEN BANGALORE- MYSORE. 9916551395

Farm House/ Land/ Resorts

Mysore Road

WATER RICH Fertile Agri/ Farmland of 4Acres available near NHAI Bypass Road Bangalore-Mysore Highway Channapatna For Sale. 8553535485/ 6366378787

General

South

CONTACT FOR Rental House, Home Sites for Purchase, Residential & Commercial Properties in & around Banashankari 2nd Stage, Jayanagar, Basavangudi. Contact: 9535184028

Residential/ Commercial

Bannerghatta Road

IMMEDIATE SALE 40x60 East Facing Well Furnished Good Location Two Years Old Building, 3 Floors- 2 BHK 6 Units, 4th Floor 3 BHK One Unit. Rental Income 2 Lakhs. SriNilaya, Syndicate Bank Colony, 1st Cross Arekere, Omkarnagar, Bannnerghata Road. Contact Girish 9945037353

Industrial & Factory

Mysore Road

INDUSTRIAL LAND From 5000sqft to 10000sqft Available for sale in KUMBALGODU MYSORE ROAD Contact:6366378787

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 Phase Immediate Settlement. genuine Sellers Contact: 9902038118, 9449060605

Banashankari

WANTED BDA Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

WE REQUIRE 30X40 Or 40X60 BDA Plot in Banashankari 6th Stage Direct Sellers Contact 9844136241

BDASITES WANTED Arkavathy,Anjanapura, Banashankari 6th-Stage,Kempegowda Vishweswaraiah Any BDA Layout, Contact: 9845062822, 8660751654

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

WANTED SITES/ OLD HOUSES, INDIRANAGAR, KORAMANGALA, HRBR, HBR, SAHAKARNAGAR, FRAZER TOWN. 'FALCON' HRBR NEHRU ROAD, OPP AXIS: 9845447868

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

Mysore

WANTED MYSORE MUDA Sites Vijayanagara 1st, 2nd, 3rd, 4th Stage Dattagalli any MUDA Katha immediately settlement genuine sellers Contact: 9902038118/ 7338328728

Nagarabhavi

"WANTED 30X40 Site at Nagarabhavi, Chandra Layout Surroundings Genuine Owners only Contact: 9019652228 Brokers Excuse"

Commercial Land

Outskirts

"WANTED COMMERCIAL property in & around Bangalore, Budget upto 4crore, Owners only Contact: 9902973903/ 8197225837"

Industrial & Factory

Multiple Locations

WANTED INDUSTRIAL lands connecting National Highways for Outrate purchase/JV surrounding Bangalore with 60ft road 8618987855

Joint Development

General

WANTED PURCHASE or JD Properties at Jayanagar/ Basavangudi/ JP Nagar/ Chamrajpet/ CBD Area. Verna Developers, MG Road, Bangalore 9916310226/ 9353128035 (Brokers Excuse

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL BARE Space 1200 sft each on 1st & 3rd floors available for rent in a Prime location at HMT Layout Mathikere. Call: 9740394491

RENT- 9900SFT High Roof Factory Shed @ Sahakarnagar with Water,65hp Power & RCC Office Block. Suitable for small scale/ Fabricationunits, Display cum Sales Center, Centralised/ Base Kitchen, Ware-Housing/Godown, Stockists and Distribution. Can also be split into 3-Sheds of 4600,3500 & 1800sft. Call: 9686009911.

House

JP NAGAR 3BHK Independent Duplex House, Fully furnished with 2 Carparking Available for Rent. Call: 9901066464

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

JOB OPPORTUNITIES

General

WANTED DISTRIBUTORS, PROMOTERS, Male/ Female, Marketing Staff for fast moving consumer and Pharma products all over Karnataka. Contact:- 9448041257.

PERSONAL

Change of Name

CHANGE OF NAME
I **Dilip Kumar.C** Residing at No. 371, 3rd Main, 3rd Cross, Kamalanagar, Bangalore -560079 have changed my name to **SUDEEP.C** vide affidavit dated 13-09-2023, before Notary L. GopalaKrishna, Bengaluru. Henceforth I shall be called **SUDEEP.C** only

I, APEKSHA PRABHAKAR GOSAVI R/a, #B305, Sterling Residency, Dollars Colony, RMV Stage 2, Lottegollahalli, Bangalore- 560094 have Changed my Name To APEKSHA GOSWAMI Vide Affidavit Dated 15/09/2023 before Notary Mohammed Hussain. K Bangalore

CHANGE OF NAME
I, **KALLURAYA TALPACHERY SHANKARANARAYANA,** R/at.# 111, Adarshanagara, Arishinakunte, Nelamangala, Bangalore Rural-562123, have changed my name to **KALLURAYA SHANKARANARAYANA** vide affidavit dt. 15/09/2023 before Notary G.L.Gopalakrishna, Bangalore. Henceforth I shall be called **KALLURAYA SHANKARANARAYANA** only

CHANGE OF NAME
I, **ROOPA G** Residing at #141, 6th Cross, 2nd Main Road, Mysore Road, Valmiki Nagar, Bangalore have changed my name to **FATHIMA SHARIFF** & changed the religion from Hinduism to Islam vide affidavit dated 18.02.2015 before notary B.K.R. Krishnamurthy, Bangalore. Henceforth he shall be called **FATHIMA SHARIFF** only.

Lost

ದಾಖಲಾತಿಗಳು ಕಳೆದಿದೆ
ಲಲಿತಾ ಕೋಂ. ವೆಂಕಟರಾಮು ಎಂಬ ನಾನು, ಚಿನ್ನತಿಮ್ಮನಪಾಳ್ಯ, ಗೊಟ್ಟಿಗೆರೆ ದಾಖಲೆ, ಬಿದನಗೆರೆ ಅಂಚೆ, ಹುತ್ರಿದುರ್ಗ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ನಿವಾಸಿಯಾಗಿದ್ದು, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಸಾಣೆಗುರುವನಹಳ್ಳಿ ದಾಖಲೆ, ಕಾಮಾಕ್ಷಿಪಾಳ್ಯದ ಸರ್ವೆ ನಂ. 65/2 ರಲ್ಲಿರುವ, ಉ–ದ 40' ಪೂ–ಪ 15' ವಿಸ್ತೀರ್ಣವುಳ್ಳ (ಪೂರ್ವಕ್ಕೆ–ಬೇರೆಯವರ ಸ್ವತ್ತು, ಪಶ್ಚಿಮಕ್ಕೆ–ಇತರರ ಸ್ವತ್ತು, ಉತ್ತರಕ್ಕೆ–ಗೋಪಾಲಕೃಷ್ಣೇಗೌಡರ ಸ್ವತ್ತು, ದಕ್ಷಿಣಕ್ಕೆ–ರಸ್ತೆ) ನಿವೇಶನಕ್ಕೆ ಸಂಬಂಧಿತ, ಕೆ.ಸಿ. ಗಂಗಾಧರಯ್ಯ ಇವರಿಂದ ನನ್ನ ತಾಯಿ ಗಂಗಮ್ಮ ನವರ ಹೆಸರಿಗೆ ದಿನಾಂಕ 27.08.1986 ರಂದು ಹೊರಡಿಸಲಾಗಿರುವ, ಡಾಕ್ಯುಮೆಂಟ್ ನಂ. 3683–84 ಹೊಂದಿರುವ ಜಿಪಿಎ ಪತ್ರ ಕಳೆದಿರುತ್ತದೆ. ಆನ್‌ಲೈನ್ ಮುಖಾಂತರ ಪೊಲೀಸ್ ದೂರು ದಾಖಲಿಸಲಾಗಿದ್ದು ಲಾಸ್ಟ್ ರಿಪೋರ್ಟ್ ನಂ. 713087 ಆಗಿರುತ್ತದೆ.
ಯಾರಿಗಾದರೂ ಸದರಿ ಜಿಪಿಎ ಪತ್ರ ಸಿಕ್ಕಿದ್ದಲ್ಲಿ, ದಯವಿಟ್ಟು 9945966721, 7022104613 ಸಂಖ್ಯೆಗಳಿಗೆ ಸಂಪರ್ಕಿಸಿರಿ ಅಥವಾ ನಿಮ್ಮ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕೆಂದು ವಿನಂತಿ.

ಕೆಸರು ಗದ್ದೆಯಂತಿರುವ ಕೆ.ಆರ್.ಪುರ ಮಾರುಕಟ್ಟೆಯಲ್ಲಿ ಗ್ರಾಹಕರಿಂದ ವ್ಯಾಪಾರ (1) ರಾಷ್ಟ್ರೀಯ ಹೆದ್ದಾರಿಯಲ್ಲಿ ವ್ಯಾಪಾರ (2) ವ್ಯಾಪಾರಿಗಳು ಎಲ್ಲೆಂದರಲ್ಲಿ ಕಸ ಸುರಿದು ಹೋಗುವುದರಿಂದ ರಾಶಿ ಬಿದ್ದಿರುವ ಹಸಿ ತ್ಯಾಜ್ಯ (3)

ದುರ್ನಾತ ಬೀರುವ ಕೆ.ಆರ್. ಪುರ ಮಾರುಕಟ್ಟೆ

• ಶಿವರಾಜ್ ಮೌರ್ಯ

ಕೆ.ಆರ್. ಪುರ: ಎಲ್ಲೆಡೆ ಕಸ, ಮಳೆ ಬಂದಾಗಲೆಲ್ಲ ಕೆಸರು ಗದ್ದೆಯಾಗುವ ಅಂಗಳ, ಅಲ್ಲಲ್ಲಿ ನಿಂತ ಕೊಳಚೆ ನೀರಿನಿಂದ ಸೊಳ್ಳೆಗಳ ಹಾವಳಿ, ದುರ್ವಾಸನೆಯಿಂದ ಮೂಗು ಮುಚ್ಚಿಕೊಂಡು ಓಡಾಡುವ ರೈತರು ಮತ್ತು ವ್ಯಾಪಾರಿಗಳು, ಸಾರ್ವಜನಿಕರಿಗೆ ನಿತ್ಯ ಕಿರಿಕಿರಿಯಾಗುವ ಟ್ರಾಫಿಕ್ ಸಮಸ್ಯೆ, ನಿಯಮ ಮೀರಿ ಸುಂಕ ವಸೂಲಿಗೆ ಇಳಿಯುವ ಮಧ್ಯವರ್ತಿಗಳ ದಂಡು...

ಕೆ.ಆರ್. ಪುರ ಮಾರುಕಟ್ಟೆಯ ನರಕಸದೃಶ ಸ್ಥಿತಿ ಇದು. ಅತ್ಯಂತ ಹಳೆಯ ಮಾರುಕಟ್ಟೆಗಳಲ್ಲಿ ಒಂದಾಗಿರುವ ಮತ್ತು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕೆ.ಆರ್.ಪುರ ಮಾರುಕಟ್ಟೆ ಮೂಲ ಸೌಕರ್ಯಗಳಿಲ್ಲದೆ ನಲುಗಿದೆ. ನಿತ್ಯ ಸಾವಿರಾರು ರೈತರು, ವ್ಯಾಪಾರಿಗಳು ಇಲ್ಲಿ ವಹಿವಾಟು ನಡೆಸುತ್ತಾರೆ. ಆದರೆ, ಈ ಮಾರುಕಟ್ಟೆಯಲ್ಲಿ ಕನಿಷ್ಠ ಸೌಲಭ್ಯಗಳು ಸಹ ಮರೀಚಿಕೆಯಾಗಿವೆ. ಸಾವಿರಾರು ರೂಪಾಯಿ ಆದಾಯ ತರುವ ಮಾರುಕಟ್ಟೆಯಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಬಿಬಿಎಂಪಿ ಮುಂದಾಗಿಲ್ಲ ಎನ್ನುವುದು ಇಲ್ಲಿನ ವ್ಯಾಪಾರಿಗಳ ದೂರು.

ಕೆ.ಆರ್. ಪುರ ಮಾರುಕಟ್ಟೆಗೆ ರಾಜ್ಯದ ಹಲವು ಜಿಲ್ಲೆಗಳಿಂದ ವ್ಯಾಪಾರಿಗಳು ಇಲ್ಲಿನ ಮಾರುಕಟ್ಟೆಗೆ ಬರುತ್ತಾರೆ. ಹಾಸನ, ಮೈಸೂರು, ಹೊಸಕೋಟೆ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಆಂಧ್ರ ಪ್ರದೇಶದ ಗಡಿ ಜಿಲ್ಲೆಯಿಂದ ವ್ಯಾಪಾರಿಗಳು ಬರುತ್ತಾರೆ. ರಾತ್ರಿ 8 ಕ್ಕೆ ಬಂದರೆ, ಅಲ್ಲಿಯೇ ಉಳಿದು ಮರುದಿನ ವ್ಯಾಪಾರ ಮುಗಿಸಿಕೊಂಡೇ ಹೊರಡುತ್ತಾರೆ.

ವಿಲೇವಾರಿಯಾಗದ ಕಸ: ಮಾರುಕಟ್ಟೆಗೆ ಬರುವ ವ್ಯಾಪಾರಿಗಳು ಹಾಗೂ ರೈತರು ಎಲ್ಲೆಂದರಲ್ಲಿ ತ್ಯಾಜ್ಯ ಸುರಿದು ಹೋಗುತ್ತಾರೆ. ಸ್ವಚ್ಛತೆ ಕಾಪಾಡುವುದಿಲ್ಲ. ಇಲ್ಲಿಗೆ ಬರುವ ರೈತರು ವ್ಯಾಪಾರಿಗಳು ಕಸದ ಬಗ್ಗೆ ನಿರ್ಲಕ್ಷ್ಯವಹಿಸುತ್ತಿದ್ದಾರೆ. ಬಿಬಿಎಂಪಿ ಕೂಡ ಕಸ ನಿರ್ವಹಣೆ ಮಾಡುವುದರಲ್ಲಿ ಎಡವಿದೆ ಎಂದು ಸ್ಥಳೀಯರು ದೂರುತ್ತಾರೆ.

'ಹೊರ ಜಿಲ್ಲೆಗಳ ಮೂಲಕ ಕೆ.ಆರ್. ಪುರ ಮಾರುಕಟ್ಟೆಗೆ ರೈತರು ತಾವು ಬೆಳೆದಿರುವ ತರಕಾರಿ ಸೊಪ್ಪು ರಾತ್ರಿ ವೇಳೆಗೆ ತಂದು ಇಲ್ಲಿಯೇ ತಂಗುತ್ತಾರೆ. ಬೆಳಗಿನ ಜಾವ 4 ಗಂಟೆಗೆ ವ್ಯಾಪಾರ ವಹಿವಾಟು ನಡೆಸುತ್ತಾರೆ. ರೈತರು ವ್ಯಾಪಾರಿಗಳಿಗೆ ತರಕಾರಿ ಮಾರಾಟ ಮಾಡುತ್ತಾರೆ. ರೈತರು ಮತ್ತು ವ್ಯಾಪಾರಿಗಳಿಂದ ಅಳಿದುಳಿದ ಸೊಪ್ಪು ಮತ್ತು ತರಕಾರಿ ಸ್ಥಳದಲ್ಲೇ ಬಿಟ್ಟು ತೆರಳುವುದರಿಂದ ಕಸ ಹೆಚ್ಚಾಗಿ ಕೊಳೆಯುವ ಸ್ಥಿತಿಗೆ ತಲುಪುತ್ತದೆ. ಇದರಿಂದ ಮಾರುಕಟ್ಟೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದುರ್ನಾತ ಬೀರುತ್ತದೆ. ಬಿಬಿಎಂಪಿ ಸರಿಯಾದ ರೀತಿಯಲ್ಲಿ ಕಸ ನಿರ್ವಹಣೆ ಮಾಡದೆ ರಾತ್ರಿ ವೇಳೆ ಕಸಕ್ಕೆ ಬೆಂಕಿ ಹಾಕುವ ಕೆಲಸಕ್ಕೆ ಮುಂದಾಗುತ್ತಿದೆ' ಎಂದು ರೈತ ರಮೇಶ್ ಹೇಳುತ್ತಾರೆ.

ಮಧ್ಯವರ್ತಿಗಳ ಹಾವಳಿ: ರಾತ್ರಿಯಾದರೆ ಸಾಕು ಗುಂಪೊಂದು ರೈತರಿಂದ ಸುಂಕ ವಸೂಲಿಗೆ ಇಳಿಯುತ್ತದೆ. ನಿಯಮ ಮೀರಿ ಹೆಚ್ಚು ಹಣವನ್ನು ಈ ಗುಂಪು ವಸೂಲಿ ಮಾಡುತ್ತಿದೆ. ಟೆಂಡರ್ ಪಡೆದಿರುವ ಗುತ್ತಿಗೆದಾರರು ಹೆಚ್ಚು ಹಣ ವಸೂಲಿ ಮಾಡುತ್ತಿದ್ದರೂ ಇವರ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ರೈತರು ಹೆಚ್ಚಿನ ಹಣ ನೀಡದೆ ಇದ್ದರೆ ದಬ್ಬಾಳಿಕೆ ಮಾಡಲಾಗುತ್ತದೆ. ಟೆಂಡರ್ ಪಡೆಯದೆ ಇರುವ ಗುಂಪುಗಳು ಮಧ್ಯರಾತ್ರಿ ರೈತರಿಗೆ ಕಿರುಕುಳ ನೀಡಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತವೆ. ಮಧ್ಯವರ್ತಿಗಳು ಕೆಲವರು ಐದರಿಂದ ಆರು ಅಂಗಡಿಗಳನ್ನು ಇಟ್ಟುಕೊಂಡು ತಮಗೆ ಬೇಕಾದವರಿಗೆ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಾರೆ ಎಂದು ಹೆಸರು ಹೇಳಲು ಇಚ್ಛಿಸದ ರೈತರೊಬ್ಬರು ತಿಳಿಸಿದರು.

ಮಧ್ಯವರ್ತಿಗಳು ಮನಬಂದಂತೆ ತರಕಾರಿ ಮತ್ತು ಸೊಪ್ಪು ಅನ್ನು ರೈತರಿಂದ ಖರೀದಿಸುತ್ತಾರೆ. ನಂತರ, ಮೂರುಪಟ್ಟು ಹೆಚ್ಚು ದರಕ್ಕೆ ಮಾರಾಟ ಮಾಡುತ್ತಾರೆ. ಇದರಿಂದ ರೈತರು ಮೋಸಕ್ಕೆ ಒಳಗಾಗುತ್ತಿದ್ದಾರೆ. ಇಷ್ಟೆಲ್ಲ ಅಕ್ರಮ ನಡೆದರೂ ರೈತರು ತಮ್ಮ ಪಾಡಿಗೆ ತಾವು ಇರಬೇಕಿದೆ. ತಮ್ಮ ಪಾಲಿಗೆ ಬಂದಷ್ಟು ಬರಲಿ ಎನ್ನುವ ಸ್ಥಿತಿ ಮಾರುಕಟ್ಟೆಯಲ್ಲಿ ನಿರ್ಮಾಣವಾಗಿದೆ ಎಂದು ದೂರಿದರು.

ಹಬ್ಬ ಹರಿದಿನಗಳಲ್ಲಿ ರಾಷ್ಟ್ರೀಯಹೆದ್ದಾರಿಯಲ್ಲಿ ಸಂಚಾರ ದಟ್ಟಣೆ

ನನೆಗುದಿಗೆ ಬಿದ್ದ ವಾಣಿಜ್ಯ ಸಂಕೀರ್ಣ

ಬಿಡಿಎ ವತಿಯಿಂದ ನಿರ್ಮಿಸಬೇಕಾಗಿದ್ದ ವಾಣಿಜ್ಯ ಸಂಕೀರ್ಣ ಕಳೆದ ಕೆಲ ವರ್ಷಗಳಿಂದ ಸ್ಥಗಿತಗೊಂಡು ನನೆಗುದಿಗೆ ಬಿದ್ದಿದೆ.

ಕೆ.ಆರ್.ಪುರ ಮಾರುಕಟ್ಟೆ ಜಾಗದಲ್ಲಿ ಸುಸಜ್ಜಿತ ವಾಣಿಜ್ಯ ಸಂಕೀರ್ಣ ನಿರ್ಮಿಸಿ ಸಂಚಾರ ದಟ್ಟಣೆಗೆ ಮತ್ತು ರೈತರಿಗೆ ಹಾಗೂ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಆಸೆ ಈಡೇರಿಸಲು ಸಾಧ್ಯವಾಗಿಲ್ಲ. ಕೆ.ಆರ್.ಪುರ ಮಾರುಕಟ್ಟೆ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಡಿಎ ಹಾಗೂ ಜಲಮಂಡಳಿಯ ಸರ್ಕಾರಿ ಜಾಗವನ್ನು ವಶಪಡಿಸಿಕೊಂಡು ಗುದ್ದಲಿ ಪೂಜೆ ಕೂಡ ನೆರವೇರಿಸಲಾಗಿತ್ತು. ಆದರೆ, ಈ ಯೋಜನೆ ಇನ್ನೂ ಕೈಗೂಡಿಲ್ಲ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ದಿಲೀಪ್ ಹೇಳಿದರು.

'ಮಾರುಕಟ್ಟೆಗೆ ಕಾಯಕಲ್ಪ ನೀಡಲಿ'

ಸರ್ಕಾರ ಕೆ.ಆರ್. ಪುರ ಮಾರುಕಟ್ಟೆಯನ್ನು ಹೊಸದಾಗಿ ನಿರ್ಮಿಸುವ ಯೋಜನೆ ಎತ್ತಿಕೊಂಡಿದೆ. ಕೆಳಗಡೆ ಮಹಡಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ. ಒಂದನೇ ಮಹಡಿಯಲ್ಲಿ ದಿನ ಪ್ರತಿ ನಡೆಯುವ ಮಾರುಕಟ್ಟೆ ಹಾಗೂ ನಂತರದ ಎರಡನೇ ಮಹಡಿಯಲ್ಲಿ ವಾರದ ಸಂತೆ ಮಾಡಲು ಯೋಜನೆ ಸಿದ್ಧಪಡಿಸಿಕೊಂಡಿದೆ. ಆದರೆ, ಮಾರುಕಟ್ಟೆಯಲ್ಲಿನ ಕೆಲವು ವ್ಯಾಪಾರಿಗಳು ಯೋಜನೆಗೆ ಅಡ್ಡಿಪಡಿಸುವ ಉದ್ದೇಶದಿಂದ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಸರ್ಕಾರದ ಯೋಜನೆಯ ಮೂಲಕ ಈ ಭಾಗದಲ್ಲಿ ನೂತನ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಸಂಚಾರ ದಟ್ಟಣೆ ಕಡಿಮೆ ಮಾಡಿ ರೈತರಿಗೆ ವ್ಯಾಪಾರಿಗಳಿಗೆ ಸಾರ್ವಜನಿಕರಿಗೆ ಅನುಕೂಲ ಮಾಡಬಹುದು.

– ಎಲೆ ಶ್ರೀನಿವಾಸ್
ಅಖಿಲ ಕರ್ನಾಟಕ ರೈತರು ಮತ್ತು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ

ನಿತ್ಯ ಟ್ರಾಫಿಕ್ ಕಿರಿಕಿರಿ

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕೆ.ಆರ್.ಪುರ ಮಾರುಕಟ್ಟೆ ನಿತ್ಯ ಟ್ರಾಫಿಕ್ ಕಿರಿಕಿರಿಯಿಂದಾಗಿ ಮಾರುಕಟ್ಟೆಗೆ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಹೊರ ರಾಜ್ಯ ಆಂಧ್ರಪ್ರದೇಶ, ತಮಿಳುನಾಡು ಸಂಪರ್ಕ ಕಲ್ಪಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿ ಇದಾಗಿದೆ. ಸಾವಿರಾರು ವಾಹನಗಳು ಇಲ್ಲಿಂದಲೇ ಸಂಚಾರ ಮಾಡುತ್ತಿವೆ. ಹೂವಿನ ಅಂಗಡಿಗಳು ಹೆದ್ದಾರಿ ಪಕ್ಕದ ಜಾಗಕ್ಕೆ ಸ್ಥಳಾಂತರಗೊಂಡಿವೆ. ವಿಶೇಷವಾಗಿ ಹಬ್ಬ ಹರಿದಿನಗಳಲ್ಲಿ ಸಂಚಾರ ದಟ್ಟಣೆ ಹೇಳತೀರದಾಗಿದೆ.

ಕೆ.ಪಿ. ಕೃಷ್ಣ
ಸ್ಥಳೀಯ ನಿವಾಸಿ

'ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ'

ಮಾರುಕಟ್ಟೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಿದೆ. ರಾತ್ರಿ ವೇಳೆ ನಾಯಿಗಳಿಂದಾಗಿ ಮಾರುಕಟ್ಟೆಯಲ್ಲಿ ಓಡಾಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ರಾತ್ರಿ ವೇಳೆ ಮಾರುಕಟ್ಟೆ ಸುತ್ತಮುತ್ತ ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಬೀದಿ ಬದಿಯ ತಳ್ಳುವ ಹೋಟೆಲ್‌ನಿಂದ ಮಾರುಕಟ್ಟೆಗೆ ಬರುವ ರೈತರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ತಿನ್ನುವ ಆಹಾರ ಪೊಟ್ಟಣಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ನಾಯಿಗಳು ಹೆಚ್ಚಾಗಿವೆ. ಸಾಕಷ್ಟು ಬಾರಿ ಸಾರ್ವಜನಿಕರನ್ನು ಅಟ್ಟಿಸಿಕೊಂಡು ಬಂದು ಕಚ್ಚಿವೆ. ಇದುವರೆಗೆ ಬಿಬಿಎಂಪಿ ಯಾವುದೇ ಕ್ರಮಕೈಗೊಂಡಿಲ್ಲ'

ರಮೇಶ್, ರೈತ

'ಮಾರುಕಟ್ಟೆ ಸ್ವಚ್ಛತೆ ಕಾಪಾಡಲಿ'

ಮಾರುಕಟ್ಟೆಯಲ್ಲಿ ಸ್ವಚ್ಛತೆ ಇಲ್ಲ. ಬಿಬಿಎಂಪಿ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ರೈತರಿಗೆ ಹೆಚ್ಚಿನ ಟೆಂಡರ್‌ಗಿಂತ ಅಧಿಕ ಸುಂಕ ವಿಧಿಸಲಾಗುತ್ತದೆ. ಸರಿಯಾದ ಜಾಗದಲ್ಲಿ ವ್ಯಾಪಾರ ಮಾಡಲು ರೈತರಿಗೆ ಮತ್ತು ವ್ಯಾಪಾರಿಗಳಿಗೆ ಸ್ಥಳವೂ ದೊರೆಯುತ್ತಿಲ್ಲ. ಮಾರುಕಟ್ಟೆಗೆ ಬರಲು ಸಮೀಪದಲ್ಲಿ ಇರುವ ಸ್ಕೈವಾಕ್ ನಿರ್ಮಿಸಲಾಗಿದೆ. ಆದರೆ, ಇದು ಉಪಯೋಗಕ್ಕೂ ಬರುತ್ತಿಲ್ಲ. ವಾಹನ ನಿಲ್ದಾಣ ಮಾಡಲು ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಇರುವುದರಿಂದ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಲಾಗುತ್ತದೆ.

– ದಿಲೀಪ್
ಆಮ್ ಆದ್ಮಿ ಪಕ್ಷದ ಮುಖಂಡ

ಬಸವರಾಜ ಬೊಮ್ಮಾಯಿ ಘೋಷಣೆ • ಪಾದಯಾತ್ರೆ, ಧರಣಿ, ಸತ್ಯಾಗ್ರಹದ ರೂಪದಲ್ಲಿ ಹೋರಾಡುವ ಎಚ್ಚರಿಕೆ

6 ಜಿಲ್ಲೆಗಳಲ್ಲಿ 'ಕಾವೇರಿ ಜನಜಾಗೃತಿ ಯಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ಜಲಾನಯನ ಪ್ರದೇಶದ ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲೆಗಳ ಎಲ್ಲ ತಾಲ್ಲೂಕುಗಳಲ್ಲಿ ಕಾವೇರಿ ಜನಜಾಗೃತಿ ಯಾತ್ರೆ ನಡೆಸುವುದಾಗಿ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ 6 ಜಿಲ್ಲೆಗಳ ಬಿಜೆಪಿ ಶಾಸಕರು, ಸಂಸದರು, ಮಾಜಿ ಶಾಸಕರ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಇದೇ 21ರಂದು ಸುಪ್ರೀಂ ಕೋರ್ಟ್ ತೀರ್ಪು ಬರಲಿದ್ದು, ಸರ್ಕಾರದ ನಡೆಯನ್ನು ಕಾದು ನೋಡುತ್ತೇವೆ. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳೂ ಸೇರಿ ಆರು ಜಿಲ್ಲೆಗಳಲ್ಲಿ ಜನಜಾಗೃತಿ ಮಾಡುತ್ತೇವೆ. ಪಾದಯಾತ್ರೆ, ಧರಣಿ, ಸತ್ಯಾಗ್ರಹದ ರೂಪದಲ್ಲಿ ಹೋರಾಟ ಇರಲಿದೆ ಎಂದರು.

'ಕಾವೇರಿ ನದಿ ದಕ್ಷಿಣ ಕರ್ನಾಟಕದ ಜೀವನದಿ. ಇಲ್ಲಿಯೇ ನೀರಿನ ಬರ ಬಂದರೆ ಜನಜೀವನ ಸ್ತಬ್ಧವಾಗಲಿದೆ ಯಾವುದೇ ಕಾರಣಕ್ಕೂ ನೀರನ್ನು ಬಿಡಬಾರದು. ಕಾವೇರಿ ವಿಚಾರದಲ್ಲಿ ರಾಜಕಾರಣ ಮಾಡದೇ ಇರಲು ನಾವು ನಿರ್ಧರಿಸಿದ್ದೆವು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವಾಗ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪತ್ರ ಬರೆದು ಮಾತುಕತೆಗೆ ಕೋರಿದ್ದಾರೆ. ಮಾತುಕತೆಗೆ ತಮಿಳುನಾಡು, ಕೇರಳ, ಪುದುಚೇರಿ ಬರುತ್ತವೆಯೇ? ಇವೆಲ್ಲ ಗೊತ್ತಿದ್ದರೂ ತಮ್ಮ ಜಬಾಬ್ದಾರಿಯಿಂದ ನುಣುಚಿಕೊಳ್ಳಲು ಕೇಂದ್ರದತ್ತ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ರಾಜ್ಯದ ನೀರಿನ ಹಕ್ಕನ್ನು ರಕ್ಷಿಸಲು ರಾಜ್ಯ ಸರ್ಕಾರಕ್ಕೆ ಬದ್ಧತೆ, ದಕ್ಷತೆ ಮತ್ತು ಯೋಗ್ಯತೆ ಇಲ್ಲ' ಎಂದು ಆರೋಪಿಸಿದರು.

ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಹಾಸನ ಜಿಲ್ಲೆಗಳಲ್ಲಿ 1 ಲಕ್ಷ ಹೆಕ್ಟೇರಿಗಿಂತ ಹೆಚ್ಚು ಬೆಳೆ ಈಗಾಗಲೇ ನಾಶವಾಗಿದೆ. ಕೃಷಿ ಇಲಾಖೆಯವರು ಖುಷ್ಕಿ, ಅರೆ ಖುಷ್ಕಿ ಬೆಳೆ ಬೆಳೆಯಲು ಸೂಚಿಸಿದ್ದಾರೆ. ಬೆಳೆದು ನಿಂತ ಕಬ್ಬು, ಭತ್ತ, ಮೆಕ್ಕೆಜೋಳ, ತೋಟಗಾರಿಕೆ ಬೆಳೆಗಳ ಪರಿಸ್ಥಿತಿ ಏನು? ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರು ಕೊಡದೇ ನಷ್ಟ ಅನುಭವಿಸಿದ ರೈತರಿಗೆ ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ನೀಡಬೇಕು ಎಂದೂ ಒತ್ತಾಯಿಸಿದರು.

ಬಿ.ಎಸ್. ಯಡಿಯೂರಪ್ಪ ಮಾತನಾಡಿ, ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಇರುವುದರಿಂದ 'ಇಂಡಿಯಾ' ಒಕ್ಕೂಟವನ್ನು ಬಲಪಡಿಸಲು ಪ್ರತಿ ದಿನ 5 ಸಾವಿರ ಕ್ಯೂಸೆಕ್ ನೀರು ಕಾವೇರಿಯಿಂದ ಬಿಡಲಾಗುತ್ತಿದೆ. ಸಂಕಷ್ಟ ಗೊತ್ತಿದ್ದೂ ಸುಪ್ರೀಂ ಕೋರ್ಟ್‌ನಲ್ಲಿ ಮುಂಚಿತವಾಗಿ ಏಕೆ ದಾವೆ ಹೂಡಲಿಲ್ಲ ಎಂದು ಪ್ರಶ್ನಿಸಿದರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಕಾವೇರಿ ಜಲಾನಯನದ ಜಿಲ್ಲೆಗಳ ಪಕ್ಷದ ಜನಪ್ರತಿನಿಧಿಗಳ ಸಭೆ ನಡೆಸಲಾಯಿತು. ಶಾಸಕ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಸಂಸದ ಡಿ.ವಿ. ಸದಾನಂದಗೌಡ, ಮಾಜಿ ಸಚಿವ ಗೋವಿಂದ ಕಾರಜೋಳ ಇದ್ದರು

'ಜವಾಬ್ದಾರಿಯಿಂದ ಬರ ನಿಭಾಯಿಸಿ'

ರಾಜ್ಯದಲ್ಲಿ ಭೀಕರ ಬರಗಾಲ ಇದ್ದರೂ ಸರ್ಕಾರ ತುರ್ತಾಗಿ ಪರಿಹಾರ ಕ್ರಮ ಕೈಗೊಳ್ಳದೇ ದಿನ ದೂಡುತ್ತಿದೆ ಎಂದು ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ಯಡಿಯೂರಪ್ಪ ಅವರ ಅವಧಿಯಲ್ಲಿ ಬರಗಾಲ ಮತ್ತು ಪ್ರವಾಹ ಎರಡೂ ಬಂದಿತ್ತು. ಕೇಂದ್ರದ ನೆರವಿಗೆ ಕಾಯದೇ ಬರಗಾಲ ಘೋಷಿಸಿ ಹಲವು ಪಟ್ಟು ಹೆಚ್ಚು ಪರಿಹಾರ ನೀಡಿದ್ದೆವು. ಆದರೆ ಇವರು ಕೇಂದ್ರಕ್ಕೆ ಕಾನೂನು ಬದಲಿಸಿ ಎಂದು ಮನವಿ ಮಾಡುತ್ತಲೇ ಕೂತ್ತಿದ್ದಾರೆ ಎಂದು ಕಿಡಿಕಾರಿದರು. 'ಪರಿಹಾರದ ಕಾನೂನು ಬದಲಿಸಿ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದರೆ, ಟೀಕೆ ಮಾಡಿದರೆ ಇವರ ಜವಾಬ್ದಾರಿ ಮುಗಿಯಿತೇ? ಜನರ ಸಮಸ್ಯೆ ಬಗೆಹರಿಯುತ್ತದೆಯೇ' ಎಂದೂ ಪ್ರಶ್ನಿಸಿದರು.

'ಬಿಜೆಪಿ ನಾಯಕರಿಂದಲೇ ರಾಜ್ಯಕ್ಕೆ ತೊಂದರೆ'

ಬೆಂಗಳೂರು: 'ಕಾವೇರಿ ನೀರು ಸೇರಿದಂತೆ ರಾಜ್ಯದ ಹಿತಾಸಕ್ತಿಯ ವಿಚಾರ ಬಂದಾಗ ಬಿಜೆಪಿ ರಾಜ್ಯ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಎದುರು ನಿಂತು ಮಾತನಾಡುವ ಧೈರ್ಯವೇ ಇಲ್ಲ. ಅವರಿಂದಾಗಿಯೇ ರಾಜ್ಯಕ್ಕೆ ತೊಂದರೆಯಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದ ಅನೇಕ ಯೋಜನೆಗಳಿಗೆ ಕೇಂದ್ರ ಪರಿಸರ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ತರಲು ಬಿಜೆಪಿ ನಾಯಕರಿಗೆ ಸಾಧ್ಯವಾಗಿಲ್ಲ. ಇದರಿಂದ ರಾಜ್ಯದ ಅಭಿವೃದ್ಧಿಗೆ ತೊಂದರೆ ಆಗುತ್ತಿದೆ. ರಾಜ್ಯದ ಹಿತಾಸಕ್ತಿಗಾಗಿ ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಬೇಕು ಎಂಬುದು ನನ್ನ ಧೋರಣೆ' ಎಂದರು.

ನದಿ ನೀರಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಮೂರು ವರ್ಷಗಳೊಳಗೆ ಇತ್ಯರ್ಥಪಡಿಸಬೇಕು ಎಂಬ ಕಾನೂನನ್ನು ಕೇಂದ್ರ ಸರ್ಕಾರ ರೂಪಿಸಿದೆ. ಅದರ ಪ್ರಕಾರ, ಎರಡೂ ರಾಜ್ಯ ಸರ್ಕಾರಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿ ವಿವಾದ ಇತ್ಯರ್ಥಪಡಿಸಬಹುದಲ್ಲವೆ ಎಂದು ಪ್ರಶ್ನಿಸಿದರು.

ಕಾನೂನು ತಜ್ಞರ ಸಲಹೆ: 'ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವಿ ಸಲ್ಲಿಸುವ ಮೊದಲು ಎರಡು ದಿನ ನೀರು ಹರಿಸುವಂತೆ ಕಾನೂನು ತಜ್ಞರು ಸಲಹೆ ನೀಡಿದ್ದಾರೆ' ಎಂದರು.

ನ್ಯಾಯಾಲಯದ ಆದೇಶ ಪಾಲಿಸದಿದ್ದರೆ ವಿಚಾರಣೆ ವೇಳೆ ರಾಜ್ಯಕ್ಕೆ ಹಿನ್ನಡೆ ಆಗಬಹುದು ಎಂಬ ಆತಂಕವನ್ನು ಕಾನೂನು ತಜ್ಞರು ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದರು ಪ್ರಜಾವಾಣಿ ಚಿತ್ರ

ತಮಿಳುನಾಡಿಗೆ ನೀರು ಹರಿಸದಂತೆ ಆಗ್ರಹ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಪ್ರತಿಕೃತಿ ದಹನ ಮಾಡುವ ಮೂಲಕ ಶುಕ್ರವಾರ ಪ್ರತಿಭಟನೆ ನಡೆಸಿದರು.

'ರಾಜ್ಯದಲ್ಲಿ ಈಗಾಗಲೇ 192 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಕಾವೇರಿ ಕಣಿವೆ ಭಾಗದಲ್ಲಿ ತೀವ್ರ ಸ್ವರೂಪದ ಬರ ಸ್ಥಿತಿ ನಿರ್ಮಾಣವಾಗಿದೆ. ಸದ್ಯ ಕೃಷ್ಣರಾಜಸಾಗರ ಜಲಾಶಯದಲ್ಲಿ ಕೇವಲ 20 ಟಿಎಂಸಿ ನೀರು ಇದೆ. ಅದರಲ್ಲಿ ಬಳಕೆಗೆ ಸಿಗುವುದು ಕೇವಲ 15 ಟಿಎಂಸಿ ನೀರು ಮಾತ್ರ ಇಂತಹ ಸಂದರ್ಭದಲ್ಲಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡಿಗೆ 7 ಟಿಎಂಸಿ ನೀರು ಹರಿಸಲು ಆದೇಶ ನೀಡಿರುವುದು ಆಘಾತ ತಂದಿದೆ' ಎಂದು ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ ಹೇಳಿದರು.

'ಪ್ರತಿ ತಿಂಗಳು ಬೆಂಗಳೂರು ನಗರಕ್ಕೆ ಕುಡಿಯಲು ಒಂದೂವರೆ ಟಿಎಂಸಿ ನೀರು ಬೇಕಾಗುತ್ತದೆ. ಕಾವೇರಿ ಕಣಿವೆ ಭಾಗದ ರೈತರ ಹೊಲ, ಗದ್ದೆಗಳಿಗೆ ನೀರಿಲ್ಲ. ಇಂತಹ ಪರಿಸ್ಥಿತಿ 7 ಟಿಎಂಸಿ ನೀರು ಎಲ್ಲಿಂದ ತರಬೇಕು? ಆದ್ದರಿಂದ, ರಾಜ್ಯ ಸರ್ಕಾರ ಕಾವೇರಿ ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಯಾವುದೇ ಕಾರಣಕ್ಕೆ ಪಾಲಿಸಬಾರದು. ನಾಡಿನ ಜನರ ಜೀವನಕ್ಕಿಂತ ಯಾವುದೇ ಪ್ರಾಧಿಕಾರಗಳ ಆದೇಶ ದೊಡ್ಡದಲ್ಲ. ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ರಾಜ್ಯ ಸರ್ಕಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

'ರಾಜ್ಯ ಸರ್ಕಾರ ನೀರು ಬಿಟ್ಟರೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ. ಆದ್ದರಿಂದ, ರಾಜ್ಯದಿಂದ ಆಯ್ಕೆಯಾಗಿರುವ ಎಲ್ಲ ಸಂಸದರು ನವದೆಹಲಿಯಲ್ಲಿ ಪ್ರತಿಭಟನೆ ನಡೆಸುವ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಒತ್ತಾಯಿಸಿದರು.

ಹೋಟೆಲ್: ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದ ಪ್ರೇಮಿಗಳ ಖಾಸಗಿ ವಿಡಿಯೊ ಚಿತ್ರೀಕರಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಕಿರಣ್ ಹಾಗೂ ಆತನ ಸ್ನೇಹಿತೆ ನಯನಾ ಬಂಧಿತರು. ಆರೋಪಿ ಬಳಿಯ ಮೊಬೈಲ್ ಜಪ್ತಿ ಮಾಡಲಾಗಿದ್ದು, ಅದರಲ್ಲಿ ವಿಡಿಯೊಗಳು ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

'ಕಿರಣ್ ಹಾಗೂ ನಯನಾ, ಹಲವು ವರ್ಷಗಳ ಸ್ನೇಹಿತರು. ಇವರಿಬ್ಬರು ಸಂಚು ರೂಪಿಸಿ ಕೃತ್ಯ ಎಸಗಿದ್ದರು. ಸಂತ್ರಸ್ತ ಯುವತಿ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಇಬ್ಬರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಹೋಟೆಲ್ ಆರಂಭಿಸಿದ್ದ ಆರೋಪಿಗಳು: 'ಕಿರಣ್ ಹಾಗೂ ನಯನಾ. ಕೆಂಗೇರಿ ಮುಖ್ಯರಸ್ತೆಯಲ್ಲಿ ಹೋಟೆಲ್ ಆರಂಭಿಸಿದ್ದರು. ಹೋಟೆಲ್‌ನಲ್ಲಿದ್ದ ಕೊಠಡಿಗಳನ್ನು ಬಾಡಿಗೆ ನೀಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ನಯನಾ ಹಾಗೂ ಸಂತ್ರಸ್ತ ಯುವತಿ ಪರಿಚಿತರು. ಯುವಕರೊಬ್ಬರನ್ನು ಪ್ರೀತಿಸುತ್ತಿದ್ದ ಸಂತ್ರಸ್ತೆ, ಈ ಸಂಗತಿಯನ್ನು ನಯನಾಗೆ ತಿಳಿಸಿದ್ದರು. ಯುವಕನ ಜೊತೆ ಹೋಟೆಲ್‌ಗೆ ಬಂದು ಕೊಠಡಿಯಲ್ಲಿ ಉಳಿದುಕೊಳ್ಳುವಂತೆ ನಯನಾ ಆಹ್ವಾನ ನೀಡಿದ್ದರು' ಎಂದು ಪೊಲೀಸರು ತಿಳಿಸಿದರು. 'ಸಂತ್ರಸ್ತೆ ಹಾಗೂ ಯುವಕ, ಹಲವು ಬಾರಿ ಹೋಟೆಲ್‌ಗೆ ಬಂದು ಹೋಗಿದ್ದರು. ಈ ಸಂಗತಿ ತಿಳಿದುಕೊಂಡಿದ್ದ ಕಿರಣ್, ಸಂತ್ರಸ್ತೆ-ಯುವಕನ ವಿಡಿಯೊ ಚಿತ್ರೀಕರಿಸಲು ಸಂಚು ರೂಪಿಸಿದ್ದ. ಹೋಟೆಲ್‌ನ ಕೊಠಡಿಯೊಂದರಲ್ಲಿ ರಹಸ್ಯ ಕ್ಯಾಮೆರಾ ಅಳವಡಿಸಿದ್ದ. ಅದೇ ಕೊಠಡಿಯನ್ನು ಸಂತ್ರಸ್ತೆ-ಯುವಕನಿಗೆ ನೀಡಿದ್ದ. ಅವರಿಬ್ಬರ ಖಾಸಗಿ ಕ್ಷಣಗಳು ಕ್ಯಾಮೆರಾದಲ್ಲಿ ಸೆರೆಯಾಗಿದ್ದವು' ಎಂದು ಹೇಳಿದರು.

ಸ್ಕ್ರೀನ್ ಶಾರ್ಟ್ ಕಳುಹಿಸಿ ಲಕ್ಷ ಕೇಳಿದ್ದ: 'ಸಂತ್ರಸ್ತೆಗೆ ಖಾಸಗಿ ವಿಡಿಯೊದ ಸ್ಕ್ರೀನ್ ಶಾರ್ಟ್ ಕಳುಹಿಸಿದ್ದ ಆರೋಪಿ ಕಿರಣ್, ₹ 1 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದ. ಹಣ ನೀಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ. ಇದರಿಂದ ಹೆದರಿದ್ದ ಸಂತ್ರಸ್ತೆ, ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಕತ್ತೆ ಕೊಡಿಸುವುದಾಗಿ ₹9.45 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಕತ್ತೆಗಳನ್ನು ಕೊಡಿಸುವುದಾಗಿ ನಂಬಿಸಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕಿನ ಶೆನವ ಕುರುನಾಡು ಗ್ರಾಮದ ಶ್ರೀನಿವಾಸಗೌಡ ₹9.45 ಲಕ್ಷ ವಂಚಿಸಿದ್ದಾರೆ ಎಂದು ಬಾಗೇಪಲ್ಲಿ ತಾಲ್ಲೂಕು ರಾಮಾನುಪಾಡಿ ಗ್ರಾಮದ ಗೋದಾವರಿ ಫಾರಂ ಹೌಸ್ ಮಾಲೀಕ ಪಿ.ವಿ.ರವೀಂದ್ರ ಪಾತಪಾಳ್ಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಗೋದಾವರಿ ಫಾರಂ ಹೌಸ್‌ನಲ್ಲಿ ಹಸುಗಳನ್ನು ಮತ್ತು ಕತ್ತೆಗಳನ್ನು ಸಾಕಿದ್ದೇನೆ. ಶ್ರೀನಿವಾಸಗೌಡ ಕತ್ತೆಗಳನ್ನು ಸಾಗಾಣಿಕೆ ಮಾಡಿರುವ ಬಗ್ಗೆ ಟಿ.ವಿಯಲ್ಲಿ ನೋಡಿದ್ದೆ. ಅವರನ್ನು ದೂರವಾಣಿ ಮೂಲಕ ಪರಿಚಯಿಸಿಕೊಂಡಿದ್ದೆ. ನಮ್ಮ ಫಾರಂ ಹೌಸ್‌ಗೆ ಶ್ರೀನಿವಾಸಗೌಡ ಹಲವು ಬಾರಿ ಬಂದಿದ್ದರು. ಫಾರಂ ಹೌಸ್‌ನಲ್ಲಿನ ಕತ್ತೆಗಳನ್ನು ನೋಡಿ ಇವು ಕಡಿಮೆ ಹಾಲು ಕೊಡುತ್ತವೆ. ರಾಜಸ್ತಾನದ ಹಲಾರಿ ತಳಿಯ ಕತ್ತೆಗಳನ್ನು ಕೊಡಿಸುತ್ತೇನೆ.

ಒಂದು ಕತ್ತೆಯ ಬೆಲೆ ₹1 ಲಕ್ಷ. ಒಟ್ಟು 11 ಕತ್ತೆಗಳಿಗೆ ಸಾಗಾಣಿಕೆ ವೆಚ್ಚ ಎಲ್ಲ ಸೇರಿ ₹11 ಲಕ್ಷ ಆಗುತ್ತದೆ ಎಂದಿದ್ದರು. ನನ್ನಿಂದ ಒಟ್ಟು ₹9.45 ಲಕ್ಷ ಪಡೆದಿದ್ದರು. 15 ದಿನಗಳಲ್ಲಿ ಕತ್ತೆಗಳನ್ನು ಕೊಡುತ್ತೇನೆ ಎಂದು ಹೇಳಿ ಇದುವರೆಗೂ ಕತ್ತೆಗಳನ್ನು ನೀಡಿಲ್ಲ. ಹಣವನ್ನೂ ವಾಪಸ್ ನೀಡಿಲ್ಲ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಫ್ಯಾಕ್ಟ್ ಚೆಕ್ ಹೆಸರಲ್ಲಿ ಮಾಧ್ಯಮಗಳಿಗೆ ಮೂಗುದಾರ: ಭಾಸ್ಕರ್ ರಾವ್

'ಗೃಹ ಸಚಿವ ಸ್ಥಾನ ಪ್ರಿಯಾಂಕ್ ಹೈಜಾಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫ್ಯಾಕ್ಟ್ ಚೆಕ್' ಹೆಸರಿನಲ್ಲಿ ಮಾಧ್ಯಮಗಳಿಗೆ ಮೂಗುದಾರ ಹಾಕಲು ಹೊರಟಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ಗೃಹ ಸಚಿವರ ಸ್ಥಾನವನ್ನೇ ಹೈಜಾಕ್ ಮಾಡಿದ್ದಾರೆ. ಹೀಗಾಗಿ ಗೃಹ ಸಚಿವರು ಯಾರು ಎಂಬ ಗೊಂದಲ ಸೃಷ್ಟಿಯಾಗಿದೆ ಎಂದು ಮಾಜಿ ಪೊಲೀಸ್ ಅಧಿಕಾರಿ, ಬಿಜೆಪಿ ನಾಯಕ ಭಾಸ್ಕರ ರಾವ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ಯಾಕ್ಟ್‌ಚೆಕ್ ಘಟಕ ಸ್ಥಾಪಿಸಲು ಮುಂದಾಗಿರುವ ಅವರು ಪೊಲೀಸ್ ಇಲಾಖೆಯನ್ನು ದುರುಪಯೋಗ ಮಾಡುತ್ತಿದ್ದಾರೆ ಎಂದು ದೂರಿದರು.

'14 ಮಂದಿ ಸುದ್ದಿವಾಹಿನಿಗಳ ನಿರೂಪಕರ ಜೊತೆ ಮಾತನಾಡುವುದಿಲ್ಲ. ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ ಎಂದು 'ಇಂಡಿಯಾ' ಕೂಟ ಬಹಿಷ್ಕಾರ ಹಾಕಿದೆ. ಇದು ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಅಲ್ಲವೇ? ಮೊಹಬ್ಬತ್ ಕಿ ದುಖಾನ್ ಒಳಗೆ ಇವರನ್ನೇಕೆ ಸೇರಿಸುತ್ತಿಲ್ಲ. ಇದು ಸಹಿಷ್ಣುತೆಯೇ ಎಂದೂ ಪ್ರಶ್ನಿಸಿದರು.

'ಸರ್ಕಾರ ಮತ್ತು ಅದರ ಕಾರ್ಯಕ್ರಮಗಳನ್ನು ಜಾಲತಾಣಗಳಲ್ಲಿ ಟೀಕಿಸುವವರು ಹಾಗೂ ಪತ್ರಕರ್ತರ ಮೇಲೆ ಕೇಸುಗಳನ್ನು ದಾಖಲಿಸಲಾಗುತ್ತಿದೆ. ಇದು ವಾಕ್ ಸ್ವಾತಂತ್ರ್ಯದ ಹರಣ. ಸರ್ಕಾರವು ಎಫ್‌ಐಆರ್ ಮೂಲಕ ಹೆದರಿಸಲು ಮುಂದಾಗಿದೆ. ಈ ವಿಚಾರದಲ್ಲಿ ತನಿಖೆ ಮಾಡಿ, ಸಾಕ್ಷ್ಯ ಕೊಟ್ಟು ಆರೋಪ ಪಟ್ಟಿ ದಾಖಲಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ' ಎಂದರು.

ಸನಾತನ ಧರ್ಮದ ಅವಹೇಳನವನ್ನು ಬೆಂಬಲಿಸಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿಕೆ ನೀಡಿರುವುದು ಸಂವಿಧಾನದ ಮೂಲತತ್ವಗಳ ಉಲ್ಲಂಘನೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದರು. ಉದಯನಿಧಿ ಸ್ಟಾಲಿನ್ ಅವರ ಸನಾತನ ಧರ್ಮದ ಅವಹೇಳನದ ಹೇಳಿಕೆಗೆ ಬೆಂಬಲ ಇದೆ ಎಂದು ಪ್ರಿಯಾಂಕ್ ಹೇಳಿದ್ದಾರೆ. ನಿತ್ಯ ಜೀವನ ದಲ್ಲಿ ಅನ್ನ, ಶಿಕ್ಷಣ, ಸಂಸ್ಕಾರ ಮತ್ತು ಅಧ್ಯಾತ್ಮ ಜ್ಞಾನವನ್ನು ನೀಡುವ ಎಷ್ಟೋ ಮಠಗಳಿವೆ, ಇವರ ಹೇಳಿಕೆ ಉತ್ತಮ ಕಾರ್ಯ ಮಾಡುವ ಸಂಸ್ಥೆಗಳನ್ನು ಅವಹೇಳನ ಮಾಡುವಂತಹದ್ದು. ಹಿಂದೂ ಶ್ರದ್ಧಾಳುಗಳನ್ನು ಅವಮಾನ ಮಾಡುವ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದರು.

ಸಂವಿಧಾನದ ಮುನ್ನುಡಿಯು ಭ್ರಾತೃತ್ವ, ಸಮಗ್ರತೆಗೆ ಒತ್ತು ನೀಡುತ್ತದೆ. ವಿಧಿ 19 (2) ಸಭ್ಯತೆ, ನೈತಿಕತೆ, ಸಾರ್ವಜನಿಕ ಸುವ್ಯವಸ್ಥೆ ಮತ್ತು ಹಿಂಸಾಚಾರವನ್ನು ತಪ್ಪಿಸುವ ನಿಟ್ಟಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹಾಕುತ್ತದೆ. ಆದರೆ, ಪ್ರಿಯಾಂಕ್ ಸನಾತನ ಧರ್ಮದ ಬಗ್ಗೆ ಯಾವುದೇ ಹಿಡಿತ ಇಲ್ಲದೆ ಮಾತನಾಡುತ್ತಿದ್ದಾರೆ ಎಂದು ರವಿಕುಮಾರ್ ಆರೋಪಿಸಿದರು.

ಖರ್ಗೆ, ಪ್ರಿಯಾಂಕ್ ವಿರುದ್ಧ ಪೋಸ್ಟ್: ಪ್ರಕರಣ ದಾಖಲು

ದೇವದುರ್ಗ(ರಾಯಚೂರು): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಅಖಿಲ ಭಾರತ ಹಿಂದೂ ಯುವಕ ಸಭಾದ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ಭೀಮಯ್ಯ ಅಂಬಿಗೇರ ವಿರುದ್ಧ ದೇವದುರ್ಗ ಠಾಣೆಯಲ್ಲಿ ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದಾರೆ.

ಛಲವಾದಿ ಮಹಾಸಭಾ ನಗರ ಘಟಕ ಅಧ್ಯಕ್ಷ ಮಹಾಂತೇಶ ಭವಾನಿ ಅವರೂ ಯುವಕನ ವಿರುದ್ಧ ದೂರು ನೀಡಿದ್ದಾರೆ. ತಾಲ್ಲೂಕಿನ ಕೊತ್ತದೊಡ್ಡಿಯ ಭೀಮಯ್ಯ ಅವರು ಪ್ರಸ್ತುತ ಬೆಂಗಳೂರಿನಲ್ಲಿ ಕಂಪನಿಯೊಂದರಲ್ಲಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಟೊಮೆಟೊ ದರದಲ್ಲಿ ಭಾರಿ ಕುಸಿತ

ಪ್ರಜಾವಾಣಿ ವಾರ್ತೆ

ಕೋಲಾರ: ತಿಂಗಳ ಹಿಂದೆಯಷ್ಟೇ ದಾಖಲೆ ಬೆಲೆ ಕಂಡಿದ್ದ ಟೊಮೆಟೊ ದರ ಮತ್ತಷ್ಟು ಕುಸಿತ ಕಂಡಿದ್ದು, ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ಹರಾಜಿನಲ್ಲಿ ಕಡಿಮೆ ಬೆಲೆಗೆ ಹರಾಜಾಗಿದೆ.

15 ಕೆ.ಜಿ 'ನಾಟಿ' ಟೊಮೆಟೊ ಬಾಕ್ಸ್ ಕನಿಷ್ಠ ₹45 ಹಾಗೂ ಗರಿಷ್ಠ ₹120 ಕ್ಕೆ ಮಾರಾಟವಾಗಿದೆ. ಕಡಿಮೆ ಗುಣಮಟ್ಟದ ಕೆ.ಜಿ ಟೊಮೆಟೊಗೆ ಸರಾಸರಿ ಕನಿಷ್ಠ ₹ 3 ಹಾಗೂ ಗುಣಮಟ್ಟದ ಟೊಮೆಟೊಗೆ ಗರಿಷ್ಠ ₹ 8 ಸಿಕ್ಕಿದೆ. 15 ಕೆ.ಜಿ 'ಸೀಡ್' ಟೊಮೆಟೊ ಬಾಕ್ಸ್ ದರ ₹ 80 ಕ್ಕೆ ಕುಸಿದಿದೆ.

ಇಲ್ಲಿನ ಮಾರುಕಟ್ಟೆಗೆ 1.14 ಲಕ್ಷ ಬಾಕ್ಸ್ ಟೊಮೆಟೊ ಆವಕವಾಗಿದೆ.

ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿನ ವಲಯ ವರ್ಗೀಕರಣದಲ್ಲಿ ತಪ್ಪು ದಾಖಲು

ವ್ಯತ್ಯಾಸ ಮೊತ್ತ, ಬಡ್ಡಿ ಪಾವತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ವಲಯ ವರ್ಗೀಕರಣವನ್ನು ತಪ್ಪಾಗಿ ಘೋಷಿಸಿಕೊಂಡ ಆಸ್ತಿ ಮಾಲೀಕರು, ವ್ಯತ್ಯಾಸದ ಮೊತ್ತ ಮತ್ತು ಅದಕ್ಕೆ ಬಡ್ಡಿಯನ್ನು ಮಾತ್ರ ಪಾವತಿಸಬೇಕು ಎಂದು ಸರ್ಕಾರ ಆದೇಶಿಸಿದೆ.

ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ವಲಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆಸ್ತಿ ಮಾಲೀಕರು ತಪ್ಪು ಮಾಡಿದ್ದಾರೆ. ಈ ತಪ್ಪನ್ನು ಬಿಬಿಎಂಪಿ ಸರಿಯಾದ ಸಮಯಕ್ಕೆ ಮಾಲೀಕರಿಗೆ ತಿಳಿಸಿಲ್ಲ. ಹೀಗಾಗಿ, ತೆರಿಗೆದಾರರಿಂದ ದುಪ್ಪಟ್ಟು ಆಸ್ತಿ ತೆರಿಗೆ ಹಣವನ್ನು ಸಂಗ್ರಹಿಸು ವಂತಿಲ್ಲ. ವ್ಯತ್ಯಾಸದ ಮೊತ್ತ ಮತ್ತು ಅದಕ್ಕೆ ಬ್ಯಾಂಕ್ ಬಡ್ಡಿ ದರವನ್ನು ವಿಧಿಸಬಹುದು ಎಂದು ಬಿಬಿಎಂಪಿಗೆ ಸೂಚಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 2016–17ರಿಂದ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಜಾರಿಯಲ್ಲಿದೆ. ಆಗ ವಲಯವನ್ನು ತಪ್ಪಾಗಿ ನಮೂದಿಸಿಕೊಂಡ ವರನ್ನು 2017–18ರಲ್ಲೇ ಗುರುತಿಸಿ, ಅವರಿಗೆ ನೋಟಿಸ್ ನೀಡಬೇಕಾಗಿತ್ತು. ಆದರೆ, 2021ರ ಆಗಸ್ಟ್‌ನಲ್ಲಿ ನೋಟಿಸ್ ಜಾರಿ ಮಾಡಲಾಗಿದೆ. ಹೀಗಾಗಿ, ದುಪ್ಪಟ್ಟು ತೆರಿಗೆಯನ್ನು ದಂಡವಾಗಿ ಸಂಗ್ರಹಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟ ಪಡಿಸಿದೆ. ಅಲ್ಲದೆ, ಕಂದಾಯ ಅಧಿಕಾರಿಗಳು ತೆರಿಗೆ ಮೌಲ್ಯೀಕರಣ ಪರಿಶೀಲನೆಯನ್ನು ಉತ್ತಮಗೊಳಿಸಿ ಕೊಳ್ಳಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ವಲಯ ವರ್ಗೀಕರಣ ವಿವರಗಳು ಆಸ್ತಿ ತೆರಿಗೆ ತಂತ್ರಾಂಶದಲ್ಲಿ ತಪ್ಪಾಗಿ ನಮೂದಿಸಿ ಗಣಕೀಕೃತಗೊಳಿಸಿ ದ್ದರೆ, ಅಂತಹ ನೋಟಿಸ್‌ಗಳನ್ನು ರದ್ದು ಪಡಿಸಬೇಕು. ಈಗಾಗಲೇ ಹೆಚ್ಚುವರಿ ಮೊತ್ತವನ್ನು ಪಾವತಿಸಿರುವ ಪ್ರಕರಣಗಳಲ್ಲಿ, ಆ ಮೊತ್ತವನ್ನು ಮುಂಬರುವ ಸಾಲುಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಆದೇಶಿಸಲಾಗಿದೆ.

ಈ ಆದೇಶದಿಂದ ಬಿಬಿಎಂಪಿಗೆ ನಷ್ಟ ಉಂಟಾಗಿದ್ದಲ್ಲಿ, ಅದನ್ನು ಸರ್ಕಾರ ಭರಿಸುವುದಿಲ್ಲ ಎಂದು 2022ರ ಜ.5ರಂದು ನಡೆದ ಸಚಿವ ಸಂಪುಟ ಸಭೆ ನಿರ್ಣಯ ಕೈಗೊಂಡಿದೆ. ಅದರಂತೆ, 2023ರ ಸೆ.13ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

78 ಸಾವಿರ ನೋಟಿಸ್!

ಸ್ವಯಂ ಘೋಷಣೆ ಆಸ್ತಿ ತೆರಿಗೆಯಲ್ಲಿ ವಲಯ ವರ್ಗೀಕರಣವನ್ನು 78,254 ಆಸ್ತಿಗಳಲ್ಲಿ ತಪ್ಪಾಗಿ ನಮೂದಿಸಲಾಗಿದೆ. ಹೀಗಾಗಿ ಕಾಯ್ದೆಯಂತೆ ವ್ಯತ್ಯಾಸದ ದುಪ್ಪಟ್ಟು ಮೊತ್ತವನ್ನು ದಂಡವಾಗಿ ಮತ್ತು ಬಡ್ಡಿಯೊಂದಿಗೆ ಪಾವತಿಸಬೇಕು ಎಂದು ನೋಟಿಸ್‌ಗಳನ್ನು 2021ರಲ್ಲಿ ಬಿಬಿಎಂಪಿ ಸಿದ್ಧಪಡಿಸಿತ್ತು. ಇದರಲ್ಲಿ 11,725 ನೋಟಿಸ್ ಜಾರಿ ಮಾಡಿತ್ತು. 7,891 ನೋಟಿಸ್‌ಗಳಿಗೆ ತೆರಿಗೆದಾರರು ಪ್ರತಿಕ್ರಿಯಿಸಿ, ₹13.33 ಕೋಟಿ ಆಸ್ತಿ ತೆರಿಗೆಯನ್ನೂ ಪಾವತಿಸಿದ್ದರು.

78,524 ಆಸ್ತಿಗಳ ತೆರಿಗೆ ಮೊತ್ತ ₹120 ಕೋಟಿಯಾಗಿದ್ದು, ಇದಕ್ಕೆ ₹240 ಕೋಟಿ ದಂಡ ಸೇರಿ ಒಟ್ಟು ₹361 ಕೋಟಿ ಸಂಗ್ರಹಿಸಲು ಬಿಬಿಎಂಪಿ ನೋಟಿಸ್ ಸಿದ್ಧಪಡಿಸಿತ್ತು.

7,891 ನೋಟಿಸ್ ಜಾರಿ ಮಾಡಿ, ₹3.54 ಕೋಟಿ ಆಸ್ತಿ ತೆರಿಗೆ, ₹7.08 ಕೋಟಿ ದಂಡ, ₹2.69 ಕೋಟಿ ಬಡ್ಡಿ, ಸೆಸ್ ಸೇರಿದಂತೆ ₹13.33 ಕೋಟಿ ಸಂಗ್ರಹಿಸಿತ್ತು. ಉಳಿದ 70,633 ಆಸ್ತಿಗಳಿಂದ ಒಟ್ಟು ₹440 ಕೋಟಿ ಸಂಗ್ರಹವಾಗುತ್ತದೆ ಎಂದು 2021ರ ಜು.31ರಂದು ಅಂದಾಜಿಸಲಾಗಿತ್ತು. ಇದೆಲ್ಲದರ ಜೊತೆಗೆ, ದುಪ್ಪಟ್ಟು ದಂಡ, ಬಡ್ಡಿಯ ಪ್ರಸ್ತಾವವನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿದ್ದರು.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಬಿಬಿಎಂಪಿ ಚುನಾವಣಾ ವಿಶೇಷ ಆಯುಕ್ತ ರಾಮಚಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿ ರಾಮಚಂದ್ರ ಆರ್ ಅವರನ್ನು ಬಿಬಿಎಂಪಿ ವಿಶೇಷ ಆಯುಕ್ತ (ಚುನಾವಣೆ) ಹುದ್ದೆಗೆ ವರ್ಗಾವಣೆ ಮಾಡಲಾಗಿದ್ದು, ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯಮಾಪನ ಮಂಡಳಿ ಅಧ್ಯಕ್ಷ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಎಸ್‌ಐಪಿ ಅನುದಾನ ವಾಪಸಾಗುವ ಭೀತಿ: ಬಳಕೆಯಾಗದಿದ್ದರೆ 2ನೇ ಕಂತಿಗೆ ಕುತ್ತು

ಬಿಬಿಎಂಪಿ ಗುತ್ತಿಗೆದಾರರಿಗೆ ಶೇ 75 ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ₹675 ಕೋಟಿಯನ್ನು ಯಾವ ಕಾಮಗಾರಿಗಳಿಗೆ ನೀಡಬೇಕು ಎಂಬುದನ್ನು ವಿವರಿಸಿ ಸರ್ಕಾರ ಆದೇಶ ಹೊರಡಿಸಿದೆ.

ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ (ಎಸ್‌ಐಪಿ) ಕೈಗೊಳ್ಳಲಾಗಿರುವ ಕಾಮಗಾರಿಗಳ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ. ಇದರ ವರದಿ ಸಲ್ಲಿಕೆ ವಿಳಂಬವಾಗುತ್ತಿದ್ದು, ಶೇ 75ರಷ್ಟು ಬಿಲ್ ಪಾವತಿ ಮಾಡಲು ಸೂಚಿಸಲಾಗಿದೆ.

ರಾಜ್ಯ ಸರ್ಕಾರ ವಿಶೇಷ ಮೂಲ ಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ ಶೀರ್ಷಿಕೆಯಡಿ ₹3 ಸಾವಿರ ಕೋಟಿ ಅನುದಾನವನ್ನು ಆಯವ್ಯಯದಲ್ಲಿ ಪ್ರಕಟಿಸಲಾಗಿತ್ತು. ಇದರಲ್ಲಿ ₹675 ಕೋಟಿಯನ್ನು ಮೇ 3ರಂದು ಬಿಡುಗಡೆ ಮಾಡಲಾಗಿತ್ತು. ಬಿಬಿಎಂಪಿ ಖಾತೆಗೆ ಈ ಹಣ ಮೇ 11, 12ರಂದು ಜಮೆಯಾಗಿತ್ತು. ಸರ್ಕಾರ ಮೇ 22ರಂದು ಆದೇಶ ಹೊರಡಿಸಿ, ಬಿಲ್ ಪಾವತಿಯನ್ನು ತಡೆ ಹಿಡಿದಿತ್ತು. ಈ ಮಧ್ಯೆ ಕಾಮಗಾರಿಗಳ ತಪಾಸಣೆಗೆ ಎಸ್‌ಐಟಿಯನ್ನೂ ರಚಿಸಲಾಗಿತ್ತು.

ವರದಿ ಸಲ್ಲಿಸಲು ಎಸ್‌ಐಟಿ ಇನ್ನಷ್ಟು ಸಮಯ ಕೇಳಿಕೊಂಡಿದೆ. ಹೀಗಾಗಿ, ಪೂರ್ಣಗೊಂಡ ಕಾಮಗಾರಿಗಳಿಗೆ ಭಾಗಶಃ ಬಿಲ್ ಪಾವತಿಯನ್ನು ಮಾಡಲು ಸರ್ಕಾರ ನಿರ್ಧರಿಸಿದೆ.

ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ₹675 ಕೋಟಿ (₹75 ಕೋಟಿ ಬಿಎಸ್‌ಡಬ್ಲ್ಯುಎಂಎಲ್‌ಗೆ ಬಿಡುಗಡೆಯಾಗಿದೆ) ಅನುದಾನವನ್ನು ಬಿಬಿಎಂಪಿ ಬಳಕೆ ಮಾಡದಿದ್ದರೆ, ಬಳಕೆ ಪ್ರಮಾಣಪತ್ರ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಎಸ್‌ಐಪಿಗೆ ₹3 ಸಾವಿರ ಕೋಟಿ ಅನುದಾನದ ಎರಡನೇ ಕಂತು ಬಿಡುಗಡೆ ಮಾಡಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಬಳಕೆಯಾಗದಿದ್ದರೆ ಅನುದಾನ ರದ್ದಾಗುತ್ತದೆ. ಅಲ್ಲದೆ, ಈಗಿರುವ 1,077 ಬಿಲ್‌ಗಳ ₹2,716 ಕೋಟಿ ಬಾಕಿ ಮೊತ್ತವೂ ಹೆಚ್ಚಾಗುತ್ತದೆ. ಬಿಲ್ ಪಾವತಿ ಮಾಡದಿದ್ದರೆ ಕಾಮಗಾರಿಗಳ ಅನುಷ್ಠಾನದಲ್ಲಿಯೂ ವಿಳಂಬವಾಗುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಹೀಗಾಗಿ, ಮೇನಿಂದ ಬಿಬಿಎಂಪಿ ಖಾತೆಯಲ್ಲಿ ಉಳಿದಿದ್ದ ₹675 ಕೋಟಿ ಅನುದಾನ, ಎಸ್‌ಐಪಿ ಯೋಜನೆಗಳಡಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಇನ್ನೊಂದು ವಾರದಲ್ಲಿ ಬಿಡುಗಡೆಯಾಗಲಿದೆ. ಇದರ ಜೊತೆಗೆ, ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗೆ ಶೇ 50ರಷ್ಟು ಹಣ ಪಾವತಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಸುಮಾರು ₹800 ಕೋಟಿ ಬಿಡುಗಡೆ ಮಾಡಲು ಸಾಫ್ಟ್‌ವೇರ್‌ನಲ್ಲಿ ಹೊಂದಾಣಿಕೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಒಟ್ಟಾರೆ 6 ಸಾವಿರಕ್ಕೂ ಹೆಚ್ಚು ಬಾಕಿ ಇರುವ ಬಿಲ್‌ನಲ್ಲಿ ಸದ್ಯಕ್ಕೆ ₹1,475 ಕೋಟಿ ಬಿಡುಗಡೆ ಆಗುವಂತಾಗಿದೆ. ಇದು ಗುತ್ತಿಗೆದಾರರಿಗೆ ಸದ್ಯಕ್ಕೆ ಸಮಾಧಾನ ತಂದಿದೆಯಾದರೂ, 'ಹಣ ಖಾತೆಗೆ ಬರುವವರೆಗೂ ಕಾಮಗಾರಿ ಆರಂಭಿಸುವುದಿಲ್ಲ' ಎನ್ನುತ್ತಾರೆ. ಆಗಸ್ಟ್ 7ರಿಂದ ಗುತ್ತಿಗೆದಾರರು ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆ.

ಮುಖ್ಯಾಂಶಗಳು

- ಸರ್ಕಾರದಿಂದ ₹675 ಕೋಟಿ ಅನುದಾನ ಮೇ 3ರಂದೇ ಬಿಡುಗಡೆ
- ಬಿಬಿಎಂಪಿಯಲ್ಲೇ ಬಾಕಿ ಉಳಿದಿದ್ದ ಹಣ
- ಇನ್ನೊಂದು ವಾರದಲ್ಲಿ ಪಾವತಿಸಲು ಸಿದ್ಧತೆ

ಯಾವ ಕಾಮಗಾರಿಗೆ ಹಣ?

ಬೃಹತ್ ನೀರುಗಾಲುವೆ (ಕೆ–100 ಯೋಜನೆ ಸಹಿತ) ಕಾಮಗಾರಿಗಳಿಗೆ ಶೇ 30, ಮೇಲ್ಸೇತುವೆ, ಅಂಡರ್‌ಪಾಸ್, ರೈಲು ಮೇಲ್ಸೇತುವೆ, ಕೆಳಸೇತುವೆ-ಶೇ 10, ಪಾದಚಾರಿ ಮಾರ್ಗ, ಟೆಂಡರ್‌ಶ್ಯೂರ್ ರಸ್ತೆಗಳು ಸೇರಿದಂತೆ ಮುಖ್ಯ, ಉಪಮುಖ್ಯ ರಸ್ತೆಗಳು– ಶೇ 30, ವೈಟ್‌ಟಾಪಿಂಗ್ ಮತ್ತು ಕಟ್ಟಡಗಳು– ಶೇ 15, ವಾರ್ಡ್ ಕಾಮಗಾರಿಗಳಿಗೆ ಶೇ 15ರಷ್ಟು ಹಣ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಪ್ರತಿ ವರ್ಗದ ಕಾಮಗಾರಿ, ಯೋಜನೆಗಳ ಬಿಲ್ ಪಾವತಿಯನ್ನು ಜ್ಯೇಷ್ಠತೆ ಆಧಾರದಲ್ಲಿ ಮಾಡಬೇಕು. ಪ್ರತಿ ಬಿಲ್‌ನ ಶೇ 75ರಷ್ಟು ಪಾವತಿ ಮಾಡಬೇಕು. ಕಾನೂನು ಪ್ರಕಾರದ ತೆರಿಗೆ ಹಾಗೂ ಇತರೆ ವೆಚ್ಚಗಳನ್ನು ಶೇ 100ರ ಬಿಲ್‌ಗೆ ಕಡಿತ ಮಾಡಿಕೊಂಡು, ಉಳಿದದ್ದನ್ನು ಗುತ್ತಿಗೆದಾರರಿಗೆ ಪಾವತಿ ಮಾಡಬೇಕು ಎಂದು ಷರತ್ತು ವಿಧಿಸಲಾಗಿದೆ.

ಉತ್ತಮ ಶಿಕ್ಷಣಕ್ಕೆ ಹೊಸ ಮಾದರಿ: ಆಯುಕ್ತ ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ತುಷಾರ್

ಬೆಂಗಳೂರು: ನಗರದಲ್ಲಿನ ಬಡ ವರ್ಗದ ಮಕ್ಕಳಿಗೆ ಉತ್ತಮ, ಉಚಿತ ಶಿಕ್ಷಣ ನೀಡುವ ಸಲುವಾಗಿ ಹೊಸ ಯೋಜನೆ ರೂಪಿಸ ಬೇಕಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಯೋಜನೆಯ 'ಶೈಕ್ಷಣಿಕ ಬೆಂಗಳೂರು' ವಿಚಾರ ಸಂಕಿರಣದಲ್ಲಿ ಅವರು ಶುಕ್ರವಾರ ಮಾತನಾಡಿದರು.

ನಗರದಲ್ಲಿ ಯಾರೊಬ್ಬರೂ ಶಿಕ್ಷಣದಿಂದ ವಂಚಿತರಾಗಬಾರದು, ಪಾಲಿಕೆ ಶಾಲೆಗಳಲ್ಲಿ ಮಾನವ ಸಂಪನ್ಮೂಲದ ಕೊರತೆಯಿದ್ದು, ಕಾಯಂ ಶಿಕ್ಷಕರು ಶೇ 20ರಷ್ಟಿದ್ದರೆ ಉಳಿದ ಶೇ 80 ರಷ್ಟು ಶಿಕ್ಷಕರು ಹೊರಗುತ್ತಿಗೆಯವರು. ಇರುವ ಶಿಕ್ಷಕರಿಗೆ ಉತ್ತಮ ತರಬೇತಿ ನೀಡಿ, ಅವರನ್ನೇ ಸದೃಢವಾಗಿಸಿ ಉತ್ತಮ ವಿದ್ಯಾಭ್ಯಾಸ ನೀಡುವ ಕೆಲಸ ಮಾಡಬೇಕು ಎಂದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಅದಕ್ಕೆ ಬೇಕಾದಂತಹ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ವ್ಯವಸ್ಥೆಗೆ ತಕ್ಕಂತೆ ಶಿಕ್ಷಣ ನೀಡುವ ಮಾದರಿಯನ್ನು ಕಾಲ ಕಾಲಕ್ಕೆ ಬದಲಾಯಿಸಿಕೊಳ್ಳಬೇಕು. ಮಕ್ಕಳಲ್ಲಿ ವಿದ್ಯಾಭ್ಯಾಸದ ಜೊತೆ ಬೇರೆ ಬೇರೆ ಚಟುವಟಿಕೆಗಳ ಬಗ್ಗೆಯೂ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ ಬರುವ ಎಲ್ಲಾ 8 ವಿಷಯಗಳಿಗೆ ಸಂಬಂಧಿಸಿದಂತೆ ಅಂತಿಮ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಶಿಕ್ಷಣ ವಿಭಾಗದ ಉಪ ಆಯುಕ್ತ ವೆಂಕಟರಾಜು, ಶಿಕ್ಷಣ ತಜ್ಞ ವೇಣುಗೋಪಾಲ್, ಗೀತಾ ರಾಮಾನುಜಂ, ಕೆ.ಇ. ರಾಧಾಕೃಷ್ಣ, ರಾಮಕೃಷ್ಣ ರೆಡ್ಡಿ ಇದ್ದರು.

ಮುಖ್ಯ ಸಲಹೆಗಳು

- ಬೆಂಗಳೂರು ಎಜುಕೇಷನ್ ಹಬ್ ಆಗಿದ್ದು, ಡಿಜಿಟಲ್/ಆರ್ಟಿಫಿಶಿಯಲ್ ಇಂಟಲಿಜೆಂಟ್‌ಗೆ ಆದ್ಯತೆ ಅಗತ್ಯ
- ಬೆಂಗಳೂರಲ್ಲಿ ಉತ್ತಮ ರೀತಿಯ ಶಿಕ್ಷಣ ನೀತಿಯನ್ನು ಕಾಲಕಾಲಕ್ಕೆ ಉನ್ನತೀಕರಿಸಬೇಕು.
- ಡಿಜಿಟಲ್ ಶಿಕ್ಷಣ, ಕ್ಲಸ್ಟರ್ ವ್ಯವಸ್ಥೆಗೆ ಹೆಚ್ಚು ಒತ್ತು ನೀಡಬೇಕು.
- ಕೌಶಲ ಕೇಂದ್ರ ತೆರೆದು, ತಂತ್ರಜ್ಞಾನ ಬಳಸಿಕೊಂಡು ಶಿಕ್ಷಣ ನೀಡಬೇಕು.
- ಸಿಎಸ್‌ಆರ್ ಅನುದಾನವನ್ನು ಬಳಸಿಕೊಂಡು ಉತ್ತಮ ಶಿಕ್ಷಣ ನೀಡುವುದು.
- ಡಿಜಿಟಲ್ ಗ್ರಂಥಾಲಯಗಳನ್ನು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ತೆರೆಯುವುದು.
- ವರ್ಚುವಲ್ ಶಿಕ್ಷಣಕ್ಕೆ ಆದ್ಯತೆ ನೀಡಿ ಆ ಬಗ್ಗೆ ಶಿಕ್ಷಣ ವೃಂದಕ್ಕೆ ತರಬೇತಿ ನೀಡುವುದು.
- ಮಾತೃಭಾಷೆಗೆ ಹೆಚ್ಚು ಪ್ರಾಧಾನ್ಯ ನೀಡಿ, ಮಕ್ಕಳಿಗೆ ಆ ಬಗ್ಗೆ ತಿಳಿಸುವ ಕೆಲಸ ಮಾಡಬೇಕು.

ಕಥನ ಸ್ಪರ್ಧೆಗೆ ಅರ್ಜಿ ಆಹ್ವಾನ

ರಾಮನಗರ: ಜನಪದ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸಲು ತಾಲ್ಲೂಕಿನ ಕೃಷ್ಣಾಪುರದೊಡ್ಡಿಯ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ರಾಜ್ಯಮಟ್ಟದ ಕಥನಕಾವ್ಯ ಸ್ಪರ್ಧೆ ಆಯೋಜಿಸಿದೆ. ಅಕ್ಟೋಬರ್ ತಿಂಗಳ ಎರಡನೇ ವಾರದಲ್ಲಿ ನಡೆಯಲಿರುವ ಸ್ಪರ್ಧೆಗೆ ಆಸಕ್ತ ತಂಡಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಸೆ. 30 ಕೊನೆಯ ದಿನ. ವಿವರಗಳಿಗಾಗಿ ಚಂದ್ರಮೌಳಿ ಕೆ.ಪಿ (ಸ್ಪರ್ಶ ಸ್ಟುಡಿಯೋಸ್, ಕುಣಿಗಲ್) ಮೊ: 9844080983. ನವೀನ್ ಭೂಮಿ, ತಿಪಟೂರು, ಮೊ: 9019591927 ಹಾಗೂ ಡಾ. ಎಂ. ಬೈರೇಗೌಡ, ಮೊ: 7899906116 ಸಂಪರ್ಕಿಸಬಹುದು.

ಮಾಜಿ ಉಪ ಮೇಯರ್ ಎಲ್. ಶ್ರೀನಿವಾಸ್, ಪ್ರಸಾದ್ ಬಾಬು ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ತೊರೆದು ಶುಕ್ರವಾರ ಕಾಂಗ್ರೆಸ್ ಸೇರಿದ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಹಲವು ಮುಖಂಡರನ್ನು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು. ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇದ್ದರು

ಅಪಾಯಕ್ಕೆ ಸಿಲುಕುತ್ತಿದೆ ಪ್ರಜಾಪ್ರಭುತ್ವ

ದತ್ತಿ ಉಪನ್ಯಾಸದಲ್ಲಿ ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಅಪರಾಧದ ಹಿನ್ನೆಲೆ ಇರುವವರು ಅಧಿಕ ಸಂಖ್ಯೆಯಲ್ಲಿ ಶಾಸನ ಸಭೆ ಪ್ರವೇಶಿಸುತ್ತಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ಭಾರತದ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತದೆ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಹೇಳಿದರು.

ನಗರದಲ್ಲಿ ಗುರುವಾರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎಂವಿಆರ್ ಫೌಂಡೇಶನ್‌ನಿಂದ ಎಂ.ವಿ.ರಾಜಶೇಖರನ್ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮಹಾತ್ಮಗಾಂಧಿ ಮತ್ತು ಬಿ.ಆರ್.ಅಂಬೇಡ್ಕರ್ ಅವರ ಆಶಯದ ಸಂವಿಧಾನ ಮತ್ತು ಪ್ರಜಾಪ್ರಭುತ್ವ' ವಿಷಯ ಕುರಿತು ಅವರು ಮಾತನಾಡಿದರು.

ಗಾಂಧಿ ಮತ್ತು ಅಂಬೇಡ್ಕರ್ ಅವರ ಮಧ್ಯೆ ಭಿನ್ನಾಭಿಪ್ರಾಯಗಳಿದ್ದರೂ, ಇಬ್ಬರ ಆಶಯಗಳೂ ಒಂದೇ ಆಗಿದ್ದವು. ಗಾಂಧೀಜಿ ಭಾರತ ಸ್ವಾತಂತ್ರ್ಯದ ನೇತೃತ್ವ ವಹಿಸಿದರೆ, ಅಂಬೇಡ್ಕರ್ ಸ್ವಾತಂತ್ರ್ಯ ನಂತರದ ಭಾರತದ ರೂಪುರೇಷೆ ಸಿದ್ಧಪಡಿಸಿದರು. ಅದರ ಫಲವಾಗಿ ಅಲ್ಪ ಅವಧಿಯಲ್ಲೇ ಭಾರತ ವಿಶ್ವದ ಅಗ್ರಗಣ್ಯ ರಾಷ್ಟ್ರಗಳ ಸಾಲಿಗೆ ಸೇರಿದೆ. ಅಪರಾಧ ಆರೋಪ ಹೊತ್ತವರು ಸಂಸತ್ ಸೇರಿದಂತೆ ಶಾಸನ ಸಭೆಗಳನ್ನು ಪ್ರವೇಶಿಸಿದರೆ ಗಾಂಧಿ, ಅಂಬೇಡ್ಕರ್ ಆಶಯಗಳಿಗೆ ಧಕ್ಕೆಯಾಗುತ್ತದೆ. ಜನರು ಎಚ್ಚೆತ್ತುಕೊಳ್ಳಬೇಕು. ತಮ್ಮ ಮತವನ್ನೇ ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಅಸ್ತ್ರವಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಿದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ರಾಜ್ಯಸಭೆ ಮಾಜಿ ಸದಸ್ಯ ಎಚ್. ಹನುಮಂತಪ್ಪ, ಕಂದಾಯ ಇಲಾಖೆ ಉಪ ಕಾರ್ಯದರ್ಶಿ ಡಿ.ಎಸ್.ಕಲಾವತಿ, ಎಂವಿಆರ್ ಫೌಂಡೇಷನ್ ಅಧ್ಯಕ್ಷ ಮಂಜುನಾಥ ಪಿ.ಬಿಜ್ಜಳ್ಳಿ, ಕಾರ್ಯದರ್ಶಿ ಸಂಧ್ಯಾ ಪ್ರದೀಪ್‌ಕುಮಾರ್, ಏಷ್ಯಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಎಚ್. ಶಿವಲಿಂಗಯ್ಯ ಉಪಸ್ಥಿತರಿದ್ದರು.

ನಗರದಲ್ಲಿ ಗುರುವಾರ ಎಂ.ವಿ. ರಾಜಶೇಖರನ್ ಅವರ ಜನ್ಮದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ , ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಚರ್ಚೆಯಲ್ಲಿ ತೊಡಗಿದ್ದರು. ಎಚ್ ಹನುಮಂತಪ್ಪ, ಲೀಲಾದೇವಿ ಆರ್ ಪ್ರಸಾದ್ ಇದ್ದರು —ಪ್ರಜಾವಾಣಿ ಚಿತ್ರ

ಪುಣೆ ರೇಸ್

ನಾರ್ದರನ್ ಲೈಟ್ಸ್ ಗೆಲ್ಲುವ ನಿರೀಕ್ಷೆ

ಪಾರಿಮ್ಯಾಚ್ ಪುಣೆ ಸಿಟಿ ಗೋಲ್ಡ್ ಕಪ್ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾರ್ದರನ್ ಲೈಟ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅನೌಶ್ಕ 6, ಕಮ್ ಬ್ಯಾಕ್ ಫ್ಲೀಸ್ 7, ಎಸ್ಪೀರ್ 3

2ನೇ ರೇಸ್: ಸಾವರಿನ್ ಗ್ರೇ 2, ಮಿಸ್ ಅಮೆರಿಕನ್ ಪೀ 5, ನ್ಯೂಡೈಮನ್ಷನ್ 3

3ನೇ ರೇಸ್: ಸನ್ ಆಫ್ ಎ ಗನ್ 3, ಜೋಕ್ವಿನ್ 1, ಸೆಲ್ಲಿನಿ 7

4ನೇ ರೇಸ್: ನಾರ್ದರನ್ ಲೈಟ್ಸ್ 1, ಫಾರೆಸ್ಟ್ ಫ್ಲೇಮ್ 4, ಮೊಯಿಟೊ 2

5ನೇ ರೇಸ್: ಎಕ್ಸುಮಾ 5, ಅಲೆಕ್ಸಾಂಡ್ರಸ್ 1, ಟ್ರಾನ್ಸೆಂಡ್ 11

6ನೇ ರೇಸ್: ಯಾರ್ಂಬ್ಲರ್ 4, ಮೆಜೆಸ್ಟಿಕ್ ವಾರಿಯರ್ 3, ಫಾರ್ಚೂನ್ ಟೆಲ್ಲರ್ 6

ಉತ್ತಮ ಬೆಟ್: ಸಾವರಿನ್ ಗ್ರೇ

ಜಾಕ್‌ಪಾಟ್	ಟ್ರಿಬಲ್
2,3,4,5,6	3,4,5

ಪದ್ಮನಾಭನಗರ: ಬಿಜೆಪಿ, ಜೆಡಿಎಸ್‌ನ ಹಲವರು ಕಾಂಗ್ರೆಸ್‌ಗೆ

ಬೆಂಗಳೂರು: ಮಾಜಿ ಉಪ ಮೇಯರ್ ಎಲ್. ಶ್ರೀನಿವಾಸ್, ಜೆಡಿಎಸ್ ಮುಖಂಡ ಪ್ರಸಾದ್ ಬಾಬು ಸೇರಿದಂತೆ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ, ಹಾಗೂ ಜೆಡಿಎಸ್‌ನ 15ಕ್ಕೂ ಹೆಚ್ಚು ಮುಖಂಡರು ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಎಲ್ಲರನ್ನೂ ಪಕ್ಷಕ್ಕೆ ಬರಮಾಡಿಕೊಂಡರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಲಕ್ಷ್ಮಿ ಸುರೇಶ್, ತಾ.ಪಂ ಮಾಜಿ ಸದಸ್ಯ ಆಂಜಿನಪ್ಪ, ಬಿಬಿಎಂಪಿ ಮಾಜಿ ಸದಸ್ಯರಾದ ಶೋಭಾ ಆಂಜಿನಪ್ಪ, ಎಚ್. ನಾರಾಯಣ್, ಎಚ್. ಸುರೇಶ್, ವೆಂಕಟಸ್ವಾಮಿ ನಾಯ್ಡು, ಎಲ್.ಗೋವಿಂದ ರಾಜು, ಸುಪ್ರಿಯಾ ಶೇಖರ್, ಬಾಲಕೃಷ್ಣ, ಸುಗುಣಾ ಬಾಲಕೃಷ್ಣ, ಯು.ಕೃಷ್ಣಮೂರ್ತಿ, ಮುಖಂಡರಾದ ನರಸಿಂಹ ನಾಯಕ್, ಪವನ್, ರಂಗರಾಮೇಗೌಡ ಬಿಜೆಪಿ ಮತ್ತು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದರು.

ಮಹಿಳೆಯರ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಶುಕ್ರವಾರ ಎರಡು ಬಸ್‌ಗಳ ಮಧ್ಯೆ ಸಿಲುಕಿ ಇಬ್ಬರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಶೆಟ್ಟಿಹಳ್ಳಿಯ ಪಂಕಜಮ್ಮ (50), ಪುಟ್ಟತಾಯಮ್ಮ (67) ಮೃತರು.

ಹುಬ್ಬಳ್ಳಿ 'ಈದ್ಗಾ'ದಲ್ಲಿ ಗಣೇಶೋತ್ಸವಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಕಿತ್ತೂರು ಚನ್ನಮ್ಮ ವೃತ್ತದ ಬಳಿಯಿರುವ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಪ್ರತಿ ಷ್ಠಾಪನೆಗೆ ಕೊನೆಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಅನುಮತಿ ಸಿಕ್ಕಿದೆ.

ಸೆಪ್ಟೆಂಬರ್ 19 ರಿಂದ 21ರವರೆಗೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲು 'ರಾಣಿ ಚನ್ನಮ್ಮ ಮೈದಾನ ಗಜಾನನ ಉತ್ಸವ ಮಹಾಮಂಡಳಿ'ಗೆ ನೀಡಲಾಗಿದ್ದು, ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ ಅವರು ಶುಕ್ರವಾರ ರಾತ್ರಿ ಮಹಾಮಂಡಳದ ಅಧ್ಯಕ್ಷ ಸಂಜೀವ ಬಡಸ್ಕರ ಅವರಿಗೆ ಅನುಮತಿ ಪತ್ರ ನೀಡಿದರು.

ಇದಕ್ಕೂ ಮುನ್ನ ಅನುಮತಿ ನೀಡುವಂತೆ ಗುರುವಾರ ರಾತ್ರಿಯಿಂದ ಶುಕ್ರವಾರ ರಾತ್ರಿಯವರೆಗೆ ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ ನೇತೃತ್ವದಲ್ಲಿ ಪಾಲಿಕೆಯ ಬಿಜೆಪಿ ಸದಸ್ಯರು, ಹಿಂದೂ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ರಸ್ತೆ ತಡೆ ನಡೆಸಿದರು.

ಅನುಮತಿ ಸಿಕ್ಕಿರುವುದು ಖಚಿತ ಆಗುತ್ತಿದ್ದಂತೆಯೇ, ಪ್ರತಿಭಟನಾಕಾರರು ಪ್ರತಿಭಟನೆ ಕೈಬಿಟ್ಟರು.

ನಗರದಲ್ಲಿ ಇಂದು

ದ್ವಾದಶ ವರ್ಷೋತ್ಸವ: ಸಾನ್ನಿಧ್ಯ: ಸ್ವಾಮಿ ನಿತ್ಯಸ್ಥಾನಂದ ಸ್ವಾಮೀಜಿ, ಗುರು ಸನ್ಮಾನ: ವಿನಾಯಕ ತೊರವಿ, ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ಸಮೀಹನ ಕುಶಾಲ್ಕರ್, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಆಯೋಜನೆ: ಷಡ್ಜ ಕಲಾ ಕೇಂದ್ರ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30

ಸಂವಾದ ಸಂಭ್ರಮ: 'ಸಾಮಾಜಿಕ ನ್ಯಾಯ ಮತ್ತು ಸುಸ್ಥಿರತೆಗಾಗಿ ಮುಂದಾಳತ್ವ' ಸಂವಾದ: ಅಕ್ಕೈ ಪದ್ಮಶಾಲಿ, ಮಿಸ್ಬಾ ಶಹೀದ್, ಚುಕ್ಕಿ ನಂಜುಂಡಸ್ವಾಮಿ, ನಿಖಿಲ್ ಡೇ, ದಿನೇಶ್ ಅಮೀನ್‌ಮಟ್ಟು, ನಜ್ಮಾ ನಜೀರ್, ಡಾಮಿನಿಕ್ ಡಿ., ಎ.ಪಿ. ರಂಗನಾಥ್, ಕಿಶೋರ್, ಸುಧೀರ್ ಕೃಷ್ಣಸ್ವಾಮಿ, ಮಧು ಭೂಷಣ್, ವಿದ್ಯಾಕುಮಾರಿ, ಮಾವಳ್ಳಿ ಶಂಕರ್, ಆಯೋಜನೆ ಮತ್ತು ಸ್ಥಳ: ಸಂವಾದ ಆವರಣ, ಬಂಜಾರಪಾಳ್ಯ, ಅಗರ ಗ್ರಾಮ, ತಾತಗುಣಿ, ಬೆಳಿಗ್ಗೆ 10.30

ಸಾಂಸ್ಕೃತಿಕ ಸಂಭ್ರಮ ವ್ಯವಹಾರ ಮೇಳ ಹಾಗೂ ವಸ್ತು ಪ್ರದರ್ಶನ: ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಅಪ್ಪಗೆರೆ ತಿಮ್ಮರಾಜು, ಭರತ್, ಎಸ್.ಎಂ. ಹಂಜಿ, ಸುಮಾ ಅನಿಲ್ ಕುಮಾರ್, ಜಿ.ಪಿ. ವಿಶ್ವನಾಥ್, ಅಧ್ಯಕ್ಷತೆ: ಎಸ್.ಎಸ್. ದೊಡ್ಡಣ್ಣವರ, ಆಯೋಜನೆ ಮತ್ತು ಸ್ಥಳ: ಬಸವೇಶ್ವರ ಪದವಿಪೂರ್ವ ಕಾಲೇಜು, ವಿಜಯನಗರ, ಬೆಳಿಗ್ಗೆ 10.30

ಮೀಟ್ ಆ್ಯಂಡ್ ಗ್ರೀಟ್ ವಿತ್ ಸೆಲಿಬ್ರೆಟಿ: ಅತಿಥಿ: ಉದಯ ಶಂಕರ ಪುರಾಣಿಕ್, ಗುರು ಗೌರವ ಪುರಸ್ಕಾರ: ದೀಪ್ತಿ ರಾಮಕೃಷ್ಣ, ಆಯೋಜನೆ ಮತ್ತು ಸ್ಥಳ: ಸುದೇವ್ ಶಿಕ್ಷಣ ಸಂಸ್ಥೆ, ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 11

ಪರಿಸರ ಸ್ನೇಹಿ ಗಣಪತಿ ಹಬ್ಬದ ಅಭಿಯಾನ: ಅತಿಥಿಗಳು: ಈಶ್ವರ್ ಬಿ. ಖಂಡ್ರೆ, ಶಾಂತ್ ಎ. ತಿಮ್ಮಯ್ಯ, ಯೋಗಾನಂದ್, ಜಯಮ್ಮ, ಆಯೋಜನೆ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ, ಪ್ರಕಾಶನಗರ, ಮಧ್ಯಾಹ್ನ 2.30

'ಒಂದು ದೇಶ ಒಂದು ಚುನಾವಣೆ' ಹೂರಣವೇನು? ಅಂಜೆಂಡಾವೇನು? ಸಂವಾದ: ಡಾ. ರಮೇಶ್ ಬೆಲ್ಲಂಕೊಂಡ, ಶಿವಸುಂದರ್, ಎ. ನಾರಾಯಣ, 'ಮುಖ್ಯಮಂತ್ರಿ' ಚಂದ್ರು, ಆರ್. ಸುನಂದಮ್ಮ, ಸುಧೀರ್ ಕುಮಾರ್ ಮುರೊಳ್ಳಿ, ಸಿ.ಎಂ. ಫೈಜ್, ಕೆ. ಪ್ರಕಾಶ್, ಯು.ಟಿ. ಫರ್ಜಾನಾ, ಸುಷ್ಮಾವೀರ್, ಪ್ರಸನ್ನ ಎನ್., ಮಂಜುನಾಥ ಅದ್ದೆ, ಬಿ.ಆರ್. ಭಾಸ್ಕರ್ ಪ್ರಸಾದ್, ಚೇತನ್ ಜೀರಾಳ್, ಕ್ಲಿಫ್ಟನ್ ಡಿ ರೊಜಾರಿಯೊ, ಆಯೋಜನೆ: ಚಿಂತನ ಕರ್ನಾಟಕ, ಸ್ಥಳ: ಕೆ.ಆರ್.ವಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

ಬೇಲೂರು ರಘುನಂದನ್ ಅವರ ಏಕವ್ಯಕ್ತಿ ನಾಟಕೋತ್ಸವ-2023: ಉದ್ಘಾಟನೆ: ಕಮಲಾ ಹಂಪನಾ, ಅಧ್ಯಕ್ಷತೆ: ವಿಜಯಾ, ರಂಗಗೌರವ ಪ್ರದಾನ: ಲಲಿತ ಸಿದ್ಧಬಸವಯ್ಯ, ಅತಿಥಿಗಳು: ನಿರ್ಮಲಾ ಸಿ. ಯಲಿಗಾರ್, ಆರ್. ಲಕ್ಷ್ಮಿದೇವಿ, ಎಚ್.ಆರ್. ಸುಜಾತ, 'ಅಧಿನಾಯಕಿ' 'ಮಾತಾ' ಏಕವ್ಯಕ್ತಿ ರಂಗ ಪ್ರಯೋಗಗಳ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ರಂಗಚಂದಿರ, ಥಿಯೇಟರ್ ಥೆರಪಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

ಕಮಲಾ ಹಂಪನಾ

ರಂಗನಾಥ ಕಂಟನಕುಂಟೆ ಅವರ 'ಪ್ರೇಮಬಿಕ್ಕು ಮತ್ತು ಬಾಪು ಬಟ್ಟೆ' 'ಓದಿನ ಒಕ್ಕಲು' ಪುಸ್ತಕಗಳ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕ ಪರಿಚಯ: ಗಂಗರಾಜು ಜಿ., ದೇವರಾಜು ಡಿ.ಆರ್., ಅಧ್ಯಕ್ಷತೆ: ಕಾ.ತ. ಚಿಕ್ಕಣ್ಣ, ಉಪಸ್ಥಿತಿ: ನಿಂಗರಾಜು ಚಿತ್ತಣ್ಣನವರ್, ಆಯೋಜನೆ: ಬಯಲು ಬಳಗ, ಸ್ಥಳ: ಜೈಭೀಮ್ ಭವನ, ಪೂರ್ಣಿಮಾ ಚಿತ್ರಮಂದಿರದ ಎದುರು, ಲಾಲ್‌ಬಾಗ್ ರಸ್ತೆ, ಸಂಜೆ 5



ಮೂಡ್ನಾಕೂಡು ಚಿನ್ನಸ್ವಾಮಿ

ಕಥಕ್ ನೃತ್ಯ ಪ್ರದರ್ಶನ: ಪ್ರಸ್ತುತಿ: ಚೇತನಾ ಹರಿ, ಶ್ರೀಹರಿ, ಆಯೋಜನೆ: ಸಂಗಮಂ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6

ಊಂಜಲ್ ಸಂಗೀತೋತ್ಸವ: ಗಾಯನ: ಸುಮಲತಾ ಮಂಜುನಾಥ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ, ವಯ್ಯಾಲಿ ಕಾವಲ್, ಸಂಜೆ 6

ಸಾಹಿತ್ಯ ಸಂಜೆ: 'ಸಾಹಿತ್ಯ ಮತ್ತು ಪತ್ರಿಕೋದ್ಯಮ' ಕುರಿತ ಉಪನ್ಯಾಸ: ಪ್ರಕಾಶ್ ಬೆಳವಾಡಿ, ಆಯೋಜನೆ ಮತ್ತು ಸ್ಥಳ: ಭಾನು ನೆನಪಿನ ಅಂಗಳ, ಸುಚಿತ್ರ ಪೂರ್ವಂಕರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 6.30

ಪ್ರವಚನ ವಾಹಿನಿ: 'ಕರ್ನಾಟಕ ಶಾಸ್ತ್ರೀಯ ಸಂಗೀತ': ಗಾಯನ: ಹೆಮ್ಮಿಗೆ ಎಸ್. ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಸಂಜೆ 6.30

'ಹಸ್ಬೆಂಡ್-360' ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ಅರ್ಚನಾ ಶ್ಯಾಮ್, ವಿಜಯ್ ಜೋಯಿಸ್, ಆಯೋಜನೆ: ಅಂತರಂಗ, ಸ್ಥಳ: ಪ್ರಭಾತ್ ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಜನಸಾಮಾನ್ಯರ ಅರ್ಜಿಗಳ ವಿಚಾರಣೆಯನ್ನೂ ನಡೆಸುತ್ತೇವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಾಮಾನ್ಯ ಜನರಿಗೆ ಸಂಬಂಧಿಸಿದ ಅರ್ಜಿಗಳನ್ನು ಕೂಡ ಸುಪ್ರೀಂಕೋರ್ಟ್ ವಿಚಾರಣೆ ನಡೆಸುತ್ತದೆ' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶುಕ್ರವಾರ ಹೇಳಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಸಂವಿಧಾನ ಪೀಠದ ಮುಂದಿರುವ ಅರ್ಜಿಗಳ ವಿಚಾರಣೆಯಲ್ಲಿಯೇ ಸುಪ್ರೀಂಕೋರ್ಟ್ ಸಮಯ ವ್ಯರ್ಥ ಮಾಡುತ್ತಿದ್ದು, ಸಾಮಾನ್ಯ ಜನರಿಗೆ ಸಂಬಂಧಿಸಿದ ಪ್ರಕರಣಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ' ಎಂದು ದೂರಿ, ರಜಿಸ್ಟ್ರಿಗೆ ಇ-ಮೇಲ್ ಮಾಡಿದ್ದ ವಕೀಲರನ್ನು ಉದ್ದೇಶಿಸಿ ಅವರು ಈ ಖಡಕ್ ಮಾತುಗಳನ್ನು ಹೇಳಿದ್ದಾರೆ.

'ಸಂವಿಧಾನ ಪೀಠದ ಬರುವ ಪ್ರಕರಣಗಳು ಎಂಥವು ಎಂಬುದು ನಿಮಗೆ ಗೊತ್ತಿಲ್ಲ ಅನಿಸುತ್ತೆ' ಎಂದು ದೂರು ಸಲ್ಲಿಸಿದ್ದ ವಕೀಲ ಮ್ಯಾಥ್ಯೂಸ್ ಜೆ.ನೆಡುಂಬಾರ ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಇದ್ದ ಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲ ನೆಡುಂಬಾರ, 'ಸಾಮಾನ್ಯ ಜನರ ಮೇಲೆ ಪರಿಣಾಮ ಬೀರುವಂತಹ ಪ್ರಕರಣಗಳು ಕೂಡ ಮುಖ್ಯ' ಎಂದರು.

'ಸಂವಿಧಾನ ಪೀಠದ ಮುಂದೆ ಬರುವ ವಿಷಯಗಳ ಬಗ್ಗೆ ನಿಮಗೆ ಅರಿವಿಲ್ಲ ಅನಿಸುತ್ತದೆ. ಸಂವಿಧಾನ ವ್ಯಾಖ್ಯಾನದ ಜೊತೆಗೆ ಇತರ ಮಹತ್ವದ ಅರ್ಜಿಗಳ ವಿಚಾರನೆಯನ್ನೂ ಸಂವಿಧಾನ ಪೀಠ ನಡೆಸುತ್ತದೆ. ಸಂವಿಧಾನದ 370ನೇ ವಿಧಿಗೆ ಸಂಬಂಧಿಸಿದ ಅರ್ಜಿ ಅಪ್ರಸ್ತುತ ಎಂದು ನೀವು ಯೋಚಿಸಬಹುದು. ಆದರೆ, ಸರ್ಕಾರ ಅಥವಾ ಅರ್ಜಿದಾರರು ಈ ರೀತಿ ವಿಚಾರ ಮಾಡಲಿಕ್ಕಿಲ್ಲ' ಎಂದು ಸಿಜೆಐ ಹೇಳಿದರು.

'ದೇಶದ ಲಕ್ಷಾಂತರ ಜನ ಚಾಲಕರ ಜೀವನೋಪಾಯದ ಮೇಲೆ ಪರಿಣಾಮ ಬೀರಬಹುದಾದಂತಹ ಪ್ರಕರಣದ ವಿಚಾರಣೆಯನ್ನು ಮೊನ್ನೆ ನಡೆಸಲಾಗಿತ್ತು. ಆ ದಿನ ನೀವು ಕೋರ್ಟ್ ಸಭಾಂಗಣದಲ್ಲಿ ಇದ್ದಿದ್ದರೆ ನಿಮಗೆ ಅರ್ಥವಾಗುತ್ತಿತ್ತು' ಎಂದೂ ಹೇಳಿದರು.

'ಲಘು ಮೋಟಾರ ವಾಹನ ಚಾಲನಾ ಪರವಾನಗಿ ಹೊಂದಿರುವ ಚಾಲಕ ಭಾರಿ ವಾಹನ ಚಾಲನೆ ಮಾಡಬಹುದೇ ಎಂಬುದಕ್ಕೆ ಸಂಬಂಧಿಸಿದ ಅರ್ಜಿ ಅದಾಗಿತ್ತು' ಎಂದೂ ನ್ಯಾಯಪೀಠ ಹೇಳಿತು.

'ಜನರ ಮೂಲಭೂತ ಹಕ್ಕು ಒಳಗೊಂಡಂತಹ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ಬಗ್ಗೆ ನನ್ನ ವಿರೋಧವಿಲ್ಲ. ಸಾರ್ವಜನಿಕ ಮಹತ್ವದ ವಿಷಯಗಳನ್ನೂ ಕೋರ್ಟ್ ಕೈಗೆತ್ತಿಕೊಳ್ಳಬೇಕು ಎಂಬುದಷ್ಟೆ ನನ್ನ ಒತ್ತಾಯ' ಎಂದು ನೆಡುಂಬಾರ ಹೇಳಿದರು.

'ಈ ವಿಷಯದಲ್ಲೂ ನಿಮ್ಮದು ತಪ್ಪು ತಿಳಿವಳಿಕೆ. 370ನೇ ವಿಧಿಗೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ, ಜಮ್ಮು-ಕಾಶ್ಮೀರದಿಂದ ಬಂದಿದ್ದ ಗುಂಪೊಂದರ ಅಹವಾಲು ಆಲಿಸಿದ್ದೇವೆ. ಜನರ ಅಹವಾಲನ್ನು ಆಲಿಸುತ್ತಿದ್ದೇವೆ' ಎಂದು ನ್ಯಾಯಪೀಠ ಪ್ರತಿಕ್ರಿಯಿಸಿತು.

ವರ್ಚುವಲ್ ವಿಚಾರಣೆ ಸ್ಥಗಿತ: ಮಾಹಿತಿ ಕೇಳಿದ 'ಸುಪ್ರೀಂ'

ನವದೆಹಲಿ: 'ವರ್ಚುವಲ್ ವಿಧಾನದ ಮೂಲಕ ಅರ್ಜಿಗಳ ವಿಚಾರಣೆಯನ್ನು ಸ್ಥಗಿತಗೊಳಿಸಲಾಗಿದೆಯೇ' ಎಂದು ಹೈಕೋರ್ಟ್ ಮತ್ತು ನ್ಯಾಯ ಮಂಡಳಿಗಳನ್ನು ಪ್ರಶ್ನಿಸಿರುವ ಸುಪ್ರೀಂಕೋರ್ಟ್, ಈ ಕುರಿತು ಮಾಹಿತಿ ಸಲ್ಲಿಸುವಂತೆ ಶುಕ್ರವಾರ ಸೂಚಿಸಿದೆ.

ಇಂತಹ ನಿರ್ಧಾರದ ಹಿಂದಿರುವ ಕಾರಣಗಳನ್ನು ಒಳಗೊಂಡ ಪ್ರಮಾಣಪತ್ರವನ್ನು ಎರಡು ವಾರಗಳ ಒಳಗಾಗಿ ಸಲ್ಲಿಸುವಂತೆ ಎಲ್ಲ ರಿಜಿಸ್ಟ್ರಾರ್ ಜನರಲ್‌ಗಳಿಗೆ ನಿರ್ದೇಶನ ನೀಡಿದೆ.

ಸರ್ವೇಶ್ ಮಾಥೂರ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ, ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ.

'ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ವಿಡಿಯೊ ಕಾನ್ಫರೆನ್ಸ್ ಮೂಲಕ ಅರ್ಜಿ ವಿಚಾರಣೆಗೆ ಅನುಮತಿ ನೀಡುತ್ತಿಲ್ಲ. ವಿಡಿಯೊ ಕಾನ್ಫರೆನ್ಸ್ ನಡೆಸಲು ಅನುಕೂಲವಾಗಲಿ ಎಂಬ ಉದ್ದೇಶದಿಂದಲೇ ಕೋವಿಡ್–19 ಪಿಡುಗಿನ ವೇಳೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗಿತ್ತು. ಈಗ ಈ ವ್ಯವಸ್ಥೆಯನ್ನು ಸಂಪೂರ್ಣ ಸ್ಥಗಿತಗೊಳಿಸಲಾಗಿದೆ' ಎಂದು ವಿಚಾರಣೆಗೆ ಖುದ್ದಾಗಿ ಹಾಜರಾಗಿದ್ದ ಮಾಥೂರ್ ಅವರು ನ್ಯಾಯಪೀಠಕ್ಕೆ ತಿಳಿಸಿದರು.

'ಈ ಮಾಹಿತಿಯನ್ನು ನಮ್ಮ ಗಮನಕ್ಕೆ ತಂದಿದ್ದಕ್ಕೆ ನಿಮಗೆ ಧನ್ಯವಾದಗಳು' ಎಂದು ಹೇಳಿದ ನ್ಯಾಯಪೀಠ, 'ಇಂಥ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕು ಎಂದು ಬಹು ದಿನಗಳಿಂದ ಯೋಚಿಸುತ್ತಿದ್ದ ನಮಗೆ, ಇದನ್ನು ಕಾರ್ಯಗತಗೊಳಿಸಲು ವೇದಿಕೆ ಒದಗಿಸಿಕೊಟ್ಟಿದ್ದೀರಿ' ಎಂದು ನ್ಯಾಯಪೀಠವು ಅರ್ಜಿದಾರ ಮಾಥೂರ್ ಅವರಿಗೆ ಹೇಳಿತು.

ಚಿತ್ರ: ತಾಜುದ್ದೀನ್ ಆಜಾದ್

ಹಬ್ಬಗಳ ಹೊಸಿಲಲ್ಲಿ ನಿಂತು...

ಎನ್ ಸಂಧ್ಯಾರಾಣಿ

ಹಬ್ಬವೆಂದರೆ ಸಂಭ್ರಮಗಳ ಮೂಟೆ. ಅದು ಕೇವಲ ಖರೀದಿ, ಉಣ್ಣು, ಉಡು– ತೊಡು ಇಷ್ಟಕ್ಕೆ ಸೀಮಿತವಲ್ಲ. ಬೇಯುವ, ಕುದಿಯುವ ಬದುಕಿನ ಪಾಕ ಶಾಲೆಯಲ್ಲಿ ಈ ಹಬ್ಬಗಳು ಮನಸ್ಸನ್ನು ಜತೆ ಜತೆಗೆ ಮುದವನ್ನು ಪೋಣಿಸುವ ಸಿಹಿ ಸಂಭ್ರಮದ ತೋರಣಗಳು.

‘ಅಮೆಜಾನ್ ಬಿಗ್ ಬಿಲಿಯನ್ ಸೇಲ್’ ಎನ್ನುವ ಮೇನಕೆ ಮೊಬೈಲ್ ಅಂಗಳಕ್ಕೆ ಬಂದು ನೃತ್ಯ ಪ್ರಾರಂಭಿಸುತ್ತಿದ್ದಂತೆಯೇ ‘ಫ್ಲಿಪ್‌ಕಾರ್ಟ್ ಸೇಲ್’ ಎನ್ನುವ ರಂಭೆಯೂ ಬಂದು ಗೆಜ್ಜೆ ಕುಣಿಸುತ್ತಾಳೆ. ‘ಮಿಂತ್ರಾ’ ಎನ್ನುವ ಮಾಯಾಂಗನೆಯಂತೂ ಈಗಾಗಲೇ ಅಂಗಡಿ ತೆರೆದು ಕುಳಿತಾಗಿದೆ. ಕುಡಿದ ನೀರಲ್ಲಾಡದಂತೆ ಕುಳಿತ ಕಡೆಯೇ ಬಟ್ಟೆ, ಬಂಗಾರ, ವಜ್ರ ಅಷ್ಟೇ ಏಕೆ ಪಟ್ಟಣ, ನಗರ ಪ್ರದೇಶಗಳಲ್ಲಿ ಹಣ್ಣು, ಹೂವು, ಬಾಳೆಎಲೆ, ವೀಳ್ಯದೆಲೆಗಳನ್ನೂ ಹೀಗೆ ತರಿಸಿಕೊಳ್ಳಬಹುದು. ನೋಡನೋಡುತ್ತಿದ್ದಂತೆ ಹಬ್ಬಗಳ ಪರಿಕಲ್ಪನೆಯಷ್ಟೇ ಅಲ್ಲ, ಹಬ್ಬದ ಖರೀದಿಯ ಪರಿಕಲ್ಪನೆಯೂ ಬದಲಾಗಿದೆ. ಸ್ಥೂಲವಾಗಿ ಹೇಳುವುದಾದರೆ, ನಾನು ಕಂಡಂತೆ ಈ ಬದಲಾವಣೆ ಮೂರು ಹಂತಗಳಲ್ಲಿ ಆಗಿದೆ.

ನಾನು ಚಿಕ್ಕವಳಿರುವಾಗ ಬೆಳೆದದ್ದೆಲ್ಲಾ ತಾಲೂಕು ಕೇಂದ್ರಗಳಲ್ಲೇ. ಹಬ್ಬ ಎಂದರೆ, ಸಗಣಿ ಹಾಕಿ ಸಾರಿಸುತ್ತಿದ್ದ ಅಂಗಳ, ಚುಕ್ಕೆಯಿಟ್ಟು ಬಿಡಿಸುತ್ತಿದ್ದ ರಂಗೋಲಿ, ಕೆಮ್ಮಣ್ಣಿನ ಅಂಚು, ನೀರಿನ ಬರವಿದ್ದ ಕೋಲಾರ ಸೀಮೆಯಲ್ಲಿ ನಡುರಾತ್ರಿಗೆದ್ದು ತುಂಬಿಸುತ್ತಿದ್ದ ಬಿಂದಿಗೆಗಟ್ಟಲೆ ನೀರು, ಸಂಜೆಯಾಯಿತೆಂದರೆ ಅಲಂಕರಿಸಿಕೊಂಡು ದೇವಸ್ಥಾನಗಳಿಗೆ ಹೋಗುತ್ತಿದ್ದ ಸಂಭ್ರಮ... ಇದೆಲ್ಲಾ ಹಬ್ಬದ ದಿನವಾದರೆ, ಅದರ ತಯಾರಿ ದಿನಗಳ ಮೊದಲೇ ಶುರುವಾಗುತ್ತಿತ್ತು.

ಆಗೆಲ್ಲಾ ವರ್ಷಕ್ಕೆ ಒಂದು ಬಾರಿ ಯಾವುದೋ ಹಬ್ಬಕ್ಕೆ ಹೊಸಬಟ್ಟೆ ಅಷ್ಟೇ. ಮನೆಯಲ್ಲಿ ಇಬ್ಬರು ಮೂವರು ಹೆಣ್ಣುಮಕ್ಕಳಿದ್ದರೆ ಬಟ್ಟೆ ಅಂಗಡಿಗೆ ಹೋಗಿ, ಒಂದೇ ಥಾನಿನಲ್ಲಿ ಬಟ್ಟೆ ಹರಿಸಿ, ಟೈಲರ್ ಅಂಗಡಿಯಲ್ಲಿ ಕೊಟ್ಟು ಆಮೇಲೆ ಅವನ ಅಂಗಡಿಗೆ ಪ್ರತಿದಿನ ಓಡಾಟ! ಜೊತೆಗೆ ಗಾಜಿನ ಬಳೆ, ಹೂ, ಬಿಂದಿ ಹೀಗೆ..

ಆಮೇಲಾಮೇಲೆ ಹೊಸಹೊಸ ಹಬ್ಬಗಳು ಶುರುವಾದವು. ಅಕ್ಷಯ ತೃತೀಯಾಗೆ ಬಂಗಾರ ಖರೀದಿಸುವುದು, ವರಮಹಾಲಕ್ಷ್ಮಿಗೆ ಕಂಚಿಸೀರೆ, ನರಕ ಚತುರ್ದಶಿಗೆ ಲಕ್ಷ್ಮಿಪೂಜೆ, ಬಂಗಾರ ಖರೀದಿ ಹೀಗೆ. ಬಹುಶಃ ಜನಗಳ ಹತ್ತಿರ ಹಣ ಹೆಚ್ಚಾದ ಹಾಗೆ ಅವನ್ನು ಖರ್ಚು ಮಾಡಿಸುವ ಹೊಸಹೊಸ ವಿಧಾನಗಳೂ ಆವಿಷ್ಕಾರಗೊಂಡವೋ ಏನೋ. ಹೊಸಬಟ್ಟೆ, ಬಂಗಾರ ಎಂದರೆ ಹೆಂಗಸರಿಗೆ ಮೋಹ ಎನ್ನುವ ಜೋಕುಗಳು ಕಾಸಿಗೊಂದು, ಕೊಸರಿಗೆರಡು ಎನ್ನುವಂತೆ ಎದುರಾಗುತ್ತವೆ. ಮೊದಲೆಲ್ಲಾ ನಕ್ಕು ಬಿಡುತ್ತಿದ್ದ ನಾನು ಈಗ ಯೋಚಿಸುತ್ತೇನೆ. ಹಾಗೆ ನಗುವಂಥಾದ್ದೇನಿದೆ ಅದರಲ್ಲಿ? ಗಂಡಸರಿಬ್ಬರೂ ಬೈಕ್ ಗಳ ಬಗ್ಗೆ, ಕಾರುಗಳ ಬಗ್ಗೆ ಮಾತನಾಡುವುದು ಮಾತ್ರ ಅದು ಹೇಗೆ ಒಂದು ಗಂಭೀರ ವಿಷಯವಾಗಿಬಿಡುತ್ತದೆ? ಕಾಲದಿಂದಲೂ ಮನೆ, ಜಮೀನು, ಸೈಟು ಎಲ್ಲವೂ ಗಂಡಸರ ಹೆಸರಿನಲ್ಲೇ. ಒಂದೋ ಅಪ್ಪನ ಮನೆ, ಇಲ್ಲವೇ ಗಂಡನ ಮನೆ. ಹಾಗಿರುವಾಗ ತನ್ನದು ಮತ್ತು ಸಂಪೂರ್ಣ ತನ್ನದು ಎಂದುಕೊಳ್ಳುವ ಸೀರೆ, ಒಡವೆಗಳು ಅವಳಿಗೆ ಅಮೂಲ್ಯ ಅನ್ನಿಸಿದರೆ ತಪ್ಪೇನು?

ಒಮ್ಮೆ ಸ್ನೇಹಿತನೊಬ್ಬ, ‘ಅವರು ಹೊರಗೆ ಹೋಗಲಿಕ್ಕೆ ಇದೊಂದು ನೆಪ ಅಂತ ಯಾಕೆ ನೋಡೋಲ್ಲ?’ ಎಂದು ಹೇಳಿ ನನ್ನ ಕಣ್ಣು ತೆರೆಸಿದ್ದ. ನನ್ನ ಸ್ನೇಹಿತೆಯೊಬ್ಬಳು ಮೊಟ್ಟಮೊದಲಿಗೆ ವಜ್ರದೋಲೆ ತೆಗೆದುಕೊಂಡ ದಿನ, ‘ನಮ್ಮೂರಿನಲ್ಲಿ ಒಬ್ಬರು ನನ್ನನ್ನು ‘ಹಾಲು ಹಾಕುವ ಹುಡುಗಿ’ ಅಂತಲೇ ಕರೀತಿದ್ದರು. ಈಗ ಒಮ್ಮೆ ಅವರೆದುರಿಗೆ ಹೋಗಬೇಕು’ ಎಂದಿದ್ದಳು. ವಜ್ರ ಅವಳ ಪಾಲಿಗೆ ಒಡವೆಗಿಂತ ಹೆಚ್ಚಾಗಿ ಯಾವುದೋ ಹಳೆಯ ಅವಮಾನದ ಮದ್ದಾಗಿತ್ತು.

ಲಹರಿ

ಕೆಲವರಿಗೆ ಅದು ಒಳ್ಳೆ ಬಟ್ಟೆಯ ರೂಪದಲ್ಲಿದ್ದರೆ, ಕೆಲವರಿಗೆ ಅದು ಬಂಗಾರ ಅಥವಾ ಡ್ರೈವಿಂಗ್ ಲೈಸೆನ್ಸ್ ಅಥವಾ ಸ್ಕೂಟಿಯ ರೂಪದಲ್ಲಿ... ಹೇಗಾದರೂ ಇರಬಹುದು. ಜಾಗತೀಕರಣದ ನಂತರ, ಕೈಗಳಲ್ಲಿ ಸ್ವಲ್ಪ ಹಣ ಓಡಾಡುವಂತಾದಾಗ ಹಬ್ಬಗಳಲ್ಲಿ ಹೀಗೆ ಬಟ್ಟೆ, ಬಂಗಾರ ಬಾಚಿದ್ದು ಸಹ ಹೌದು. ಅಲ್ಲದೆ ಆಗ ಬಂಗಾರ ಆಪದ್ಧನವಾಗಿ ಮಕ್ಕಳ ಮದುವೆ, ಕಾಲೇಜು ಫೀಸಿಗೆ ಒದಗಿಬಂದದ್ದೂ ಹೌದು.

ಆದರೆ ಆ ಕಾಲವೂ ಬದಲಾಯಿತು. ಕೊಳ್ಳಲು ಹಬ್ಬಗಳ ಮರ್ಜಿ ಕಾಯಬೇಕಿಲ್ಲ ಎನ್ನುವುದನ್ನು ಶಾಪಿಂಗ್ ಮಾಲ್, ಅಂಗಡಿಗಳಿಗಿಂತಾ ಹೆಚ್ಚಾಗಿ ಇ-ಮಾರಾಟದ ಜಾಲತಾಣಗಳು ಕಲಿಸಿದವು. ಬೇಸರವಾದಾಗ ಸುಮ್ಮನೆ ಅಂಗಡಿ ಬೀದಿಯಲ್ಲಿ ಅಡ್ಡಾಡುತ್ತಿದ್ದ ಹಾಗೆ ಇಲ್ಲಿ ಜಗತ್ತಿನ ಅಂಗಡಿಗಳ ಬೀದಿಯಲ್ಲಿ ಅಡ್ಡಾಡಬಹುದಿತ್ತು, ಬೇಕನ್ನಿಸಿದ್ದು ನೋಡಬಹುದಿತ್ತು, ಇನ್ನೊಂದು ಕಡೆ ಇದೇ ವಸ್ತುವಿಗೆ ಎಷ್ಟು ಬೆಲೆ ಎಂದು ಪರಿಶೀಲಿಸಬಹುದಿತ್ತು. ಒಂದುಕಡೆ ಬುಟ್ಟಿಯಲ್ಲಿ ಕೂಡಿಟ್ಟು, ಯೋಚಿಸಿ ಕೊಳ್ಳಬಹುದಿತ್ತು. ಕೊಂಡಮೇಲೆ ಇಷ್ಟವಾಗದಿದ್ದರೆ ವಾಪಸ್ಸು ಸಹ ಮಾಡಬಹುದಿತ್ತು. ಕೊಂಡ ವಸ್ತುಗಳಿಗೆ ಕಂತಿನಲ್ಲಿ ಹಣ ಪಾವತಿಸುವ ಸೌಲಭ್ಯ ಬೇರೆ! ವರ್ಷವಿಡೀ ಹಬ್ಬವೇ.

ಆದರೆ ಇದರಿಂದ ಹಬ್ಬದ ಸಂಭ್ರಮ ಸ್ವಲ್ಪ ಮಸುಕಾಗಿದ್ದಂತೂ ಹೌದು. ಒಂದು ಜೊತೆ ಹೊಸ ಬಟ್ಟೆ ನಮಗೆ ಕೊಡುತ್ತಿದ್ದಂತಹ ಸಂತಸ ಮತ್ತು ಸಂಭ್ರಮವನ್ನು ನಮ್ಮ ಮಕ್ಕಳಿಗೆ ಕೊಡುತ್ತಿಲ್ಲ. ಬಹುಶಃ ಅವರ ಸಂತಸದ ವ್ಯಾಖ್ಯಾನ ಸಹ ಬದಲಾಗಿರಬೇಕು. ಇಲ್ಲಿ ಹಳೆಯಕಾಲ ಚೆನ್ನಾಗಿತ್ತು, ಈಗ ಸರಿಯಿಲ್ಲ ಎನ್ನುವುದು ನನ್ನ ಉದ್ದೇಶವಲ್ಲ. ಏಕೆಂದರೆ ಪ್ರತಿ ಆಚರಣೆಯೂ ಆಯಾ ಕಾಲದ ಹಲವಾರು ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ಪಕ್ಕದ ಮನೆಯಲ್ಲಿದ್ದ ನವವಿವಾಹಿತೆಯೊಬ್ಬಳು ಒಂದುಸಲ ಯುಗಾದಿಯ ಮುಂಜಾನೆ ದಾರಕ್ಕೆ ಮಾವಿನ ಎಲೆ ಪೋಣಿಸುತ್ತಾ, ಸ್ಟೇಪ್ಲರ್‌ನಿಂದ ಪಿನ್ ಮಾಡುತ್ತಿದ್ದಳು. ನಗುಬಂದು, ‘ನಾವು ಅದನ್ನು ಪೊರಕೆ ಕಡ್ಡಿ ಸೀಳಿ....’ ಎಂದೇನೋ ಹೇಳಲುಹೋಗಿ ನಿಲ್ಲಿಸಿದೆ. ಕಡ್ಡಿಗಳನ್ನೆಲ್ಲಾ ಒಟ್ಟಿಗೆ ಸೇರಿಸಿ, ಮೇಲೆ ಪ್ಲಾಸ್ಟಿಕ್ ಟೋಪಿ ಹಾಕಿದ ಪೊರಕೆ ಬಂದಾಗಿದೆ, ಈಗ ಕಡ್ಡಿಗಾಗಿ ಪೊರಕೆ ಬದಲಾಯಿಸು ಎನ್ನಬೇಕೆ? ಅದಕ್ಕಿಂತಾ ಹೆಚ್ಚಾಗಿ ನನ್ನನ್ನು ಯೋಚನೆಗೆ ಹಚ್ಚಿದ್ದು ಗೆಳತಿಯ ಮಗಳು ಹೇಳಿದ ವಿಷಯ. ಅವಳು ಓದಿಕೊಂಡ ಹುಡುಗಿ, ಒಳ್ಳೆಯ ಕೆಲಸದಲ್ಲಿದ್ದು ಕೈ ತುಂಬಾ ಸಂಪಾದಿಸುತ್ತಾಳೆ. ‘ಕೈಯ್ಯಲ್ಲಿ ನಡಿಯುವಾಗ ಒಂದಿಷ್ಟು ಒಡವೆವಸ್ತ್ರ ಮಾಡಿಕೋ’ ಎಂದು ಅವಳ ಅಮ್ಮ ಬುದ್ಧಿ ಹೇಳುತ್ತಿದ್ದಳು. ‘ಯಾಕೆ, ಅದನ್ನೂ ಲಾಕರ್ ನಲ್ಲಿ ಇಡೋದು ತಾನೆ, ನನಗಂತೂ ಗೋಲ್ಡ್ ಎಂದರೆ ಇನ್ವೆಸ್ಟ್‌ಮೆಂಟ್, ನನ್ನ ಪೋರ್ಟ್ ಫೋಲಿಯೋದಲ್ಲಿ ಬಂಗಾರ ಸಹ ಇದೆ. ಟೆನ್ಶನ್ ಮಾಡಿಕೊಳ್ಳಬೇಡ’ ಎಂದು ಹುಡುಗಿ ಹೇಳುತ್ತಿದ್ದಳು. ಅವಳ ಸೆಕ್ಯುರಿಟಿಯ ಪರಿಕಲ್ಪನೆಯೂ ಬದಲಾಗಿತ್ತು. ಅವಳದು ಎಂದು ಹೇಳಿಕೊಳ್ಳಲು, ಅವಳು ದುಡಿದುದನ್ನು ಅವಳದಾಗಿಯೇ ಉಳಿಸಿಕೊಳ್ಳುವುದನ್ನು ಅವಳು ಕಲಿತಿದ್ದಳು. ಬದಲಾದ ಪರಿಸ್ಥಿತಿ ಅದಕ್ಕೆ ಪೂರಕವಾಗಿತ್ತು.

ಮೇಲೆ ಹೇಳಿದ್ದು ಒಂದು ಉದಾಹರಣೆ ಮಾತ್ರ. ಕಡೆಗೂ ಹಬ್ಬ ಎಂದರೆ ಮನೆಯ ಗೃಹಿಣಿ ಒಲೆ ಮುಂದೆ ಬೇಯುತ್ತಿರುವಾಗ, ಮನೆಯ ಎಲ್ಲರೂ ಆಚರಣೆ ಮಾಡುವ ಸಂಭ್ರಮ ಆಗಬಾರದು, ಹಬ್ಬ ಎಂದರೆ ಶಾಪಿಂಗ್ ಮಾತ್ರವಲ್ಲ. ದೀಪ ಹಚ್ಚಬಹುದು, ಹೂವು ಜೋಡಿಸಬಹುದು, ಹೊಸ ಸೀರೆ ಉಡಬಹುದು, ಹೋಳಿಗೆಯನ್ನು ಹೊರಗಿಂದ ತರಲೂಬಹುದು. ಹಬ್ಬವೆಂದರೆ ಸಂಭ್ರಮ, ಮನೆಯ ಎಲ್ಲರಿಗೂ ಸಹ.

ಗೌರಿ–ಗಣೇಶ ಹಬ್ಬಕ್ಕೆ ಸಿರಿಧಾನ್ಯದ ಸ್ಪೆಷಲ್

ಗೌರಿ ಗಣೇಶ ಹಬ್ಬದ ಸಂಭ್ರಮದ ಹೊಸ್ತಿಲಲ್ಲಿದ್ದೇವೆ. ಗಣಪನಿಗೆ ಪ್ರಿಯವಾದ ಮೋದಕ, ಚಕ್ಕುಲಿ, ಕರಿಗಡುಬು ತಯಾರಿಸಲು ಉತ್ಸುಕರಾಗಿದ್ದೇವೆ. ಸಿರಿಧಾನ್ಯಗಳನ್ನು ಬಳಸಿಯೂ ಈ ಖಾದ್ಯಗಳನ್ನು ತಯಾರಿಸಬಹುದು. ಅಂಥ ಕೆಲವು ರೆಸಿಪಿಗಳನ್ನು ಮಂಗಳಾ ಪ್ರಕಾಶ್ ಅವರು ಇಲ್ಲಿ ಪರಿಚಯಿಸಿದ್ದಾರೆ

ನಳಪಾಕ

ಸಿರಿಧಾನ್ಯದ ಚಕ್ಕುಲಿ

ಬೇಕಾಗುವ ಸಾಮಗ್ರಿಗಳು: ಒಂದು ಕಪ್ ಸಾಮೆ, ಒಂದು ಕಪ್ ಊದಲು, ಒಂದು ಕಪ್ ನವಣೆ, ಒಂದು ಕಪ್ ಅರ್ಕ, ಬೆಣ್ಣೆ, ಎಳ್ಳು, ಒಂದು ಕಪ್ ಕಡಲೆಕಾಳು, ಜೀರಿಗೆ, ಒಂದು ಕಪ್ ಉದ್ದಿನಕಾಳು, ಉಪ್ಪು, ಕರಿಯಲು ತೆಂಗಿನ ಎಣ್ಣೆ (ನಿಮಗೆ ಅಭ್ಯಾಸವಿರುವ ಅಡುಗೆ ಎಣ್ಣೆ ಬಳಸಬಹುದು).

ಮಾಡುವ ವಿಧಾನ: ಸಾಮೆ, ಊದಲು, ನವಣೆ, ಅರ್ಕ ಅನ್ನು ಮಿಲ್ ಮಾಡಿಸಿ, ಜರಡಿ ಹಿಡಿದುಕೊಳ್ಳಿ. ಕಡಲೆಕಾಳು, ಉದ್ದಿನಕಾಳು ಸಣ್ಣ ಉರಿಯಲ್ಲಿ ಹುರಿದು, ಪುಡಿ ಮಾಡಿ ಇದಕ್ಕೆ ಸೇರಿಸಿ. ಒಂದು ಕಪ್ ಕುದಿಯುವ ನೀರಿಗೆ ಹಿಟ್ಟು ಹಾಕಿ, ಬೆಣ್ಣೆ, ಜೀರಿಗೆ, ಎಳ್ಳು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ನಾದಿಕೊಳ್ಳಿ. ಬೇಕಾದರೆ ತಣ್ಣಗಿರುವ ನೀರು ಸೇರಿಸಿ, ನಾದಿಕೊಳ್ಳಬಹುದು. ಐದು ನಿಮಿಷ ಬಿಟ್ಟು ಕೊಬ್ಬರಿ ಎಣ್ಣೆ ಕಾಯಲು ಬಿಡಿ. ನಂತರ ಹಿಟ್ಟನ್ನು ಚಕ್ಕಲಿ ಅಚ್ಚಿಗೆ ಹಾಕಿ, ಒತ್ತಿ. ನಂತರ ಎಣ್ಣೆಯಲ್ಲಿ ಕಾಯಿಸಿ.

ನವಣೆ ಅಕ್ಕಿಯ ಕರಿಗಡುಬು

ಬೇಕಾಗುವ ಸಾಮಗ್ರಿಗಳು: ಒಂದು ಕಪ್ ನವಣೆ ಹಿಟ್ಟು, ಹಸಿ ತೆಂಗಿನ ತುರಿ ಒಂದು ಕಪ್, ಬೆಲ್ಲ 3/4 ಕಪ್, ಹುರಿಗಡಲೆ ಹಿಟ್ಟು ಒಂದು ಚಮಚ, ಏಲಕ್ಕಿ ಮೂರರಿಂದ ನಾಲ್ಕು, ಎಳ್ಳು ಒಂದು ಚಮಚ, ಗಸೆಗಸೆ ಅರ್ಧ ಚಮಚ, ಅರ್ಧ ಚಮಚ ತುಪ್ಪ.

ಮಾಡುವ ವಿಧಾನ: ಮೊದಲು ಒಂದು ಕಪ್ ನವಣೆ ಹಿಟ್ಟಿಗೆ ನೀರು ಬೆರೆಸಿ, ಎರಡು ಚಿಟಿಕೆ ಉಪ್ಪು ಬೆರೆಸಿ, ದೋಸೆ ಹಿಟ್ಟಿನಂತೆ ಕಲೆಸಿಕೊಳ್ಳಿ. ನಂತರ ಇಡ್ಲಿ ಪಾತ್ರೆಯಲ್ಲಿ 15 ರಿಂದ 20 ನಿಮಿಷ ಚೆನ್ನಾಗಿ ಬೇಯಿಸಿ, ತಣ್ಣಗಾಗಲು ಬಿಡಿ. ಬಾಣಲೆಯಲ್ಲಿ ತೆಂಗಿನತುರಿ, ಸೋಸಿಕೊಂಡಿರುವ ಬೆಲ್ಲ, ಎಳ್ಳು ಒಂದು ಚಮಚ, ಗಸೆ ಗಸೆ ಬೆರೆಸಿ. ಸಣ್ಣ ಉರಿಯಲ್ಲಿ ಐದು ನಿಮಿಷ ಹುರಿಯಿರಿ. ಹುರಿಗಡಲೆಹಿಟ್ಟು ಹಾಗೂ ಏಲಕ್ಕಿ ಪುಡಿಯನ್ನು ಹಾಕಿ ತಣ್ಣಗಾಗಲು ಬಿಡಿ. ಬೇಯಿಸಿದ ಹಿಟ್ಟನ್ನು ಪಾತ್ರೆಯಲ್ಲಿ ಹಾಕಿ ಉಂಡೆ ಮಾಡಿಕೊಳ್ಳಿ. ಚಿಕ್ಕ ಚಿಕ್ಕ ಉಂಡೆಗಳಂತೆ ಮಾಡಿ, ಪೂರಿಯಂತೆ ಲಟ್ಟಿಸಿ. ಲಟ್ಟಿಸಿದ ಪೂರಿಯ ಮಧ್ಯೆ ಈ ಹೂರಣವನ್ನು ತುಂಬಿ. ಕರಿಗಡುಬು ಆಕಾರಕ್ಕೆ ಕತ್ತರಿಸಿ. ಮೊದಲೇ ಚೆನ್ನಾಗಿ ಬೇಯಿಸಿ ಇಟ್ಟುಕೊಳ್ಳಬೇಕು. ಅದು ಒಡೆಯುವುದಿಲ್ಲ. ಬೇಯಿಸುವ ಕೆಲಸವೂ ಇರುವುದಿಲ್ಲ.

ನವಣೆ ಮೋದಕ

ಬೇಕಾಗುವ ಸಾಮಗ್ರಿಗಳು: ನವಣೆ ಅಕ್ಕಿ ಒಂದು ಕಪ್, ಗೋಧಿ ಒಂದು ಕಪ್, ತೆಂಗಿನ ತುರಿ ಒಂದು ಕಪ್, ಅರ್ಧ ಕಪ್ ಬೆಲ್ಲ, ಏಲಕ್ಕಿ ಪುಡಿ ಸ್ವಲ್ಪ, ಚಿಟಿಕೆ ಉಪ್ಪು, ಅರ್ಧ ಚಮಚ ಗಸೆಸಸೆ, ಒಂದು ಚಮಚ ತುಪ್ಪ , ಕರಿಯಲು ತೆಂಗಿನ ಎಣ್ಣೆ (ನಿಮಗೆ ಅಭ್ಯಾಸವಿರುವ ಅಡುಗೆ ಎಣ್ಣೆ ಬಳಸಬಹುದು)

ಮಾಡುವ ವಿಧಾನ: ಹಿಟ್ಟನ್ನು ಜರಡಿ ಹಿಡಿದು, ನೀರು ಬೆರೆಸಿ ಚಿಟಿಕೆ ಉಪ್ಪು ಸೇರಿಸಿ, ಅರ್ಧ ಚಮಚ ಕೊಬ್ಬರಿ ಎಣ್ಣೆ ಸೇರಿಸಿ, ಚೆನ್ನಾಗಿ ಚಪಾತಿ ಹಿಟ್ಟಿನ ಹದಕ್ಕೆ ತನ್ನಿ. ಐದು ನಿಮಿಷ ಹಾಗೆ ಬಿಡಿ. ಬಾಣಲೆಯಲ್ಲಿ ತೆಂಗಿನ ತುರಿ, ಬೆಲ್ಲ, ಏಲಕ್ಕಿ ಪುಡಿ, ತುಪ್ಪ, ಗಸೆ ಗಸೆ ಸೇರಿಸಿ ಐದು ನಿಮಿಷ ಕಾಯಿಸಿ. ನಂತರ ತಣ್ಣಗಾಗಲು ಬಿಡಿ. ಹಿಟ್ಟನ್ನು ಚಿಕ್ಕ ಚಿಕ್ಕ ಉಂಡೆ ಮಾಡಿ, ಪೂರಿಯಂತೆ ಲಟ್ಟಿಸಿ, ಮೋದಕ ಆಕಾರಕ್ಕೆ ತಂದು ಅದಕ್ಕೆ ಹೂರಣ ಸೇರಿಸಿ. ಅದನ್ನು ತೆಂಗಿನ ಎಣ್ಣೆಯಲ್ಲಿ ಕಾಯಿಸಿ.

ಸಾಂದರ್ಭಿಕ ಚಿತ್ರಗಳು

ದಾರದಿಂದ ಹೆಣೆದ ಅಚ್ಚರಿಯ ಆಭರಣಗಳು

ಜಾನಕಿ ಎಸ್.

ಫ್ಯಾಷನ್

ತಾಯಂದಿರು ತಮ್ಮ ಹೆಣ್ಣು ಮಕ್ಕಳ ಉಡುಗೆ ತೊಡುಗೆ ಬಗ್ಗೆ ಎಷ್ಟೆಲ್ಲ ಕಾಳಜಿ ವಹಿಸುತ್ತಾರೆ. ಮುದ್ದಾದ ಮಗಳ ಅಲಂಕಾರಕ್ಕೆ ಏನೆಲ್ಲಾ ಹುಡುಕಿ ತರುತ್ತಾರೆ. ಬಳಕೆಯಲ್ಲಿ ಆರಾಮ ಎನಿಸುವ, ಅಂದ ಹೆಚ್ಚಿಸುವ ಫ್ಯಾಬ್ರಿಕ್ ಆಭರಣಗಳು ಕೈಗೆಟುಕುವ ದರದಲ್ಲಿ ಸಿಕ್ಕರೆ ಯಾರಿಗೆ ತಾನೆ ಇಷ್ಟವಾಗುವುದಿಲ್ಲ? ಈಗಂತೂ ಮಿಕ್ಸ್ ಆ್ಯಂಡ್ ಮ್ಯಾಚ್‌ನ ಕಾಲ. ಈ ಟ್ರೆಂಡ್‌ಗೂ ಸೂಕ್ತವೆನಿಸುತ್ತದೆ ಹಲವು ಆಭರಣಗಳು. ಧರಿಸಿದ ಉಡುಪುಗಳಿಗೆ ಗ್ರ್ಯಾಂಡ್ ಲುಕ್ ನೀಡುವ ಫ್ಯಾಬ್ರಿಕ್ ಆಭರಣಗಳು ಹಾಕಿಕೊಳ್ಳಲು ಹಗುರವಾಗಿರುತ್ತವೆ. ಸಣ್ಣ ಮಕ್ಕಳಿಂದ ದೊಡ್ಡವರ ತನಕ ಎಲ್ಲರಿಗೂ ಒಪ್ಪುವ ಈ ಆಭರಣಗಳ ನಿರ್ವಹಣೆಯೂ ಬಲು ಸುಲಭ.

ಲಾಕೆಟ್: ಹಲವು ಬಗೆ ಲಾಕೆಟ್ ಇಟ್ಟುಕೊಂಡರೆ ಒಂದು ಬೆಳ್ಳಿ ಚೈನ್ ಜೊತೆ ಸೇರಿಸಿ ಹಾಕಿಕೊಳ್ಳಬಹುದು. ಬುದ್ಧನ ಮುಖದ ಪ್ರಿಂಟ್ ಇರುವ ಬಟ್ಟೆಯಿಂದ ಮಾಡಿದ ಪದಕ, ಕಲಂಕಾರಿ ಪ್ರಿಂಟ್ ಇರುವ ಪದಕ, ಇಳಕಲ್ ಬಾರ್ಡರ್ ಪೆಂಡೆಂಟ್, ಹೀಗೆ ದೊಡ್ಡ ಪೆಂಡೆಂಟ್, ಚಿಕ್ಕ ಪೆಂಡೆಂಟ್‌ಗಳನ್ನು ಸಂದರ್ಭಕ್ಕೆ ಸರಿಯಾಗಿ ಧರಿಸುವ ದಿರಿಸಿಗೆ ಹೊಂದಿಕೊಳ್ಳುವಂತೆಯೂ ಹಾಕಿಕೊಳ್ಳಬಹುದು. ಇದು ಅಂದವನ್ನು ಇಮ್ಮಡಿಗೊಳಿಸುತ್ತದೆ.

ಲೇಯರ್ಡ್ ಹಾರ: ಮೂರು ನಾಲ್ಕು ಎಳೆಗಳನ್ನು ಪ್ರಿಂಟ್ ಬಟ್ಟೆಯಿಂದ ಮಾಡಿರುವುದರಿಂದ ಆಧುನಿಕ ಬಟ್ಟೆ ಮೇಲೆ ಹಾಕಿದರೂ ಸ್ಟೈಲಿಷ್ ಆಗಿ ಕಾಣುತ್ತದೆ. ಬೇರೆ ರೀತಿಯಲ್ಲೂ ಹಾಕಿ ಕುತ್ತಿಗೆಯಿಂದ ಸ್ವಲ್ಪ ಕೆಳಗೆ ಭುಜದವರೆಗೆ ಧರಿಸಿ ಪಿನ್ ಮಾಡಿದರೂ ಅಂದವಾಗಿ ಕಾಣುತ್ತದೆ.

ಚೋಕರ್: ಲಾಂಗ್ ಚೋಕರ್, ಬಟ್ಟೆಯ ಬೀಡ್ಸ್‌ಹಾರ, ಕುಂದನ್, ಮುತ್ತುಗಳಿಂದ ನೇಯ್ದ ಹಾರಗಳು ಆಧುನಿಕ ಡ್ರೆಸ್‌ನಿಂದ ಸೀರೆಯವರೆಗೂ ಪರ್ಫೆಕ್ಟ್ ಆಗಿ ಹೊಂದಿಕೆಯಾಗುತ್ತದೆ.

ರೇಷ್ಮೆ ಬಟ್ಟೆ, ಮುತ್ತಿನ ಗೊಂಚಲು, ಸಣ್ಣ ಹರಳು ಜೋಡಿಸಿದ ಕಿವಿ ಓಲೆ ಧರಿಸಿದ ಹೆಣ್ಣುಮಕ್ಕಳು ಇನ್ನಷ್ಟು ಮಿಂಚುತ್ತಾರೆ. ಕರಕುಶಲ ಕಲೆ ಬಲ್ಲವರು ಇವುಗಳನ್ನು ಮನೆಯಲ್ಲಿಯೂ ತಯಾರಿಸಬಹುದು. ಸಣ್ಣ ಮಟ್ಟದ ಆದಾಯವನ್ನೂ ಗಳಿಸಬಹುದು.

ಕ್ಯಾನ್ವಸ್, ರಟ್ಟು, ಹತ್ತಿ , ಒಳ್ಳೆ ಬಟ್ಟೆ ಅಂಟು, ದಾರಗಳಿಂದ ತಮಗೆ ಇಷ್ಟಬಂದ ಹಾಗೆ ಈ ಆಭರಣಗಳನ್ನು ತಯಾರಿಸಬಹುದು. ಆನ್‌ಲೈನ್ ಖರೀದಿಗೂ ಲಭ್ಯವಿದೆ.

ಈ ಆಭರಣ ಹಿಂದೆ ಕೇವಲ ಬಂಗಾರದ ಬೊಳುಗುಂಡು, ರೇಷ್ಮೆ ದಾರದ ಮಣಿಗಳ ಮಧ್ಯೆ ಪೋಣಿಸಿ ಹಾಕಿಕೊಳ್ಳಲಾಗುತ್ತಿತ್ತು. ಇದು ಉತ್ತರ ಕರ್ನಾಟಕ, ಮಹಾರಾಷ್ಟ್ರ ಕಡೆಗಳಲ್ಲಿ ಬಳಕೆಯಲ್ಲಿ ಇತ್ತು.

ಈಗ ಅದರ ಸುಧಾರಿತ ರೂಪ ಮತ್ತಷ್ಟು ಜನಪ್ರಿಯವಾಗಿದೆ. ಬಣ್ಣದ ನೂಲು, ಪ್ರಿಂಟ್ ಬಟ್ಟೆ ಬಳಸಿ ಟ್ರೆಂಡ್‌ಗೆ ತಕ್ಕಂತೆ ಹೊಸ ರೂಪ ಪಡೆದುಕೊಂಡಿದೆ



ಕೀಳರಿಮೆಯಿಂದ ಹೊರಬರುವುದು ಹೇಗೆ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

14 ವರ್ಷದ ಬಾಲಕ. ಎನ್‌ಸಿಸಿ ಜೂನಿಯರ್ ಡಿವಿಷನ್‌ನಲ್ಲಿ ತರಬೇತಿ ಪಡೆಯುತ್ತಿದ್ದೇನೆ. ಆದರೆ, ಕಮಾಂಡ್ ಕೊಡುವಾಗ ನನಗೆ ಜೋರಾಗಿ ಕಿರುಚಲು ಸಾಧ್ಯವಾಗುತ್ತಿಲ್ಲ. ಧ್ವನಿ ವೃದ್ಧಿಸಿಕೊಳ್ಳುವುದು ಹೇಗೆ? ನಾನು ನಿತ್ಯ ದೈಹಿಕ ತರಬೇತಿ ಮಾಡುತ್ತಿದ್ದೇನೆ. ವಿದ್ಯಾಭ್ಯಾಸದಲ್ಲಿ ಉತ್ತಮ ಅಂಕ ಪಡೆಯಲು ಏನಾದರೂ ಸಲಹೆ ನೀಡಿ. ಕೋಪ ಬಂದಾಗ ಅದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸೂಚನೆ ನೀಡಿ. ಓದಿದ್ದನ್ನು ಹೆಚ್ಚು ಕಾಲ ನೆನಪಿಡಲು ಸಲಹೆ ನೀಡಿ.

ಹೆಸರು ಊರು ತಿಳಿಸಿಲ್ಲ.

ಮಗೂ ನಿನ್ನನ್ನು ನೀನೇ ಸುಧಾರಿಸಿಕೊಳ್ಳಬೇಕೆನ್ನುವ ಆಸಕ್ತಿ ನನಗೆ ಹಿಡಿಸಿತು. ಆದರೆ ನಿನ್ನ ಬೇಡಿಕೆಯ ಪಟ್ಟಿ ಬಹಳ ಉದ್ದವಾಗಿದೆ! ಪತ್ರದ ಧಾಟಿಯನ್ನು ನೋಡಿದರೆ ನೀನು ಇರುವ ರೀತಿಯ ಕುರಿತು ನಿನಗೆ ಬಹಳ ಅಸಮಾಧಾನವಿರುವಂತಿದೆ. ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಯೂ ಭಿನ್ನವೇ. ಹಾಗಾಗಿ ನಿನ್ನ ಬಗೆಗೆ ಇರುವ ಕೀಳರಿಮೆಯಿಂದ ಹೊರಬರಬೇಕಲ್ಲವೇ? ಮೊದಲು ನಿನ್ನ ಆಸಕ್ತಿಗಳೇನು ಎಂದು ಗುರುತಿಸಿಕೊ. ಹೀಗೆ ಗುರುತಿಸಲು ಸಮಯದ ಅಗತ್ಯವಿದೆ. ಅಲ್ಲಿಯವರೆಗೆ ಹೊಸದರ ಹುಡುಕಾಟ ಮುಂದುವರಿಸುತ್ತಲೇ ಇರು. ಒಮ್ಮೆ ನಿನ್ನ ಮನಸ್ಸನ್ನು ಸಂಪೂರ್ಣ ತೊಡಗಿಸಲು ಸಾಧ್ಯವಾಗುವ ಕ್ಷೇತ್ರವನ್ನು ಗುರುತಿಸಿಕೊಂಡರೆ ಆದರಲ್ಲಿ ಮಾತ್ರ ಹೆಚ್ಚಿನ ಶ್ರಮ ಹಾಕುವುದು ಸಾಧ್ಯವಾಗುತ್ತದೆ.

ಎಲ್ಲರ ಧ್ವನಿ ವಿಶಿಷ್ಟವಾಗಿರುತ್ತದೆ. ನಿನ್ನ ಧ್ವನಿಯನ್ನು ಬೇರೆಯವರ ಧ್ವನಿಗೆ ಹೋಲಿಸಿ ಹಿಂಜರಿಕೆಯನ್ನು ಅನುಭವಿಸಬೇಕಾಗಿಲ್ಲ. ಧ್ವನಿಯನ್ನು ವೃದ್ಧಿಸಿಕೊಳ್ಳಲು ಸತತ ಅಭ್ಯಾಸದ ಅಗತ್ಯವಾಗಿರುತ್ತದೆ. ಪ್ರತಿದಿನ ಸ್ವಲ್ಪ ಸ್ವಲ್ಪ ಧ್ವನಿ ಎತ್ತರಿಸಿ ಕಮಾಂಡ್ ನೀಡಲು ಪ್ರಯತ್ನಿಸುತ್ತಿರು. ಉಸಿರನ್ನು ಒಳಗೆಳೆದು ನಿಯಂತ್ರಿಸಿ ಹೊರಬಿಡುವ ಅಭ್ಯಾಸವನ್ನೂ ಮಾಡಬೇಕಾಗುತ್ತದೆ. ಧ್ವನಿಪೆಟ್ಟಿಗೆ ಮತ್ತು ಶ್ವಾಸಕೋಶಗಳ ಮೇಲೆ ಒಮ್ಮೆಲೆ ಹೆಚ್ಚಿನ ಒತ್ತಡ ಹೇರಬಾರದು. ಹಲವಾರು ತಿಂಗಳುಗಳ ಪ್ರಯತ್ನದಿಂದ ಧ್ವನಿಯನ್ನು ಸ್ವಲ್ಪ ಸುಧಾರಿಸಿಕೊಳ್ಳಬಹುದು. ಓದಿದ್ದನ್ನು ನೆನಪಿಟ್ಟುಕೊಳ್ಳಲು ಮತ್ತು ಹೆಚ್ಚಿನ ಅಂಕ ಗಳಿಸಲು ಓದುವ ವಿಷಯಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು ಅಗತ್ಯ. ಕೇವಲ ಪರೀಕ್ಷೆಯ ದೃಷ್ಟಿಯಿಂದ ಓದಿದರೆ ನೆನಪನ್ನು ಉಳಿಸಿಕೊಳ್ಳುವುದು ಸುಲಭವಲ್ಲ. ವಿಷಯದ ಆಳಕ್ಕೆ ಹೋಗಿ ಅದನ್ನು ಸಂಪೂರ್ಣವಾಗಿ ಗ್ರಹಿಸಿದರೆ ನೆನಪಿಟ್ಟುಕೊಳ್ಳಲು ಹೆಚ್ಚಿನ ಶ್ರಮಪಡುವ ಅಗತ್ಯವಿಲ್ಲ. ನೋಟ್ಸ್‌ಗಳನ್ನು ಓದುವುದರ ಜೊತೆಗೆ ಮೂಲ ಪಠ್ಯಗಳನ್ನು ಓದಬೇಕು. ಪಠ್ಯವಲ್ಲದೆ ಸಂಬಂಧಿಸಿದ ಇತರ ಪುಸ್ತಕಗಳನ್ನು ಓದಿದರೆ ಸಹಾಯವಾಗುತ್ತದೆ. ಇದಕ್ಕಾಗಿ ಸಮಯ ಹೊಂದಿಸಿಕೊಳ್ಳಬೇಕು ಮತ್ತು ಸೂಕ್ತ ಮಾರ್ಗದರ್ಶನ ಪಡೆಯಬೇಕು. ಕೋಪವನ್ನು ನಿಯಂತ್ರಿಸಬೇಕು ಎನ್ನುವುದು ತಪ್ಪುಕಲ್ಪನೆ. ಆದರೆ ನಿನ್ನ ಕೋಪ ಕೆಟ್ಟ ಮಾತು ಮತ್ತು ವರ್ತನೆಯಾಗುವುದನ್ನು ತಡೆಯಲೇಬೇಕು. ಇದನ್ನು ಮಾಡಲು ಮೊದಲು ನಿನ್ನ ಕೋಪ ಏನನ್ನು ಹೇಳುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಬೇರೆಯವರ ಮಾತು ವರ್ತನೆಗಳ ಕುರಿತು ನಿನಗೆ ಬೇಸರ ಅಸಮಧಾನ ಇದ್ದಾಗ ಅವುಗಳನ್ನು ಗೌರವ ಘನತೆಯಿಂದ ವ್ಯಕ್ತಪಡಿಸಲು ಕಲಿಯಬೇಕು. ಇಂತಹ ಅಸಮಾಧಾನವನ್ನು ಹತ್ತಿಕ್ಕಿದರೆ ನಿನಗೆ ಗೊತ್ತಿಲ್ಲದಂತೆಯೇ ಅದು ಕೋಪವಾಗಿ ಹೊರಬರುತ್ತದೆ. ಹಾಗಾಗಿ ನಿನ್ನ ಕೋಪದ ಹಿಂದಿರುವ ಭಾವನೆಗಳನ್ನು ಗುರುತಿಸುವ ಅಭ್ಯಾಸ ಮಾಡಿಕೊ. ನಂತರ ನಿಧಾನವಾಗಿ ಅವುಗಳನ್ನು ಸರಿಯಾದ ಮಾತುಗಳಲ್ಲಿ ವ್ಯಕ್ತಪಡಿಸಲು ಕಲಿಯುತ್ತಾ ಹೋಗಬಹುದು.

ಇದರ ಅರ್ಥವೇನೆಂದರೆ ಕೋಪದ ಭಾವನೆ ಕೆಟ್ಟದ್ದಲ್ಲ. ಕೋಪ ನಮ್ಮ ಸ್ವಂತಿಕೆ ರಕ್ಷಿಸಿಕೊಳ್ಳಲು ಪ್ರಕೃತಿ ಸೃಷ್ಟಿಸಿರುವ ರಕ್ಷಣಾ ಕವಚ. ಆದರೆ ಕೋಪ ಬಂದಾಗ ನಮ್ಮ ಮೇಲೆ ಹಿಡಿತ ಕಳೆದುಕೊಂಡು ಕೆಟ್ಟ ಮಾತು ಮತ್ತು ವರ್ತನೆಗಳನ್ನು ತೋರಿಸುವುದು ಸೂಕ್ತವಲ್ಲ. ಕೋಪ ಬಂದಿರುವುದನ್ನು ಆದಷ್ಟು ಬೇಗ ಗುರುತಿಸಿ ದೀರ್ಘವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಡಬೇಕು. ನಂತರ ನನ್ನ ಅಭಿಪ್ರಾಯವನ್ನು ಗೌರವದಿಂದ ಹೇಳುವುದು ಹೇಗೆ ಎಂದು ಯೋಚಿಸಿ ಮಾತನಾಡಬೇಕು. ಶುಭವಾಗಲಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಹಳೆಯ ದಿನಗಳನ್ನು ನೆನಪಿಸಿಕೊಂಡ ಚಲನಚಿತ್ರ ನಟ ಅನಂತ ನಾಗ್

‘ಪಾತ್ರ ಸಿಕ್ಕಿಲ್ಲವೆಂಬ ಮತ್ಸರವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಲನಚಿತ್ರಗಳಲ್ಲಿ ನಾನು ನಿಮಿತ್ತ ಮಾತ್ರ ಆಗಿದ್ದೇನೆ. ಅಂದುಕೊಂಡಂತೆ ಎಲ್ಲರಿಗೂ ಎಲ್ಲಾ ರೀತಿಯ ಪಾತ್ರಗಳು ಸಿಗುವುದಿಲ್ಲ. ಯಾವುದೇ ಪಾತ್ರದ ಬಗ್ಗೆ ಆಸೆ, ಮತ್ಸರವಿಲ್ಲ’ ಎಂದು ಚಲನಚಿತ್ರ ನಟ ಅನಂತ ನಾಗ್ ತಿಳಿಸಿದರು.

ಭಾರತೀಯ ವಿದ್ಯಾಭವನ ಮತ್ತು ಸುಚಿತ್ರ ಫಿಲಂ ಸೊಸೈಟಿ ಜಂಟಿಯಾಗಿ ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಅನಂತ ನಾಗ್ ಉತ್ಸವದ ಸಮಾರೋಪ ಸಮಾರಂಭದಲ್ಲಿ ಚಿತ್ರ ಜೀವನವನ್ನು ಸ್ಮರಿಸಿಕೊಂಡರು.

‘ಚಿತ್ರರಂಗದಲ್ಲಿ ಭಿನ್ನ ಭಿನ್ನ ಪಾತ್ರಗಳನ್ನು ಆಯ್ಕೆ ಮಾಡಿಕೊಂಡು ಅಭಿನಯಿಸಿದೆ. ತಮ್ಮ ಶಂಕರ ನಿರ್ದೇಶನದತ್ತ ಮುಖ ಮಾಡಿದರೂ ನನಗೆ ಆ ಕಡೆ ಒಲವಿರಲಿಲ್ಲ. ಎಷ್ಟೋ ನಿರ್ದೇಶಕರಿಗೆ ನಿರ್ಮಾಪಕರೇ ಸಿಗುವುದಿಲ್ಲ. ನಟನಾಗಿದ್ದರಿಂದ ನಾನು 300ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಲು ಸಾಧ್ಯವಾಯಿತು. ಅದೇ ನಿರ್ದೇಶಕನಾಗಿದ್ದರೆ 30 ಚಿತ್ರಗಳು ಸಾಧ್ಯವಾಗುತ್ತಿರಲಿಲ್ಲ’ ಎಂದರು.

‘ಯಾವುದೇ ಸ್ಥಾನ, ಸಂಪಾದನೆಗಾಗಿ ರಾಜಕೀಯಕ್ಕೆ ಹೋಗಿರಲಿಲ್ಲ. ರಾಜಕಾರಣಿ ಆಗುವುದು ಸುಲಭವಲ್ಲ. ಈ ಕ್ಷೇತ್ರದಲ್ಲಿ ಇರುವವರಿಗೆ ವೈಯಕ್ತಿಕ ಬದುಕು ಇರುವುದಿಲ್ಲ. ಉತ್ತಮ ಯೋಜನೆಗಳೂ ಪಂಚರ್ ಆದಾಗ ಬೇಸರವಾಯಿತು. ಭಾರತದಲ್ಲಿ ರಾಜಕಾರಣ ಜಾತಿ ಕೇಂದ್ರೀಕೃತವಾಗಿದೆ. ನಾವು ಅಂದುಕೊಂಡಂತೆ ಬದಲಾವಣೆ ಮಾಡಲೂ ಸಾಧ್ಯವಿಲ್ಲ ಎನ್ನುವುದು ಈ ಕ್ಷೇತ್ರಕ್ಕೆ ಹೋದ ಬಳಿಕ ಅರ್ಥವಾಯಿತು. ಇದರಿಂದ ರಾಜಕೀಯದಿಂದ ಹೊರ ಬಂದೆ’ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ‘ಅನಂತ ನಾಗ್ ಭಾರತ ಮಾತ್ರವಲ್ಲದೆ ಜಗತ್ತಿನ ಶ್ರೇಷ್ಠ ನಟರಲ್ಲಿ ಒಬ್ಬರಾಗಿದ್ದಾರೆ. ಅವರ ‘ಅಂಕುರ್’ ಸಿನಿಮಾ ವೀಕ್ಷಿಸಿದ ಬಳಿಕ ಆಗಲೇ ಅವರ ನಟನೆಗೆ ಮನಸೋತೆ. ಅವರು ಉತ್ತಮ ಬರಹಗಾರರು ಆಗಿದ್ದು, ಪುಸ್ತಕಗಳನ್ನು ಬರೆಯಬೇಕು. ಅವರು ಸಿನಿಮಾ ರಂಗಕ್ಕೆ ಬರದಿದ್ದರೆ ಒಳ್ಳೆಯ ಬರಹಗಾರರಾಗುತ್ತಿದ್ದರು’ ಎಂದು ತಿಳಿಸಿದರು.

ಚಲನಚಿತ್ರ ನಿರ್ಮಾಪಕ ಎಸ್.ಎ. ಚಿನ್ನೇಗೌಡ, ‘ಕನ್ನಡ ಚಿತ್ರರಂಗಕ್ಕೆ ಅನಂತ ನಾಗ್ ನೀಡಿದ ಕೊಡುಗೆ ಅಪಾರ. ಅವರು ಯಾವುದೇ ಗೌರವಗಳನ್ನು ಬಯಸಿದವರಲ್ಲ’ ಎಂದು ಹೇಳಿ, ಹಳೆಯ ಘಟನೆಗಳನ್ನು ಸ್ಮರಿಸಿಕೊಂಡರು.

ಭಾರತೀಯ ವಿದ್ಯಾಭವನದ ಮಾಧ್ಯಮ ಭಾರತಿ ನಿರ್ದೇಶಕ ಎನ್.ಎಸ್. ಶ್ರೀಧರ ಮೂರ್ತಿ, ‘ಸ್ಟಾರ್‌ಗಳ ನಡುವೆಯೂ ಅನಂತ ನಾಗ್ ಅವರು ಧೃವತಾರೆಯಾಗಿದ್ದಾರೆ. ಕಲಾತ್ಮಕ ಮತ್ತು ವ್ಯಾಪಾರಿ ಎರಡೂ ಬಗೆಯ ಚಿತ್ರಗಳಿಗೆ ಒಗ್ಗುವ ಅವರು, ಬಹು ಬೇಡಿಕೆಯ ನಟರಾಗಿದ್ದಾರೆ. ಅವರಿಂದ ಪೋಷಕ ಪಾತ್ರಕ್ಕೂ ಘನತೆ ಬಂದಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವಿಂದ್ರ ಭಟ್ಟ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಇದ್ದರು.

ಸಮಾರಂಭದಲ್ಲಿ ಅನಂತ ನಾಗ್ ಅವರಿಗೆ ಪತ್ನಿ ಗಾಯತ್ರಿ ಕೇಕ್ ತಿನ್ನಿಸಿದರು —ಪ್ರಜಾವಾಣಿ ಚಿತ್ರ

‘ಮನೆಯಲ್ಲಿ ಕಡಿಮೆ ಮಾತು’

‘ಅನಂತ ನಾಗ್ ಅವರು ಹಿತಮಿತವಾಗಿ ಆಹಾರ ಸೇವಿಸಿ, ಪ್ರತಿನಿತ್ಯ ಯೋಗ ಮಾಡುತ್ತಾರೆ. ಇದೇ ಅವರ ಆರೋಗ್ಯದ ಗುಟ್ಟು. ಪ್ರತಿನಿತ್ಯ ತಡರಾತ್ರಿಯವರೆಗೂ ಟಿ.ವಿಯಲ್ಲಿ ವಿಶ್ವದ ನ್ಯೂಸ್ ವೀಕ್ಷಿಸುತ್ತಾರೆ. ಅವರಿಗೆ ಯಾರಾದರೂ ವೀಕ್ಷಣೆಗೆ ಅಡ್ಡಿಪಡಿಸಿದರೆ ಸಿಟ್ಟಾಗುತ್ತಾರೆ. ಬಹಳ ಕಡಿಮೆ ಮಾತನಾಡುವ ಅವರು, ಏನಾದರೂ ಕೇಳಿದರೆ ಎರಡು ಗಂಟೆಯ ಬಳಿಕ ಉತ್ತರಿಸುತ್ತಾರೆ’ ಎಂದು ಅನಂತ ನಾಗ್ ಅವರ ಪತ್ನಿ ಗಾಯತ್ರಿ ತಿಳಿಸಿದರು.

ಗಾಯತ್ರಿ ಅವರೊಂದಿಗೆ ಭಾರತೀಯ ವಿದ್ಯಾಭವನದ ಜಂಟಿ ಕಾರ್ಯದರ್ಶಿ ನಾಗಲಕ್ಷ್ಮಿ ಕೆ. ರಾವ್ ಸಂವಾದ ನಡೆಸಿದರು.

ಇದಕ್ಕೂ ಮೊದಲು ಅನಂತ ನಾಗ್ ಅವರು ಗುರುಸ್ತುತಿಯನ್ನು ಪ್ರಸ್ತುತ ಪಡಿಸಿ, ‘ಭಾಗ್ಯದ ಲಕ್ಷ್ಮಿ ಬಾರಮ್ಮ’ ಗೀತೆಯನ್ನು ಹಾಡಿದರು.

ಅನಂತ ನಾಗ್ ಹಾಗೂ ಗಾಯತ್ರಿ ದಂಪತಿಯನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಸನ್ಮಾನಿಸಿದರು. ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಮತ್ತು ಜಂಟಿ ಕಾರ್ಯದರ್ಶಿ ನಾಗಲಕ್ಷ್ಮಿ ಕೆ. ರಾವ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ಅಜ್ಞಾನದಿಂದ ಸನಾತನ ಧರ್ಮದ ಬಗ್ಗೆ ಟೀಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸನಾತನ ಧರ್ಮದ ಮಹತ್ವ ತಿಳಿಯದೆ ಇರುವವರು ಅದರ ಬಗ್ಗೆ ಕೆಟ್ಟದಾಗಿ ಟೀಕೆ ಮಾಡುತ್ತಿದ್ದಾರೆ. ಅಜ್ಞಾನದಿಂದ ಮಾತನಾಡಿದವರನ್ನು ತಿದ್ದುವ ಕೆಲಸವಾಗಬೇಕು’ ಎಂದು ಚಲನಚಿತ್ರ ನಟ ಅನಂತ ನಾಗ್ ಹೇಳಿದರು.

ಭಾರತೀಯ ವಿದ್ಯಾಭವನ ಮತ್ತು ಸುಚಿತ್ರ ಫಿಲಂ ಸೊಸೈಟಿ ಜಂಟಿಯಾಗಿ ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಗರದಲ್ಲಿ ಹಮ್ಮಿಕೊಂಡ ಮೂರು ದಿನಗಳ ಅನಂತ ನಾಗ್ ಉತ್ಸವ ಶುಕ್ರವಾರ ಸಂಪನ್ನವಾಯಿತು. ಸಮಾರೋಪ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ, ಮಾತನಾಡಿದರು.

‘ಸಾವಿರಾರು ವರ್ಷಗಳಿಂದ ಸನಾತನ ಧರ್ಮ ಬೆಳೆದು ಬಂದಿದ್ದು, ಹಲವು ಮೈಲಿಗಲ್ಲುಗಳನ್ನು ಸಾಧಿಸಿದೆ. ಈ ಧರ್ಮದ ಬಗ್ಗೆ ನನಗೆ ಅಭಿಮಾನ, ಭಕ್ತಿ, ಗೌರವ, ಪ್ರೀತಿಯಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳಾದ ಬಳಿಕ ಈಗ ಎಲ್ಲಿ ನೋಡಿದರೂ ಸನಾತನ ಧರ್ಮವನ್ನು ಅವಹೇಳನ ಮಾಡಲಾಗುತ್ತಿದೆ. ಇದು ಆತಂಕವನ್ನುಂಟು ಮಾಡುತ್ತಿದೆ. ಕೈಲಾಗದವರು ಮೈ ಪರಚಿಕೊಳ್ಳುತ್ತಾರೆ. ಆದ್ದರಿಂದ ಭಾರತೀಯ ವಿದ್ಯಾಭವನವು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕಾರ್ಯನಿರ್ವಹಿಸಿ, ಸನಾತನ ಧರ್ಮದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಿ’ ಎಂದರು.

ಬಿಸಿಯೂಟಕ್ಕೆ ಅಕ್ಕಿ: ದರ ಹೆಚ್ಚಳಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಂಬತ್ತು ಮತ್ತು ಹತ್ತನೇ ತರಗತಿ ವಿದ್ಯಾರ್ಥಿಗಳ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಪೂರೈಸುತ್ತಿರುವ ಅಕ್ಕಿಯ ದರವನ್ನು ಪ್ರತಿ ಕೆ.ಜಿ.ಗೆ ₹ 31ರಿಂದ ₹ 34.60ಕ್ಕೆ ಹೆಚ್ಚಿಸುವಂತೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮುಂದೆ ಬೇಡಿಕೆ ಇಟ್ಟಿದೆ.

ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಆಹಾರ ಧಾನ್ಯಗಳ ಪೂರೈಕೆಗೆ ಸಂಬಂಧಿಸಿದಂತೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ಶುಕ್ರವಾರ ಎರಡೂ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆಯಿತು.

‘ಒಂದರಿಂದ ಎಂಟನೇ ತರಗತಿಗಳ ವಿದ್ಯಾರ್ಥಿಗಳ ಮಧ್ಯಾಹ್ನದ ಬಿಸಿಯೂಟಕ್ಕೆ ಕೇಂದ್ರ ಸರ್ಕಾರ ಅಕ್ಕಿ ಒದಗಿಸುತ್ತಿದೆ. ಒಂಬತ್ತು ಮತ್ತು ಹತ್ತನೇ ತರಗತಿ ವಿದ್ಯಾರ್ಥಿಗಳ ಬಿಸಿಯೂಟಕ್ಕೆ ರಾಜ್ಯ ಸರ್ಕಾರವು ಒದಗಿಸುತ್ತಿದೆ. ಇದಕ್ಕಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ಮೂಲಕ 8,500 ಟನ್ ಅಕ್ಕಿ ಒದಗಿಸಲಾಗುತ್ತಿದೆ’ ಎಂದು ಆಹಾರ ಇಲಾಖೆ ಮೂಲಗಳು ತಿಳಿಸಿವೆ.

ಹೆಚ್ಚು ಗುಣಮಟ್ಟದ ಅಕ್ಕಿ ಒದಗಿಸುವಂತೆ ಶಿಕ್ಷಣ ಇಲಾಖೆ ಬೇಡಿಕೆ ಇಟ್ಟಿದೆ. ಅದಕ್ಕೆ ಪೂರಕವಾಗಿ ದರ ಹೆಚ್ಚಿಸುವಂತೆ ಆಹಾರ ಇಲಾಖೆ ಕೇಳಿದೆ ಎಂದು ಮೂಲಗಳು ಹೇಳಿವೆ.

ಸಭೆಯ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಮುನಿಯಪ್ಪ, ‘ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಆಹಾರ ಧಾನ್ಯ ಪೂರೈಸುವುದನ್ನೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿ ತರಲು ಯೋಚಿಸಲಾಗಿದೆ. ಮುಂದಿನ ಸಭೆಯಲ್ಲಿ ನಿರ್ಧಾರಕ್ಕೆ ಬರಲಾಗುವುದು’ ಎಂದರು.

ಮಧು ಬಂಗಾರಪ್ಪ ಮಾತನಾಡಿ, ‘ಬಿಸಿಯೂಟಕ್ಕೆ ಪೂರೈಸುವ ಅಕ್ಕಿಯ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಉತ್ತಮ ಗುಣಮಟ್ಟದ ಅಕ್ಕಿ ಪೂರೈಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬಿಸಿಯೂಟಕ್ಕೆ ಅಕ್ಕಿಯ ಕೊರತೆ ಇಲ್ಲ’ ಎಂದು ತಿಳಿಸಿದರು.

ಕೆಲವೆಡೆ ಅಕ್ಕಿ ಮತ್ತು ಬೇಳೆಯನ್ನು ಸರಿಯಾಗಿ ಬೇಯಿಸದ ಕಾರಣ ಮಕ್ಕಳಿಗೆ ತೊಂದರೆ ಆಗಿದ್ದ ದೂರುಗಳು ಬಂದಿದ್ದವು. ಅಂತಹ ಪ್ರಕರಣಗಳಲ್ಲಿ ಅಡುಗೆ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂದರು.

ಆಗಸ್ಟ್‌ನಲ್ಲಿ ಅತಿ ತಾಪಮಾನ

ನವದೆಹಲಿ (ಪಿಟಿಐ): ಜಗತ್ತಿನ 65 ದೇಶಗಳಲ್ಲಿ (ಶೇ 13ರಷ್ಟು ಭೂಭಾಗ) ಆಗಸ್ಟ್ ತಿಂಗಳ ತಾಪಮಾನ ದಾಖಲೆ ಪ್ರಮಾಣದಲ್ಲಿ ಏರಿದೆ. ಇನ್ನುಳಿದ ಭಾಗಗಳಲ್ಲೂ 1951-1980ರ ನಡುವಿನ ಸರಾಸರಿಗೆ ಹೋಲಿಸಿದರೆ ತಾಪಮಾನ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿತ್ತು ಎಂದು ಅಮೆರಿಕದ ‘ಬರ್ಕ್ಲಿ ಅರ್ಥ್’ ಅಧ್ಯಯನ ವರದಿ ಹೇಳಿದೆ.

ಊರಿಗೆ ಹೊರಟ ಜನ: ಮೆಜೆಸ್ಟಿಕ್ ಸುತ್ತಮುತ್ತ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ-ಗಣೇಶ ಹಬ್ಬದ ನಿಮಿತ್ತ ಸಾಲು ಸಾಲು ರಜೆಗಳಿದ್ದು, ಜನರು ಶನಿವಾರ ರಾತ್ರಿಯಿಂದಲೇ ತಮ್ಮೂರಿನತ್ತ ಹೊರಟರು.

ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಸ್ಯಾಟ್‌ಲೈಟ್ ಬಸ್ ನಿಲ್ದಾಣಗಳಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. ಮಹಿಳೆಯರು, ಮಕ್ಕಳು, ವೃದ್ಧರು ಲಗೇಜು ಸಮೇತ ನಿಲ್ದಾಣದಲ್ಲಿದ್ದರು. ಸಾರಿಗೆ ಸಂಸ್ಥೆಗಳಲ್ಲಿ ಹಾಗೂ ಖಾಸಗಿ ಬಸ್‌ಗಳಲ್ಲಿ ಜನರು ಪ್ರಯಾಣಿಸಿದರು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರಿಂದ ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಿಪರೀತ ದಟ್ಟಣೆ ಉಂಟಾಯಿತು. ನಿಲ್ದಾಣಗಳಲ್ಲಿ ಸಂಜೆಯಿಂದಲೂ ಜನರ ಓಡಾಟ ಹೆಚ್ಚಿತ್ತು. ತಡರಾತ್ರಿಯವರೆಗೂ ದಟ್ಟಣೆ ಇತ್ತು. ಮೈಸೂರು ರಸ್ತೆ ಮೇಲ್ಸೇತುವೆ, ಯಶವಂತಪುರ, ಗೊರಗುಂಟೆಪಾಳ್ಯ ಹಾಗೂ ಸುತ್ತಮುತ್ತ ವಾಹನಗಳ ಸಂಚಾರ ನಿಧಾನ ಗತಿಯಲ್ಲಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ

ಪ್ರಜಾವಾಣಿ ವಾರ್ತೆ

ಧರಣಿದೇವಿ ಮಾಲಗತ್ತಿ

ಬೆಂಗಳೂರು: ಸ್ಥಳ ನಿರೀಕ್ಷಣೆಯಲ್ಲಿದ್ದ ಐಪಿಎಸ್ ಅಧಿಕಾರಿ ಡಾ. ಕೆ. ಧರಣಿ ದೇವಿ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಮೈಸೂರಿನಲ್ಲಿರುವ ಪೊಲೀಸ್ ಅಕಾಡೆಮಿಯ ನಿರ್ದೇಶಕ ಹುದ್ದೆಗೆ ವರ್ಗಾವಣೆಗೊಂಡಿದ್ದ ಡಿಜಿಪಿ ಎಸ್.ಡಿ. ಶರಣಪ್ಪ ಅವರನ್ನು ರೈಲ್ವೆ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ.

ಐಆರ್‌ಎಸ್ ಅಧಿಕಾರಿಗಳ ವರ್ಗಾವಣೆ: ಶಿವಾನಂದ ಕಲಕೇರಿ ಅವರನ್ನು ಬಿಬಿಎಂಪಿ ವಿಶೇಷ ಆಯುಕ್ತರನ್ನಾಗಿ (ಆರ್ಥಿಕ) ಮತ್ತು ಆರ್.ಎಲ್. ದೀಪಕ್ ಅವರನ್ನು ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತರನ್ನಾಗಿ ನಿಯೋಜಿಸಲಾಗಿದೆ.

ರೇವಾ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಎಂಜಿನಿಯರ್ಸ್ ದಿನಾಚರಣೆಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ತಾಂತ್ರಿಕ ಸಮಿತಿ ಅಧ್ಯಕ್ಷ ಜೈ ಪ್ರಸಾದ್ ಅವರನ್ನು ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಉಮೇಶ ಎಸ್. ರಾಜು ಅವರು ಸನ್ಮಾನಿಸಿದರು. (ಎಡದಿಂದ) ಸಹ ಕುಲಪತಿ ಆರ್.ಸಿ. ಬಿರಾದರ, ಕುಲಸಚಿವ ಎನ್. ರಮೇಶ್, ಕುಲಪತಿ ಎಂ. ಧನಂಜಯ್ಯ ಇದ್ದಾರೆ

ಎಚ್‌ಎಸ್‌ಆರ್‌ಪಿ ಆದೇಶ ಹಿಂಪಡೆಯಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಮೇಲೆ ಅತಿಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸುವ ಬಗ್ಗೆ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆ ದೋಷಪೂರಿತವಾಗಿದೆ ಎಂದು ಅಖಿಲ ಕರ್ನಾಟಕ ವಾಹನ ನಂಬರ್ ಪ್ಲೇಟ್ಸ್ ತಯಾರಕರು ಮತ್ತು ಮಾರಾಟಗಾರರ ಸಂಘ ದೂರಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವ ಅಧ್ಯಕ್ಷ ಎಸ್.ಎನ್. ಜಿತೇಂದ್ರ, ‘ರಾಜ್ಯ ಸರ್ಕಾರ 2023ರ ಆಗಸ್ಟ್ 17ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಅಧಿಕೃತ ವಾಹನ ತಯಾರಕರು ಮಾತ್ರ ನೋಂದಣಿ ಫಲಕ ಅಳವಡಿಸಬೇಕೆಂದು ತಿಳಿಸಿದೆ. ನೋಂದಣಿ ಫಲಕ ತಯಾರಿಸಲು ಅನ್ಯ ರಾಜ್ಯಗಳ ರೋಸ್‌ಮಾಟಾ, ಸಿನೆಕಸ್, ಸೆಲೆಕಸ್ ಮತ್ತು ಎಫ್‌ಟಿಎ ಎಂಬ ನಾಲ್ಕು ಕಂಪನಿಗಳಿಗೆ ಮಾತ್ರ ಅವಕಾಶ ನೀಡಿದೆ. ಇದು, ಕೇಂದ್ರ ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳಿಗೆ ವಿರುದ್ಧವಾಗಿದೆ’ ಎಂದು ತಿಳಿಸಿದರು.

‘ಸರ್ಕಾರದ ಅಂಕಿ–ಅಂಶಗಳ ಪ್ರಕಾರ ರಾಜ್ಯದಲ್ಲಿ ಸದ್ಯ 2,10,78,000 ವಾಹನಗಳಿದ್ದು, ಈ ಎಲ್ಲ ವಾಹನಗಳ ನೋಂದಣಿ ಫಲಕಗಳನ್ನು ಬದಲಾಯಿಸಲು ನವೆಂಬರ್ 17ರವರೆಗೆ ಗಡುವು ನೀಡಲಾಗಿದೆ. ಕೇವಲ ನಾಲ್ಕು ಕಂಪನಿಗಳಿಂದ ಇದು ಸಾಧ್ಯವಿಲ್ಲ. ಜತೆಗೆ, ನೋಂದಣಿ ಸಂಖ್ಯೆ ಬದಲಾಯಿಸಲು ದುಪ್ಪಟ್ಟು ಹಣ ಪಡೆಯುತ್ತಿದ್ದಾರೆ’ ಎಂದು ಆರೋಪಿಸಿದರು.

‘ಇದುವರೆಗೆ ಕೇವಲ 14 ರಿಂದ 15 ಸಾವಿರ ವಾಹನಗಳ ನೋಂದಣಿ ಸಂಖ್ಯೆಗಳನ್ನು ಬದಲಾಯಿಸಲಾಗಿದೆ. ರಾಜ್ಯದಲ್ಲಿರುವ ಇತರೆ ಕಂಪನಿಗಳಿಗೆ ಸರ್ಕಾರ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಎಚ್‌ಎಸ್‌ಆರ್‌ಪಿ ಉದ್ಯಮ ಅವಲಂಬಿಸಿರುವ 25 ಸಾವಿರ ಕುಟುಂಬಗಳು ಜೀವನ ನಿರ್ವಹಣೆ ಕಷ್ಟವಾಗಲಿದೆ. ಸರ್ಕಾರ ಕೂಡಲೇ ಈ ಸುತ್ತೋಲೆಯನ್ನು ಹಿಂಪಡೆಯಬೇಕು. ಇಲ್ಲದಿದ್ದರೆ, ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಸ್. ಸತೀಶ್, ಕಾರ್ಯದರ್ಶಿ ಇಮ್ರಾನ್, ಸದಸ್ಯ ಅಕ್ರಂ ಪಾಷಾ ಇದ್ದರು.



ಜನಸ್ನೇಹಿಯಾಗಿರುವಂತೆ ಪೊಲೀಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು

ದರ್ಪದಿಂದ ವರ್ತಿಸಿದರೆ ಶಿಸ್ತುಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಐಪಿಎಸ್ ಹಿರಿಯ ಅಧಿಕಾರಿಗಳ ಸಮಾವೇಶ'ದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಎಡಿಜಿಪಿ ಉಮೇಶ್ ಕುಮಾರ್ ಅವರ ಭುಜದ ಬ್ಯಾಡ್ಜ್ ಅನ್ನು ಕಮಿಷನರ್ ಬಿ. ದಯಾನಂದ್ ಸರಿಪಡಿಸಿದರು. ಐಪಿಎಸ್ ಅಧಿಕಾರಿಗಳಾದ ಅರುಣ್ ಚಕ್ರವರ್ತಿ, ಸೀಮಂತ್‌ಕುಮಾರ್ ಸಿಂಗ್ ಅಲೋಕ್‌ಕುಮಾರ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಜನರ ಎದುರು ದರ್ಪದಿಂದ ವರ್ತಿಸುವುದನ್ನು ಪೊಲೀಸರು ಬಿಡಬೇಕು. ಜನಸ್ನೇಹಿಯಾಗಿ ಪ್ರತಿಯೊಬ್ಬರ ದೂರುಗಳನ್ನು ಗೌರವಯುತವಾಗಿ ಆಲಿಸಬೇಕು. ಅಕಸ್ಮಾತ್ ದರ್ಪದಿಂದ ವರ್ತಿಸುವುದು ಮುಂದುವರಿದರೆ, ಶಿಸ್ತುಕ್ರಮ ಎದುರಿಸಬೇಕಾಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐಪಿಎಸ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರದ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಐಪಿಎಸ್ ಹಿರಿಯ ಅಧಿಕಾರಿಗಳ ವಾರ್ಷಿಕ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ವ್ಯವಸ್ಥೆಯಲ್ಲಿ ಬದಲಾವಣೆ ಬಯಸಿ ಜನರು ನಮಗೆ ಅಧಿಕಾರ ನೀಡಿದ್ದಾರೆ. ಹೀಗಾಗಿ, ಪೊಲೀಸರಿಂದಲೂ ನಾವು ಬದಲಾವಣೆ ಬಯಸುತ್ತೇವೆ. ನನ್ನ ಅನುಭವದಿಂದ ಹೇಳುವುದಾದರೆ, ಹಲವು ಪೊಲೀಸರು ದರ್ಪದಿಂದ ವರ್ತಿಸುತ್ತಾರೆ. ಇಂಥ ವರ್ತನೆ ನಮ್ಮ ಸರ್ಕಾರದಲ್ಲಿ ನಡೆಯುವುದಿಲ್ಲ. ದರ್ಪದಿಂದ ವರ್ತಿಸುವ ಬಗ್ಗೆ ದೂರುಗಳು ಬಂದರೆ ಕಠಿಣ ಕ್ರಮ ನಿಶ್ಚಿತ' ಎಂದು ತಾಕೀತು ಮಾಡಿದರು.

'ಬಡವ– ಶ್ರೀಮಂತ, ದೊಡ್ಡವ– ಸಣ್ಣವ ಯಾರೇ ಠಾಣೆಗೆ ಬಂದು ದೂರು ನೀಡಿದರೆ ಎಫ್‌ಐಆರ್ ದಾಖಲಿಸಬೇಕು. ಅವರೊಂದಿಗೆ ಗೌರವವಾಗಿ ನಡೆದುಕೊಂಡು ನ್ಯಾಯದ ಭರವಸೆಯ ಜೊತೆಗೆ ಆತ್ಮವಿಶ್ವಾಸ ಮೂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಮುಖ್ಯಮಂತ್ರಿ ಹೇಳಿದರು.

'ರೌಡಿಗಳು, ದರೋಡೆಕೋರರು, ಕಳ್ಳತನ ಮಾಡುವವರು, ಸುಳ್ಳು ಸುದ್ದಿ ಹಬ್ಬಿಸುವವರು, ಕ್ಲಬ್ ನಡೆಸುವವರು, ಬೆಟ್ಟಿಂಗ್ ಆಡಿಸುವವರು ಹಾಗೂ ಇತರೆ ಅಪರಾಧ ಕೃತ್ಯ ಎಸಗುವವರು ಇದ್ದಾರೆ. ಇವರೆಲ್ಲರ ಕೃತ್ಯಗಳಿಗೆ ಕಡಿವಾಣ ಹಾಕಲು ಪೊಲೀಸರು ಕೆಲಸ ಮಾಡಬೇಕು. ಕಾನೂನು ಸುವ್ಯವಸ್ಥೆ ಕಾಪಾಡಿದರೆ ರಾಜ್ಯದ ಅಭಿವೃದ್ಧಿ ಸಾಧ್ಯ' ಎಂದರು.

ಡ್ರಗ್ಸ್ ಮಟ್ಟಹಾಕಲು ವಿಶೇಷ ಅಭಿಯಾನ: 'ಮಾದಕ ವಸ್ತುವಿನಿಂದ (ಡ್ರಗ್ಸ್) ಯುವ ಸಮುದಾಯ ಹಾಳಾಗುತ್ತಿದೆ. ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಜಾಲಗಳ ವಿರುದ್ಧ ವಿಶೇಷ ಅಭಿಯಾನ ನಡೆಸುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಸ್ವಯಂಪ್ರೇರಿತ ಎಫ್‌ಐಆರ್: 'ಸುಳ್ಳುಸುದ್ದಿ ಹಬ್ಬಿಸುವವರು, ದ್ವೇಷದ ಭಾಷಣ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ದೂರುದಾರರು ಇಲ್ಲದಿದ್ದರೆ, ಸ್ವಯಂಪ್ರೇರಿತ ಪ್ರಕರಣ ದಾಖಲಿಸುವಂತೆಯೂ ಹೇಳಲಾಗಿದೆ' ಎಂದು ಮಾಹಿತಿ ನೀಡಿದರು.

ಗೃಹ ಸಚಿವ ಜಿ. ಪರಮೇಶ್ವರ, ರಜನೀಶ್ ಗೋಯಲ್, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಇದ್ದರು.

'ಎಸ್‌ಪಿ, ಡಿಸಿಪಿಗಳು ಹೊಣೆ'

'ಠಾಣಾಧಿಕಾರಿ ಗಮನಕ್ಕೆ ಬಾರದಂತೆ ಠಾಣೆ ವ್ಯಾಪ್ತಿಯಲ್ಲಿ ಯಾವುದೇ ಅಪರಾಧ ನಡೆಯುವುದಿಲ್ಲ. ಹೀಗಾಗಿ, ಠಾಣಾಧಿಕಾರಿಗಳೇ ಅಪರಾಧ ಹತ್ತಿಕ್ಕಬೇಕು. ಹಲವು ಸಂದರ್ಭಗಳಲ್ಲಿ ಕೆಳ ಹಂತದ ಅಧಿಕಾರಿಗಳಿಗೆ ಶಿಕ್ಷೆ ನೀಡಲಾಗುತ್ತದೆ. ಆದರೆ, ಇನ್ನು ಮುಂದೆ ಕಾನೂನು ಸುವ್ಯವಸ್ಥೆ ಕಾಪಾಡದಿದ್ದರೆ ಸಂಬಂಧಪಟ್ಟ ಎಸ್‌ಪಿ ಹಾಗೂ ಡಿಸಿಪಿಗಳನ್ನೇ ಹೊಣೆಯನ್ನಾಗಿ ಮಾಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಎಚ್ಚರಿಸಿದರು.

'ದಲಿತರು ಬೆಂಬಲಿಸಿದ್ದು ತಮ್ಮದೇ ನಾಯಕತ್ವಕ್ಕಾಗಿ'

ಛಲವಾದಿ ಪೀಠದ ಬಸವ ನಾಗಿದೇವ ಸ್ವಾಮೀಜಿ ಹೇಳಿಕೆ

ಪ್ರಜಾವಾಣಿ ವಾರ್ತೆ

ನೋಟಿಸ್‌ಗೆ ಖಂಡನೆ

'ಅತಿ ಹಿಂದುಳಿದ ವರ್ಗಗಳ ಜನರ ಪರವಾಗಿ ಧ್ವನಿ ಎತ್ತಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ನೋಟಿಸ್ ನೀಡಿರುವುದು ಖಂಡನೀಯ. ಧ್ವನಿ ಇಲ್ಲದ ಸಮುದಾಯಗಳ ಪರ ಅವರು ಮಾತನಾಡುವುದು ತಪ್ಪೇ' ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಪ್ರಶ್ನಿಸಿದರು.

ಬೆಂಗಳೂರು: 'ದಲಿತರು ಸಿದ್ದರಾಮಯ್ಯ ಅವರಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿಲ್ಲ. ಮಲ್ಲಿಕಾರ್ಜುನ ಖರ್ಗೆ, ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ ಅವರಂಥ ತಮ್ಮದೇ ನಾಯಕರ ಮುಖ ನೋಡಿಕೊಂಡು ಮತ ನೀಡಿದ್ದಾರೆ' ಎಂದು ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ ಹೇಳಿದರು.

ಅತಿ ಹಿಂದುಳಿದ ವರ್ಗಗಳ ಮಠಾಧೀಶರ ಒಕ್ಕೂಟದ ವತಿಯಿಂದ ಶುಕ್ರವಾರ ನಡೆದ ಜಂಟಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿ ಕಾಂಗ್ರೆಸ್ 135 ಸ್ಥಾನಗಳನ್ನು ಪಡೆಯಲು ದಲಿತರು, ಅಲ್ಪಸಂಖ್ಯಾತರು ಮತ್ತು ಅತಿ ಹಿಂದುಳಿದ ವರ್ಗದವರ ಬೆಂಬಲವೇ ಕಾರಣ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಬೇಕೆಂದು ಈ ಸಮುದಾಯಗಳು ಕಾಂಗ್ರೆಸ್‌ಗೆ ಮತ ಹಾಕಿಲ್ಲ' ಎಂದರು.

'ರಾಜ್ಯದಲ್ಲಿ ಎರಡು ಬಾರಿ ದಲಿತರಿಗೆ ಮುಖ್ಯಮಂತ್ರಿ ಆಗುವ ಅವಕಾಶ ಇತ್ತು. ಆದರೆ, ಹಿಂದುಳಿದ ವರ್ಗದವರು ಎಂದು ಹೇಳಿಕೊಳ್ಳುವವರೇ ಆ ಅವಕಾಶ ತಪ್ಪಿಸಿದರು. ಮೊದಲು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಂತಹ ಅವಕಾಶ ಒದಗಿಬಂದಿತ್ತು, ಅದನ್ನು ತಪ್ಪಿಸಿದರು. ನಂತರ ಪರಮೇಶ್ವರ ಅವರು ಮುಖ್ಯಮಂತ್ರಿ ಆಗಬೇಕಿತ್ತು. ಆಗಲೂ ಅವಕಾಶ ತಪ್ಪಿಸಿದರು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಅವರಿಂದಾಗಿಯೇ ಕಾಂಗ್ರೆಸ್‌ಗೆ 135 ಸ್ಥಾನಗಳು ಬಂದಿವೆ ಎಂದು ಹಿಂದುಳಿದ ವರ್ಗಗಳ ಸಮುದಾಯದ ಸ್ವಾಮೀಜಿಯೊಬ್ಬರು ಹೇಳಿಕೆ ನೀಡಿದ್ದಾರೆ. ದಲಿತರು, ಅಲ್ಪಸಂಖ್ಯಾತರು ಕೂಡ ಕಾಂಗ್ರೆಸ್‌ನ ನೇತೃತ್ವ ವಹಿಸಿದ್ದರಿಂದಲೇ 'ಇಷ್ಟು ಸ್ಥಾನ ಗೆದ್ದಲು ಸಾಧ್ಯವಾಯಿತು' ಎಂಬುದನ್ನು ಅವರು ಮರೆಯಬಾರದು' ಎಂದರು.

'ಖರ್ಗೆ, ಪರಮೇಶ್ವರ, ಮುನಿಯಪ್ಪ ಮುಖ್ಯಮಂತ್ರಿಯಾಗುತ್ತಾರೆ ಎಂದು ಭಾವಿಸಿ ದಲಿತರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಇನ್ನೂ ಎಷ್ಟು ದಿನ ಅವಕಾಶ ತಪ್ಪಿಸುತ್ತಾರೆ ನೋಡೋಣ' ಎಂದು ಹೇಳಿದರು.

ಹೈಕಮಾಂಡ್ ಭೇಟಿ: 'ಅತಿ ಹಿಂದುಳಿದ ವರ್ಗಗಳ ಮಠಾಧೀಶರ ಒಕ್ಕೂಟದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಶೀಘ್ರದಲ್ಲೇ ಭೇಟಿಮಾಡಲಾಗುವುದು. ಆ ಬಳಿಕ ಅತಿ ಹಿಂದುಳಿದ ವರ್ಗಗಳ ಜನರನ್ನು ಎಚ್ಚರಿಸುವುದಕ್ಕಾಗಿ ಚಿತ್ರದುರ್ಗದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಲಾಗುವುದು' ಎಂದರು. ಚಿತ್ರದುರ್ಗದ ಬಂಜಾರ ಗುರುಪೀಠದ ಸೇವಾಲಾಲ್ ಸರ್ದಾರ್ ಸ್ವಾಮೀಜಿ, ಕುಂಬಾರ ಗುರುಪೀಠದ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಪತ್ರಿಕಾಗೋಷ್ಠಿಯಲ್ಲಿದ್ದರು.

ಅಪಘಾತ: ಅಥಣಿಯ ಐವರು ಸಾವು

ಅಥಣಿ (ಬೆಳಗಾವಿ ಜಿಲ್ಲೆ): ಆಂಧ್ರದ ಅನ್ನಮಯ್ಯ ಜಿಲ್ಲೆಯ ಕೆವಿಪಲ್ಲಿ ಮಂಡಲದ ಸಮೀಪ ಕಡಪ– ಚಿತ್ತೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ ಮತ್ತು ಕ್ರೂಸರ್ ವಾಹನದ ನಡುವೆ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಅಥಣಿಯ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಥಣಿ ತಾಲ್ಲೂಕಿನ ಬಡಚಿ ಗ್ರಾಮದ ಶೋಭಾ ಆಜೂರ (36), ಅಂಬಿಕಾ ಆಜೂರ (14), ಮಹಾನಂದಾ ಆಜೂರ (32), ಹನುಮಂತ ಆಜೂರ (42) ಮತ್ತು ವಾಹನ ಚಾಲಕ ಹನುಮಂತ ಜಾಧವ (32) ಮೃತರು.

'ಮನುಸ್ಮೃತಿ ಜಾರಿ ಯತ್ನ ಮಣಿಸಿ'

ಒಂದನೇ ಪುಟದಿಂದ

ಭಾರತ ಜಗತ್ತಿನ ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಅಸಮಾನತೆಯನ್ನು ಮೆಟ್ಟಿ, ಸುಸ್ಥಿರ ಅಭಿವೃದ್ಧಿಯ ಕಡೆಗೆ ಗಮನ ಹರಿಸುವ ಮೂಲಕ ಸಂವಿಧಾನದ ಆಶಯವನ್ನು ಮತ್ತಷ್ಟು ಗಟ್ಟಿಗೊಳಿಸಬೇಕಿದೆ

ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

'ಮಕ್ಕಳು, ಯುವಜನರು ಸೇರಿದಂತೆ ಎಲ್ಲರಿಗೂ ಸಂವಿಧಾನ ಮತ್ತು ಅದರ ಆಶಯಗಳ ಕುರಿತು ಅರಿವು ಅಗತ್ಯ. ಅದಕ್ಕಾಗಿಯೇ ಸರ್ಕಾರವು ಸಂವಿಧಾನದ ಪ್ರಸ್ತಾವನೆಯ ವಾಚನ ಕಾರ್ಯಕ್ರಮ ಹಮ್ಮಿಕೊಂಡಿದೆ. ದೇಶದ ಎಲ್ಲರೂ ಸಂವಿಧಾನವನ್ನು ಅರಿಯಬೇಕು. ಸಂವಿಧಾನದ ಆಶಯದಂತೆ ನಡೆಯಬೇಕು. ಆಗ ಸಮಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಇಲ್ಲವಾದರೆ ದೇಶದಲ್ಲಿನ ಅಸಮಾನತೆಯನ್ನು ಹೋಗಲಾಡಿಸುವುದು ಕಷ್ಟ'ಎಂದರು.

ಸಹಸ್ರಾರು ಮಕ್ಕಳಿಂದ ವಾಚನ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಂದು ಶಾಲಾ–ಕಾಲೇಜಿನಲ್ಲಿ ನಿತ್ಯವೂ 'ಸಂವಿಧಾನ ಪೀಠಿಕೆ' ಓದುವ ಯೋಜನೆ ರೂಪಿಸಿದೆ.

ಸಂವಿಧಾನದ ಆಶಯಗಳು, ಸಂವಿಧಾನ ಕೊಟ್ಟಿರುವ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಯುವ ಸಮುದಾಯದಲ್ಲಿ ಅರಿವು ಮೂಡಿಸುವ ಆಶಯ ಇದರ ಹಿಂದಿದೆ.

ಸಮಾಜ ಕಲ್ಯಾಣ ಇಲಾಖೆ ರೂಪಿಸಿರುವ ಈ ವಿಶೇಷ ಕಾರ್ಯಕ್ರಮಕ್ಕೆ ವಿಶ್ವ ಪ್ರಜಾಪ್ರಭುತ್ವದ ದಿನವಾದ ಸೆ.15ರಂದು ಇಡೀ ರಾಜ್ಯದಲ್ಲಿ ಚಾಲನೆ ನೀಡಲಾಯಿತು.

ಎಲ್ಲ ಜಿಲ್ಲೆಗಳಲ್ಲೂ ನಡೆದ ಸಮಾರಂಭದಲ್ಲಿ ಶಾಲಾ–ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಭಾಗಿಯಾಗಿ, ಸಂವಿಧಾನದ ಪೀಠಿಕೆಗಳನ್ನು ಓದಿ ಸಂಭ್ರಮಿಸಿದರು.

ವಿಧಾನಸೌಧದ ಎದುರು ನಡೆದ ಬೃಹತ್ ಸಮಾರಂಭದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು, ವಿಶ್ವ ಪ್ರಜಾಪ್ರಭುತ್ವ ದಿನಕ್ಕೆ ಸಾಕ್ಷಿಯಾದರು.

ಅನಿವಾಸಿ ಭಾರತೀಯರೂ ಭಾಗಿ: ಆಸ್ಟ್ರೇಲಿಯಾ, ಅಮೆರಿಕ, ಕೆನಡಾ, ಸೌದಿ ಅರೇಬಿಯಾ, ನೆದರ್ಲೆಂಡ್ಸ್, ಸ್ಪೇನ್, ಸ್ವೀಡನ್, ಜರ್ಮನಿ, ತೈವಾನ್ ಮತ್ತು ಇಟಲಿ ಹೀಗೆ 20 ದೇಶದಲ್ಲಿರುವ ಅನಿವಾಸಿ ಭಾರತೀಯರೂ ಓದು ಅಭಿಯಾನದಲ್ಲಿ ಭಾಗಿಯಾದರು.

ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ವಸತಿ ಶಾಲೆಗಳ ಹಲವು ಸಾವಿರ ವಿದ್ಯಾರ್ಥಿಗಳು ಸಂವಿಧಾನದ ಪ್ರಸ್ತಾವನೆ ವಾಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಸಾವಿರಾರು ಮಕ್ಕಳು ಇದ್ದರು. ಮುಖ್ಯಮಂತ್ರಿ ಅವರು ಸಂವಿಧಾನದ ಪ್ರಸ್ತಾವನೆಯನ್ನು ಓದುತ್ತಿದ್ದಂತೆಯೇ ಏಕಕಾಲಕ್ಕೆ ದನಿಗೂಡಿಸಿದರು.

ಸ್ಫೋಟ: ಕದ್ರಿ ದೇವಸ್ಥಾನವೇ ಗುರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಶಿವಮೊಗ್ಗದ ಅರಾಫತ್ ಅಲಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ಬಂಧಿಸಿದ ಬೆನ್ನಲ್ಲೇ ಸ್ಫೋಟದ ಸಂಚು ಬಹಿರಂಗಗೊಂಡಿದೆ.

ಆರೋಪಿಗಳು ಕದ್ರಿ ಮಂಜುನಾಥ ದೇವಾಲಯವನ್ನೇ ಗುರಿಯಾಗಿಸಿ ದಾಳಿ ನಡೆಸಲು ಸಿದ್ಧತೆ ನಡೆಸಿದ್ದರು ಎಂಬುದನ್ನು ಎನ್‌ಐಎ ದೃಢಪಡಿಸಿದೆ.

ವಿದೇಶದಲ್ಲಿದ್ದುಕೊಂಡೇ ಇಲ್ಲಿನ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದ ಅರಾಫತ್ ಅಲಿ, ಶಿವಮೊಗ್ಗದ ಟ್ರಯಲ್ ಬ್ಲಾಸ್ಟ್, ಮಂಗಳೂರಿನ ಕುಕ್ಕರ್ ಸ್ಫೋಟ ಹಾಗೂ ಗೋಡೆ ಬರಹದ ಸಂಚು ರೂಪಿಸಿದ್ದ ಎಂಬ ಮಾಹಿತಿ ಎನ್‌ಐಎ ಗುರುವಾರ ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ಲಭಿಸಿದೆ.

ಅರಾಫತ್ ಅಲಿಯಿಂದ ಪ್ರಚೋದನೆಗೆ ಒಳಗಾಗಿದ್ದ ಶಾರಿಕ್ ಕುಕ್ಕರ್ ಬಾಂಬ್ ಸ್ಫೋಟಿಸಲು ಸಿದ್ಧತೆ ನಡೆಸಿದ್ದ. ಇದಕ್ಕೂ ಮೊದಲು ನಗರದಲ್ಲಿ ಉಗ್ರರ ಕೃತ್ಯಕ್ಕೆ ಸಂಬಂಧಿಸಿದ ಗೋಡೆ ಬರಹ ಪ್ರಕರಣ ದಾಖಲಾಗಿತ್ತು. ಆರೋಪಿಗಳಾದ ಮಾಝ್ ಮುನೀರ್ ಮತ್ತು ಯಾಸೀನ್ ಈ ಕೃತ್ಯದಲ್ಲಿ ಭಾಗಿಯಾಗಿದ್ದರು. ಇವರಿಗೂ ಅರಾಫತ್ ಪ್ರೇರಣೆ ನೀಡಿದ್ದ. ಆ ನಂತದಲ್ಲಿ ಶಿವಮೊಗ್ಗದಲ್ಲಿ ಸ್ಫೋಟಿಸುವ ಪ್ರಯೋಗ ನಡೆದಿತ್ತು. ಅಂತಿಮವಾಗಿ ಕುಕ್ಕರ್ ಬಾಂಬ್ ಸ್ಫೋಟಿಸಲು ಶಾರಿಕ್ ಸಂಚು ರೂಪಿಸಿದ್ದ.

2022ರ ನವೆಂಬರ್ 19ರಂದು ಕುಕ್ಕರ್ ಬಾಂಬ್ ಹಿಡಿದು ಆಟೊ-ರಿಕ್ಷಾದಲ್ಲಿ ತರುವ ವೇಳೆ ಅದು ಸ್ಫೋಟಗೊಂಡಿತ್ತು.

ಆದರೆ, ಆಗ ಶಾರಿಕ್ ಗುರಿ ಯಾವುದಿತ್ತು ಎಂಬ ಬಗ್ಗೆ ಸ್ಪಷ್ಟತೆ ದೊರೆತಿರಲಿಲ್ಲ. ಬಾಂಬ್ ಸ್ಫೋಟದಲ್ಲಿ ಗಾಯಗೊಂಡು, ಆಸ್ಪತ್ರೆಗೆ ದಾಖಲಾಗಿದ್ದ ಶಾರಿಕ್, ಗುಣಮುಖನಾದ ಮೇಲೆ ಎನ್‌ಐಎ ತಂಡ ಆತನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿತ್ತು.

ಲೋಕಾಯುಕ್ತ ಬಲೆಗೆ ಉಪ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಶಿವಾನಂದ ಬಿರಾದಾರ

ಬಸವಕಲ್ಯಾಣ (ಬೀದರ್ ಜಿಲ್ಲೆ): ₹ 1 ಲಕ್ಷ ನಗದು ಲಂಚ ಪಡೆಯುತ್ತಿದ್ದಾಗ ಕೊಹಿನೂರ ನಾಡ ಕಚೇರಿ ಉಪ ತಹಶೀಲ್ದಾರ್ ಶಿವಾನಂದ ಬಿರಾದಾರ ಶುಕ್ರವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಜಮೀನಿನ ಮ್ಯುಟೇಶನ್ ಮತ್ತು ಪಹಣಿಯಲ್ಲಿ ಹೆಸರು ಸೇರಿಸಲು ನಾಡ ಕಚೇರಿ ಉಪ ತಹಶೀಲ್ದಾರ್ ಶಿವಾನಂದ ಒಟ್ಟು ₹2.50 ಲಕ್ಷ ಲಂಚ ಕೇಳಿದ್ದಾರೆ ಎಂದು ತಾಲ್ಲೂಕಿನ ಉಜಳಂಬ ಗ್ರಾಮದ ಸುಧೀರ ಮಹಾದೇವ ಡೊಂಬೆ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ₹1 ಲಕ್ಷ ಹಣ ಮುಂಗಡವಾಗಿ ಪಡೆಯುತ್ತಿದ್ದಾಗ ಲೋಕಾಯುಕ್ತ ಡಿವೈಎಸ್ಪಿ ಎನ್.ಎಂ.ಓಲೇಕಾರ್ ನೇತೃತ್ವದ ತಂಡ ದಾಳಿ ನಡೆಸಿ ಶಿವಾನಂದ ಅವರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಾವಿರಕ್ಕೂ ಹೆಚ್ಚು ಗ್ರಾಮಸ್ಥರ ವಿರುದ್ಧ ಎಫ್‌ಐಆರ್!

ಪ್ರಜಾವಾಣಿ ವಾರ್ತೆ

ಕೋಲಾರ: ಶ್ರೀನಿವಾಸಪುರ ತಾಲ್ಲೂಕಿನ ನಂಬಿಹಳ್ಳಿಯಲ್ಲಿ ಈಚೆಗೆ ಮೊದಲ ಪತ್ನಿಯನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ಆರೋಪಿಯ ಹತ್ಯೆಗೆ ಮುಂದಾಗಿದ್ದ ಹಾಗೂ ತಡೆಯಲು ಹೋದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಗ್ರಾಮದ ಸಾವಿರಕ್ಕೂ ಹೆಚ್ಚು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬಂಧನ ಭೀತಿಯಿಂದ ಹೆಚ್ಚಿನವರು ಗ್ರಾಮವನ್ನು ತೊರೆದಿದ್ದಾರೆ.

ಸೆ.12ರಂದು (ಮಂಗಳವಾರ) ಜೋಡಿ ಕೊಲೆ ನಂತರ ಆರೋಪಿ ನಾಗೇಶ್ ಅಡಗಿದ್ದ ಕೊಠಡಿ ಮೇಲೆ ದಾಳಿ ಮಾಡಿದ ಗ್ರಾಮಸ್ಥರು ಆತನನ್ನು ದೊಣ್ಣೆ, ಕಲ್ಲುಗಳಿಂದ ಹೊಡೆದು ಸಾಯಿಸಲು ಮುಂದಾಗಿದ್ದರು. ಅದನ್ನು ತಡೆಯಲು ಹೋದ ಪೊಲೀಸರ ಕರ್ತವ್ಯಕ್ಕೂ ಅಡ್ಡಿ ಪಡಿಸಿದ್ದರು. ಶ್ರೀನಿವಾಸಪುರ ಠಾಣೆ ಪಿಎಸ್‌ಐ ಈಶ್ವರಪ್ಪ ದೂರು ದಾಖಲಿಸಿದ್ದರು.

ಸುಧಾ, ಮಯೂರ ಓದಿರಿ

ಕೆ.ಸಿ.ವ್ಯಾಲಿ ಕೊಳಚೆ!

ಒಂದನೇ ಪುಟದಿಂದ

'ಸೊಳ್ಳೆಗಳ ಕಾಟದಿಂದ ಹಗಲು ಹೊತ್ತಿನಲ್ಲೂ ಮನೆಗಳ ಕಿಟಕಿ, ಬಾಗಿಲು ತೆರೆಯಲು ಆಗದ ಪರಿಸ್ಥಿತಿ ಇದೆ. ಬಾಗಿಲಿಗೂ ಸೊಳ್ಳೆ ಪರದೆ ಕಟ್ಟಿದ್ದೇವೆ. ಸಂಜೆ 4 ಗಂಟೆ ಕಳೆದರೆ ಹೊರಗಡೆ ತಿರುಗಾಡಲು ಸಾಧ್ಯವಿಲ್ಲ. ಸೊಳ್ಳೆಗಳ ಹಿಂಡು ಮುತ್ತಿಕೊಳ್ಳುತ್ತವೆ. ನೀರು ಹರಿಯುವಾಗ ಮೂಗಿಗೆ ರಾಚುವ ದುರ್ವಾಸನೆಗೆ ತಲೆಸುತ್ತು, ಉಬ್ಬಳಿಕೆ ಮತ್ತು ವಾಂತಿ ಬರುತ್ತದೆ' ಎನ್ನುತ್ತಾರೆ ಗ್ರಾಮಸ್ಥರು.

ಈ ಸಮಸ್ಯೆ ಬಗೆಹರಿಸಲು ಯೋಜನೆಯ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ ಎಲ್ಲರಿಗೂ ಮನವಿ ಮಾಡಿಕೊಂಡಿದ್ದೇವೆ. ಈವರೆಗೂ ಮುಕ್ತಿ ಸಿಕ್ಕಿಲ್ಲ. ಕಾಲುವೆಗೆ ಸ್ವಲ್ಪ ದೂರ ಸಿಮೆಂಟ್ ಕಟ್ಟೆ ಕಟ್ಟಿ ಕೈತೊಳೆದುಕೊಂಡಿದ್ದಾರೆ ಎನ್ನುವುದು ಗ್ರಾಮಸ್ಥರ ದೂರು.

'ಜೋರು ಮಳೆಯಾದಾಗ ಕಾಲುವೆಯ ನೀರು ಮನೆಗಳಿಗೆ ನುಗ್ಗುತ್ತದೆ. ಮಕ್ಕಳು ಆ ನೀರಿನಲ್ಲೇ ಇಳಿದು ಆಟವಾಡುತ್ತಿರುತ್ತಾರೆ. ಶೀತ,

ಕೆಮ್ಮು, ಜ್ವರ, ನವೆ, ಇನ್ನಿತರ ಸಮಸ್ಯೆ ಕಾಣಿಸಿಕೊಳ್ಳುತ್ತಿವೆ. ಒಮ್ಮೆ ಆಸ್ಪತ್ರೆಗೆ ಹೋದರೆ ಕನಿಷ್ಠ ಒಂದು ಸಾವಿರ ರೂಪಾಯಿ ಖರ್ಚಾಗುತ್ತದೆ' ಎನ್ನುತ್ತಾರೆ ಗ್ರಾಮ ಪಂಚಾಯಿತಿ ಸದಸ್ಯ ಶಂಕರ್.

ಜಿಲ್ಲೆಗೆ 2018ರಲ್ಲಿ ಕೆ.ಸಿ.ವ್ಯಾಲಿ ನೀರು ಬಂತು. ಸಮಸ್ಯೆಯಿಂದ ಬೇಸತ್ತು ಹಲವರು ಮನೆ ತೊರೆದಿದ್ದು, ಅಂಥ ಮನೆಗಳು ಈಗಲೂ ಪಾಳು ಬಿದ್ದಿವೆ.

'ಇಂಥ ಪರಿಸ್ಥಿತಿ ಬರುತ್ತದೆ ಎಂಬುದು ಗೊತ್ತಿದ್ದರೆ ಇಲ್ಲಿ ಮನೆ ಕಟ್ಟಿಸುತ್ತಿರಲಿಲ್ಲ. ಕಾಲುವೆಗೆ ತಡೆಗೋಡೆ ಇಲ್ಲ. ಆಡುವ ಮಕ್ಕಳು ಬಿದ್ದರೇನು ಗತಿ? ಸೊಳ್ಳೆ, ನೊಣ, ಹಾವುಗಳ ಕಾಟದಿಂದ ಸಾಕಾಗಿದೆ' ಎನ್ನುತ್ತಾರೆ ಗ್ರಾಮದ ಮಹಿಳೆಯರು.

ಇ– ಎಫ್‌ಐಆರ್ ವ್ಯವಸ್ಥೆಗೆ ಚಾಲನೆ

ಒಂದನೇ ಪುಟದಿಂದ

ಈ ಎಫ್‌ಐಆರ್ ಪ್ರತಿಗೆ ಕಾನೂನುಬದ್ಧ ಮಾನ್ಯತೆ ಇದ್ದು, ಇದರಲ್ಲಿರುವ ಸಾರಾಂಶವನ್ನು ಆಧರಿಸಿ ಪೊಲೀಸರು ತನಿಖೆ ಮುಂದುವರಿಸಲಿದ್ದಾರೆ.

ಕಳವಾದ ವಾಹನಗಳು ಪತ್ತೆಯಾದರೆ ಮಾಲೀಕರಿಗೆ ಪೊಲೀಸರೇ ಮಾಹಿತಿ ನೀಡಲಿದ್ದಾರೆ.

ಇ–ಚಲನ್: ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ ತಪ್ಪಿತಸ್ಥರಿಗೆ ಇ–ಚಲನ್ ನೀಡುವ ವ್ಯವಸ್ಥೆಗೂ ಸಿದ್ದರಾಮಯ್ಯ ಚಾಲನೆ ನೀಡಿದರು.

ಮುಂಬರುವ ನವೆಂಬರ್ 1ರಿಂದ ಈ ವ್ಯವಸ್ಥೆ ಜಾರಿಗೆ ಬರಲಿದೆ.

ಓಂ ಶಾಂತಿ



ಆರ್. ಚಂದ್ರಶೇಖರ್
(ಮುಖ್ಯ ಇಂಜಿನೀಯರ್– ಕೆ.ಪಿ.ಡಬ್ಲ್ಯೂ.ಡಿ (ನಿವೃತ್ತ))
09.06.1935 – 09.09.2023
ಯಾವಗಲೂ ನಮ್ಮ ಹೃದಯದಲ್ಲಿ, ನಮ್ಮ ಮನಸ್ಸಿನಲ್ಲಿ ಶಾಶ್ವತವಾಗಿರುವಿರಿ
ಇಂತಿ ದುಃಖತಪ್ತರು
ಬಿಂದು, ವಾಸುಕಿ ಪ್ರಕಾಶ್, ಬೀನಾ, ಗುರುರಾಜ್, ನವ್ಯಾ, ಶರತ್
ಮತ್ತು ಇತರ ಕುಟುಂಬ ವರ್ಗದವರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ–577526
(ಚಿತ್ರದುರ್ಗ ಜಿಲ್ಲೆ)
ಇ–ಮೇಲ್ :apmcholalkere@gmail.com, ದೂರವಾಣಿ:–08191–275113
ಸಂಖ್ಯೆ:ಕೃಉಮಾಸ(ಹೊಳ):ಆರ್.ಐ.ಡಿ.ಎಫ್–28/308/2023–24 ದಿ: 14.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ ವತಿಯಿಂದ 2022–23 ನೇ ಸಾಲಿನ ಆರ್.ಐ.ಡಿ.ಎಫ್.–28 ರ ಯೋಜನೆಯಡಿ ಅನುಮೋದನೆಗೊಂಡ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ **Providing infrastructures facilities In Main Market Yard of APMC Holalkere** ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ http://kppp.karnataka.gov.in ವೆಬ್‌ಸೈಟ್ ನಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು **Standard Tender Documents KW-4 (with latest amendments)** ಷರತ್ತುಗಳನ್ವಯ ಟೆಂಡರ್ ಆಹ್ವಾನಿಸಲಾಗಿದ್ದು ವಿವರ ಈ ಕೆಳಕಂಡಂತಿರುತ್ತದೆ.

(1) ಬಿಡ್ ಪ್ರಕಟವಾಗುವ ದಿನಾಂಕ:15.09.2023 (2) ಟೆಂಡರ್ ಪೂರ್ವಭಾವಿ ಸಭೆ/ ಸ್ಪಷ್ಟೀಕರಣ ದಿನಾಂಕ:25.09.2023 ಬೆಳಗ್ಗೆ 11.00 ಗಂಟೆಗೆ ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ ಸಭಾಂಗಣದಲ್ಲಿ (3) ಟೆಂಡರ್‌ನ್ನು ವೆಬ್‌ಸೈಟ್‌ನ ಮೂಲಕ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ:05.10.2023 ರ ಸಾಯಂಕಾಲ 4:30 ಗಂಟೆಗೆ (4) ತಾಂತ್ರಿಕ ಬಿಡ್‌ನ್ನು ವೆಬ್‌ಸೈಟ್‌ನಲ್ಲಿ ತೆರೆಯುವ ದಿನಾಂಕ:07.10.2023 ಸಾಯಂಕಾಲ 4:30 ಗಂಟೆಗೆ (5) ಆರ್ಥಿಕ ಬಿಡ್‌ನ್ನು ವೆಬ್‌ಸೈಟ್‌ನಲ್ಲಿ ತೆರೆಯುವ ದಿನಾಂಕ (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರು) ಸಾಧ್ಯವಾದಲ್ಲಿ: 17.10.2023ರ ಬೆಳಗ್ಗೆ:11:30 ಗಂಟೆಗೆ (6) 18% ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಕಾಮಗಾರಿಯ ಹೆಸರು:–(1) **R.I.D.F-28** ರ ಯೋಜನೆಯಡಿ ಅನುಮೋದನೆಗೊಂಡ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ **Providing infrastructures facilities In Main Market Yard of APMC Holalkere** ಕಾಮಗಾರಿ. (2) ಟೆಂಡರ್‌ಗಿಟ್ಟ ಮೊತ್ತ: ರೂ 4,18,50,070/– (3) ಇ.ಎಂ.ಡಿ. ಮೊತ್ತ ರೂ.6,28,000/– (4) ಟೆಂಡರ್ ಪ್ರೋಸಸಿಂಗ್ ಫೀ: ಇ–ಪೋರ್ಟಲ್ ಅನ್ವಯ (5) ಕಾಮಗಾರಿ ಕಾಲಾವಧಿ: $5^1/_2$ ತಿಂಗಳು (ಮಳೆಗಾಲ ಹೊರತುಪಡಿಸಿ).

ಟೆಂಡರ್ ಷರತ್ತುಗಳು–ವ–ನಿಬಂಧನೆಗಳನ್ನು http://kppp.karnataka.gov.in ವೆಬ್‌ಸೈಟ್ ಅಥವಾ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕುನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. ಸಮಿತಿಯ ಹಣಕಾಸಿನ ಲಭ್ಯತೆ ಅನುಸಾರ ಕಾಮಗಾರಿ ಬಿಲ್ ಪಾವತಿಸಲಾಗುವುದು. ಯಾವುದೇ ತಿದ್ದುಪಡಿ ಇದ್ದಲ್ಲಿ ಮೇಲಿನ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

ಸಹಿ/– (ಜಿ.ಎಸ್. ಸುರೇಶ್) ಕಾರ್ಯದರ್ಶಿ, ಕೃ.ಉ.ಮಾ.ಸ., ಹೊಳಲ್ಕೆರೆ.
ಸಹಿ/– (ಬಿ.ಎಲ್ ಕೃಷ್ಣಪ್ಪ) ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹೊಳಲ್ಕೆರೆ.
DIPR/CTA/KSMCA/208/2023-24

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

ಟೆಂಡರ್ ಪ್ರಕಟಣೆ–(ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್ ಮೂಲಕ)

ಸಂಖ್ಯೆ:ಕಾಇಂ:ಗ್ರಾಕುನೀ&ನೈಇ:ವಿಶಿ:ಕಿ.ಇಂ–2:MVS: Umblebailu, Kallahalli KPPP : 2023-24:865 ದಿನಾಂಕ : 14.09.2023

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಕಾಮಗಾರಿಗೆ ಐಟಂವಾರು ಟೆಂಡರ್ ಅನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ/ಲೋಕೋಪಯೋಗಿ ಇಲಾಖೆಯಲ್ಲಿ **2020-25** ರ ವರೆಗೆ ನೊಂದಾಯಿಸಿರುವ (1ನೇ ದರ್ಜೆ & ಮೇಲ್ಪಟ್ಟು) ಅಧಿಕೃತ ಗುತ್ತಿಗೆದಾರರಿಂದ Standard Tender Document of work KW-4 ರಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿಯನ್ನು ಇ–ಪೇಮೆಂಟ್‌ನಲ್ಲಿ ಸಲ್ಲಿಸುವವರು ಕ್ರೆಡಿಟ್/ಡೆಬಿಟ್ ಕಾರ್ಡ್ ಮುಖಾಂತರ ಸಲ್ಲಿಸಬಹುದು. (1) ಪ್ರಿ–ಬಿಡ್ ದಿನಾಂಕ ಮತ್ತು ಸ್ಥಳ : **20.09.2023 ಬೆಳಿಗ್ಗೆ 11.30** ಗಂಟೆಗೆ ಮಾನ್ಯ ಮುಖ್ಯ ಅಭಿಯಂತರರ ಕಛೇರಿ, ಕಾವೇರಿ ಭವನ ಕೆ.ಎಚ್.ಬಿ. ಕಟ್ಟಡ ಬೆಂಗಳೂರು. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **12.10.2023 ರ ಸಂಜೆ 16.00** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13.10.2023 ರ ಬೆಳಿಗ್ಗೆ 11.30** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **16.10.2023 ರ ಬೆಳಿಗ್ಗೆ 11.00** (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **15 ತಿಂಗಳು.** ಮೇಲ್ಕಾಣಿಸಿದ ದಿನವೇನಾದರು ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು ಟೆಂಡರ್ ಕಾಮಗಾರಿಗಳ ವಿವರ, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು ಹಾಗೂ ನಿಯಮಾವಳಿಗಳನ್ನೊಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖಾ ಜಾಲತಾಣದಲ್ಲಿ **https://www.kppp.karnataka.gov.in** ರಲ್ಲಿ ಪಡೆಯಬಹುದು. ಕ್ರ.ಸಂ. 1. ಇಂಡೆಂಟ್ ಸಂಖ್ಯೆ : **RWSSD/2023-24/WS/WORK_INDENT2593** ಕಾಮಗಾರಿಯ ಹೆಸರು : **Multi Village Water Supply Scheme to Umblebailu, Kallahalli and other 28 Habitations of Shivamogga and Bhadravathi Taluks in Shivamogga District on DBOT basis under jal Jeevan Mission.** ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **3449.74** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **3450000/-** ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **15 ತಿಂಗಳು**

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.35-09/ಝೇಂಕಾರ್/2023-24

(ಜಲ ಸಂಪನ್ಮೂಲ ಇಲಾಖೆ)
ಆಣೆಕಟ್ಟು ಸುರಕ್ಷತಾ ಸಂಸ್ಥೆ (ಡಿ.ಎಸ್.ಓ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರೂರು, ಹಾಸನ ಜಿಲ್ಲೆ
ದೂ. ಕಚೇರಿ: 08172–225424, ಇ–ಮೇಲ್: ee.cmogorur@gmail.com
ಸಂಖ್ಯೆ: WRD/2023-24/SE0015 ದಿನಾಂಕ: 13–09–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ)

ಮುಖ್ಯ ಇಂಜಿನಿಯರ್, ಆಣೆಕಟ್ಟು ಸುರಕ್ಷತಾ ಸಂಸ್ಥೆ (ಡಿ.ಎಸ್.ಓ), ಬೆಂಗಳೂರು ವಲಯದ ಕಾರ್ಯಪಾಲಕ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರೂರು, ಹಾಸನ ಜಿಲ್ಲೆ ಇವರ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಸಿ.ಎಮ್.ಓ ಬೆಂಗಳೂರು, ಗೊರೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಉಪ–ವಿಭಾಗಗಳಿಗೆ ಹಾಗೂ ಜಲ ಸಂಪನ್ಮೂಲ ಇಲಾಖೆಯ ಸಚಿವಾಲಯದ ಅಧಿಕಾರಿಗಳಿಗೆ ಹಂಚಿಕೆಯಾಗಿರುವ **ಸರ್ಕಾರಿ ವಾಹನಗಳಿಗೆ 2023–24ನೇ ಸಾಲಿಗೆ ಎಲ್.ಎಂ.ವಿ. ವಾಹನ ಚಾಲಕರ (40 ಸಂಖ್ಯೆ) ಸೇವೆಯನ್ನು** ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಏಜೆನ್ಸಿದಾರರು / ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **20–09–2023 ಸಂಜೆ 5.30 ಗಂಟೆಯಾಗಿದ್ದು,** ತಾಂತ್ರಿಕ ಬಿಡ್‌ನ್ನು ದಿನಾಂಕ: **21–09–2023 ರಂದು ಸಂಜೆ 5.30 ಗಂಟೆಗೆ** ತೆರೆಯಲಾಗುವುದು ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ: **22–09–2023 ರಂದು ಬೆಳಗ್ಗೆ 11:00 ಗಂಟೆಗೆ** ತೆರೆಯಲಾಗುವುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://kppp.karnataka.gov.in** ರಲ್ಲಿ ಪಡೆಯಬಹುದು.

ವಾಸಾಸಂಇ/ವಾ.ಪ್ರ/1314/ ಅಡ್ವಟೋರ್/2023–24
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರೂರು.

ಪುರಸಭಾ ಕಾರ್ಯಾಲಯ ಅಂಕೋಲಾ (ಉ.ಕ) 581314
ದೂರವಾಣಿ/ಫ್ಯಾಕ್ಸ್: 08388-230268 Website: www.ankolatown.gov.in
Email: itstaff_ulb_ankola@yahoo.com, co_ankola@yahoo.in
ಕ್ರ:ಪು.ಸ.ಅಂ.ಕಾವಿ.ಟೆ.ಪ್ರ:3ನೇಕರೆ:ವಿವ/2023–24 ದಿನಾಂಕ: 13/09/2023

ಟೆಂಡರ ಪ್ರಕಟಣೆ– 3ನೇ ಕರೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(E-GOK ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ 2000 ರಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 2018–19 ನೇ ಸಾಲಿನ ಘನತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಡಾಕ್ಯೂಮೆಂಟ್ **KW-3** ನಿಬಂಧನೆಗೊಳಪಟ್ಟಂತೆ, ನೋಂದಾಯಿಸಿದ ಅರ್ಹ ದರ್ಜೆಯ **E-GOK** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ರಜಿಸ್ಟ್ರೇಶನ್ ಮಾಡಿಸಿದ ಗುತ್ತಿಗೆದಾರರಿಂದ ನಿಶ್ಚಿತ ಕಾಮಗಾರಿಯ ಹೆಸರನ್ನು ನಮೂದಿಸಿದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸಲಾಗುವುದು. ಸದರಿ ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಮಗಳ ಮತ್ತು ಟೆಂಡರ್ ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ. (1) ತಾಂತ್ರಿಕ ಹಾಗೂ ಆರ್ಥಿಕವಾಗಿ ದ್ವಿ–ಲಕೋಟೆಯಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 27/09/2023 ಸಂಜೆ 4:00 ಗಂಟೆ** (2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29/09/2023** (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30/09/2023** (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಅನುಬಂಧ: ಕಾಮಗಾರಿಗಳ ವಿವರ: Construction of Windrow Compost platform at solid waste Processing & Disposal site. DMA/2023-24/BD/WORK_INDENT 574, ಅಂದಾಜು ರಕಂ: **64.89 ಲಕ್ಷ,** ಇ.ಎಂ.ಡಿ ರಕಂ **ರೂ. 1,29,800.00,** ಗುತ್ತಿಗೆದಾರರ ದರ್ಜೆ: **3 ಮತ್ತು ಮೇಲ್ಪಟ್ಟ ದರ್ಜೆ ಸಿವಿಲ್ ಗುತ್ತಿಗೆದಾರ,** ಕಾಮಗಾರಿ ಪೂರ್ಣಗೊಳಿಸಲು ನೀಡಿದ ಅವಧಿ: **6 ತಿಂಗಳು**

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು **E-GOK** ಇ–ಪ್ರೊಕ್ಯೂರಮೆಂಟ್ ಪ್ಲಾಟ್ ಫಾರಂನಲ್ಲಿ **www.kppp.karnataka.gov.in** ರಲ್ಲಿ ಪಡೆಯಬಹುದು ಹೆಚ್ಚಿನ ಮಾಹಿತಿಯನ್ನು ಹಾಗೂ ಶರ್ತುಗಳನ್ನು ಈ ಕಾರ್ಯಾಲಯದಿಂದ ಖುದ್ದಾಗಿ ಅಥವಾ **www.ankolatown.mrc.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಅಂಕೋಲಾ
ಸಹಿ/– ಆಡಳಿತಾಧಿಕಾರಿ, ಪುರಸಭೆ ಅಂಕೋಲಾ
DIPR/ADK/KSMCA/210/23-24 dt:14.09.2023

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–04, ಭೂತರಾಮನಹಟ್ಟಿ,
ಬೆಳಗಾವಿ–591156 (ನ್ಯಾಕ್ ಮಾನ್ಯತೆ B+ ಗ್ರೇಡ್–2021)
E-mail: rcubuilding2016@gmail.com, registrar@rcub.ac.in
ಕುಲಸಚಿವರ ಕಾರ್ಯಾಲಯ, Office of the Registrar
Website: www.rcub.ac.in Phone No.: 0831-2565257/03
ಸಂಖ್ಯೆ:ರಾಚವಿ/ಬೆಳಗಾವಿ/ಕುಸಕಾ/2023–24/2324 ದಿನಾಂಕ:15–09–2023

ಪತ್ರಿಕಾ ಪ್ರಕಟಣೆ
–: ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ):–

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಮುದ್ರಣ ಕಾರ್ಯಗಳಿಗೆ ಸಂಬಂಧಿಸಿ ಒಂದು ವರ್ಷದ ದರ ಒಪ್ಪಂದಕ್ಕಾಗಿ ದಿನಾಂಕ:16.09.2023 ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು http://kppp.karnataka.gov.in ಮೂಲಕ ದಿನಾಂಕ 01.10.2023 ಸಂಜೆ 04.00 ಗಂಟೆಯೊಳಗಾಗಿ ಸದರಿ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಲ್ಲಿ ಹಾಗೂ ವಿಶ್ವವಿದ್ಯಾಲಯದ ಎಸ್ಟೇಟ್ ವಿಭಾಗದಿಂದ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
DIPR/BGM/RO-NO-404/KSMCA/2023-24

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ & 4ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.
No.: SPLOCA/ADM/GEN/42/2023-24 Date: 14.09.2023

ಟೆಂಡರ್ ಕೊಟೇಷನ್‌ನ ಪ್ರಕಟಣೆ

Under the powers conferred under sec 6(3) of the KPIDFE act THE SPECIAL OFFICER AND COMPETENT AUTHORITY, IMA & OTHER KPIDFE SCAM CASES is inviting quotation from eligible valuation agencies or individuals who can carry out Valuation process.

Interested agencies and or individuals may apply only if they are qualified as per the condition of the Wealth Tax Act and ICAI guidelines 2018 and are registered with IBBI.

The tender quotation document, terms and conditions can be downloaded from: **https://sploca.karnataka.gov.in**

Last Date for submission of quotations: **22/09/2023** For any query contact: O/o SPLOCA, IMA & OTHER KPIDFE SCAM CASES, 3rd floor, podium block, V V Towers, Bengaluru - 560001. **e-mail: splocaima21@gmail.com**

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು.
ಐಎಂಎ ಮತ್ತು ಇತರೆ ವಂಚನೆ ಪ್ರಕರಣಗಳು,
ಕಂದಾಯ ಇಲಾಖೆ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/1303/2023–24

ಬಿಜೆಪಿಯ ಕೇಂದ್ರ ಸಮೀಕ್ಷೆ ತಂಡದ ಹೆಸರಿನಲ್ಲಿ ₹21 ಲಕ್ಷ ಪಡೆದು ಮೋಸ: ದೂರು ದಾಖಲು

ಟಿಕೆಟ್ ವಂಚನೆ: ಮತ್ತೊಂದು ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕೊಪ್ಪಳ: ಬೈಂದೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ಉದ್ಯಮಿ ಗೋವಿಂದ ಬಾಬು ಪೂಜಾರಿ ಅವರಿಂದ ₹5 ಕೋಟಿ ಪಡೆದಿದ್ದ ಪ್ರಕರಣದ ಬೆನ್ನಲ್ಲೇ, ಬಿಜೆಪಿ ಟಿಕೆಟ್ ಹೆಸರಿನಲ್ಲಿ ವಂಚಿಸುತ್ತಿದ್ದ ಮತ್ತೊಂದು ಜಾಲ ಪತ್ತೆಯಾಗಿದೆ.

'ಬಿಜೆಪಿ ಕೇಂದ್ರ ಘಟಕದ ಸಮೀಕ್ಷೆ ತಂಡದ ಹೆಸರಿನಲ್ಲಿ ಪರಿಚಯವಾಗಿದ್ದ ಕೆಲವರು, ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹೇಳಿ ₹21 ಲಕ್ಷ ಪಡೆದು ವಂಚಿಸಿದ್ದಾರೆ' ಎಂದು ಆರೋಪಿಸಿ ಜಿ. ತಿಮ್ಮರೆಡ್ಡಿ ಗೌಡ ಅವರು ಅಶೋಕನಗರ ಠಾಣೆಗೆ ದೂರು ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸರು, 'ಕೊಪ್ಪಳ ಜಿಲ್ಲೆಯ ಕಾರಟಗಿ ನಿವಾಸಿ ತಿಮ್ಮರೆಡ್ಡಿ ಅವರು ತಮಗಾದ ವಂಚನೆ ಬಗ್ಗೆ ಜುಲೈ 19ರಂದು ದೂರು ನೀಡಿದ್ದರು. ಆರೋಪಿಗಳಾದ ದೆಹಲಿಯ ವಿಶಾಲ್ ನಾಗರ್, ಬೆಂಗಳೂರಿನ ಗೌರವ್ ಹಾಗೂ ಜೀತು ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ' ಎಂದರು.

ಪತ್ನಿಗೆ ಟಿಕೆಟ್ ಕೊಡಿಸಲು ಪ್ರಯತ್ನ: 'ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದ ತಿಮ್ಮರೆಡ್ಡಿ, ತಮ್ಮ ಪತ್ನಿಗೆ 2023ರ ಚುನಾವಣೆಯಲ್ಲಿ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ (ಮೀಸಲು ಕ್ಷೇತ್ರ) ಬಿಜೆಪಿ ಟಿಕೆಟ್ ಕೊಡಿಸಲು ಪ್ರಯತ್ನಿಸುತ್ತಿದ್ದರು. ಈ ಸಂಗತಿಯನ್ನು ಸ್ನೇಹಿತರ ಬಳಿ ಹೇಳಿಕೊಂಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

> **ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಾಲ್ಕೈದು ತಿಂಗಳ ಹಿಂದೆಯೇ ಹಣ ಪಡೆದಿದ್ದರು. ವಾಪಸು ಕೊಡದಿದ್ದಕ್ಕೆ ದೂರು ನೀಡಿದ್ದೆ. ಈಗ ನಮ್ಮ ನಡುವೆ ಮಾತುಕತೆಯಾಗಿದ್ದು, ಸಮಸ್ಯೆ ಬಗೆಹರಿದಿದೆ**
> **ಜಿ. ತಿಮ್ಮರೆಡ್ಡಿ ಗೌಡ**

'ತಿಮ್ಮರೆಡ್ಡಿ ಅವರಿಗೆ ಬೆಂಗಳೂರಿನ ಜೀತು ಮೂಲಕ ಗೌರವ್ ಹಾಗೂ ವಿಶಾಲ್ ನಾಗರ್ ಪರಿಚಯವಾಗಿತ್ತು. ರೆಸಿಡೆನ್ಸಿ ರಸ್ತೆಯಲ್ಲಿರುವ ಹೋಟೆಲ್‌ವೊಂದರಲ್ಲಿ ವಿಶಾಲ್‌ನನ್ನು ತಿಮ್ಮರೆಡ್ಡಿ ಭೇಟಿಯಾಗಿದ್ದರು. 'ನಾನು ಬಿಜೆಪಿ ಕೇಂದ್ರ ಸಮೀಕ್ಷೆ ತಂಡದ ಮುಖ್ಯಸ್ಥ. ದೆಹಲಿಯಿಂದ ಕರ್ನಾಟಕಕ್ಕೆ ಬಂದು ಆಕಾಂಕ್ಷಿಗಳ ಪಟ್ಟಿ ಮಾಡುತ್ತಿದ್ದೇವೆ. ಅಮಿತ್ ಶಾ ಹಾಗೂ ಅರುಣ್ ಸಿಂಗ್ ನನಗೆ ಆಪ್ತರು. ಸಮೀಕ್ಷೆ ವರದಿಯಲ್ಲಿ ನಿಮ್ಮ ಪತ್ನಿ ಹೆಸರು ಸೇರಿಸುತ್ತೇನೆ. ನಾನು ಸೇರಿಸುವ ಹೆಸರು ಅಂತಿಮವಾಗುತ್ತದೆ. ಟಿಕೆಟ್ ಸಹ ಸಿಗುತ್ತದೆ' ಎಂದು ವಿಶಾಲ್ ಹೇಳಿದ್ದ. ಅದನ್ನು ತಿಮ್ಮರೆಡ್ಡಿ ನಂಬಿದ್ದರು.

'ಸಮೀಕ್ಷೆಯಲ್ಲಿ ಹಲವರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ವ್ಯವಸ್ಥೆ ಮಾಡಿಸಬೇಕು. ಇದಕ್ಕಾಗಿ ನೀವು ₹25 ಲಕ್ಷ ಕೊಡಬೇಕು' ಎಂದು ವಿಶಾಲ್ ಬೇಡಿಕೆ ಇರಿಸಿದ್ದ. ಅದಕ್ಕೆ ಒಪ್ಪಿದ್ದ ತಿಮ್ಮರೆಡ್ಡಿ, ₹21 ಲಕ್ಷ (ವಿಶಾಲ್ ಕೈಗೆ ₹19 ಲಕ್ಷ ಹಾಗೂ ಖಾತೆಗೆ ₹2 ಲಕ್ಷ) ನೀಡಿದ್ದರು. ಇದಾದ ನಂತರ ಆರೋಪಿಗಳು, ತಿಮ್ಮರೆಡ್ಡಿ ಅವರನ್ನು ದೆಹಲಿಗೆ ಕರೆಸಿಕೊಂಡು ನಾಲ್ಕು ದಿನ ಉಳಿಸಿಕೊಂಡಿದ್ದರು. ಟಿಕೆಟ್ ಅಂತಿಮವಾದಾಗ ಪಟ್ಟಿಯಲ್ಲಿ ತಿಮ್ಮರೆಡ್ಡಿ ಅವರ ಪತ್ನಿ ಹೆಸರು ಇರಲಿಲ್ಲ. ಆರೋಪಿಗಳಿಗೆ ಕರೆ ಮಾಡಿದರೆ ಸ್ವೀಕರಿಸಿರಲಿಲ್ಲ. ಕೆಲ ದಿನ ಬಿಟ್ಟು ಕರೆ ಮಾಡಿದಾಗ, ಹಣ ವಾಪಸು ಕೊಡುವುದಾಗಿ ಆರೋಪಿಗಳು ಹೇಳಿದ್ದರು. ಆದರೆ, ಇದುವರೆಗೂ ಹಣ ನೀಡಿಲ್ಲ' ಎಂಬ ಸಂಗತಿ ದೂರಿನಲ್ಲಿದೆ.

ಸಿಸಿಬಿ ಕಚೇರಿಯಲ್ಲಿ ಕುಸಿದು ಬಿದ್ದ ಚೈತ್ರಾ ಕುಂದಾಪುರ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಂಚಿಸಿರುವ ಪ್ರಕರಣದ ಆರೋಪಿ ಚೈತ್ರಾ ಕುಂದಾಪುರ ಸಿಸಿಬಿ ಕಚೇರಿಯಲ್ಲಿ ಶುಕ್ರವಾರ ಕುಸಿದು ಬಿದ್ದರು. ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಹೋಟೆಲ್ ಉದ್ಯಮಿ ಗೋವಿಂದ ಬಾಬು ಪೂಜಾರಿ ನೀಡಿದ್ದ ದೂರು ಆಧಾರದಲ್ಲಿ ಚೈತ್ರಾ ಹಾಗೂ ಇತರರನ್ನು ಸಿಸಿಬಿ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಎಲ್ಲರನ್ನೂ 10 ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಗುರುವಾರ ಇಡೀ ದಿನ ಚೈತ್ರಾ ವಿಚಾರಣೆ ನಡೆಸಿದ್ದ ಪೊಲೀಸರು, ಮಹಿಳಾ ಸಾಂತ್ವನ ಕೇಂದ್ರಕ್ಕೆ ಸಂಜೆ ಬಿಟ್ಟು ಬಂದಿದ್ದರು.

ಶುಕ್ರವಾರ ಬೆಳಿಗ್ಗೆ ಪುನಃ ಚೈತ್ರಾ ಅವರನ್ನು ಚಾಮರಾಜಪೇಟೆಯಲ್ಲಿರುವ ಕಚೇರಿಗೆ ಕರೆತಂದಿದ್ದರು.

ವಿಚಾರಣೆ ಸಂದರ್ಭದಲ್ಲಿ ಅಸ್ವಸ್ಥಗೊಂಡಿದ್ದ ಚೈತ್ರಾ ಕುಸಿದು ಬಿದ್ದರು. ಬಾಯಿಯಲ್ಲಿ ನೊರೆ ಬರಲಾರಂಭಿಸಿತ್ತು. ಮಹಿಳಾ ಸಿಬ್ಬಂದಿ ಚೈತ್ರಾ ಅವರನ್ನು ತಮ್ಮದೇ ಜೀಪಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ

'ತುರ್ತು ನಿಗಾ ಘಟಕದಲ್ಲಿ ಚೈತ್ರಾ ಅವರಿಗೆ ಚಿಕಿತ್ಸೆ ನೀಡಲಾಗಿದ್ದು, ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ರಕ್ತ, ಇಸಿಜಿ ಹಾಗೂ ಇತರೆ ತಪಾಸಣೆ ನಡೆಸಲಾಗಿದ್ದು, ಯಾವುದೇ ಸಮಸ್ಯೆ ಕಂಡುಬಂದಿಲ್ಲ' ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಡಾ. ರಮೇಶ್‌ಕುಮಾರ್ ಕೆ. ತಿಳಿಸಿದ್ದಾರೆ.

'ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿ ಚೈತ್ರಾ ಅವರನ್ನು ಬೆಳಿಗ್ಗೆ 9.15ಕ್ಕೆ ಆಸ್ಪತ್ರೆಗೆ ಕರೆತರಲಾಗಿತ್ತು. ಅವರಿಗೆ ಚಿಕಿತ್ಸೆ ನೀಡಲಾಗಿದ್ದು, ವೈದ್ಯರ ನಿಗಾದಲ್ಲಿದ್ದಾರೆ' ಎಂದಿದ್ದಾರೆ.

ಭಾಷಣ ವೇಳೆ ಕುಸಿದುಬಿದ್ದಿದ್ದ ಚೈತ್ರಾ: ವಿಚಾರಣೆ ಸಂದರ್ಭದಲ್ಲಿ ಕುಸಿದು ಬಿದ್ದಿದ್ದ ಚೈತ್ರಾ ಆರೋಗ್ಯದ ಬಗ್ಗೆ ಸ್ನೇಹಿತರು ಹಾಗೂ ಕುಟುಂಬಸ್ಥರಿಂದ ಸಿಸಿಬಿ ಪೊಲೀಸರು ಮಾಹಿತಿ ಪಡೆದುಕೊಂಡಿದ್ದಾರೆ.

'ಚೈತ್ರಾ ಅವರಿಗೆ ಮೂರ್ಛೆ ರೋಗವಿರುವುದಾಗಿ ಗೊತ್ತಾಗಿದೆ. ಆದರೆ, ಇದು ಗಂಭೀರ ಸ್ವರೂಪದಲ್ಲಿಲ್ಲ. ಈ ಹಿಂದೆ ಧಾರ್ಮಿಕ ಸ್ಥಳವೊಂದರಲ್ಲಿ ಭಾಷಣ ಮಾಡುತ್ತಿದ್ದ ಸಂದರ್ಭದಲ್ಲೂ ಚೈತ್ರಾ ಕುಸಿದು ಬಿದ್ದಿದ್ದರು. ಆಗಲೂ ಬಾಯಲ್ಲಿ ನೊರೆ ಬಂದಿತ್ತು ಎಂಬುದಾಗಿ ಸ್ನೇಹಿತರು ತಿಳಿಸಿದ್ದಾರೆ. ಆದರೆ, ಮೂರ್ಛೆ ಬೀಳಲು ನಿಖರ ಕಾರಣವೇನು ಎಂಬುದು ವೈದ್ಯರ ವರದಿಯಿಂದ ಗೊತ್ತಾಗಬೇಕು' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಶನಿವಾರ ಪುನಃ ವಿಚಾರಣೆ: 'ಚೈತ್ರಾ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಶುಕ್ರವಾರ ರಾತ್ರಿ ಅಥವಾ ಶನಿವಾರ ಬೆಳಿಗ್ಗೆ ಆಸ್ಪತ್ರೆಯಿಂದ ಕಳುಹಿಸುವುದಾಗಿ ವೈದ್ಯರು ಹೇಳಿದ್ದಾರೆ. ಆಸ್ಪತ್ರೆಯಿಂದ ಹೊರಬಂದರೆ, ವಿಚಾರಣೆ ಮುಂದುವರಿಸಲಾಗುವುದು' ಎಂದು ಅಧಿಕಾರಿ ಹೇಳಿದರು.

ಚೈತ್ರಾ ರಕ್ಷಿಸುವ ಪ್ರಶ್ನೆಯೇ ಇಲ್ಲ: ಶೋಭಾ

ಉಡುಪಿ: 'ಬಂಧನಕ್ಕೊಳಗಾಗಿರುವ ಚೈತ್ರಾ ಕುಂದಾಪುರ ಅವರನ್ನು ಬೆಂಬಲಿಸುವ, ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶುಕ್ರವಾರ ಮಾತನಾಡಿದ ಅವರು, 'ಈ ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆಯಾಗಬೇಕು. ರಾಜ್ಯ ಹಾಗೂ ಕೇಂದ್ರ ಬಿಜೆಪಿ ನಾಯಕರ ಹೆಸರನ್ನು ದುರುಪಯೋಗ ಮಾಡಿಕೊಂಡವರಿಗೆ ಹಾಗೂ ವಂಚನೆ ಮಾಡಿದವರು ಮತ್ತು ಅದಕ್ಕೆ ಕುಮ್ಮಕ್ಕು ನೀಡಿದವರಿಗೆ ಶಿಕ್ಷೆಯಾಗಬೇಕು' ಎಂದರು.

ಈ ಬಾರಿಯೂ ಸಂಜೆಯೇ 'ಜಂಬೂಸವಾರಿ'

ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವ, ಶರನ್ನವರಾತ್ರಿಯ ಪೂಜಾ ಕಾರ್ಯಕ್ರಮಗಳ ಮುಹೂರ್ತವನ್ನು ಮೈಸೂರು ಅರಮನೆ, ಒಂಟಿಕೊಪ್ಪಲು ಮತ್ತು ಮೇಲುಕೋಟೆ ಪಂಚಾಂಗಗಳನ್ನು ಆಧರಿಸಿ ನಿಗದಿಪಡಿಸಲಾಗಿದೆ.

ಅ.15ರಂದು ಶರನ್ನವರಾತ್ರಿ ಪ್ರಾರಂಭವಾಗಲಿದೆ. ಬೆಳಿಗ್ಗೆ 10.15ರಿಂದ 10.36ರವರೆಗೆ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ಪೂಜೆಯೊಂದಿಗೆ ದಸರೆಗೆ ಚಾಲನೆ ನೀಡಲಾಗುವುದು.

ಅ.24ರಂದು ವಿಜಯದಶಮಿ ಅಂಗವಾಗಿ ಮಧ್ಯಾಹ್ನ 1.46ರಿಂದ 2.08ರೊಳಗೆ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಮುಖ್ಯಮಂತ್ರಿ ನಂದಿ ಧ್ವಜ ಪೂಜೆ ನೆರವೇರಿಸುವರು. ಅಂಬಾವಿಲಾಸ ಅರಮನೆಯ ಒಳಾವರಣದಲ್ಲಿ ಸಂಜೆ 4.40ರಿಂದ 5ರವರೆಗೆ ಮುಖ್ಯಮಂತ್ರಿ ಮತ್ತು ಗಣ್ಯರು ಪುಷ್ಪಾರ್ಚನೆ ಮಾಡುವರು. ನಂತರ, 'ಜಂಬೂಸವಾರಿ' ಪ್ರಾರಂಭಗೊಳ್ಳಲಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಕಳೆದ ವರ್ಷ ಸಂಜೆ 5.07ರಿಂದ 5.18ರೊಳಗೆ ಮೆರವಣಿಗೆಯನ್ನು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದ್ದರು. ಸಂಜೆ 5.37ಕ್ಕೆ ಶುರುವಾದ ಜಂಬೂಸವಾರಿ ರಾಜಪಥವನ್ನು ಪ್ರವೇಶಿಸಿ ಮುಂದೆ ಸಾಗುವ ಹೊತ್ತಿಗೆ ಕತ್ತಲು ಆವರಿಸಿತ್ತು. ಮೆರವಣಿಗೆಯು ಝಗಮಗಿಸುವ ವಿದ್ಯುತ್ ದೀಪಾಲಂಕಾರದ ಬೆಳಕಿನಲ್ಲಿ ಬನ್ನಿಮಂಟಪ ತಲುಪಿತ್ತು.

23ಕ್ಕೆ ಕಾಶಿ–ಗಯಾ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ್ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಸೆ.23ರಂದು ಬೆಂಗಳೂರಿನಿಂದ ಹೊರಡಲಿದೆ.

7 ದಿನಗಳ ಯಾತ್ರೆಯನ್ನು 9 ದಿನಗಳಿಗೆ ವಿಸ್ತರಿಸಲಾಗಿದೆ. ಊಟ, ವಸತಿ, 3ಎಸಿ ರೈಲು ಪ್ರಯಾಣ ಒಳಗೊಂಡಂತೆ ಯಾತ್ರೆಯ ವೆಚ್ಚ ₹ 22,500 ಆಗಿದ್ದು, ಕರ್ನಾಟಕ ಸರ್ಕಾರ ₹ 7,500 ಸಹಾಯ ಧನ ನೀಡಲಿದೆ.

ಈ ಯಾತ್ರೆಗೆ ಈಗಾಗಲೇ 640 ಯಾತ್ರಿಗಳು ನೋಂದಣಿ ಮಾಡಿಕೊಂಡಿದ್ದು, ಇನ್ನೂ 60 ಯಾತ್ರಿಗಳಿಗೆ ನೋಂದಣಿಗೆ ಅವಕಾಶವಿದೆ. ಮುಂದಿನ ಯಾತ್ರೆ ಅಕ್ಟೋಬರ್ 7ಕ್ಕೆ ಹೊರಡಲಿದ್ದು, ಇದಕ್ಕೂ 209 ಯಾತ್ರಿಗಳು ನೋಂದಣಿ ಮಾಡಿಕೊಂಡಿದ್ದಾರೆ. 491 ಸೀಟುಗಳು ಬಾಕಿ ಇವೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸುಧಾಕರ್ ಮೇಲಿನ ಎಫ್‌ಐಆರ್‌ಗೆ ಮಧ್ಯಂತರ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ನಿಂದನೆ, ಹಲ್ಲೆ ಸಹಿತ ವಿವಿಧ ಆರೋಪಗಳ ಸಂಬಂಧ ರಾಜ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ವಿರುದ್ಧ ಯಲಹಂಕ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗೆ ಹೈಕೋರ್ಟ್ ಶುಕ್ರವಾರ ಮಧ್ಯಂತರ ತಡೆ ನೀಡಿದೆ.

ಯಲಹಂಕದ ಕೆಎಚ್‌ಬಿ ಕಾಲೊನಿ ನಿವಾಸಿ ಸುಬ್ಬಮ್ಮ ದೂರಿನ ಆಧಾರದಲ್ಲಿ ಪೊಲೀಸರು ತಮ್ಮ ವಿರುದ್ಧ ಇದೇ 10ರಂದು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಸೆವೆನ್ ಹಿಲ್ಸ್ ಡೆವಲಪರ್ಸ್ ಆ್ಯಂಡ್ ಟ್ರೇಡರ್ಸ್ ನಿರ್ದೇಶಕರೂ ಆಗಿರುವ ಸಚಿವ ಡಿ. ಸುಧಾಕರ್ ಹಾಗೂ ಇತರೆ ಆರೋಪಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಈ ಆದೇಶ ಮಾಡಿದ್ದಾರೆ.

ಅರ್ಜಿ ಸಂಬಂಧ ಯಲಹಂಕ ಠಾಣಾ ಪೊಲೀಸರಿಗೆ ಮತ್ತು ದೂರುದಾರರಾದ ಸುಬ್ಬಮ್ಮಗೆ ತುರ್ತು ನೋಟಿಸ್ ಜಾರಿಗೊಳಿಸಿದ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಅ.3ಕ್ಕೆ ಮುಂದೂಡಿದೆ.

'ಸೆವೆನ್ ಹಿಲ್ಸ್ ಡೆವಲಪರ್ಸ್ ಆ್ಯಂಡ್ ಟ್ರೇಡರ್ಸ್ ಡಿ. ಸುಧಾಕರ್, ಜಿ. ಶ್ರೀನಿವಾಸ್ ಮತ್ತು ಭಾಗ್ಯಮ್ಮ ಎಂಬವರು ನಮ್ಮ ಕುಟುಂಬದವರಿಗೆ ಮೋಸ ಮಾಡಿ ಜಮೀನಿನ ಕ್ರಯಪತ್ರ ಮಾಡಿಕೊಂಡಿದ್ದಾರೆ. ಈ ಕುರಿತ ಪ್ರಕರಣ ನಗರದ ಸಿವಿಲ್ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಹೀಗಿದ್ದರೂ, ಡಿ.ಸುಧಾಕರ್ ಮತ್ತವರ 35 ಸಹಚರರು ಬಂದು ನಾವು ನೆಲೆಸಿರುವ ಮನೆಗಳನ್ನು ತೆರವುಗೊಳಿಸಿದ್ದಾರೆ. ಅದನ್ನು ಪ್ರಶ್ನಿಸಿದಾಗ ನಮ್ಮ ಮೇಲೆ ದೌರ್ಜನ್ಯ ನಡೆಸಿದ್ದಾರೆ. ಮಗಳ ಮೇಲೆ ಹಲ್ಲೆ ನಡೆಸಿ ನಮ್ಮ ಜಾತಿ ಹೆಸರು ಉಲ್ಲೇಖಿಸಿ ನಿಂದನೆ ಮಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಸುಬ್ಬಮ್ಮ ಇದೇ 10ರಂದು ಯಲಹಂಕ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ದೂರಿನ ಆಧಾರದಲ್ಲಿ ಪೊಲೀಸರು ಸುಧಾಕರ್ ಮತ್ತು ಇತರೆ ಅರ್ಜಿದಾರರ ಮೇಲೆ ಪರಿಶಿಷ್ಟ ಜಾತಿ ಮತ್ತು ಪಂಗಡದ (ದೌರ್ಜನ್ಯ ತಡೆ) ಕಾಯ್ದೆ-1989 ಅಡಿ ಜಾತಿ ನಿಂದನೆ, ಹಲ್ಲೆ, ಅತಿಕ್ರಮ ಪ್ರವೇಶ, ದೌರ್ಜನ್ಯ, ಗಲಭೆ, ಅಕ್ರಮ ಕೂಟ ನಡೆಸಿದ ಆರೋಪಗಳ ಸಂಬಂಧ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದರು.

ಸಚಿವ ಡಿ.ಸುಧಾಕರ್, ಜಿ.ಶ್ರೀನಿವಾಸ್, ಭಾಗ್ಯಮ್ಮ ಅವರು ಹೈಕೋರ್ಟ್‌ಗೆ ಈ ಎಫ್‌ಐಆರ್ ರದ್ದು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಇತ್ಯರ್ಥವಾಗುವರೆಗೆ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡುವಂತೆ ಮಧ್ಯಂತರ ಮನವಿ ಮಾಡಿದ್ದರು.

ದೂರುದಾರಾದ ಸುಬ್ಬಮ್ಮ 2021ರಲ್ಲೇ ಸೆವೆನ್ ಹಿಲ್ಸ್ ಡೆವಲಪರ್ಸ್ ಆ್ಯಂಡ್ ಟ್ರೇಡರ್ಸ್ ಹೆಸರಿಗೆ ಯಲಹಂಕ ಹೋಬಳಿಯ ಗಾಂಧಿ ನಗರದ ಸರ್ವೆ ನಂ108/1ರಲ್ಲಿನ 1 ಎಕರೆ 33 ಗುಂಟೆ ಜಾಗ ಮಾರಾಟ ಮಾಡಿದ್ದಾರೆ. ಆ ಕುರಿತ ದಾಖಲೆಯೂ ಇದೆ. ಇದರಿಂದ ಈ ವಿವಾದಿತ ಜಮೀನಿನ ಮೇಲೆ ಅವರಿಗೆ ಯಾವುದೇ ಹಕ್ಕು ಇಲ್ಲ. ಆದರೂ ಸುಳ್ಳು ಆರೋಪ ಮಾಡಿ ತಮ್ಮ ವಿರುದ್ಧ ದೂರು ನೀಡಿರುವ ಕಾರಣ ಎಫ್‌ಐಆರ್ ರದ್ದುಪಡಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

'ಸಂಪುಟದಿಂದ ಬಿಜೆಪಿ ಕೈಬಿಟ್ಟಿತ್ತೇ'

ಚಿತ್ರದುರ್ಗ: '2008ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಸಚಿವನಾಗಿದ್ದೆ. ಸಂಪುಟ ಸೇರಿದ ಒಂದೇ ತಿಂಗಳಿಗೆ ನನ್ನ ವಿರುದ್ಧ ಸಿಬಿಐ, ಪ್ರಕರಣ ದಾಖಲಿಸಿತ್ತು. ಆಗ ಬಿಜೆಪಿಯವರು ಸಂಪುಟದಿಂದ ನನ್ನನ್ನು ಕೈಬಿಟ್ಟಿದ್ದರೆ' ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಪ್ರಶ್ನಿಸಿದರು.

'ನನ್ನ ವಿರುದ್ಧದ ಪ್ರಕರಣ ರಾಜಕೀಯ ಪ್ರೇರಿತ. ಸತ್ಯಾಂಶ ತಿಳಿಯದೇ, ವಿನಾಕಾರಣ ಆರೋಪ ಮಾಡಲಾಗುತ್ತಿದೆ. ಬಿಜೆಪಿ ಮತ್ತು ಜೆಡಿಎಸ್‌ನ ಕೆಲ ಸ್ನೇಹಿತರ ಜತೆ ಮಾತಾಡಿದ್ದೇನೆ. ರಾಜಕೀಯ ಉದ್ದೇಶಕ್ಕೆ ನನ್ನ ವಿರುದ್ಧ ಮಾತನಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ' ಎಂದು ಶುಕ್ರವಾರ ಮಾಹಿತಿ ನೀಡಿದರು.

ಅತಿವಿರಳ ಕಾಯಿಲೆಗಳಿಗೆ ಸಿಎಚ್‌ಜಿ, ಐಜಿಐಸಿಎಚ್‌ನಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿವಿರಳ ಕಾಯಿಲೆಗಳಿಗೆ ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ (ಸಿಎಚ್‌ಜಿ) ಮತ್ತು ಇಂದಿರಾ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ (ಐಜಿಐಸಿಎಚ್) ಸಂಸ್ಥೆಗಳು ಚಿಕಿತ್ಸೆ ನೀಡುತ್ತಿವೆ. ಆಗಸ್ಟ್‌ವರೆಗೆ 100 ರೋಗಿಗಳಿಗೆ ಚಿಕಿತ್ಸೆ ನೀಡಿದ್ದು, ದೇಶದಲ್ಲೇ 'ಅಪರೂಪದ ರೋಗಗಳ ಚಿಕಿತ್ಸೆಯ ಉತ್ಕೃಷ್ಟತಾ ಕೇಂದ್ರ' ಎಂಬ ಹಿರಿಮೆಗೆ ಪಾತ್ರವಾಗಿವೆ.

ಅಪರೂಪದ ಕಾಯಿಲೆಗಳು ಅಂದರೆ ಸುಮಾರು 7,000 ವಿವಿಧ ಗಂಭೀರ ರೋಗಗಳ ಗುಂಪು. ಇವುಗಳಲ್ಲಿ ಹೆಚ್ಚಿನ ರೋಗಗಳು ಆನುವಂಶಿಕ ಕಾಯಿಲೆಗಳಾಗಿದ್ದು, ಹೆಚ್ಚಾಗಿ ಮಕ್ಕಳೇ ಇಂತಹ ರೋಗಗಳಿಂದ ಪೀಡಿತರಾಗಿರುತ್ತಾರೆ. ಕೆಲವು ಕಾಯಿಲೆಗಳಿಗೆ ಮಾತ್ರ ನಿರ್ದಿಷ್ಟ ಚಿಕಿತ್ಸೆ ಲಭ್ಯ ಇವೆ. ದೀರ್ಘಾವಧಿ ಮತ್ತು ದುಬಾರಿಯಾಗಿರುವ ಈ ಚಿಕಿತ್ಸೆಗೆ ತಜ್ಞವೈದ್ಯರ ಸೂಕ್ಷ್ಮ ಮೇಲ್ವಿಚಾರಣೆಯ ಅಗತ್ಯವಿರುತ್ತದೆ.

ಇಂಥ ರೋಗಗಳಿಗೆ ಚಿಕಿತ್ಸೆ ನೀಡುತ್ತಿರುವ ಸಿಎಚ್‌ಜಿ ಮತ್ತು ಐಜಿಐಸಿಎಚ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು 'ಅಪರೂಪದ ಕಾಯಿಲೆಗಳ ಚಿಕಿತ್ಸೆಯ ಉತ್ಕೃಷ್ಟತಾ ಕೇಂದ್ರ' ಎಂದು ಗುರುತಿಸಿದೆ.

'ರೋಗ ಪತ್ತೆ ಮಾಡಲು ಸಿಎಚ್‌ಜಿಯಲ್ಲಿ ಜೆನೆಟಿಕ್ ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ 15 ವರ್ಷಗಳಿಂದ ಐಜಿಐಸಿಎಚ್‌ನಲ್ಲಿ ಎಲ್ಲ ರೋಗಿಗಳಿಗೆ ಇದನ್ನು ಉಚಿತವಾಗಿ ಒದಗಿಸಲಾಗುತ್ತಿದೆ. 2016ರಲ್ಲಿ ಅಪರೂಪದ ಕಾಯಿಲೆಗಳ ಚಿಕಿತ್ಸೆ ಪ್ರಾರಂಭಿಸಿದ ಮೊದಲ ರಾಜ್ಯ ಕರ್ನಾಟಕ ಎಂದು ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ (ಸಿಎಚ್‌ಜಿ) ಸಹಾಯಕ ನಿರ್ದೇಶಕಿ ಡಾ. ಮೀನಾಕ್ಷಿ ಭಟ್ ಮಾಹಿತಿ ನೀಡಿದರು.

100 ರೋಗಿಗಳ ಪೈಕಿ ಸುಮಾರು ಶೇ 35ರಷ್ಟು ರೋಗಿಗಳು ಅಪರೂಪದ ಕಾಯಿಲೆಗಳ ರಾಷ್ಟ್ರೀಯ ನೀತಿಯ (ಎನ್‌ಪಿಆರ್‌ಡಿ) ಗುಂಪು-3 ಮತ್ತು ಶೇ 65ರಷ್ಟು ಮಂದಿ ಗುಂಪು 2ಕ್ಕೆ ಸೇರಿದ್ದಾರೆ. ಈ ವರ್ಷದಲ್ಲಿ ಈ 100 ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ಸುಮಾರು ₹9 ಕೋಟಿ ಬಳಸಲಾಗಿದೆ ಎಂದರು.

'2021ರ ಮಾರ್ಚ್‌ನಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಅಪರೂಪದ ರೋಗಗಳ ರಾಷ್ಟ್ರೀಯ ನೀತಿ ಘೋಷಿಸಿತು. ಅದರ ಅಡಿ, ಚಿಕಿತ್ಸೆ ನೀಡಬಹುದಾದ ಅಥವಾ ಗುಣಪಡಿಸಬಹುದಾದ ಅಪರೂಪದ ಗಂಭೀರ ಕಾಯಿಲೆಗಳನ್ನು 3 ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಅಪರೂಪದ ಕಾಯಿಲೆಗಳಿರುವ ಅರ್ಹ ರೋಗಿಗಳ ಚಿಕಿತ್ಸೆಗಾಗಿ ₹50 ಲಕ್ಷ ವರೆಗೆ ಒಂದು ಬಾರಿಯ ಆರ್ಥಿಕ ನೆರವು ಲಭ್ಯವಾಗಲಿದೆ' ಎಂದು ಐಜಿಐಸಿಎಚ್ ಸಂಸ್ಥೆಯ ನಿರ್ದೇಶಕ ಪ್ರೊ. ಕೆ.ಎಸ್. ಸಂಜಯ್ ತಿಳಿಸಿದರು.

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಹೆಚ್ಚುವರಿ ಉಪ ಮಹಾನಿರ್ದೇಶಕ ಮತ್ತು ತುರ್ತು ವೈದ್ಯಕೀಯ ಪರಿಹಾರ (ಇಎಂಆರ್) ವಿಭಾಗದ ನಿರ್ದೇಶಕ ಡಾ. ಸ್ವಸ್ತಿಚರಣ್, ಅಪರೂಪದ ಕಾಯಿಲೆಗಳ ಭಾರತ ಸಂಘಟನೆಯ (ಒಆರ್ ಡಿಐ) ಸಹ-ಸಂಸ್ಥಾಪಕ ಪ್ರಸನ್ನ ಶಿರೋಲ್ ಉಪಸ್ಥಿತರಿದ್ದರು.

ಮಾಹಿತಿಗೆ ಡಾ. ಸಂಜೀವ್ ಜಿ.ಎನ್. (9945657034, ಇಮೇಲ್: sanju.gn26@gmail.com) ಅವರನ್ನು ಸಂಪರ್ಕಿಸಬಹುದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ, ಹಾಸನ.
ಕ.ರಾ.ರ.ಸಾ.ನಿ. ಪ್ರಾದೇಶಿಕ ತರಬೇತಿ ಕೇಂದ್ರ ಕಟ್ಟಡ, ಡೈರಿ ವೃತ್ತದ ಹತ್ತಿರ, ರಿಂಗ್ ರಸ್ತೆ
ಹಾಸನ – 573 201. ದೂರವಾಣಿ : 08172–295262, e-mail : eehsn@ksrtc.org

ಸಂ: ಕರಾಸಾ/ಕಾವಿಹಾ/ಕಾನಿಅ/ಕಿಅ/367/2023–24 ದಿನಾಂಕ: 15.09.2023

ಟೆಂಡರ್ ಪ್ರಕಟಣೆ ಸಂ. 1,2,3 & 4 / 2023–24
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿ)

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯು.ಡಿ./ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್.ನಲ್ಲಿ ನೋಂದಾಯಿತರಾಗಿರುವ ಅರ್ಹ ಕಾಮಗಾರಿ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು 'ಇ' ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ. ಟೆಂಡರ್ ಪ್ರಕಟಣೆ ಮತ್ತು ಹೆಚ್ಚಿನ ವಿವರಗಳನ್ನು ಯಾವುದೇ ವೆಚ್ಚವಿಲ್ಲದೆ **http://kppp.karnataka.gov.in** ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ **ದಿನಾಂಕ : 21.09.2023 ರ ನಂತರ** ವಿವರಗಳನ್ನು ಪಡೆದುಕೊಳ್ಳಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ
1	ಶಿವಮೊಗ್ಗ ಘಟಕದಲ್ಲಿ ಇ.ಟಿ.ಪಿ. ಘಟಕಗಳನ್ನು ನಿರ್ಮಿಸುವುದು.	21.42	53,568/-	05.10.2023
2	ಭದ್ರಾವತಿ ಘಟಕದಲ್ಲಿ ಇ.ಟಿ.ಪಿ. ಘಟಕಗಳನ್ನು ನಿರ್ಮಿಸುವುದು.	21.17	52,934/-	05.10.2023
3	ಹೊನ್ನಾಳಿ ಘಟಕದಲ್ಲಿ ಇ.ಟಿ.ಪಿ. ಘಟಕಗಳನ್ನು ನಿರ್ಮಿಸುವುದು.	21.17	52,934/-	05.10.2023
4	ಚಿಕ್ಕಮಗಳೂರಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗಗಳ ತರಬೇತಿ ಕೇಂದ್ರದ ಆವರಣದಲ್ಲಿ ಹೆಚ್ಚುವರಿ ಡಾರ್ಮಿಟರಿ ಕಟ್ಟಡ ನಿರ್ಮಿಸುವ ಕಾಮಗಾರಿ (01 ಬ್ಲಾಕ್)	193.20	4,83,004/-	05.10.2023

ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರು, ಕ.ರಾ.ರ.ಸಾ.ನಿ ಕಾಮಗಾರಿ ವಿಭಾಗ, ಕ.ರಾ.ರ.ಸಾ.ನಿ ಪ್ರಾದೇಶಿಕ ತರಬೇತಿ ಕಟ್ಟಡ, ಡೈರಿ ವೃತ್ತ ಹತ್ತಿರ ರಿಂಗ್ ರಸ್ತೆ, ಹಾಸನ ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿ, ಕಾಮಗಾರಿ ವಿಭಾಗ, ಹಾಸನ.

ವಾಸಾಸಂಇ/ವಾಪ್ರ/ಜಿಎ/1316/2023–24

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com ದೂ.08472–260252

ಸಂಖ್ಯೆ: ಜಿಮ್ಸ್/ಕೆಎಲ್‌ಬಿ/ಓ.ಎಸ್–2/ಟೆಂಡರ/2023–24/1431 ದಿನಾಂಕ: 14/09/2023

:: ಟೆಂಡರ ಪ್ರಕಟಣೆ ::

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಗೆ 2023–24 ನೇ ಸಾಲಿಗೆ ಗ್ರೂಪ್–ಡಿ ಮತ್ತು ಇತರೆ ಸಿಬ್ಬಂದಿಗಳ ಸೇವೆಗಳನ್ನು ಪೂರೈಸುವ ಕುರಿತು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: GIMS/KLB/OS-2/TEND/2023-24 Date: 14/09/2023 DME/2023-24/SE0065, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ–Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **12–10–2023 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **26.09.2023 ಸಾಯಂಕಾಲ 5.00 ಗಂ ಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **27.09.2023 ಬೆಳಿಗ್ಗೆ 11:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **13–10–2023 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **16–10–2023 ಬೆಳಿಗ್ಗೆ 11:30ಕ್ಕೆ,** 7) ಟೆಂಡರನ ಮೊತ್ತ: **ರೂ. 8,50,00,000=00,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 8,50,000/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252, **Mobile : 9482093568 directorgimsgulbarga@gmail.com**

ಸಹಿ/– ನಿರ್ದೇಶಕರು
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/283/ಕೆ.ಎಸ್.ಎಂ.ಸಿ.&ಎ/2023–24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್ 25536625, 25536789

IFT NO. ಕಹಾಮ/ಅಭಿ/ಸಿಎಫ್‌ಪಿಹೆಚ್–ಡಂಪಿಂಗ್ ಕನ್ವೇಯರ್/1686/2023–24 ದಿನಾಂಕ: 15–09–2023

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಸಹಕಾರ ಹಾಲು ಮಂಡಳದ ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು ಕೆಲಸಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಹಾಸನದ ಪಶು ಆಹಾರ ಘಟಕ–2 ರ ಕಚ್ಚಾ ವಸ್ತು ದಾಸ್ತಾನು ಉಗ್ರಾಣದಲ್ಲಿ 8 ಸಂಖ್ಯೆ ಡಂಪಿಂಗ್ ಕನ್ವೇಯರ್‌ಗಳ ರೆಟ್ರೋಫಿಟ್‌ಮೆಂಟ್ ಹಾಗೂ ಸಂಬಂಧಿಸಿದ ಸಿವಿಲ್ ಕೆಲಸಗಳು.	1 ಜಾಬ್	42,000/–	08 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 16–09–2023 ರಿಂದ 26–09–2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26–09–2023 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 27–09–2023 ರಂದು ಸಾಯಂಕಾಲ 4.30ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು –560 010
ಫೋನ್/ಫ್ಯಾಕ್ಸ್ : 91–080–23143566 / 23389070 ಇ–ಮೇಲ್ : kssidcho@karnataka.gov.in
ವೆಬ್‌ಸೈಟ್ : www.kssidc.co.in

ಸಂಖ್ಯೆ:ಇಪಿ–75:ಇಎನ್‌ಜಿ:ಅಅ:B.W&Add W.:ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್:2023–24/2ನೇಕರೆ ದಿನಾಂಕ: 15.09.2023

ಟೆಂಡರ್ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ) (ದ್ವಿ ಟೆಂಡರ್ ದಾಖಲೆ ಪದ್ಧತಿ)

ಅಧೀಕ್ಷಕ ಅಭಿಯಂತರರು, ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಟೆಂಡರ್ ಪ್ರಕಟಣೆ ನೀಡಿದ್ದು ಟೆಂಡರ್ ಪ್ರಕಟಣೆ ಸಂಖ್ಯೆ:ಇಪಿ–75:ಇಎನ್‌ಜಿ:ಅಅ:B.W&Add.W:ಚನ್ನಪಟ್ಟಣ ಕ್ರಾಫ್ಟ್‌ಪಾರ್ಕ್:2023–24/2ನೇ ಕರೆ ದಿನಾಂಕ: 15.09.2023 ರ ಪ್ರಕಾರ ಸೂಚಿಸಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್, ತಗಚಗೆರೆ ಕೈಗಾರಿಕಾ ವಸಾಹತುವಿನಲ್ಲಿ CFSC Center ಗೆ ಉದ್ದೇಶಿತ ಬಾಕಿ / ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳುವ ಬಗ್ಗೆ ಕರ್ನಾಟಕ PWD, CPWD, MES, NHAI, ರೈಲ್ವೇ ಮತ್ತು ರಾಷ್ಟ್ರೀಯ ಹೆದ್ದಾರಿ ಸಂಸ್ಥೆಗಳಲ್ಲಿ ನೋಂದಾಯಿಸಲ್ಪಟ್ಟ ಪರವಾನಗಿಯುಳ್ಳ, ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವಸಂಪನ್ಮೂಲವುಳ್ಳ ಮತ್ತು ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ ಗುತ್ತಿಗೆದಾರರು (ಸಿವಿಲ್) ಇವರಿಂದ ಐಟಂವಾರು ಟೆಂಡರನ್ನು ಇ–ಪ್ರೊಕ್ಯರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿ (Two tender documents System) ಪ್ರಕಾರ ಟೆಂಡರ್ ಕರೆಯಲಾಗಿದೆ.

ಆಸಕ್ತಿಯುಳ್ಳ ಅರ್ಹತೆ ಹೊಂದಿರುವ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.kppp.karnataka.gov.in (ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ) ಮೂಲಕ **ದಿನಾಂಕ: 16.09.2023 ರ ಬೆಳಿಗ್ಗೆ 10:00 ಗಂಟೆ** ನಂತರ ಪಡೆದುಕೊಳ್ಳಬಹುದು.

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ https://www.kppp.karnataka.gov.in (Karnataka State Small Industries Development Corporation Limited) ಇ–ಪೋರ್ಟಲ್ ಮೂಲಕ **ದಿನಾಂಕ: 30.09.2023ರ ಸಂಜೆ 17:30 ಗಂಟೆಯೊಳಗೆ** ಸಲ್ಲಿಸಲು ಕೋರಿದೆ.

ಟೆಂಡರ್‌ನ ಕಾಲಮಿತಿ ವಿವರಗಳು:
• ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ **ದಿನಾಂಕ: 21.09.2023ರ ಮಧ್ಯಾಹ್ನ 3.00 ಗಂಟೆಗೆ.**
• ಟೆಂಡರ್ ದಸ್ತಾವೇಜುಗಳನ್ನು (Online Submission) ಸಲ್ಲಿಸುವ ಕೊನೆಯ **ದಿನಾಂಕ: 30.09.2023ರ ಸಂಜೆ 5.30 ಗಂಟೆಗೆ.** • ತಾಂತ್ರಿಕ ಟೆಂಡರ್ Document ತೆರೆಯುವ **ದಿನಾಂಕ: 03.10.2023ರ ಬೆಳಿಗ್ಗೆ 10.00 ಗಂಟೆಗೆ.** • ತಾಂತ್ರಿಕ ಟೆಂಡರ್ Document ತೆರೆಯುವ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಟೆಂಡರ್ Document ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.kppp.karnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್/ಹೆಲ್ಪ್‌ಡೆಸ್ಕ್ (ದೂರವಾಣಿ 080–25501227 / 25501216) ಮುಖಾಂತರ ಪಡೆಯಲು ಕೋರಿದೆ.

ಸಹಿ/–
ಅಧೀಕ್ಷಕ ಅಭಿಯಂತರರು.

ವಾಸಾಸಂಇ/ವಾ.ಪ್ರ/ಜಿಎ/1300/2022–23

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006
KSOU/COE/General-02/2023-24 ದಿನಾಂಕ: 15.09.2023

ಆನ್‌ಲೈನ್ ಶಿಕ್ಷಣಕ್ರಮಗಳ ಪ್ರವೇಶಾತಿ ಅಧಿಸೂಚನೆ–2023–24 ಜುಲೈ ಆವೃತ್ತಿ

ವಿಷಯ: 2023–24 ರ ಜುಲೈ ಆವೃತ್ತಿಯ ವಿವಿಧ ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿ ಬಗೆಗೆ ಉಲ್ಲೇಖ: ಮಾನ್ಯಕುಲಪತಿಗಳ ಅನುಮೋದನೆ ದಿನಾಂಕ: 15.09,2023

2023-24ರ ಜುಲೈ ಆವೃತ್ತಿಯ ವಿವಿಧ ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು ವಿದ್ಯಾರ್ಥಿಗಳಿಗೆ ಕೆಳಕಂಡ ಶಿಕ್ಷಣಕ್ರಮಗಳಿಗೆ ವಿವಿಯ ಅಂತರ್ಜಾಲದಲ್ಲಿರುವ ಅಡ್ಮಿಷನ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ, ಆಯಾ ಶಿಕ್ಷಣಕ್ರಮಗಳಿಗೆ ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆಯನುಸಾರ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಪ್ರವೇಶಾತಿ ಪಡೆಯಬಹುದಾಗಿದೆ.

ಸ್ನಾತಕ ಶಿಕ್ಷಣ ಕ್ರಮಗಳು

ಶಿಕ್ಷಣಕ್ರಮಗಳು	ಅವಧಿ	ಕ್ರೆಡಿಟ್ಸ್
ಬಿ. ಎ	3 ವರ್ಷಗಳು	110
ಬಿ. ಕಾಂ	6 ಸೆಮಿಸ್ಟರ್‌ಗಳು	100

ಸ್ನಾತಕೋತ್ತರ ಶಿಕ್ಷಣ ಕ್ರಮಗಳು

ಶಿಕ್ಷಣಕ್ರಮಗಳು	ಅವಧಿ	ಕ್ರೆಡಿಟ್ಸ್
ಎಂ.ಎ – ಕನ್ನಡ	4 ಸೆಮಿಸ್ಟರ್‌ಗಳು	82
ಎಂ.ಎ – ಇಂಗ್ಲೀಷ್	4 ಸೆಮಿಸ್ಟರ್‌ಗಳು	80
ಎಂ.ಎ – ಹಿಂದಿ	4 ಸೆಮಿಸ್ಟರ್‌ಗಳು	88
ಎಂ.ಎ – ಸಂಸ್ಕೃತ	2 ವರ್ಷಗಳು	70
ಎಂ.ಎ – ಅರ್ಥಶಾಸ್ತ್ರ	4 ಸೆಮಿಸ್ಟರ್‌ಗಳು	80
ಎಂ.ಕಾಂ	4 ಸೆಮಿಸ್ಟರ್‌ಗಳು	80
ಎಂ.ಬಿ.ಎ	4 ಸೆಮಿಸ್ಟರ್‌ಗಳು	94
ಎಂ.ಎಸ್ಸಿ– ಗಣಿತಶಾಸ್ತ್ರ	4 ಸೆಮಿಸ್ಟರ್‌ಗಳು,	82

ಆಯಾ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರ, ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆ, ವಿದ್ಯಾರ್ಥಿಗಳು ಸಲ್ಲಿಸಬೇಕಿರುವ ಶೈಕ್ಷಣಿಕ ಮತ್ತು ಇತರೆ ದಾಖಲಾತಿಗಳು ಹಾಗೂ ಶುಲ್ಕಗಳನ್ನು ಆಯಾ ಶಿಕ್ಷಣ ಕ್ರಮಗಳ ವಿವರಣಾ ಪುಸ್ತಕ (Prospectus) ಗಳಲ್ಲಿ ಲಭ್ಯವಿರುತ್ತದೆ.

ಪ್ರವೇಶಾತಿಯು ದಿನಾಂಕ: 16.09.2023 ರಿಂದ ಆನ್‌ಲೈನ್ ಮೂಲಕ ಪ್ರಾರಂಭವಾಗಲಿದ್ದು, ಅಂತಿಮ ದಿನಾಂಕ: 30.09.2023 ಕೊನೆಗೊಳ್ಳುತ್ತದೆ.

ಹೆಚ್ಚಿನ ವಿವರಗಳಿಗಾಗಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ **www.ksoumysuru.ac.in / www.ksouonlinestudy.com** ಅನ್ನು ಅಥವಾ ಸಹಾಯವಾಣಿ ಸಂಖ್ಯೆ: 91411 81241, ಇ–ಮೇಲ್ onlinesupport@ksouportal.com ಅಥವಾ ಕೇಂದ್ರ ಕಛೇರಿ ಮೈಸೂರಿನಲ್ಲಿ ಸಂಪರ್ಕಿಸುವುದು.

ಆದೇಶದ ಮೇರೆಗೆ,
ಸಹಿ/– ಕುಲಸಚಿವರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ,
ಚಾಮರಾಜನಗರ ಜಿಲ್ಲೆ ದೂ.:08229–222215,222738
ಇ–ಮೇಲ್:apmcgundlupet@rediffmail.com
ಕ್ರ.ಸಂ:ಕೃ.ಉ.ಮಾ.ಸ(ಗುಂಪೇ): 561 :2023–24 ದಿನಾಂಕ:15.09.2023

ಅಲ್ಪಾವಧಿ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause 3 (with latest amendments) ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಡಿಯಲ್ಲಿ ಸಲ್ಲಿಸಲು ಅಹ್ವಾನಿಸಲಾಗಿದೆ.

ಕ್ರಸಂ.1 ಕಾಮಗಾರಿಯ ಹೆಸರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ 2022–23ನೇ ಸಾಲಿನ ನಬಾರ್ಡ್ ಆರ್.ಐ.ಡಿ.ಎಫ್–28 ಯೋಜನೆಯಡಿ ಅನುಮೋದಿತ ಬೇಗೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಹತ್ತಿ ಮಾರುಕಟ್ಟೆಗಾಗಿ ಮುಚ್ಚು ಹರಾಜುಕಟ್ಟೆ, ಸಿಸಿ ರಸ್ತೆ, ಆಸ್ಫಾಲ್ಟ್ ರಸ್ತೆ, ಸಿಸಿ ಚರಂಡಿ, ಆಡಳಿತ ಕಛೇರಿ ಕಟ್ಟಡ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿ. (ಐಟಂವಾರು ಟೆಂಡರ್). **ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ:** 505,95,390=51 **ಇ.ಎಂ.ಡಿ ಮೊಬಲಗು ರೂ ಶೇಕಡ 1.50 ರಂತೆ ಅಥವಾ ಕನಿಷ್ಠ (ಇ ಪೇಮೆಂಟ್):** 7,59,000=00 **ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ):** 09 ತಿಂಗಳು. **ಅರ್ಹ ಗುತ್ತಿಗೆದಾರರ ದರ್ಜೆ:** ಕೆ.ಡಬ್ಲು–4 ಕ್ಲಾಸ್–3 ರಲ್ಲಿ ಅರ್ಹರಿರುವ & ಲೋ.ಇ.ಯಲ್ಲಿ ನೊಂದಾಯಿತ ಸಿವಿಲ್ ಗುತ್ತಿಗೆದಾರರು **ಇ ಪ್ರೋಸಸಿಂಗ ಫೀ (ಇ ಪೇಮೆಂಟ್):** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ: ಪ್ರೀ ಬಿಡ್ ಮೀಟಿಂಗ್ ದಿ: 25.09.2023 ಬೆಳಿಗ್ಗೆ: 11.00 ಘಂಟೆಗೆ. ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿ: 05.10.2023 ಮತ್ತು ಸಂಜೆ 4.00. ತಾಂತ್ರಿಕ ಬಿಡ್ ತೆರೆಯುವ ದಿ: 07.10.2023 ಸಂಜೆ: 4.00 ಗಂಟೆಗೆ. ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿ: 19.10.2023 ಬೆಳ್ಳಗೆ 11.00 ಗಂಟೆಗೆ.

Tender documents may be downloaded from Karnataka Public Procurement Portal website https://kppp.karnataka.gov.in/#/portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ: ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಪತ್ರ ವ್ಯವಹಾರದ ವಿಳಾಸ: ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಗುಂಡ್ಲುಪೇಟೆ.
ಸಹಿ/– ಅಧ್ಯಕ್ಷರು, ಕೃ.ಉ.ಮಾ.ಸ., ಗುಂಡ್ಲುಪೇಟೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಜಗತ್ತಿನಲ್ಲಿ ಯಾವ ವ್ಯಕ್ತಿಯೂ ಪೂರ್ಣ ಸುಖಿಯೂ ಅಲ್ಲ, ಪೂರ್ಣ ದುಃಖಿಯೂ ಅಲ್ಲ.

-ಗೌತಮ ಬುದ್ಧ

ಚಂದ್ರಬಾಬು ಬಂಧನ ಸೇಡಿನ ರಾಜಕಾರಣದ ಶಂಕೆ

ಭಾರತದ ರಾಜಕಾರಣದಲ್ಲಿ ವಿರೋಧಿಗಳಿಗೆ ಕಿರುಕುಳ ನೀಡುವುದು ಮತ್ತು ಸೇಡು ತೀರಿಸಿಕೊಳ್ಳುವ ಉದ್ದೇಶದ ಬಂಧನಗಳು ಸಾಮಾನ್ಯ ಎಂಬಂತಾಗಿವೆ. ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ, ತೆಲುಗುದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ನಾರಾ ಚಂದ್ರಬಾಬು ನಾಯ್ಡು ಅವರನ್ನು ಅಲ್ಲಿನ ಸಿಐಡಿ ಪೊಲೀಸರು ಭ್ರಷ್ಟಾಚಾರದ ಆರೋಪ ಹೊರಿಸಿ ಬಂಧಿಸಿರುವ ರೀತಿಯು ಅಂತಹ ಪ್ರಕರಣಗಳಿಗೆ ಇತ್ತೀಚಿನ ಉದಾಹರಣೆಯಂತಿದೆ. ಭ್ರಷ್ಟಾಚಾರ ಮತ್ತು ಸರ್ಕಾರದ ಹಣ ದುರುಪಯೋಗ ಆರೋಪದ ಅಡಿ ನಾಯ್ಡು ಅವರನ್ನು ಈ ತಿಂಗಳ 9ರಂದು ನಸುಕಿನ ಜಾವ ಆಂಧ್ರಪ್ರದೇಶದ ಸಿಐಡಿ ಪೊಲೀಸರು ಬಂಧಿಸಿದ್ದಾರೆ. ನಾಯ್ಡು ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಲ್ಲಿ ಕೌಶಲಾಭಿವೃದ್ಧಿ ಯೋಜನೆಗೆ ಒದಗಿಸಿದ್ದ ₹ 371 ಕೋಟಿ ಅನುದಾನವನ್ನು ಅನ್ಯ ಉದ್ದೇಶಕ್ಕೆ ವರ್ಗಾಯಿಸಿ, ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಸಿಐಡಿ ಆರೋಪಿಸಿದೆ. ಈ ಪ್ರಕರಣದಲ್ಲಿ ಅವರನ್ನು ಮೊದಲನೇ ಆರೋಪಿ ಎಂದು ಹೆಸರಿಸಲಾಗಿದೆ. ನಾಯ್ಡು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ರಾಜಮಂಡ್ರಿಯ ಕಾರಾಗೃಹದಲ್ಲಿ ಇರಿಸಲಾಗಿದೆ. ಇದೇ ಪ್ರಕರಣದಲ್ಲಿ ಟಿಡಿಪಿಯ ಮತ್ತಷ್ಟು ನಾಯಕರನ್ನು ಬಂಧಿಸುವ ಸಾಧ್ಯತೆಯೂ ಕಾಣಿಸುತ್ತಿದೆ. ತಮ್ಮ ಪಕ್ಷದ ನಾಯಕನ ಬಂಧನವನ್ನು ವಿರೋಧಿಸಿ ಪ್ರತಿಭಟಿಸಲು ಮುಂದಾಗಿದ್ದ ಟಿಡಿಪಿಯ ಕೆಲವು ಶಾಸಕರನ್ನು ಗೃಹಬಂಧನದಲ್ಲಿ ಇರಿಸಲಾಗಿತ್ತು.

> ಚಂದ್ರಬಾಬು ನಾಯ್ಡು ತಪ್ಪಿತಸ್ಥರು ಎಂದು ಸಾಬೀತಾದಲ್ಲಿ, ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ. ಆದರೆ, ದುರುದ್ದೇಶಪೂರಿತ ಮತ್ತು ರಾಜಕೀಯ ಲೆಕ್ಕಾಚಾರಗಳಿಂದ ಕ್ರಮ ಕೈಗೊಂಡಿದ್ದರೆ ಅದು ತಪ್ಪು

ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ರಾಜಕೀಯ ನಾಯಕರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸುವುದು, ಬಂಧಿಸುವುದು, ವಿಚಾರಣೆ ನಡೆಸಿ, ಶಿಕ್ಷೆ ವಿಧಿಸುವುದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ, ರಾಜಕೀಯ ನಾಯಕರು ಭಾಗಿಯಾಗಿರುವ ಭ್ರಷ್ಟಾಚಾರ ಪ್ರಕರಣಗಳ ಪೈಕಿ ಹೆಚ್ಚಿನವುಗಳ ಕುರಿತು ತನಿಖೆ ಮತ್ತು ವಿಚಾರಣೆ ನಡೆಯುವುದಿಲ್ಲ; ಅಂತಹ ಪ್ರಕರಣಗಳಲ್ಲಿ ಅವರಿಗೆ ಶಿಕ್ಷೆಯಾಗುವುದೂ ವಿರಳ. ಕೆಲವೊಮ್ಮೆ ರಾಜಕೀಯ ವಿರೋಧಿಗಳ ಕಾರಣದಿಂದಾಗಿಯೇ ರಾಜಕಾರಣಿಗಳು ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಲುಕಿ ಜೈಲು ಸೇರಿರುವ ಉದಾಹರಣೆಗಳಿವೆ. ಚಂದ್ರಬಾಬು ಪ್ರಕರಣವೂ ಆ ಪಟ್ಟಿಗೆ ಸೇರುತ್ತದೆ. ವೈಎಸ್‌ಆರ್ ಕಾಂಗ್ರೆಸ್ ಮುಖ್ಯಸ್ಥ, ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರ ಆಣತಿಯಂತೆಯೇ ಚಂದ್ರಬಾಬು ಅವರ ಬಂಧನ ನಡೆದಿದೆ ಎಂಬುದರಲ್ಲಿ ಸಂದೇಹವಿಲ್ಲ. ಇನ್ನು ಕೆಲವೇ ತಿಂಗಳುಗಳಲ್ಲಿ ಆಂಧ್ರಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಅದಕ್ಕೆ ಮುನ್ನ ನಾಯ್ಡು ಅವರನ್ನು ಬಂಧಿಸಿರುವುದರ ಹಿಂದೆ ರಾಜಕಾರಣವೂ ಇದೆ ಎಂಬುದು ಅಚ್ಚರಿಯೇನೂ ಅಲ್ಲ. ಚುನಾವಣೆ ಮುಗಿಯುವವರೆಗೂ ನಾಯ್ಡು ಜೈಲಿನಿಂದ ಹೊರಬರದೇ ಇರಬಹುದು. ಹೊರಬಂದರೂ ಅವರು ಮತ್ತು ಅವರ ಪಕ್ಷವು ಭ್ರಷ್ಟಾಚಾರ ಆರೋಪದ ಕಳಂಕವನ್ನು ಹೊತ್ತುಕೊಂಡೇ ಚುನಾವಣೆಯನ್ನು ಎದುರಿಸಬೇಕಾಗುತ್ತದೆ.

ತೀವ್ರ ಸ್ವರೂಪದ ಭ್ರಷ್ಟಾಚಾರದ ಆರೋಪ ಹೊತ್ತುಕೊಂಡು ತಿಂಗಳುಗಟ್ಟಲೆ ಜೈಲುವಾಸ ಅನುಭವಿಸಿದ್ದ ಜಗನ್ ಮೋಹನ್ ರೆಡ್ಡಿ ಈಗ ಚಂದ್ರಬಾಬು ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಕ್ರಮಕ್ಕೆ ಮುಂದಾಗಿರುವುದು ವ್ಯಂಗ್ಯದಂತೆ ಕಾಣುತ್ತಿದೆ. 'ಜಾಮೀನಿನ ಮೇಲೆ ಹೊರಗಿರುವ ಮುಖ್ಯಮಂತ್ರಿ' ಎಂದು ಟಿಡಿಪಿಯು ಜಗನ್ ಅವರನ್ನು ಜರಿದಿತ್ತು. ಈಗ ಅದಕ್ಕೆ ಪ್ರತೀಕಾರವಾಗಿ ನಾಯ್ಡು ಬಂಧನ ನಡೆದಿದೆಯೇ ಎಂಬ ಪ್ರಶ್ನೆಯೂ ಉದ್ಭವಿಸಿದೆ. ಆಂಧ್ರಪ್ರದೇಶದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಜಗನ್ ಮೋಹನ್ ರೆಡ್ಡಿ ಅವರಿಗೆ ಚಂದ್ರಬಾಬು ಪ್ರಬಲ ಎದುರಾಳಿ. ಪ್ರತಿಸ್ಪರ್ಧಿ ರಾಜಕೀಯ ನಾಯಕರ ವಿರುದ್ಧ ಭ್ರಷ್ಟಾಚಾರ, ಹಣ ದುರ್ಬಳಕೆ ಮತ್ತು ಇತರ ಕ್ರಿಮಿನಲ್ ಆರೋಪಗಳನ್ನು ಹೊರಿಸಿ ಕಿರುಕುಳ ನೀಡುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಎಂಬಂತಾಗಿದೆ. ಕೇಂದ್ರ ಸರ್ಕಾರವು ತನ್ನ ಅಧೀನದ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ದೇಶದಾದ್ಯಂತ ಈ ಕೆಲಸ ಮಾಡುತ್ತಲೇ ಬಂದಿದೆ. ರಾಜ್ಯ ಸರ್ಕಾರಗಳೂ ತಮ್ಮ ಪೊಲೀಸ್ ಬಲವನ್ನು ಇದೇ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದೂ ಇದೆ. ಇಂತಹ ಪ್ರಕರಣಗಳಲ್ಲಿ ರಾಜಕೀಯವಾಗಿ ಹೆಚ್ಚು ಪರಿಣಾಮ ಬೀರುವಂತೆ ಲೆಕ್ಕಾಚಾರ ಹಾಕಿಕೊಂಡು ಬಂಧನದ ಸಮಯ ಮತ್ತು ಶೈಲಿಯನ್ನು ನಿರ್ಧರಿಸುತ್ತಿರುವುದು ರಹಸ್ಯವೇನಲ್ಲ. ಚಂದ್ರಬಾಬು ಅವರ ಬಂಧನವನ್ನು ಹಲವು ಪಕ್ಷಗಳ ಮುಖಂಡರು ಖಂಡಿಸಿದ್ದಾರೆ. ಈ ಪ್ರಕರಣದಲ್ಲಿ ಕಾನೂನು ತನ್ನ ಕೆಲಸವನ್ನು ಮಾಡುತ್ತದೆ. ನಾಯ್ಡು ತಪ್ಪಿತಸ್ಥರು ಎಂದು ಸಾಬೀತಾದಲ್ಲಿ ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ. ಆದರೆ, ದುರುದ್ದೇಶಪೂರಿತ ಮತ್ತು ರಾಜಕೀಯ ಲೆಕ್ಕಾಚಾರಗಳಿಂದ ಕ್ರಮ ಕೈಗೊಂಡಿದ್ದರೆ ಅದು ಸರಿಯಲ್ಲ. ಇಂತಹ ನಡೆಗಳು ಕಾನೂನಿನ ಉಲ್ಲಂಘನೆ ಮತ್ತು ಸೇಡಿನ ರಾಜಕಾರಣದ ವಿಷವರ್ತುಲದ ನಿರ್ಮಾಣಕ್ಕೆ ಎಡೆಮಾಡುತ್ತವೆ. ಚಂದ್ರಬಾಬು ಒಂದು ಕಾಲಘಟ್ಟದಲ್ಲಿ ದೇಶದ ರಾಜಕಾರಣದಲ್ಲಿ ತಾರಾವರ್ಚಸ್ಸು ಹೊಂದಿದ್ದ ನಾಯಕ. ಅವರ ಈಗಿನ ಸ್ಥಿತಿಯು ರಾಜಕೀಯ ಎಷ್ಟು ಅಸ್ಥಿರವಾದುದು ಎಂಬುದನ್ನು ಸೂಚಿಸುವಂತಿದೆ.

ದಿನದ ಟ್ವೀಟ್

ಮಾದರಿ ನಡೆ

ಸಾವಿರಾರು ವರ್ಷಗಳ ಲಿಂಗತಾರತಮ್ಯಕ್ಕೆ ಬ್ರೇಕ್ ಹಾಕುವಲ್ಲಿ ಇದೊಂದು ಅದ್ಭುತ ನಡೆ. ಅಲ್ಲದೆ ಸಮಾನತೆಗೆ ಸಿಕ್ಕ ಮಾನ್ಯತೆ! ಹೆಣ್ಣನ್ನು ಪೂಜಿಸುವ ಈ ಭೂಮಿಯಲ್ಲಿ 'ಮುಟ್ಟು' ಎಂಬ ವಿಷಯ ಮುಂದಿಟ್ಟುಕೊಂಡು ಅಜ್ಞಾನದಿಂದ, ಅವೈಜ್ಞಾನಿಕವಾಗಿ ಅವಳ ಬಗ್ಗೆ ಇಲ್ಲಸಲ್ಲದ ತಾರತಮ್ಯ ಎಸಗಿದ ಅಯೋಗ್ಯ ಗಂಡಸರ ಕುತಂತ್ರಕ್ಕೆ ಈಗ ತೆರೆ! ಇದು ವಿಶ್ವಕ್ಕೆ ಮಾದರಿ ಯೋಜನೆ, ಯೋಚನೆ. ಬಸವಣ್ಣನ ವೈಚಾರಿಕತೆ ಈ ನಡೆಯಲ್ಲಿದೆ. ಇದು ಧರ್ಮ, ಜಾತಿ ಮೀರಿದ ಸಂಸ್ಕೃತಿ. ಸ್ಟಾಲಿನ್ ಅವರಿಗೆ ಅಭಿನಂದನೆ. ಈ ಮಾದರಿ ಕರ್ನಾಟಕದಲ್ಲೂ ಜಾರಿ ಆಗಲಿ.

(ದೇವಾಲಯಗಳಿಗೆ ಮಹಿಳಾ ಅರ್ಚಕರನ್ನು ನೇಮಿಸಲು ಮುಂದಾಗಿರುವ ತಮಿಳುನಾಡು ಸರ್ಕಾರದ ಕ್ರಮಕ್ಕೆ ಪ್ರತಿಕ್ರಿಯೆ)

ಜ್ಞಾನ್ ಕಲ್ಲಹಳ್ಳಿ

ಕಿಡಿನುಡಿ

ಫೋನ್ ಕಂಪನಿಗಳು 5ಜಿ ಫೋನ್‌ಗಳನ್ನು ಮಾರಾಟ ಮಾಡುತ್ತಿವೆ. ದೂರಸಂಪರ್ಕ ಕಂಪನಿಗಳು 2ಜಿ ಗುಣಮಟ್ಟದ ಸೇವೆಯನ್ನು ಒದಗಿಸುತ್ತಿವೆ. ಜನರು 'ಹಲೋ... ಇವರೇ, ನಾನು ಹೇಳ್ತಿರೋದು ಕೇಳ್ತಿದೆಯಾ?' ಎನ್ನುತ್ತಿದ್ದಾರೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಬುಧವಾರ, 16-9-1998

• ಕಾಂಗ್ರೆಸಿಗರಿಗೆ ಪಾನ ನಿಷಿದ್ಧ ಕಾರ್ಯಕಾರಿಣಿ ನಿರ್ಧಾರ

ನವದೆಹಲಿ, ಸೆ. 15– ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಲು ಮದ್ಯ ಸೇವನೆ ನಿಷಿದ್ಧ ಸೇರಿದಂತೆ ಹಲವಾರು ನಿಬಂಧನೆಗಳನ್ನು ವಿಧಿಸಿರುವ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯು ಸದಸ್ಯರಲ್ಲಿ ಸದ್ವರ್ತನೆಯನ್ನು ನಿರೀಕ್ಷಿಸಿ ಮತ್ತಷ್ಟು ಶಿಸ್ತು ತರಲು ಹದಿನೆಂಟು ಸೂತ್ರಗಳ ಆಚಾರ ಸಂಹಿತೆಯೊಂದನ್ನು ರೂಪಿಸಿತು.

ಪಚಮಾರಿ ವಿಚಾರ ಮಂಥನ ಶಿಬಿರದ ನಂತರ ಇಂದು ಇಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಣಿ ಸಭೆಯು ಎ.ಕೆ. ಆ್ಯಂಟನಿ ಸಮಿತಿಯು ಈ ಸಂಬಂಧ ಸಿದ್ಧಪಡಿಸಿದ ಕರಡನ್ನು ಚರ್ಚಿಸಿ ಅದನ್ನು ಅಖೈರುಗೊಳಿಸಿತು.

ಹೊಸದಾದ ಈ ನೀತಿ ಸಂಹಿತೆಯ ಪ್ರಕಾರ, ಕಾಂಗ್ರೆಸ್ ಸದಸ್ಯರಾದವರು ಎರಡು ಮಕ್ಕಳ ಕುಟುಂಬ ಯೋಜನೆಯ ನೀತಿಯನ್ನು ಪಾಲಿಸಬೇಕು. ಪ್ರತಿಯೊಬ್ಬ ಸದಸ್ಯ ತಾನು ಹೊಂದಿರುವ ಆಸ್ತಿಯ ವಿವರಗಳನ್ನು ಪಕ್ಷದ ಮುಂದೆ ಘೋಷಿಸಿಕೊಳ್ಳಬೇಕು.

• ಭಾಷಾ ಸ್ಥಾನಮಾನ ಅಧ್ಯಯನಕ್ಕೆ ಸಮಿತಿ

ಚೆನ್ನೈ, ಸೆ. 15 (ಪಿಟಿಐ, ಯುಎನ್‌ಐ)– ತಮಿಳು ಸೇರಿದಂತೆ ಸಂವಿಧಾನದಲ್ಲಿ ಪ್ರಸ್ತಾಪ ಆಗಿರುವ ಎಲ್ಲಾ 19 ಭಾಷೆಗಳನ್ನೂ ಅಧಿಕೃತ ಭಾಷೆಯನ್ನಾಗಿ ಪರಿಗಣಿಸುವುದರ ಸೂಕ್ತತೆಯನ್ನು ಅಧ್ಯಯನ ಮಾಡಲು ಸಮಿತಿಯೊಂದನ್ನು ತಮ್ಮ ಸರ್ಕಾರ ಶೀಘ್ರವೇ ರಚಿಸುವುದೆಂದು ಪ್ರಧಾನಿ ಎ.ಬಿ.ವಾಜಪೇಯಿ ಅವರು ಇಂದು ಇಲ್ಲಿ ಪ್ರಕಟಿಸಿದರು.

ಅಣ್ಣಾದೊರೆ ಅವರ 90ನೇ ಜನ್ಮದಿನಾಚರಣೆಯಲ್ಲಿ ಭಾಗವಹಿಸಿದ್ದ ಅವರು ಈ ಹೇಳಿಕೆ ನೀಡಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 16-9-1973

• ದೇಶದ ಆರ್ಥಿಕ ಚೇತರಿಕೆಗೆ ಅಡ್ಡಿಯಾದ ದುಷ್ಟಶಕ್ತಿಗಳ ವಿರುದ್ಧ ಡಾ. ಶರ್ಮ ಎಚ್ಚರಿಕೆ

ನವದೆಹಲಿ, ಸೆ. 15– ಉತ್ತಮ ಖಾರಿಫ್ ಬೆಳೆಯಿಂದ ರಾಷ್ಟ್ರದಲ್ಲಿ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಳ್ಳುವುದನ್ನು ತಡೆಗಟ್ಟಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹಿಂದೂ ಮುಸ್ಲಿಂ ಕೋಮುಭಾವನೆ ಪ್ರಚೋದಿಸುತ್ತಾ ದೇಶದಲ್ಲಿ ಹಿಂಸೆಯ ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತಿರುವುದರ ವಿರುದ್ಧ ಸರ್ಕಾರ ಹಾಗೂ ಪಕ್ಷ ಎಚ್ಚರಿಕೆಯಿಂದಿರಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಡಾ.ಶಂಕರ್ ದಯಾಳ್ ಶರ್ಮ ಅವರು ಇಂದು ಇಲ್ಲಿ ಕರೆ ಇತ್ತರು.

ಡಾ.ಶರ್ಮ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಎರಡು ದಿನಗಳ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು.

ಜೆಡಿಎಸ್ ಕುಟುಂಬ ರಾಜಕಾರಣವು ಬಿಜೆಪಿ ವರಿಷ್ಠರಿಗೆ ಸಹ್ಯವೇ?

ಆಗ ವಿಶ್ವಾಸದ್ರೋಹ, ಈಗ ವಿಶ್ವಾಸಾರ್ಹ!

ಗತಿಬಿಂಬ

ವೈ.ಗ.ಜಗದೀಶ್

ಮೂರು ತಿಂಗಳ ಹಿಂದಷ್ಟೇ ಬೀದಿಯಲ್ಲಿ ನಿಂತು ಪರಸ್ಪರ ಬೈದಾಡಿ, ಮೂದಲಿಸಿಕೊಂಡಿದ್ದ ಬಿಜೆಪಿ-ಜೆಡಿಎಸ್ ನಾಯಕರು ಈಗ 'ಕೂಡಿಕೆ'ಯ ಹವಣಿಕೆಯಲ್ಲಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಸ್ಥಾನ ಹೊಂದಾಣಿಕೆಯ ಮಾತುಗಳನ್ನೂ ಆಡುತ್ತಿದ್ದಾರೆ. 2018ರ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಹೀಗೆಯೇ ಕಚ್ಚಾಡಿಕೊಂಡಿದ್ದ ಕಾಂಗ್ರೆಸ್-ಜೆಡಿಎಸ್ ನಾಯಕರು, ಫಲಿತಾಂಶ ಬರುತ್ತಿದ್ದಂತೆ ಕೈಜೋಡಿಸಿ ಅಧಿಕಾರ ಹಿಡಿದಿದ್ದರು. ಪರಸ್ಪರ ವಿರೋಧಿಗಳು ಅಧಿಕಾರಲಾಲಸೆಯಿಂದ ಒಟ್ಟಾಗುವುದು ಇತ್ತೀಚಿನ ವರ್ಷಗಳಲ್ಲಿ ವಿಚಿತ್ರದ ಸಂಗತಿಯೇನಲ್ಲ.

ಅಧಿಕಾರ ರಾಜಕಾರಣದ ಮುಂದೆ ಸೈದ್ಧಾಂತಿಕ ಭಿನ್ನತೆ, ಬದ್ಧತೆ ಮಸುಕಾಗುತ್ತಿವೆ. ಅಧಿಕಾರಕ್ಕಾಗಿ ಇಂತಹ ನಡೆ ಸಹಜ ಎನ್ನಿಸುವ ಮಟ್ಟಿಗೆ ರಾಜಕೀಯ ಮಲಿನಗೊಂಡಿದೆ. ಸೈದ್ಧಾಂತಿಕವಾಗಿ ಎಂದೂ ಒಮ್ಮತಕ್ಕೆ ಬರಲು ಸಾಧ್ಯವೇ ಇಲ್ಲ ಎನ್ನುವಂತಿದ್ದ ಕಾಂಗ್ರೆಸ್-ಶಿವಸೇನಾ ಕೂಡಿ ಮಹಾರಾಷ್ಟ್ರದಲ್ಲಿ ಸರ್ಕಾರ ರಚಿಸಿದ್ದವು. ರಾಜಕೀಯದಲ್ಲಿ ಅಸಾಧ್ಯ ಅಥವಾ ಅಸಹ್ಯ ಎನ್ನುವಂತಹ ವಾತಾವರಣವಂತೂ ಬದಲಾಗಿಹೋಗಿದೆ.

ಕರ್ನಾಟಕದಲ್ಲಿ ಬಿಜೆಪಿ ಜತೆ ಜೆಡಿಎಸ್ ಸಖ್ಯ ಬೆಳೆಸುತ್ತಿರುವುದು ಇದು ಮೊದಲೇನಲ್ಲ. 2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಕೂಡಿಯೇ ಜೆಡಿಎಸ್-ಬಿಜೆಪಿ ಮೈತ್ರಿಕೂಟ ನೇತೃತ್ವದ ಸರ್ಕಾರ ರಚಿಸಿದ್ದರು. 'ನನ್ನ ತಂದೆ ಎಚ್.ಡಿ.ದೇವೇಗೌಡರ ವಿರೋಧ ಕಟ್ಟಿಕೊಂಡು ಮೈತ್ರಿಗೆ ಮುಂದಾಗಿ ಕೆಟ್ಟೆ' ಎಂದೂ ನಂತರದ ವರ್ಷಗಳಲ್ಲಿ ಕುಮಾರಸ್ವಾಮಿ ಹಳಹಳಿಸುತ್ತಿದ್ದರು. ಮತ್ತೆ ಬಿಜೆಪಿ ಜತೆಗಿನ ಸಖ್ಯಕ್ಕೆ ಕುಮಾರಸ್ವಾಮಿ ಹಾತೊರೆದಿರಲಿಲ್ಲ. 2018ರಲ್ಲಿ ಒಂದು ವರ್ಷವಷ್ಟೇ ಕಾಂಗ್ರೆಸ್ ಜತೆ ಸೇರಿ ಸರ್ಕಾರ ನಡೆಸಿದ್ದರು. 2019ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಸ್ಥಾನ ಹಂಚಿಕೆ ಮಾಡಿಕೊಂಡು ಸ್ಪರ್ಧಿಸಿ, ತಲಾ ಒಂದು ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದವು. 2018 ಮತ್ತು 2023ರ ವಿಧಾನಸಭೆ ಚುನಾವಣೆಗಳ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಜೆಡಿಎಸ್ ಅನ್ನು ಪರಸ್ಪರ ತಮ್ಮ ವಿರೋಧಿಗಳ ಬಿ-ಟೀಮ್ ಎಂದೇ ಹಂಗಿಸಿದ್ದರು.

ಈಗ ಮತ್ತೆ ಲೋಕಸಭೆ ಚುನಾವಣೆಯ ಗುಂಗು ಶುರುವಾಗಿದ್ದು, ಮೈತ್ರಿಯ ಲೆಕ್ಕಾಚಾರ ಬಿಜೆಪಿ-ಜೆಡಿಎಸ್‌ನಲ್ಲಿ ಬಿರುಸುಗೊಂಡಿದೆ. ಸೈದ್ಧಾಂತಿಕವಾಗಿ ವಿರುದ್ಧ ಧ್ರುವಗಳಲ್ಲಿರುವಂತೆ ಬಿಂಬಿಸಿಕೊಂಡ ಎರಡು ಪಕ್ಷಗಳು ಈಗ ಯಾವ ನೈತಿಕತೆಯನ್ನು ಇಟ್ಟುಕೊಂಡು ಒಂದಾಗುತ್ತಿವೆ? 20 ತಿಂಗಳ ಬಳಿಕ ಅಧಿಕಾರ ಬಿಟ್ಟುಕೊಡದ ಕುಮಾರಸ್ವಾಮಿ ವಿಶ್ವಾಸದ್ರೋಹ ಮಾಡಿದ್ದಾರೆ ಎಂದು ಆಪಾದಿಸಿ ಯಡಿಯೂರಪ್ಪನವರು 2008ರಲ್ಲಿ ಚುನಾವಣೆ ಎದುರಿಸಿದ್ದರು. ಹಿಂದೆಂದೂ ಸಿಗದ ಗೆಲುವು 'ವಿಶ್ವಾಸದ್ರೋಹ'ದ ಕಾರಣದಿಂದ ಉಂಟಾದ ಅನುಕಂಪದಿಂದಾಗಿ ಬಿಜೆಪಿಗೆ ದಕ್ಕಿತ್ತು. ಅಂತಹ 'ವಿಶ್ವಾಸದ್ರೋಹ'ವನ್ನು ಮರೆತು ಈಗ ಹೇಗೆ ಒಂದಾಗಲಿದ್ದಾರೆ?

2018ರಲ್ಲಿ ಕಾಂಗ್ರೆಸ್ ಬೆಂಬಲದಿಂದ ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಆಗ ವಿಧಾನಸಭೆಯಲ್ಲಿ ಮಾತನಾಡಿದ್ದ ಅಂದಿನ ವಿರೋಧ ಪಕ್ಷದ ನಾಯಕ ಯಡಿಯೂರಪ್ಪ, 'ಕುಮಾರಸ್ವಾಮಿ ದುರ್ಯೋಧನ ವಂಶಸ್ಥ. ದುರ್ಯೋಧನನ ರಥದ ಬಾವುಟದಲ್ಲಿ ಹಾವಿನ ಲಾಂಛನ ಇರುವುದರಿಂದ ಅವನನ್ನು 'ಉರಗ ಪತಾಕಂ' ಎಂದು ಕರೆಯುತ್ತಾರೆ. ವಿನಾಶವೇ ದುರ್ಯೋಧನನ ಧ್ಯೇಯ. ಅಂತಹ ವಿನಾಶಕಾರನ ಬಾಯಲ್ಲಿ ವಿಕಾಸದ ಮಂತ್ರ ಹೇಳಿಸುತ್ತಿದ್ದೀರಿ' ಎಂದು ಕಾಂಗ್ರೆಸ್‌ನವರನ್ನು ಹಂಗಿಸಿದ್ದರು.

'ನಂಬಿದವರನ್ನು ಮುಗಿಸುವಂತಹದ್ದು ಕುಮಾರಸ್ವಾಮಿ ತತ್ವ. ಧರ್ಮಸಿಂಗ್ ಅವರನ್ನು ನಂಬಿಸಿ ಬೀದಿಯಲ್ಲಿ ಬಿಟ್ಟರು. ಅದೇ ಕೊರಗಿನಲ್ಲಿ ಅವರು ಕೈಲಾಸವಾಸಿಯಾದರು. ಇಂತಹ ನಯವಂಚಕ ಕುಮಾರಸ್ವಾಮಿ. ನಮ್ಮ ಜತೆ ಸೇರಿ ಅಧಿಕಾರದ ತೀಟೆ ತೀರಿಸಿಕೊಂಡು, ರೈತರ ಉದ್ಧಾರ ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಿದ್ದಾರೆ' ಎಂದು ಹೀಗಳೆದಿದ್ದರು. ಈಗ ಈ ಇಬ್ಬರೂ ಒಂದಾಗಿ ಚುನಾವಣೆ ಪ್ರಚಾರ ನಡೆಸುವುದನ್ನು ನೋಡುವುದೇ ಚೆಂದ!

ಬಿಜೆಪಿ ಸಖ್ಯದಿಂದ ದೂರ ಸರಿದಿದ್ದ ಕುಮಾರಸ್ವಾಮಿ ಕೂಡ ಎದುರಾಳಿ ಪಕ್ಷ, ಅದರ ಹಿಂದಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಹೀನಾಮಾನ ಬೈದಿದ್ದುಂಟು.

ದಿನೇಶ್ ನಾರಾಯಣನ್ ಅವರ 'The RSS and the making of THE DEEP NATION' ಪುಸ್ತಕದಿಂದ ಬಹಳ ಪ್ರಭಾವಿತರಾಗಿದ್ದ ಕುಮಾರಸ್ವಾಮಿ, ಅದನ್ನು ಆಧರಿಸಿ ಸುದೀರ್ಘ ಲೇಖನವೊಂದನ್ನು ಬರೆದಿದ್ದರು. 'ಸಂಘವೆಂದರೆ 'ಸದಾನಂದ'ದ ಪರಿವಾರ. ಐಷಾರಾಮಿ ಬದುಕಿನ ಆಗರ. ಲೋಲುಪತೆಯ ಖಯಾಲಿಗಳ ಆಡುಂಬೊಲ. ಸಂಘವು ಸೇವೆಯ ಪಾವಿತ್ರ್ಯ ಉಳಿಸಿಕೊಂಡಿಲ್ಲ. ಅದರ ಗುರಿ ಅಧಿಕಾರ ಮಾತ್ರ. ಅದಕ್ಕಾಗಿ ಅದರ ಬಳಿ ಇರುವ ಏಕೈಕ ಟೂಲ್‌ಕಿಟ್ ಹಿಂದುತ್ವ. ಆ ಮೂಲಕ ದೇಶವನ್ನು ಪುನಃ ಅಂಧಕಾರಕ್ಕೆ ತಳ್ಳುವ ಕೆಲಸ ಮಾಡುತ್ತಿದೆ. ಸಂವಿಧಾನದತ್ತವಾಗಿ ಪ್ರಮಾಣ ಸ್ವೀಕರಿಸಿದ ಪ್ರಧಾನಿ, ಮುಖ್ಯಮಂತ್ರಿಗಳನ್ನು ಕೀಲುಗೊಂಬೆಗಳನ್ನಾಗಿ ಮಾಡಿಕೊಳ್ಳುವ ಅಪ್ರಜಾಸತ್ತಾತ್ಮಕ ಕೂಟವೇ ಇವತ್ತಿನ ಸಂಘ. ಆರ್‌ಎಸ್‌ಎಸ್ ಎಂದೂ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಂಡಿಲ್ಲ. ನೆಲದ ಕಾನೂನನ್ನು ಗೌರವಿಸಿಲ್ಲ. ಇಂಥ ಸಂಸ್ಥೆ ರಾಷ್ಟ್ರದ ವಿಪತ್ತು ಮಾತ್ರವಲ್ಲ, ದೇಶದ ಜಾತ್ಯತೀತ, ಧರ್ಮಾತೀತ ಮೂಲದ್ರವ್ಯಕ್ಕೆ ವಿಷವುಣಿಸುತ್ತಿರುವ ಕಾರ್ಕೋಟಕ ವಿಷಸರ್ಪ' ಎಂಬಷ್ಟು ಉಗ್ರ ಪದಗಳನ್ನು ಬಳಸಿದ್ದರು.

ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ, 'ಈ ಬಾರಿ ಗೆದ್ದರೆ ಬಿಜೆಪಿಯು ಬ್ರಾಹ್ಮಣರನ್ನು ಮುಖ್ಯಮಂತ್ರಿ ಮಾಡಲು ಮುಂದಾಗಿದೆ. ಶೃಂಗೇರಿಯ ದೇವಸ್ಥಾನವನ್ನು ನಾಶ ಮಾಡಿದ್ದ ಪೇಶ್ವೆಗಳ ಡಿಎನ್‌ಎ ಹೊಂದಿರುವ ವ್ಯಕ್ತಿಯನ್ನು ಈ ಹುದ್ದೆಗೇರಿಸುವ ಸಂಚು ನಡೆಸಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಉದ್ದೇಶಿಸಿ ಹೇಳಿದ್ದು ವಿವಾದವನ್ನೇ ಎಬ್ಬಿಸಿತ್ತು. ಬಿಜೆಪಿಯ ಮತಬ್ಯಾಂಕ್ ಒಡೆಯುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯೂ ಆಗಿತ್ತು. ಅವೆಲ್ಲವನ್ನೂ ಮರೆತು ಕುಮಾರಸ್ವಾಮಿಯವರು ಬಿಜೆಪಿ ಜತೆ 'ಮಿಲನ'ಕ್ಕೆ ಮುಂದಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ಕುಟುಂಬ ರಾಜಕಾರಣದ ವಿರುದ್ಧ ವಾಕ್‌ಪ್ರಹಾರ ನಡೆಸುತ್ತಲೇ ಬಂದಿದ್ದಾರೆ. 'ದೇಶದ ಅಭಿವೃದ್ಧಿಗೆ ಕುಟುಂಬ ರಾಜಕಾರಣ ಕಂಟಕ, ಪ್ರಜಾಪ್ರಭುತ್ವಕ್ಕೆ ಮಾರಕ. ಕುಟುಂಬ ರಾಜಕಾರಣವನ್ನು ಬೇರುಸಮೇತ ಕಿತ್ತುಹಾಕಬೇಕು' ಎಂದು ನೂರಾರು ಬಾರಿ ಹೇಳಿದ್ದಲ್ಲದೇ, ತಮ್ಮ ರಾಜಕಾರಣ ಭಿನ್ನ ಎಂದು ಬಿಂಬಿಸಿಕೊಳ್ಳಲು ಈ ಮೂಲಕ ಯತ್ನಿಸಿದ್ದಾರೆ. 'ಪಕ್ಷದ ಅಸ್ತಿತ್ವಕ್ಕೆ ಕುಟುಂಬ ರಾಜಕಾರಣವನ್ನೇ ನೆಚ್ಚಿಕೊಂಡಿದ್ದೇವೆ' ಎಂದು ಹೇಳಿಕೊಳ್ಳುವ ಜೆಡಿಎಸ್ ನಾಯಕರನ್ನು ಪಕ್ಕಕ್ಕಿಟ್ಟುಕೊಂಡು ಪ್ರಧಾನಿಯವರು ರಾಜ್ಯದಲ್ಲಿ ಹೇಗೆ ಪ್ರಚಾರ ನಡೆಸುತ್ತಾರೆ ಎಂಬ ಕುತೂಹಲವಂತೂ ಇದೆ.

ಕುಮಾರಸ್ವಾಮಿಯವರೇ ಹಿಂದೆ ಹೇಳಿದಂತೆ, ಹಿಂದುತ್ವವೇ ಬಿಜೆಪಿಯ ಕಾರ್ಯಸೂಚಿ. ಮುಸ್ಲಿಮರನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ನೋಡುವ, ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪ್ರತಿಪಾದಿಸುವ ಸನಾತನ (ವೈದಿಕಧರ್ಮ) ಧರ್ಮದ ಪರವಾಗಿ ನಿಲ್ಲುವ, ಮೀಸಲಾತಿಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿರುವ, ಸಂವಿಧಾನ ಬದಲಿಸಬೇಕೆಂದು ಬಯಸುವ ಬಿಜೆಪಿಯ ಆದ್ಯತಾ ನಿಲುವಿನ ಬಗ್ಗೆ ಕುಮಾರಸ್ವಾಮಿಯವರಿಗೆ ಸಹಮತ ಇದೆಯೇ? ಏಕೆಂದರೆ, ಚುನಾವಣೆ ಹೊತ್ತಿಗೆ ಈ ಎಲ್ಲ ವಿಷಯಗಳೂ ಮುನ್ನೆಲೆಗೆ ಬರಲಿವೆ. ಇಲ್ಲಿಯವರೆಗೆ ಪಕ್ಷದ ಹೆಸರಿಗೆ 'ಜಾತ್ಯತೀತ' ಎಂಬುದನ್ನು ಜನತಾದಳ ಅಂಟಿಸಿಕೊಂಡಿದೆ. ಕೆಲವರು ಕುಹಕವಾಡುತ್ತಿರುವಂತೆ ಜೆಡಿಎಸ್ ಅನ್ನು 'ಸೆಕ್ಯುಲರ್' ಎಂಬುದಕ್ಕೆ ಬದಲಾಗಿ 'ಸನಾತನ' ಎಂದು ಬದಲಿಸಿಕೊಳ್ಳಲಿದ್ದಾರೆಯೇ? ಇದನ್ನು ಅವರೇ ಹೇಳಬೇಕಿದೆ.

ಹಿಂದಿನ ಎರಡು ಲೋಕಸಭಾ ಚುನಾವಣೆಗಳಲ್ಲಿ ಜೆಡಿಎಸ್ ಗಮನಾರ್ಹ ಸಾಧನೆಯನ್ನೇನೂ ಮಾಡಿಲ್ಲ. 2014ರ ಚುನಾವಣೆಯಲ್ಲಿ ಕರ್ನಾಟಕದ 28 ಸ್ಥಾನಗಳ ಪೈಕಿ 17 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಶೇ 43.37 ಮತ ಪಡೆದಿದ್ದರೆ, 9 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಶೇ 41.15ರಷ್ಟು ಮತ ಗಳಿಸಿತ್ತು. ಎರಡು ಸ್ಥಾನಗಳನ್ನು ಗೆದ್ದಿದ್ದ ಜೆಡಿಎಸ್ ಶೇ 11.07ರಷ್ಟು ಮತ ದಕ್ಕಿಸಿಕೊಂಡಿತ್ತು. 2019ರಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಮಾಡಿಕೊಂಡು ಚುನಾವಣೆಗೆ ಹೋಗಿದ್ದರಿಂದಾಗಿ ಪರಿಸ್ಥಿತಿ ತಲೆಕೆಳಗಾಗಿತ್ತು. ಶೇ 51.75ರಷ್ಟು ಮತ ಪಡೆದಿದ್ದ ಬಿಜೆಪಿ 25 ಸ್ಥಾನಗಳಲ್ಲಿ ವಿಜಯ ಸಾಧಿಸಿದ್ದರೆ, ಶೇ 32.11ರಷ್ಟು ಮತ ಗಳಿಸಿದ್ದ ಕಾಂಗ್ರೆಸ್ 1 ಸ್ಥಾನಕ್ಕೆ ಹಾಗೂ ಶೇ 9.74ರಷ್ಟು ಮತ ಪಡೆದಿದ್ದ ಜೆಡಿಎಸ್ 1 ಸ್ಥಾನಕ್ಕೆ ಕುಸಿದಿದ್ದವು. ಒಂದು ಸ್ಥಾನ ಪಕ್ಷೇತರ ಅಭ್ಯರ್ಥಿಯ ಪಾಲಾಗಿತ್ತು.

ಈಗ ಬಿಜೆಪಿ-ಜೆಡಿಎಸ್ ಮೈತ್ರಿಗೆ ಮನಸ್ಸು ಮಾಡಿವೆ. ಚುನಾವಣೆ ಯಾರನ್ನು ಉಳಿಸಲಿದೆ, ಯಾರನ್ನು ಮುಳುಗಿಸಲಿದೆ, ಯಾರನ್ನು ತೇಲಿಸಲಿದೆ ಎಂಬುದನ್ನು ಮತದಾರರಷ್ಟೇ ಬಲ್ಲರು.

ಚುರುಮುರಿ



ಬಡಾಯಿ ಬೆಟಾಲಿಯನ್!

• ಎಸ್.ಬಿ.ರಂಗನಾಥ್

ನಗೆಕೂಟ, ಕ್ರೀಡಾಕೂಟದ ಮಾದರಿಯಲ್ಲಿ ನಮ್ಮೂರಿನ ಹಿರಿಯ ನಾಗರಿಕರೂ ಒಂದು ಕೂಟವನ್ನು ರಚಿಸಿಕೊಂಡು, ಅದರ ಉದ್ಘಾಟನೆಗೆಂದು ಪಾರ್ಕ್‌ನಲ್ಲಿ ಸೇರಿದ್ದರು.

'ನಾನು ಸಬ್ ಇನ್‌ಸ್ಪೆಕ್ಟರ್ ಆಗಿದ್ದಾಗ ಈಗಿನ ಎಂಎಲ್‌ಎ ಮರಿ ಪುಢಾರಿ ಆಗಿದ್ರು. ಒಂದು ಕೇಸಿನಲ್ಲಿ ಅವ್ರನ್ನ ನಾನು ಒದ್ದು ಒಳಗೆ ಹಾಕಿದ್ದೆ' ಎಂದರು ಕೂಟದ ನಿಯೋಜಿತ ಗೌರವಾಧ್ಯಕ್ಷರು.

'ಮಹಿಳಾ ಪಿ.ಸಿ. ಜೊತೆ ಅನುಚಿತವಾಗಿ ವರ್ತಿಸಿದಿರೀಂತ ಸಸ್ಪೆಂಡ್ ಆಗಿದ್ದಿರಂತೆ?!' ಎಂದರು ಕಾರ್ಯಾಧ್ಯಕ್ಷರು, ನಿವೃತ್ತ ಸರ್ವೇಯರ್.

'ಅದೆಲ್ಲ ಮೇಲಿನವರ ಹುನ್ನಾರ. ಎನ್‌ಕ್ವೈರೀಲಿ ನಾನು ನಿರ್ದೋಷಿಯಾಗಿ ಹೊರಬಂದೆನಲ್ರೀ!'

'ಅಪ್ರೋಚ್ ರಸ್ತೆ ಸೇತುವೆಯ ಕಾಮಗಾರಿ ನಾನೇ ಸೂಪರ್‌ವೈಸ್ ಮಾಡಿದ್ದು' ಎಂದರು ನಿವೃತ್ತ ಎಕ್ಸಿಕ್ಯುಟಿವ್ ಎಂಜಿನಿಯರ್, ಕೂಟದ ಅಧ್ಯಕ್ಷರು. 'ಪರ್ಸೆಂಟೇಜ್ ಚೌಕಾಸಿಯಲ್ಲಿ ಆರು ತಿಂಗಳು ಕೆಲಸ ನಿಲ್ಲಿಸಿದ್ದಿರಂತೆ!' ಉಪಾಧ್ಯಕ್ಷ ನಿವೃತ್ತ ಪಿಡಿಒ ಉವಾಚ.

'ನನಗೆ ಆಗದವರು ಹಬ್ಬಿಸಿದ್ದ ಸುಳ್ಳು ಸುದ್ದಿ ಅದು. ಇಲಾಖಾ ಮಂತ್ರಿಗಳೇ ಅದನ್ನು ಉದ್ಘಾಟಿಸಲಿಲ್ವೆ?'

'ನಮ್ಮೂರ ಕೆರೆ ಕಟ್ಟಲು ಜಮೀನು ಮುಳುಗಡೆ ಆದಾಗ ಹೈಕೋರ್ಟ್‌ವರೆಗೂ ಹೋರಾಡಿ, ರೈತರಿಗೆ ಯಥೇಚ್ಛ ಕಾಂಪನ್ಸೇಷನ್ ಕೊಡಿಸಿದ ತೃಪ್ತಿ ನನ್ನದು' ಎಂದರು ಖಜಾಂಚಿ, ವಕೀಲರು. 'ಪರಿಹಾರದಲ್ಲಿ ಅರ್ಧದಷ್ಟನ್ನು ಫೀಸ್ ಅಂತ ತಗೊಂಡಿರಂತೆ!' ಚುಚ್ಚಿದರು ಕಾರ್ಯದರ್ಶಿ, ನಿವೃತ್ತ ಬಿಇಒ.

'ಮೇಷ್ಟರು ಬಂದು ನಿಮ್ಮನ್ನು ಕಾಣೋವರೆಗೂ ಅವರ ಸಂಬಳದ ಬಿಲ್ ಆಗ್ತಿರಲಿಲ್ವಂತೆ!' ವಕೀಲರ ತಿರುಗೇಟು.

'ರಿಟೈರ್ ಆದಮೇಲೂ ಮನೇಲಿ ನಾನೇ ಯಜಮಾನ. ಯಾರೂ ನಾನು ಹಾಕಿದ ಗೆರೆ ದಾಟೋಲ್ಲ' ಎಂದರು ನಿವೃತ್ತ ಹೆಡ್ಮಾಸ್ಟರ್, ಕೂಟದ ಜಂಟಿ ಕಾರ್ಯದರ್ಶಿ.

'ನಿಮ್ಮ ಪೆನ್ಷನ್ ಬುಕ್, ಎಟಿಎಂ ಕಾರ್ಡ್ ನಿಮ್ಮ ಶ್ರೀಮತಿಯವರ ಕೈಲಿ ಅಂತಿದ್ರು!'

'ಅಯ್ಯೋ, ಆ ಗುಂಪಿನಲ್ಲಿ ಆಕೇನೇ ಇದ್ದಂತಿದೆ, ನೋಡಿ ಅಲ್ಲಿ!'

ಹತ್ತಿರ ಬರುತ್ತಿದ್ದ ಮಹಿಳಾ ಗುಂಪಿನಲ್ಲಿ ತಮ್ಮ ತಮ್ಮ 'ಗೃಹಮಂತ್ರಿ'ಗಳನ್ನು ಗುರುತಿಸಿದ ಆ ಬಡಾಯಿ ಬೆಟಾಲಿಯನ್ ಜಾಗ ಖಾಲಿ ಮಾಡಿತು!

ಸಂಗತ

ವಿವಿಧೆಡೆ ಫಲಕ: ಫಲ ನಾಸ್ತಿ!

ಫಲಕಗಳ ಆಶಯ ನೆರವೇರದೇ ಹೋಗುವುದಕ್ಕೆ ಜನಪ್ರತಿನಿಧಿಗಳ ಜಡತ್ವ, ನೌಕರರ ನಿರ್ಲಕ್ಷ್ಯ ಕಾರಣ

• ಪ.ರಾಮಕೃಷ್ಣಶಾಸ್ತ್ರಿ

ಎಷ್ಟೋ ಕಡೆ ಸಂದೇಶ, ಎಚ್ಚರಿಕೆಯ ಸೂಚನೆಗಳನ್ನುಳ್ಳ ಫಲಕಗಳಿರುತ್ತವೆ. ಆದರೆ ಫಲ ಮಾತ್ರ ನಾಸ್ತಿ ಎಂಬಂತೆ ಆಗಿರುತ್ತದೆ. ಪಟ್ಟಣಗಳಲ್ಲಿ 'ಇಲ್ಲಿ ಕಸ ಹಾಕಬೇಡಿ' ಎಂಬ ಪಂಚಾಯಿತಿಯ ಫಲಕದ ಕೆಳಗೇ ಪಾಲಿಥಿನ್ ಚೀಲಗಳಲ್ಲಿ ತಂದು ಹಾಕಿದ ರಾಶಿ ರಾಶಿ ಕಸವೇ ತುಂಬಿರುತ್ತದೆ. ಬಸ್ ನಿಲ್ದಾಣದ ಹಿಂಭಾಗದಲ್ಲಿ 'ಇಲ್ಲಿ ಮೂತ್ರ ಮಾಡಬಾರದು' ಎಂಬ ಫಲಕದ ಸನಿಹ ಮೂತ್ರದ ಕೊಚ್ಚೆ ತುಂಬಿರುತ್ತದೆ. 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಫಲಕ ತೂಗಾಡುತ್ತಿರುವ ಬ್ಯಾಂಕಿಗೆ ಹೋದರೆ, ಅಲ್ಲಿರುವ ನೌಕರನಿಗೆ ಹಿಂದಿ, ತಮಿಳು ಬಿಟ್ಟರೆ ಕನ್ನಡ ಸ್ವಲ್ಪವೂ ಬಾರದಿರುವ ಸಾಧ್ಯತೆಯೇ ಹೆಚ್ಚು. ಹಾಗಿದ್ದರೆ ಈ ಫಲಕಗಳು ಯಾರಿಗಾಗಿ? ಅನುಷ್ಠಾನಕ್ಕೆ ತರಲು ಕಷ್ಟವಾಗುವ ಫಲಕಗಳಿಂದ ಲಾಭವಾದರೂ ಏನಿದೆ?

ಸರ್ಕಾರಿ ಸಾರಿಗೆ ಬಸ್‌ಗಳಲ್ಲಂತೂ ಫಲಕಗಳು ನಿರರ್ಥಕ ಎಂಬ ಭಾವವನ್ನೇ ಸೃಷ್ಟಿಸಿವೆ. 'ಅಂಗವಿಕಲರು', 'ಹಿರಿಯ ನಾಗರಿಕರು', 'ಸ್ವಾತಂತ್ರ್ಯ ಹೋರಾಟಗಾರರು' ಎಂದೆಲ್ಲ ಮೀಸಲಾದ ಆಸನಗಳನ್ನು ಅವುಗಳ ಮೇಲಿರುವ ಫಲಕಗಳು ಸೂಚಿಸುತ್ತವೆ. ಹಿರಿಯ ನಾಗರಿಕರಿಗೆ ಟಿಕೆಟ್ ನೀಡಿದ ಕೂಡಲೇ ಅವರಿಗೆ ಮೀಸಲಿರುವ ಆಸನವನ್ನು ತೆರವು ಮಾಡಿಸಿಕೊಡಬೇಕಾದದ್ದು ನಿರ್ವಾಹಕರ ಕರ್ತವ್ಯ. ಕೊಡಲೇಬೇಕು ಎಂಬ ನಿಯಮವೂ ಇದೆ. ಆದರೆ ಅಸಹಾಯಕರು, ವಯಸ್ಸಾದವರು ಕಂಬಿ ಹಿಡಿದುಕೊಂಡು ಜೋತಾಡುತ್ತಿದ್ದರೂ ಅವರಿಗೆ ಮೀಸಲಾದ ಆಸನಗಳನ್ನು ಕೊಡಿಸಲು ಮುಂದಾಗುವ ನಿರ್ವಾಹಕರ ಸಂಖ್ಯೆ ಎಷ್ಟಿದೆ?

ಹಾಗೆಯೇ ಸರ್ಕಾರಿ ಬಸ್ ಪ್ರಯಾಣಿಕರು ತಮ್ಮ ಮೊಬೈಲ್ ಶಬ್ದವನ್ನು ಇತರರಿಗೆ ತೊಂದರೆಯಾಗುವಂತೆ ಜೋರಾಗಿ ಬಳಸಬಾರದು ಎಂಬ ಫಲಕವೂ ಕೆಲವೆಡೆ ಇರುತ್ತದೆ. ಆದರೆ ಇದು ಎಷ್ಟು ಕಡೆ ಪಾಲನೆಯಾಗುತ್ತಿದೆ?

ಅನೇಕ ಸರ್ಕಾರಿ ಕಚೇರಿಗಳಲ್ಲಿ ಫಲಕವೊಂದು ಗಮನ ಸೆಳೆಯುತ್ತದೆ. 'ಕೆಲಸ ಮಾಡಿಕೊಡಲು ನೌಕರರು ಲಂಚ ಕೇಳಿದರೆ ಇಲ್ಲಿ ಕೊಟ್ಟಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸಿ' ಎಂದಿರುತ್ತದೆ. ಅದೇ ಪ್ರಕಾರ, ಅವರು ಲಂಚವನ್ನೇನೂ ಕೇಳುವುದಿಲ್ಲ. ಆದರೆ ಹತ್ತಾರು ಬಾರಿ ಆ ಕಚೇರಿಗೆ ಹೋಗಿಬಂದರೂ ಕೆಲಸ ಮಾತ್ರ ಆಗುವುದಿಲ್ಲ. ಏನಾದರೂ ಕುಂಟು ನೆವ ಹೇಳಿ ನೌಕರರು ಸಾಗಹಾಕುತ್ತಾರೆ. ತಾಲ್ಲೂಕು ಕಚೇರಿ, ಸಾರಿಗೆ ಅಧಿಕಾರಿಗಳ ಕಚೇರಿಗಳ ಸುತ್ತಲೂ ಇರುವ ದಲ್ಲಾಳಿಗಳ ಮೂಲಕ ಹೋದರೆ ತಕ್ಷಣ ಕೆಲಸವಾಗುತ್ತದೆ. ಕಚೇರಿಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಿದ ಮಾತ್ರಕ್ಕೆ ಲಂಚದ ಪಿಡುಗು ಕೊನೆಗೊಂಡಿದೆ ಎಂದು ಯಾರೂ ಭಾವಿಸುವಂತಿಲ್ಲ.

ಪೊಲೀಸ್ ಠಾಣೆಗಳಲ್ಲೂ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ. ಪಾಸ್‌ಪೋರ್ಟ್ ಪಡೆಯಲು ಅರ್ಜಿ ಸಲ್ಲಿಸಿದವರಿಗೆ ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪತ್ರ ಬೇಕಾಗುತ್ತದೆ. ಈ ಸಂಬಂಧದ ತನಿಖೆ ನಡೆದು ಸಹಿ ತೆಗೆದುಕೊಂಡ ಬಳಿಕ, ಆ ದಾಖಲೆ ತಯಾರಿಸಿದ ವ್ಯಕ್ತಿ ಅರ್ಜಿದಾರರನ್ನು ಬೀಳ್ಕೊಡಲು ಹೊರಗೆ ಬರುತ್ತಾನೆ. ಸಿ.ಸಿ. ಟಿ.ವಿ. ಕ್ಯಾಮೆರಾ ದೃಷ್ಟಿಯಿಂದ ದೂರವಾದ ಕೂಡಲೇ ಮಾಮೂಲು ತೆಗೆದುಕೊಳ್ಳುತ್ತಾನೆ.

ಬ್ಯಾಂಕುಗಳಲ್ಲಿ ಹಿರಿಯ ನಾಗರಿಕರಿಗೆ ಆದ್ಯತೆ ನೀಡಬೇಕೆಂಬ ಫಲಕಗಳಿವೆ. ಆದರೆ ಹಣ ಕೊಡುವ, ತೆಗೆದುಕೊಳ್ಳುವಂತಹ ವ್ಯವಹಾರ ಮಾಡುವಾಗ ಹಿರಿಯ ನಾಗರಿಕರು ಸರತಿ ಸಾಲಿನಲ್ಲಿ ನಿಲ್ಲಲಾಗದೆ ಕಷ್ಟಪಡುತ್ತಿದ್ದರೂ ಅವರ ಕೆಲಸವನ್ನು ಮೊದಲು ಮಾಡಿಕೊಡುವ ಬಗೆಗೆ ಗಮನಹರಿಸುವ ನೌಕರವರ್ಗ ಅಪರೂಪವಾಗಿದೆ.

ಫಲಕಗಳ ಆಶಯ ನೆರವೇರದೇ ಹೋಗಲು ಜನಪ್ರತಿನಿಧಿಗಳ ಜಡತ್ವ ಒಂದು ಕಾರಣವಾದರೆ, ನೌಕರ ವರ್ಗದವರಿಗೆ ಇರುವ ನಿರ್ಲಕ್ಷ್ಯ ಭಾವ ಇನ್ನೊಂದು ಕಾರಣವಾಗುತ್ತದೆ. ತನ್ನ ಹಕ್ಕು ಏನೆಂಬುದನ್ನು ತಿಳಿದುಕೊಂಡ ವಿದ್ಯಾವಂತ ವರ್ಗ ಅದೆಷ್ಟೋ ಸಲ ಪ್ರತಿಭಟಿಸದೇ ಹೋಗುತ್ತದೆ. ವಿಧಾನಸೌಧದ ಮುಂಭಾಗದಲ್ಲಿ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಕೆತ್ತಿಸಿದರು. ಕೆತ್ತಿಸಿದ ಮಾತ್ರಕ್ಕೆ ಅದರ ಆಶಯ ಫಲಿಸಿದೆಯೇ? ಸೌಧದ ಒಳಗೆ ಹೋಗುವ ಜನಪ್ರತಿನಿಧಿಗಳೇ ಅದನ್ನು ಪಾಲಿಸುತ್ತಿಲ್ಲ. ಅವರೇ ಪಾಲಿಸದಿದ್ದಾಗ ನೌಕರಶಾಹಿಯನ್ನು ಅದಕ್ಕೆ ಬದ್ಧರಾಗಿರುವಂತೆ ಮಾಡಲು ಸಾಧ್ಯವೇ?

ಆದೇಶಗಳು ಮತ್ತು ಫಲಕಗಳಲ್ಲಿನ ಆಶಯಗಳು ಕಾರ್ಯರೂಪಕ್ಕೆ ಬರಲೇಬೇಕು ಎನ್ನುವುದಾದರೆ ಅದನ್ನು ಮಾಡಲು ಮಾರ್ಗಗಳು ಇವೆ. ಆದರೆ ಅಂತಹ ಇಚ್ಛಾಶಕ್ತಿ ಆಳುವವರಲ್ಲಿ ಕಾಣಸಿಗುವುದಿಲ್ಲ ಎಂಬುದು ಬಹುದೊಡ್ಡ ಲೋಪ.

ಬದಲಾದ ಕಾಲಘಟ್ಟದಲ್ಲಿ ವಿಜ್ಞಾನ-ತಂತ್ರಜ್ಞಾನದ ಫಲವಾಗಿ ಕಚೇರಿಗಳಲ್ಲಿ ಸುಗಮವಾದ ಕಾರ್ಯವ್ಯವಸ್ಥೆ ಜಾರಿಗೆ ಬರಬೇಕಿತ್ತು. ಆದರೆ ಬಂದಿಲ್ಲ. ಡಿಜಿಟಲ್ ಸೌಲಭ್ಯ ಬಂದಿದ್ದರೂ ಸರ್ವರ್ ಸರಿಯಿಲ್ಲದ ನಿತ್ಯ ಸಮಸ್ಯೆಗೆ ಇನ್ನೂ ಉತ್ತರ ಸಿಕ್ಕಿಲ್ಲ. ಪ್ರಜಾಪ್ರಭುತ್ವದ ಆಶಯಗಳು, ನೆಲದ ಕಾನೂನನ್ನು ಜಾರಿಗೆ ತರಲು ನಿಯೋಜಿತರಾದ ನೌಕರವರ್ಗ ದಕ್ಷತೆಯಿಂದ ಕಾರ್ಯನಿರ್ವಹಿಸುವಂತಾದರೆ ನಮ್ಮಲ್ಲಿನ ಅನೇಕ ಎಡರು-ತೊಡರುಗಳು ನಿವಾರಣೆ ಆಗುತ್ತವೆ. ಅವರ ಇಚ್ಛಾಶಕ್ತಿಯನ್ನು ಜಾಗೃತಗೊಳಿಸುವ ಕೆಲಸ ಆಗಬೇಕಾಗಿದೆ.

ವಾಚಕರ ವಾಣಿ

ಈ ನಡೆ ಆಕ್ಷೇಪಾರ್ಹ

ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಕೆಲವು ಟಿ.ವಿ. ಸುದ್ದಿ ನಿರೂಪಕರಿಗೆ ಬಹಿಷ್ಕಾರ ಹಾಕಿರುವುದನ್ನು ನೋಡಿದರೆ, 1975ರ ತುರ್ತು ಪರಿಸ್ಥಿತಿ ನೆನಪಿಗೆ ಬರುತ್ತದೆ. ಮೈತ್ರಿಕೂಟದ ಸದಸ್ಯರಿಗೆ ಮಾಧ್ಯಮದಿಂದ ತೊಂದರೆಯಾದರೆ ನ್ಯಾಯಾಲಯ ಇದೆ. ಅದುಬಿಟ್ಟು ಮಾಧ್ಯಮ ನಿರೂಪಕರಿಗೇ ಬಹಿಷ್ಕಾರ ಹಾಕುವ ನಡೆ ಆಕ್ಷೇಪಾರ್ಹ. ನಾವು ಯಾವ ಕಾಲಮಾನದಲ್ಲಿದ್ದೇವೆ? ಮಾಧ್ಯಮ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವುದು ನಾಚಿಕೆಗೇಡಿನ ಸಂಗತಿ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಆಡಳಿತದಲ್ಲಿ ಪಾರದರ್ಶಕತೆ: ಏಕೀ ದ್ವಂದ್ವ ನೀತಿ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಅಧಿಕಾರಿಗಳಿಗೆ ಚಾಟಿ ಬೀಸಿ, ಹೃದಯವಂತಿಕೆಯಿಂದ ಕೆಲಸ ಮಾಡಲು ಹೇಳಿರುವುದಲ್ಲದೆ, ಆಡಳಿತದಲ್ಲಿ ಪಾರದರ್ಶಕತೆ ತರಲು ಸಹಕಾರ ನೀಡಬೇಕೆಂದು ಕೋರಿರುವುದು ವರದಿಯಾಗಿದೆ. ಆದರೆ, ಪಾರದರ್ಶಕತೆ ಕಾಪಾಡುವ ದಿಸೆಯಲ್ಲಿ ಸುಧಾರಣೆ ತಂದು, ತಮ್ಮ ಕಾರ್ಯವ್ಯಾಪ್ತಿಯಲ್ಲಿ ಅಧಿಕಾರ ಚಲಾಯಿಸುತ್ತಿದ್ದ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯನ್ನು, ಆಯೋಗದ ಅಧ್ಯಕ್ಷರು ಅವರ ವಿರುದ್ಧ ಆರೋಪ ಮಾಡಿದ್ದಕ್ಕಾಗಿ ಸ್ಥಳಾಂತರಿಸಲಾಗಿದೆ ಎಂಬ ವರದಿಗಳಿವೆ. ಇದು ಆಡಳಿತ ವಿರೋಧಿ ಹೆಜ್ಜೆಯಾಗಿದೆ. ಇದು ಖಂಡನಾರ್ಹ. ಏಕೀ ದ್ವಂದ್ವ ನೀತಿ?

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ಸಂವಿಧಾನ ಪೀಠಿಕೆ: ಉದ್ದೇಶ ಈಡೇರಲಿ

ಸರ್ಕಾರವು ಸಂವಿಧಾನದ ಬಗ್ಗೆ ಜನಜಾಗೃತಿ ಮೂಡಿಸಲು ಮುಂದಾಗಿರುವುದು ಸ್ವಾಗತಾರ್ಹ. ಆದರೆ ಎಲ್ಲರನ್ನೂ ಒಳಗೊಳ್ಳುವ ಸಂವಿಧಾನದ ಪೀಠಿಕೆಯಲ್ಲಿನ ಮೂಲ ಆಶಯದಂತೆ ರಾಜ್ಯ ಸರ್ಕಾರದ 'ಸಂವಿಧಾನ ಪೀಠಿಕೆ ಓದೋಣ ಬನ್ನಿ...' ಎಂಬ ಇತ್ತೀಚೆಗಿನ ಕಾರ್ಯಕ್ರಮ ನಡೆದಿದೆಯೇ? ಸಮಾಜ ಕಲ್ಯಾಣ ಇಲಾಖೆಯಿಂದ ಮಾತ್ರ ಯಾಕೆ ಇದು ನಡೆಯಿತು? ಇತರ ಸಾಮಾನ್ಯವರ್ಗದ ಎಲ್ಲರಿಗೂ ಸಂವಿಧಾನದ ಅರಿವು ಬೇಕಲ್ಲವೇ? ಬಹುತ್ವದ ಭಾರತದಲ್ಲಿ ಎಲ್ಲರನ್ನೂ ಒಳಗೊಳ್ಳಬೇಕಲ್ಲವೇ? ಜೊತೆಗೆ ಸಮಾಜ ಕಲ್ಯಾಣ ಇಲಾಖೆಯು ದಲಿತ ಮುಖಂಡರನ್ನು ಬಿಟ್ಟು ಬೇರೆ ಬೇರೆ ಸಂಘ-ಸಂಸ್ಥೆಗಳು ಮತ್ತು ಸಾಮಾನ್ಯ ವರ್ಗದ ಪ್ರಮುಖರ ಸಭೆಯನ್ನು ನಡೆಸಿದೆಯೇ?

ಕಾರ್ಯಕ್ರಮದ ಸಿದ್ಧತೆಯ ಸಲುವಾಗಿ ಯಾವುದಾದರೊಂದು ಇಲಾಖೆಯಿಂದ ಆಯೋಜಿಸುವುದು ಸೂಕ್ತ ಎಂಬ ಕಾರಣ ಕೊಡಬಹುದು. ಮೊದಲನೆಯದಾಗಿ, ಸಂವಿಧಾನಕ್ಕೆ ಸಂಬಂಧಿಸಿದ ವಿಷಯ ನೇರವಾಗಿ ಕಾನೂನು ಮತ್ತು ಸಂಸದೀಯ ಇಲಾಖೆಗೆ ಸಂಬಂಧಿಸಿದ್ದಲ್ಲವೇ? ಕಾನೂನು ಇಲಾಖೆ, ಉನ್ನತ ಮತ್ತು ಪ್ರಾಥಮಿಕ ಶಿಕ್ಷಣ ಇಲಾಖೆಗಳು, ಯುವಜನ ಮತ್ತು ಕ್ರೀಡಾ ಇಲಾಖೆಯನ್ನೂ ಒಳಗೊಂಡು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಂಟಿಯಾಗಿ ಆಯೋಜಿಸಬಹುದಿತ್ತು. ಪಕ್ಷಭೇದ ಮರೆತು, ಎಲ್ಲಾ ರಾಜಕೀಯ ಮುಖಂಡರು, ಸಮಾನಮನಸ್ಕ ಸಾಹಿತಿಗಳು, ಕಲಾವಿದರು, ಕ್ರೀಡಾಪಟುಗಳಂತಹವರನ್ನು ಒಳಗೊಳ್ಳಬೇಕಾದುದು ಸೂಕ್ತ. ಹಾಗೆ ಒಳಗೊಂಡಿದ್ದಿದ್ದರೆ ಈ ಕಾರ್ಯಕ್ರಮವು ಬಹುಶಃ ಸಂವಿಧಾನದ ಪೀಠಿಕೆಯಲ್ಲಿನ ಘನ ಉದ್ದೇಶಕ್ಕೆ ಪೂರಕವಾಗಿ ಇರುತ್ತಿತ್ತು ಎನಿಸುತ್ತದೆ.

ಬಿ.ರಾಜಶೇಖರಮೂರ್ತಿ, ಬೆಂಗಳೂರು

ಸನಾತನ ಧರ್ಮ: ಬೇಕು ವಿಸ್ತೃತ ಚರ್ಚೆ

ಸನಾತನ ಧರ್ಮದ ಬಗ್ಗೆ ಬಿರುಸಾಗಿ ಚರ್ಚೆಗಳು ನಡೆಯುತ್ತಿವೆ. 'ಸನಾತನ ಧರ್ಮ ನಾಶವೇ ವಿರೋಧ ಪಕ್ಷಗಳ ರಹಸ್ಯ ಕಾರ್ಯಸೂಚಿ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ (ಪ್ರ.ವಾ., ಸೆ. 15). ನಾವು ಈಗ ಸಂವಿಧಾನದ ಬಲದಲ್ಲಿ ಬದುಕುತ್ತಿದ್ದೇವೆ. ಹಾಗಾಗಿ, ನಮಗೆ ಸನಾತನ ಧರ್ಮದ ಕರಾಳ ಮುಖದ ಸರಿಯಾದ ಅರಿವಿಲ್ಲ. ಅರ್ಥವತ್ತಾಗಿ ಸನಾತನ ಧರ್ಮವನ್ನು ವಿರೋಧ ಮಾಡುವವರ ವಿರುದ್ಧ ಅರಿವಿಲ್ಲದ ಮುಗ್ಧರನ್ನು ಎತ್ತಿ ಕಟ್ಟುವ ಕೆಲಸ ನಡೆಯುತ್ತಿದೆ. ಇಂತಹ ಸಂದಿಗ್ಧ ಕಾಲದಲ್ಲಿ, ಸನಾತನ ಧರ್ಮ ಎಂದರೇನು ಎಂಬ ಬಗ್ಗೆ ಸಮಾಜ ಚಿಂತಕರು ಸರಿಯಾದ ಸ್ಪಷ್ಟನೆ ಕೊಡಬೇಕು. ರಾಜಧರ್ಮವನ್ನು ಪಾಲಿಸಬೇಕಾದ ರಾಜಕಾರಣಿಗಳು ಸನಾತನ ಧರ್ಮದ ಬಗ್ಗೆ ಏನೂ ತಿಳಿಯದಿದ್ದರೂ ಅದನ್ನು ವಿರೋಧಿಸುವವರನ್ನು ಹಿಂದೂ ವಿರೋಧಿಗಳೆಂದು ಬಿಂಬಿಸುತ್ತಿದ್ದಾರೆ. ಹೀಗೆ ಕೆಲವರು ಈ ವಿಷಯದಲ್ಲಿ ವ್ಯವಸ್ಥಿತವಾಗಿ ರಾಜಕಾರಣ ಮಾಡುತ್ತಿದ್ದಾರೆ.

ವಾಸ್ತವವಾಗಿ ಸನಾತನ ಎಂದರೆ ಶಾಶ್ವತವಾದದ್ದು ಎಂಬ ಅರ್ಥ ಬರುತ್ತದೆ. ಬದಲಾವಣೆ ಜಗದ ನಿಯಮ. ಧರ್ಮವೂ ಬದಲಾವಣೆಗೆ ಒಳಪಡಬೇಕು. ಸನಾತನ ಧರ್ಮವು ಶ್ರೇಣೀಕೃತ ಜಾತಿ ಪದ್ಧತಿಯನ್ನು ಹೇಳುತ್ತದೆ. ಮಡಿ ಮೈಲಿಗೆಯನ್ನು ಒಪ್ಪುತ್ತದೆ. ಬ್ರಾಹ್ಮಣರನ್ನು ಸಮಾಜದ ಶ್ರೇಷ್ಠರೆಂದೂ ಶೂದ್ರರನ್ನು ಕನಿಷ್ಠರೆಂದೂ ಪ್ರತಿಪಾದಿಸುತ್ತದೆ. ಶೂದ್ರರನ್ನು ಅಕ್ಷರದಿಂದ ದೂರ ಉಳಿಸುತ್ತದೆ. ಮಹಿಳೆಗೆ ಸ್ವಾತಂತ್ರ್ಯವನ್ನು ನಿರಾಕರಿಸುತ್ತದೆ. ಎಂದೋ ಯಾರೋ ಬರೆದಿಟ್ಟ ಈ ವಿರೋಧಾಭಾಸದ ಸನಾತನ ಧರ್ಮ ಇಂದಿಗೂ ಶ್ರೇಷ್ಠವೇ? ಹುಟ್ಟಿ ಸಾಯುವ ಮನುಷ್ಯರ ನಡುವೆ ಈ ಶ್ರೇಷ್ಠ, ಕನಿಷ್ಠತನಗಳು ಈಗಲೂ ಉಳಿಯಬೇಕೆ? ಸಂವಿಧಾನದ ಆಶಯದ ಪ್ರಕಾರ, ಎಲ್ಲಾ ವರ್ಗಕ್ಕೆ ಎಲ್ಲಾ ಕಾಯಕ ಸಲ್ಲುವಂತೆ, ದೇವಸ್ಥಾನದ ಒಳಕ್ಕೆ ಎಲ್ಲರಿಗೂ ಅವಕಾಶ ಇರುವಂತೆ, ಪೂಜಾರಿಕೆ ವೃತ್ತಿಯ ಅವಕಾಶ ಆಸಕ್ತ ಎಲ್ಲಾ ಜಾತಿಯವರಿಗೂ ಇರುವಂತೆ, ಪಂಕ್ತಿಭೇದ ಇಲ್ಲದೆ ಎಲ್ಲ ಜಾತಿಯವರೂ ಒಂದೇ ಸಾಲಿನಲ್ಲಿ ಕುಳಿತು ಊಟ ಮಾಡಲು ಅವಕಾಶ ಇರುವಂತೆ, ಮಹಿಳೆಯರಿಗೆ ಸರ್ವಸಮಾನತೆ ಸಲ್ಲುವಂತೆ ಸನಾತನ ಧರ್ಮವು ಸುಧಾರಣೆಗೆ ಒಳಪಡುವುದಾದರೆ, ಎಲ್ಲರೂ ಉಳಿಯುವ ಮತ್ತು ಉಳಿಸುವ ಪ್ರಯತ್ನ ಮಾಡೋಣ. ಸನಾತನ ಧರ್ಮದ ಆಚಾರ್ಯರಿಂದ ಈ ಬದಲಾವಣೆ ಸಾಧ್ಯವಿದೆಯೇ? ಈ ಬಗ್ಗೆ ವಿಸ್ತೃತ ಚರ್ಚೆಯಾಗಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಸರಳ ದಸರಾಗೆ ಇರಲಿ ಆದ್ಯತೆ

ರಾಜ್ಯದಲ್ಲಿ ವಾಡಿಕೆಯಷ್ಟು ಮಳೆಯಾಗದ ಕಾರಣ ಸರ್ಕಾರ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಏತನ್ಮಧ್ಯೆ, ಈ ಬಾರಿ ನಾಡಹಬ್ಬ ದಸರಾ ಆಚರಣೆಯನ್ನು ವೈಭವದಿಂದ ಆಚರಿಸಲು ಸರ್ಕಾರ ನಿರ್ಧರಿಸಿದೆ. ಬರ ಪರಿಹಾರ ನೀಡುವ ದೊಡ್ಡ ಸವಾಲು ರಾಜ್ಯ ಸರ್ಕಾರದ ಮುಂದಿದ್ದು, ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸುವ ಜವಾಬ್ದಾರಿಯೂ ಅದಕ್ಕಿದೆ. ಈ ಹಿನ್ನೆಲೆಯಲ್ಲಿ ಈ ಬಾರಿಯ ದಸರಾ ನಾಡಹಬ್ಬವನ್ನು ಸರಳವಾಗಿ ಆಚರಿಸಿದರೆ ಒಳ್ಳೆಯದು. ದಸರಾ ಆಚರಣೆಗೆ ಖರ್ಚು ಮಾಡುವ ಮೊತ್ತವನ್ನು ಬರಪೀಡಿತ ಪರಿಹಾರಕ್ಕೆ ವಿನಿಯೋಗಿಸಿದರೆ ಉತ್ತಮ.

ಪ್ರಸಾದ್ ಜಿ.ಎಂ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸನಾತನ ಧರ್ಮವನ್ನು ಸಂರಕ್ಷಿಸಬೇಕಾಗಿದೆಯೇ?

ವರ್ಜ್ಯವಾದ ಸನಾತನ ಧರ್ಮ

ಮನು, ಆಪಸ್ತಂಬ, ಮುಂತಾದವರು ಶೂದ್ರರು ಏನು ಮಾಡಬೇಕು, ಏನು ಹೊಂದಿರಬಾರದು, ಎಂಬ ದೊಡ್ಡ ಪಟ್ಟಿ ಕೊಟ್ಟಿದ್ದಾರೆ. 'ಶೂದ್ರಂ ತು ಕಾರಯೇತ್ ದಾಸ್ಯಂ ಕ್ರೀತಂ ಅಕ್ರೀತಮೇವ ವಾ' ಎಂದ ಮನು. ಅವನ ಕಾಲದಲ್ಲಿದ್ದ ಕ್ಷುದ್ರ ಆಚರಣೆ ಅಂಥದು. ಈಗಲೂ ಇದೆ. ಮೊನ್ನೆ ತಾನೆ ಕೂಲಿ ಕೇಳಿದ್ದಕ್ಕೆ ಒಬ್ಬನನ್ನು ಕೊಲ್ಲಲಾಯಿತಂತೆ! 'ಕೂಲಿ ಕೊಡು ಅಥವಾ ಬಿಡು; ಶೂದ್ರನಿಂದ ಶ್ರಮವನ್ನಂತೂ ಕಿತ್ತುಕೊ' ಎಂಬ ಪದ್ಧತಿಯು ಏಕೆ ತಾನೆ ಶಾಶ್ವತವಾಗಿ ಉಳಿಯಬೇಕು? 'ಶುಶ್ರೂಷಾ ಶೂದ್ರಸ್ಯ ಇತರೇಷಾಂ ವರ್ಣಾನಾಂ' ಎಂದ ಆಪಸ್ತಂಬ. ಶುಶ್ರೂಷೆ ಮಾಡಲು ಉಚ್ಚವರ್ಣದವರನ್ನು ಆಯ್ಕೆ ಮಾಡಿಕೊಂಡರೆ ಹೆಚ್ಚಿನ ಶ್ರೇಯಸ್ಸು ಗಳಿಸಬಹುದು ಎಂದೂ ಹೇಳಿದ

• ಜಿ.ರಾಮಕೃಷ್ಣ



ಆವೇಶದಿಂದ ಕೆಟ್ಟ ಭಾಷೆ ಬಳಸಿ, ಕೆಲವೊಮ್ಮೆ ಪೊಲೀಸರಿಗೆ ದೂರು ಕೊಟ್ಟು, ಸನಾತನ ಧರ್ಮದ ರಕ್ಷಣೆಗೆ ಕೆಲವರು ಧಾವಿಸಿದ್ದಾರೆ. ಯಾರ ತಲೆಯನ್ನು ಕೆಡಿಸುವ ಉದ್ದೇಶವನ್ನು ಅಂಥವರು ಹೊಂದಿದ್ದಾರೋ ತಿಳಿಯುವುದಿಲ್ಲ. ಈಗಿನ ಅವರ ಚರ್ಚಾ ವಿಧಾನವು ಯಾರಿಗೂ ಶ್ರೇಯಸ್ಸು ತರುವಂಥದಲ್ಲ. ಪೊಲೀಸರ ರಕ್ಷಣೆ ಪಡೆದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಸನಾತನ ಧರ್ಮಕ್ಕೆ ಇನ್ನೂ ಬಂದಿಲ್ಲವೇನೋ; ಮತ್ತು ಬರಬಾರದು. ಬದಲಾಗಿ, ಅದರ ದೃಢಪಡಿಸುವಿಕೆಯನ್ನು ತಮ್ಮ ಬಯಕೆಯನ್ನಾಗಿಸಿಕೊಂಡು ಉಪಟಳ ಉಂಟುಮಾಡುವವರಿಂದ ಸಮಾಜಕ್ಕೆ ರಕ್ಷಣೆ ಬೇಕಾಗಿದೆ. ದೊಣ್ಣೆಯ ಪ್ರಯೋಗವಾಗಲಿ, ನಾಲಿಗೆ ಕತ್ತರಿಸುವ ಬೆದರಿಕೆಯಾಗಲಿ, ವಿಚಾರ ವಿನಿಮಯದ ರೀತಿ ಆಗಲಾರದು. ಅಂತಹ ವ್ಯಗ್ರತೆಯ ಪರಂಪರೆಯೂ ನಮ್ಮಲ್ಲಿದೆ. ಅದರ ನಿರಾಕರಣೆಯು ಆರೋಗ್ಯಕರ.

ಕೆಲವು ಜನರು ಆಸುರೀ ಭಾವಕ್ಕೆ ತಮ್ಮನ್ನು ತೆತ್ತುಕೊಂಡಿರುತ್ತಾರೆಂದು ಆಪಾದಿಸುವ ಶ್ರೀಭಗವಾನನು ಗೀತೆಯಲ್ಲಿ ಅಂಥವರ ವಿರುದ್ಧ ಬಿರುಸಿನ ಮಾತುಗಳನ್ನಾಡಿದ್ದಾನೆ: 'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ', ಇತ್ಯಾದಿ (16.19). ಅವರನ್ನು ಸದಾಕಾಲ ಆಸುರೀ ಪ್ರವೃತ್ತಿ ಉಳ್ಳವರನ್ನಾಗಿಯೇ ಮಾಡುತ್ತಾನಂತೆ ಪರಮಾತ್ಮ. ಅವರನ್ನು ಬದಲಿಸಲು ಏಕೆ ಮುಂದಾಗುವುದಿಲ್ಲವೋ ತಿಳಿಯದು.

ಸನಾತನವೆಂದರೆ ಏನೋ ನಿಗೂಢತೆ ಇರಬೇಕೆಂಬ ತವಕ ಅನಗತ್ಯ. ಬಹಳ ಪ್ರಸಿದ್ಧವಾದ ಅಮರಕೋಶವು ಅದರ ಅರ್ಥವನ್ನು ಸರಳವಾಗಿ ನಿರೂಪಿಸಿದೆ: 'ಶಾಶ್ವತಸ್ತು ಧ್ರುವೋ ನಿತ್ಯ ಸದಾತನ ಸನಾತನಾ' (3.76). ವಿದ್ವಾಂಸರಾದ ಜಿ.ಎನ್.ಚಕ್ರವರ್ತಿ ಮತ್ತು ವಿ.ಎಸ್.ಆಪ್ಟೆ ಇದೇ ಅರ್ಥವನ್ನು ಮಾನ್ಯ ಮಾಡಿದ್ದಾರೆ. ಅದಕ್ಕೆ ಶ್ರೇಷ್ಠವಾದ್ದು, ಪರಮಾತ್ಮ ಕೊಟ್ಟಿದ್ದು, ಶುಭವಾದ್ದು, ಎಂಬ ಅರ್ಥವನ್ನು ಆರೋಪಿಸಬಾರದು. ಪ್ರಶ್ನೆ ಇರುವುದಿಷ್ಟೆ: ಯಾವುದು ಶಾಶ್ವತ ಮತ್ತು ಶಾಶ್ವತವಾಗಿ ಉಳಿಯಬೇಕಾದ್ದೇನು? ನಾನು ಚಿಕ್ಕವನಿದ್ದಾಗ ನಮ್ಮ ಹಳ್ಳಿಯಲ್ಲಿ ಜೋಡಿದಾರರು ಬಂದು ಅವರ ಕುಳಗಳಿಗೆ, ವಿಶೇಷವಾಗಿ ದಲಿತರಿಗೆ, ಒಳ್ಳೆಯ ಅವರೆಕಾಯಿ ತರಲಿಲ್ಲವೆಂದು ಮಂಕರಿಯಿಂದ ಹೊಡೆದುಬಿಡುತ್ತಿದ್ದರು; ಈಗ ಜೋಡೀದಾರರಿಲ್ಲ ಮತ್ತು ಯಾರನ್ನಾದರೂ ಹೊಡೆಯಹೋದರೆ ಮಂಕರಿಯನ್ನು ಅವರ ತಲೆಯ ಮೇಲೆ ಬೋರಲು ಹಾಕಿಬಿಡುತ್ತಾರೆ. ಮೌಲ್ಯಗಳು ಶಾಶ್ವತ ಹೌದು; ಆದರೆ ಎಂತಹ ಮೌಲ್ಯಗಳೆಂಬುದು ಮೂಲಭೂತ ಪ್ರಶ್ನೆ. ಸನಾತನ ಧರ್ಮವೂ ಇದಕ್ಕೆ ಹೊರತಾಗಲಾರದು.

ಭಗವದ್ಗೀತೆಯಲ್ಲಿನ 'ಗ್ಲಾನಿ'ಯ ಪ್ರಸ್ತಾಪವು ಪ್ರಸಿದ್ಧ. ಗ್ಲಾನಿಯುಂಟಾದಾಗೆಲ್ಲಾ ಭಗವಂತನು ಅವತರಿಸಿ ಬರುತ್ತಾನಂತೆ. ಅದು ನಿಜವಾದರೆ, ನಮ್ಮ ಇಂದಿನ ಕ್ರಿಯೆ ಏನಾಗಬೇಕು? (ಅ) ಸುಮ್ಮನೆ ಅವನಿಗಾಗಿ ಕಾದು ಕುಳಿತಿರುವುದು, ಇಲ್ಲವೇ (ಆ) ಅವನೆಂದೂ ಬರಲಾರನಾದ್ದರಿಂದ ನಾವೇ ನಮ್ಮ ಇರುವನ್ನು ಸುಧಾರಿಸಿಕೊಳ್ಳುವುದು. ಗ್ಲಾನಿಯು ಒಮ್ಮೆ ಬಂದು ಸದಾಕಾಲಕ್ಕೂ ನೆಮ್ಮದಿಯನ್ನು ನೀಡಿ ಹೋಗಿಬಿಡುವುದಿಲ್ಲ. ಬದಲಾವಣೆಯಂತೆ ಗ್ಲಾನಿಯೂ ಮರುಕಳಿಸುತ್ತಿರುತ್ತದೆ. ಇಷ್ಟಕ್ಕೂ ಕುರುಕ್ಷೇತ್ರ ಯುದ್ಧಕ್ಕೆ ಮುನ್ನ ಎಂತಹ ಗ್ಲಾನಿಯಿತ್ತು? ಒಂದು ಕುಟುಂಬದಲ್ಲಿ ವಿರಸ, ಅಷ್ಟೆ. ಅದೇ ಕಾಲದಲ್ಲಿ ಧರ್ಮವ್ಯಾಧನಿದ್ದ, ನೀತಿವಂತ ವಿದುರನಿದ್ದ. ಸಚ್ಚಾರಿತ್ರ್ಯವು ಯಾವುದೋ ಒಂದು ಕಾಲದ ಗಂಟಲ್ಲ, ವಿವಾದಗಳೂ ಕ್ಷಣಿಕವಲ್ಲ. ಇದು ಪ್ರಕೃತಿ ನಿಯಮ, ಸಾಮಾಜಿಕ ನಿಯಮ. ಆದ್ದರಿಂದ 'ಶಾಶ್ವತ' ಎಂಬುದು ನಿಜಕ್ಕೂ ಶಾಶ್ವತವಲ್ಲ. ಕೆಲವು ದುಷ್ಟ ಸಂಗತಿಗಳು ಶಾಶ್ವತವಾಗಿ ನೆಲೆಸುವುದು ಯೋಗ್ಯವೂ ಅಲ್ಲ. ಗೀತೆಯು ಮೊದಲ ಅಧ್ಯಾಯದಲ್ಲಿ ಯಾವುದೆಲ್ಲಾ ಶಾಶ್ವತವಲ್ಲವೆಂದು ಕೊರಗಿದೆ ಎಂಬುದನ್ನು ಗಮನಿಸಬೇಕು: ಒಂದಂತೂ ಕೊರಗಬೇಕಾದ ಸಂಗತಿಯೇ ಅಲ್ಲ. 'ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ' (1.43). ಜಾತಿಧರ್ಮ ಅಪ್ರಸ್ತುತವಾಗಿಬಿಡುತ್ತದೆಂಬುದು ಗಾಸಿಯಂತೆ! ಅದು ನಿಜಕ್ಕೂ ಶಾಶ್ವತವೇ ಆಗಿದ್ದರೆ ಅದು ಉತ್ಪಾಟನೆಗೊಳ್ಳುತ್ತದೆಂಬ ಅಳುಕೇಕೆ? ಅದೇ ಸ್ವಾರಸ್ಯ.

ಯಾವನೋ ಧರ್ಮಶಾಸ್ತ್ರಕಾರನು ಆದೇಶಿಸುವುದರಿಂದ ಸಾಮಾಜಿಕ ವ್ಯವಸ್ಥೆಯು ಉತ್ತಮವೋ, ಕೀಳೋ ಆಗುವುದಿಲ್ಲ. ಬುಡಕಟ್ಟು ಸಮಾಜದ ಸಮಾನತೆ ನಶಿಸಿದಂತೆ ವರ್ಣ ವ್ಯವಸ್ಥೆಯ ಅಸಮಾನತೆಯೂ ನಶಿಸಿಹೋಗಲೆಂದು ಇಚ್ಛಿಸುವುದು ಮಹತ್ ಪಾಪವೇ? ಗೀತೆಯ ಪ್ರಕಾರ, ಹೌದು. ಸಮಾಜವು ಬದಲಾದಂತೆ ಧರ್ಮಶಾಸ್ತ್ರಕಾರನ ಉಲ್ಲೇಖವೂ ಬದಲಾಗಲೇಬೇಕು. ಮನು, ಆಪಸ್ತಂಬ ಮುಂತಾದವರು ಶೂದ್ರರು ಏನು ಮಾಡಬೇಕು, ಏನು ಹೊಂದಿರಬಾರದು, ಎಂಬ ದೊಡ್ಡ ಪಟ್ಟಿ ಕೊಟ್ಟಿದ್ದಾರೆ. 'ಶೂದ್ರಂ ತು ಕಾರಯೇತ್ ದಾಸ್ಯಂ ಕ್ರೀತಂ ಅಕ್ರೀತಮೇವ ವಾ' ಎಂದ ಮನು. ಅವನ ಕಾಲದಲ್ಲಿದ್ದ ಕ್ಷುದ್ರ ಆಚರಣೆ ಅಂಥದು. ಈಗಲೂ ಇದೆ. ಮೊನ್ನೆ ತಾನೆ ಕೂಲಿ ಕೇಳಿದ್ದಕ್ಕೆ ಒಬ್ಬನನ್ನು ಕೊಲ್ಲಲಾಯಿತಂತೆ! 'ಕೂಲಿ ಕೊಡು ಅಥವಾ ಬಿಡು; ಶೂದ್ರನಿಂದ ಶ್ರಮವನ್ನಂತೂ ಕಿತ್ತುಕೊ' ಎಂಬ ಪದ್ಧತಿಯು ಏಕೆ ತಾನೆ ಶಾಶ್ವತವಾಗಿ ಉಳಿಯಬೇಕು? 'ಶುಶ್ರೂಷಾ ಶೂದ್ರಸ್ಯ ಇತರೇಷಾಂ ವರ್ಣಾನಾಂ' ಎಂದ ಆಪಸ್ತಂಬ. ಶುಶ್ರೂಷೆ ಮಾಡಲು ಉಚ್ಚವರ್ಣದವರನ್ನು ಆಯ್ಕೆ ಮಾಡಿಕೊಂಡರೆ ಹೆಚ್ಚಿನ ಶ್ರೇಯಸ್ಸು ಗಳಿಸಬಹುದು ಎಂದೂ ಹೇಳಿದ (ಪೂರ್ವಸ್ಮಿನ್ ಪೂರ್ವಸ್ಮಿನ್ ವರ್ಣೇ ನಿಃಶ್ರೇಯಸಂ ಭೂಯಃ). ಗುಪ್ತರ ಕಾಲದ ಧರ್ಮಶಾಸ್ತ್ರಕಾರರು 'ಶೂದ್ರರು ಆಸ್ತಿ ಹೊಂದಬಹುದು, ದ್ವಿಜರಂತೆ ಯಜ್ಞ ಮಾಡಬಹುದು' ಎಂದರು. ಏಕೆಂದರೆ ಸನ್ನಿವೇಶ ಬದಲಾಗಿದ್ದಿತು. ಇಂದಿನ ತುರ್ತು ಅಂತಹ ಬದಲಾವಣೆಗಳು ಸಮಗ್ರವಾಗಿ ವಿಸ್ತರಣೆ ಆಗಬೇಕೆಂಬುದೇ ಆಗಿದೆ.

1916ರಲ್ಲಿ ಕಾಶಿಯ ಸೆಂಟ್ರಲ್ ಹಿಂದೂ ಕಾಲೇಜ್ 'ಸನಾತನ ಧರ್ಮ' ಎಂಬ ಗ್ರಂಥವನ್ನು ಪ್ರಕಟಿಸಿತ್ತು. ಅದು ಮಾನವ ಮೌಲ್ಯಗಳನ್ನು ಕುರಿತು ಹೇಳಲಿಲ್ಲ; ಹೇಳಿದ್ದೆಲ್ಲಾ ವರ್ಣಾಶ್ರಮ, ಶ್ರೇಣೀಕರಣದ ಸಮರ್ಥನೆ, ಕರ್ಮ, ಪುನರ್ಜನ್ಮ, ಯಜ್ಞ, ಸಂಸ್ಕಾರ, ಇತ್ಯಾದಿಗಳನ್ನು. ಸಾಮಾಜಿಕ - ಸಾಂಸ್ಕೃತಿಕ ಏಣಿ ಇಲ್ಲದೆ ಸನಾತನ ಧರ್ಮಕ್ಕೆ ಉಳಿವಿಲ್ಲ. ಯಾರು ಯಾವ ಮೆಟ್ಟಿಲಲ್ಲಿ ಶಾಶ್ವತವಾಗಿ ಉಳಿಯಬೇಕೆಂಬುದು ಅದರ ಪರಮಾರ್ಥ. ಈ ಏರುಪೇರಿನ ಸಮಾಜಕ್ಕೆ ಸಮರ್ಥನೆಯೆಂದು 'ಶ್ರುತಿ'ಯನ್ನು ಹೆಸರಿಸುತ್ತಾರೆ. ಶಂಕರಾಚಾರ್ಯರು 'ಮನು ಹೇಳಿದ್ದೇ ಅಂತಿಮ ಸತ್ಯ' ಎಂದರು (ಯತ್ ಮನುರಬ್ರವೀತ್ ತತ್ಸತ್ಯಂ). ನಮ್ಮ ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸದಲ್ಲಿ ಯಾವನಾದರೂ ದಾರ್ಶನಿಕ, ಸಾಹಿತಿ, ಧರ್ಮಶಾಸ್ತ್ರಜ್ಞ, ಅಸ್ಪೃಶ್ಯತೆಯನ್ನು ಅಸಹ್ಯ ಎಂದದ್ದುಂಟೆ? ಬಸವಣ್ಣ, ಏಕನಾಥ, ಮುಂತಾದವರು ಆ ಜಡತೆಯನ್ನು ಖಂಡಿಸಿದ್ದು ಸ್ವಾಗತಾರ್ಹ. ಅವರು 'ಸನಾತನ'ವನ್ನು ಶ್ರೇಷ್ಠವೆಂದು ಕೊಂಡಾಡಲಿಲ್ಲ. ಬದಲಿಗೆ, ಸಮಾನತೆಯ ಮೌಲ್ಯವನ್ನು ಎತ್ತಿಹಿಡಿದರು. ಮನುವಾದಿ ಮಹಾಶಯರು ಮಹಿಳೆಯನ್ನು ಸಾರಾಸಗಟಾಗಿ ತುಚ್ಛೀಕರಿಸಿದರು, ಶೂದ್ರರಿಗೆ ಸಮಾನರೆಂದು ಜರಿದರು; ಆದರೆ ಶೂದ್ರಸಮಾನರಾದ ಮಹಿಳೆಯರೊಂದಿಗೆ ಸಂಸಾರ ನಡೆಸಿದರೆಂಬುದೇ ಭಾಗ್ಯ! ಜೀವಾತ್ಮಗಳು ತಮ್ಮ ಶ್ರೇಣಿಗೆ ತಕ್ಕಂತೆ ಆಯಾ ವರ್ಣದ ಶರೀರಗಳನ್ನು ಸಹಜವಾಗಿ ಪ್ರವೇಶಿಸುತ್ತವೆಂದು ಹೇಳಿದ ತತ್ತ್ವಶಾಸ್ತ್ರಜ್ಞರೂ ನಮ್ಮಲ್ಲಿದ್ದಾರೆ.

ಗೀತೆಯು 'ಸ್ವಧರ್ಮ' ಪರಿಪಾಲನೆಗೆ ಎಲ್ಲಿಲ್ಲದ ಮಹತ್ವ ನೀಡಿದೆ, ಕಟ್ಟುನಿಟ್ಟಾಗಿ ಅದನ್ನು ನಿಗದಿಗೊಳಿಸಿದೆ. ಗೀತೆಯ 'ಶ್ರೇಯಾನ್ ಸ್ವಧರ್ಮೇ ನಿಧನಃ', 'ಸ್ವಧರ್ಮಮಪಿ ಕೌಂತೇಯ ಸದೋಷಮಪಿ ನ ತ್ಯಜೇತ್' ಮುಂತಾದ ಉಕ್ತಿಗಳ ಹಿಂದೆ ಅಸಮಾನತೆಯ ಮತ್ತು ಜಡತ್ವದ ಸಾಂದ್ರತೆಯು ತುಂಬಿಕೊಂಡಿದೆ. ಅದಾವ ಬಾಯಲ್ಲಿ ಇದನ್ನು ಶ್ರೇಯಸ್ಕರವೆಂದು ಉಚ್ಚರಿಸಲಾಗುತ್ತದೋ ತಿಳಿಯುವುದಿಲ್ಲ. ಉದಾತ್ತ ಮೌಲ್ಯಗಳೇ ಬೇರೆ, ಸನಾತನ ಧರ್ಮವೇ ಬೇರೆ.

ಒಬ್ಬ ಆಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಹೇಳುತ್ತಾರೆ, 'ವಿಷದಲ್ಲಿ ಹುಟ್ಟಿದ ಕ್ರಿಮಿಗೆ ವಿಷವು ಸ್ವಭಾವವಾದ್ದು, ಆದ್ದರಿಂದ ಶೂದ್ರನ ಸ್ವಭಾವಜ ಕರ್ಮ (= ಪರರ ಸೇವೆ) ಶ್ರೇಷ್ಠವಾದದ್ದೇ' ಎಂದು. ಇದು ಅವರ ಸನಾತನ ಧರ್ಮ! ಸನಾತನ ಧರ್ಮವೆಂದು ಯಾವುದನ್ನು ಹಿಮಾಲಯಕ್ಕೇರಿಸುತ್ತಾರೋ ಅದು ಸಮಾನತೆಯ ಧರ್ಮಕ್ಕೆ, ಆತ್ಮಗೌರವಕ್ಕೆ, ನೈಜಮೌಲ್ಯಗಳಿಗೆ ಕುತ್ತುಂಟುಮಾಡುತ್ತದೆ. ಮಾನವಧರ್ಮಕ್ಕಿಂತಲೂ ಹೆಚ್ಚು ಶ್ರೇಷ್ಠವಾದ ಧರ್ಮದ ಅರಸುವಿಕೆಯು ವಿಕೃತವಾದ ಪ್ರಕೃತಿವಿರೋಧಿ ಹಂಬಲದಿಂದ ಆವೃತವಾಗಕೂಡದು. ಆತ್ಮ, ಜಗನ್ಮಿಥ್ಯೆಯೆಂಬ ಪ್ರಲಾಪ, ಪುನರ್ಜನ್ಮ, ಪ್ರಪತ್ತಿ, ಮೋಕ್ಷ, ಇವಾವೂ ಮಾನವತೆಗಿಂತಲೂ ಉದಾತ್ತವಲ್ಲ, ಗಮ್ಯವಲ್ಲ. ಸನಾತನ ಧರ್ಮದ ಮೌಲ್ಯೀಕರಣವು ಮನಸ್ಸಿಗೆ ಬಾಧೆಯುಂಟು ಮಾಡುತ್ತದೆಂದು ಕಳವಳ ಬೇಡ, ಮನಸ್ಸು ಗಟ್ಟಿ ಮಾಡಿಕೊಳ್ಳುವುದು ಆರೋಗ್ಯಕರ. ಸಾವಿರಾರು ವರ್ಷಗಳ ಕಾಲ ಅಸಮಾನತೆ ಮತ್ತು ಹಿಂಸೆ ಸಹಿಸಿದವರ ಮಾನಸಿಕ ಒತ್ತಡವನ್ನು ಅರ್ಥ ಮಾಡಿಕೊಳ್ಳೋಣ. ದುರಹಂಕಾರದಿಂದ ದಲಿತಾದಿಗಳ ಮೇಲಿನ ಹಿಂಸೆ ಮತ್ತು ಕ್ರೌರ್ಯಗಳಿಗಿಂತ ನಮ್ಮ ಸಂವಿಧಾನದ ಆಶಯ ಮತ್ತು ಆಚರಣೆ ಸುಸಂಸ್ಕೃತ ನಡೆಯಾಗುತ್ತದೆ.

ಲೇಖಕ: ಸಂಸ್ಕೃತಿ ಚಿಂತಕರು

ಸನಾತನವೇ ಭಾರತದ ಅಸ್ಮಿತೆ

ವೋಟ್‌ಬ್ಯಾಂಕ್ ಆಧಾರಿತ ಹಾಗೂ ಅದರಿಂದಲೇ ನಿರ್ದೇಶಿಸಲ್ಪಟ್ಟ ರಾಜಕೀಯ ವ್ಯವಸ್ಥೆಯು ಸನಾತನ ಧರ್ಮಕ್ಕೆ ಸಂಬಂಧಿಸಿದ ಎಲ್ಲವನ್ನೂ ವಿವಾದಾಸ್ಪದ ಆಗಿಸುವಲ್ಲಿ ವ್ಯವಸ್ಥಿತವಾಗಿ ನಿರತವಾದವು. ಸನಾತನ ಭಾರತ ಹಿಂದಕ್ಕೆ ಸರಿದು 'ಸೆಕ್ಯುಲರ್ ಇಂಡಿಯಾ' ಮುನ್ನೆಲೆಗೆ ಬಂದಿತು. ಇದರಿಂದಾಗಿ ಹಿಂದೂಗಳು ತಮ್ಮ ಬದುಕನ್ನು ಒಂದು ಬಗೆಯಲ್ಲಿ ಕದ್ದು–ಮುಚ್ಚಿ ಮುನ್ನಡೆಸುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಇವರೆಲ್ಲರೂ ಮುಕ್ತವಾಗಿ ಬದುಕುವ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುವಂತಾಯಿತು. ಸನಾತನದ ಕುರಿತಾಗಿ ಅಸಹಿಷ್ಣುತೆಯ ವಾತಾವರಣ ನಿರ್ಮಾಣವಾಯಿತು

• ರ.ವಿ. ಜಹಾಗೀರದಾರ

'ಸರ್ವೇ ಜನಾಃ ಸುಖಿನೋ ಭವಂತು' ಇದು ಸನಾತನ (ಹಿಂದೂ) ಧರ್ಮದ ಕರೆ. ಇದನ್ನು ಕಿತ್ತೆಸೆಯಬೇಕು ಎಂದು ಹೇಳುವ ಮನಃಸ್ಥಿತಿ ಎಂಥದು? ಮನುಕುಲವೆಲ್ಲ ಸಂಘರ್ಷದ ಸುಳಿಗೆ ಸಿಕ್ಕು ನರಳಾಡಬೇಕು, ಸುಖ, ಶಾಂತಿ, ನೆಮ್ಮದಿಗಳಿಗೆ ಅನುವು ಇರಬಾರದು. ಹೀಗಾದಾಗಲೇ ವೋಟು ಒಟ್ಟುಗೂಡಿಸುವ ತಂತ್ರ ಸಾಧನೆಯಾಗುವುದು. ಇದು ಸನಾತನದ ಕುರಿತು ಜರಿಯುವವರ ಗುರಿ.

'ಸತ್ಯಂ ವದ ಧರ್ಮಂ ಚರ' (ತೈತ್ತಿರೀಯ ಉಪನಿಷತ್ತು)- ಇದು ಸನಾತನ ಧರ್ಮದ ಮುಖ್ಯ ಆಶಯ. ಈ ಜೀವನ ಪರಿಯನ್ನು ತಿರಸ್ಕರಿಸಬೇಕು ಎಂದರೆ ಏನರ್ಥ? 'ಆ ನೋ ಭದ್ರಾಃ ಕೃತವೋ ಯಂತು ವಿಶ್ವತಃ' (ಸಕಲೆಡೆಗಳಿಂದ ಆಗಮಿಸಲಿ ಸುವಿಚಾರಗಳು) ಇದು ವೇದಗಳ ಸಂದೇಶ. ಈ ಸಂದೇಶವನ್ನು ಅಮಾನ್ಯ ಮಾಡುವುದು ಎಂದರೆ ಅದು ಸಂಕುಚಿತ ಮನೋಭಾವದ ಪರಮಾವಧಿ ಅನಿಸುವುದಿಲ್ಲವೇ?

ಸನಾತನ (ಹಿಂದೂ) ಧರ್ಮವು ಭಾರತೀಯರಲ್ಲಿ ಅಂತರ್ಗತವಾದ ಸುಪ್ತ ಶಕ್ತಿಯನ್ನು ಪ್ರತಿನಿಧಿಸುತ್ತದೆ. 'ಹಿಂದೂ ಧರ್ಮ'ವನ್ನು ವ್ಯಾಖ್ಯಾನಿಸುವುದು ಕಷ್ಟ. ನಮ್ಮ ದೇಶದ ಜನರ ನಿತ್ಯಜೀವನದ ಭಾಗವಾಗಿದೆ ಅದು. ಧರ್ಮವು ಅನುಭವದ ಆಧಾರ ಹೊಂದಿದೆಯೇ ಹೊರತು ಪಾಂಡಿತ್ಯದ ಆಧಾರ ಹೊಂದಿಲ್ಲ. ಬುದ್ಧಿಜೀವಿಗಳಿಗೆ ಪಾಂಡಿತ್ಯ ಮುಖ್ಯವೇ ಹೊರತು, ಅನುಭವವಲ್ಲ. ಆದರೆ, ಸಾಮಾನ್ಯರಿಗೆ ಅನುಭವವೇ ಪ್ರಧಾನ, ಪಾಂಡಿತ್ಯವಲ್ಲ. 'ಹಿಂದೂ ಧರ್ಮ' ಎಂಬುದು ಸನಾತನ ಧರ್ಮ ಎಂದು ಬಹುಕಾಲದಿಂದ ಚಾಲ್ತಿಯಲ್ಲಿರುವ ಧರ್ಮದ ಹೊಸ ಹೆಸರು ಎಂದು ಹೇಳಬಹುದು. ಇದರ ಪ್ರಧಾನ ಗುಣ ನಿರಂತರತೆ. ಅದಕ್ಕೆಂದೇ ಸನಾತನ ಧರ್ಮವು ಚಿರ ಪುರಾತನ ಅತಿ ವಿನೂತನ. ಯಾವುದನ್ನೂ ತಿರಸ್ಕರಿಸದೇ ಇರುವುದರಿಂದ ಅದಕ್ಕೆ ಸಾರ್ವತ್ರಿಕ ಸಿಂಧುತ್ವ ಇದೆ. ಈ ಸರ್ವಗ್ರಾಹಿ ಜೀವನಪದ್ಧತಿ ಒಂದು ಹೆಸರಿಲ್ಲದ ತತ್ವಪ್ರಣಾಳಿಕೆಯಾಗಿತ್ತು. ಅದಕ್ಕೆ ತನ್ನನ್ನು ಪ್ರತ್ಯೇಕವಾಗಿ ಘೋಷಿಸಿಕೊಳ್ಳುವ ಅಗತ್ಯವೇ ಇರಲಿಲ್ಲ. ಯಾಕೆಂದರೆ ಅದನ್ನು ಹೊಂದುವ ವಿಚಾರಪ್ರಣಾಳಿಕೆ ಇನ್ನೊಂದು ಇರಲಿಲ್ಲ. ಆನಂತರ ಹುಟ್ಟಿದ ಸೆಮೆಟಿಕ್ ಮತಗಳು ಸನಾತನ ಧರ್ಮವನ್ನು ತಿರಸ್ಕರಿಸಲು, ತುಳಿಯಲು ಆರಂಭಿಸಿದ್ದರಿಂದ ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾದ ಅವಶ್ಯಕತೆ ಸನಾತನ ಧರ್ಮಕ್ಕೆ ಬಂದಿತು.

ಪ್ರಾಚೀನ ಭಾರತಕ್ಕೆ ಸಂಬಂಧಿಸಿದ್ದು ಏನೇ ಇರಲಿ, ಸ್ವಾತಂತ್ರ್ಯಾನಂತರದಲ್ಲಿ ಅದೆಲ್ಲವನ್ನೂ ಕೋಮುವಾದಿ ಎಂದೂ ಸೆಕ್ಯುಲರ್ ವಿಚಾರಧಾರೆಗೆ ವಿರುದ್ಧ ಇರುವಂಥವು ಎಂದೂ ಪ್ರಚಾರದ ಭರಾಟೆ ಆರಂಭವಾಯಿತು. ವೋಟ್‌ಬ್ಯಾಂಕ್ ಆಧಾರಿತ ಹಾಗೂ ಅದರಿಂದಲೇ ನಿರ್ದೇಶಿಸಲ್ಪಟ್ಟ ರಾಜಕೀಯ ವ್ಯವಸ್ಥೆಯು ಸನಾತನ ಧರ್ಮಕ್ಕೆ ಸಂಬಂಧಿಸಿದ ಎಲ್ಲವನ್ನೂ ವಿವಾದಾಸ್ಪದ ಆಗಿಸುವಲ್ಲಿ ವ್ಯವಸ್ಥಿತವಾಗಿ ನಿರತವಾದವು. ಸನಾತನ ಭಾರತ ಹಿಂದಕ್ಕೆ ಸರಿದು 'ಸೆಕ್ಯುಲರ್ ಇಂಡಿಯಾ' ಮುನ್ನೆಲೆಗೆ ಬಂದಿತು. ಇದರಿಂದಾಗಿ ಹಿಂದೂಗಳು ತಮ್ಮ ಬದುಕನ್ನು ಒಂದು ಬಗೆಯಲ್ಲಿ ಕದ್ದು–ಮುಚ್ಚಿ ಮುನ್ನಡೆಸುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಇವರೆಲ್ಲರೂ ಮುಕ್ತವಾಗಿ ಬದುಕುವ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುವಂತಾಯಿತು. ಸನಾತನದ ಕುರಿತಾಗಿ ಅಸಹಿಷ್ಣುತೆಯ ವಾತಾವರಣ ನಿರ್ಮಾಣವಾಯಿತು.

ಧರ್ಮದ ಶ್ರೇಷ್ಠ ಕಲ್ಪನೆಯಲ್ಲಿ ಸಾಗಿಬಂದ ಸನಾತನ ಭಾರತೀಯ ಪರಂಪರೆ, ಮೌಲ್ಯಗಳನ್ನು ಅರ್ಥೈಸಿಕೊಳ್ಳಲು ಪ್ರಾಚೀನ ಭಾರತದ ಸಾಮಾಜಿಕ–ಸಾಂಸ್ಕೃತಿಕ ಜೀವನದ ಕುರಿತು ನಿರ್ವಿಕಾರವಾದ ಹಾಗೂ ರಾಜಕೀಯ ದುರುದ್ದೇಶ ಹೊರತುಪಡಿಸಿ ಅಧ್ಯಯನ ಮಾಡಬೇಕಾದ ಅವಶ್ಯಕತೆ ಇದೆ. ಆಗ ನಮಗೆ ಅರಿವಾಗುವುದು ಸನಾತನ ಸಂಸ್ಕೃತಿಯ ಅಡಿಪಾಯ ಎಂದೆನಿಸಿದ ವೇದಗಳು ಮನುಕುಲಕ್ಕೆ ಒಳಿತು ಮಾಡಲು ಇರುವಂಥವು. ಸಾಮರಸ್ಯವೇ ವೇದಗಳ ಜೀವಾಳ. ಸ್ವಾರ್ಥ, ಒಡಕು, ಭೇದ ಇವುಗಳನ್ನು ವೇದಗಳಲ್ಲಿ ದುರ್ಬೀನು ಹಿಡಿದು ಹುಡುಕಿದರೂ ದೊರಕುವುದಿಲ್ಲ.

ತೈತ್ತಿರೀಯ ಸಂಹಿತೆ (5.7.6.6) ಬ್ರಾಹ್ಮಣರಿಗೆ, ರಾಜಕುಮಾರರಿಗೆ, ವೈಶ್ಯರಿಗೆ ಹಾಗೂ ಶೂದ್ರರಿಗೆ ಚುರುಕು ಬುದ್ಧಿಯನ್ನು (ಋಚಮ್) ನೀಡು ಎಂದು ತಿಳಿಸುತ್ತದೆ. ವಾಜಸನೇಯಿ ಸಂಹಿತೆ ಅಥವಾ ಶುಕ್ಲ ಯಜುರ್ ವೇದ (26.2) ಹೇಳುವುದೇನೆಂದರೆ: 'ನಾನು ಎಲ್ಲ ಜನರಿಗೂ ಸಂತಸದ ಮಾತನ್ನಾಡುವೆನು; ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ಶೂದ್ರರಿಗೂ ಹಾಗೂ ವೈಶ್ಯರಿಗೂ; ನಮ್ಮವರಿಗೂ ಹಾಗೂ ಅಪರಿಚಿತರಿಗೂ, ನಾನು ದೇವರಲ್ಲಿ ಹಾಗೂ ಎಲ್ಲ ಜನರಲ್ಲಿ ಬೇಧ ಎಣಿಸದಂತೆ ಆಗಲಿ'. ಇದಕ್ಕಿಂತ ಉದಾತ್ತ ಪ್ರಾರ್ಥನೆ ಯಾವುದು ಇರಬಲ್ಲದು? ವೇದಗಳಲ್ಲಿ ಅಸ್ಪೃಶ್ಯತೆ ಇದೆ ಎಂದು ಹೇಳುವವರು ಇದನ್ನು ಗಮನಿಸಬಾರದೇಕೆ?

ಸೃಷ್ಟಿಯ ಶಾಶ್ವತ ತತ್ವಗಳು ಮನುಕುಲದ ಪ್ರಗತಿಯನ್ನು ನಿರಂತರವಾಗಿ ನಿರ್ದೇಶಿಸುತ್ತವೆ ಎಂಬುದನ್ನು ದೃಢವಾಗಿ ನಂಬಿ, ಮಾನವರ ಅನುಭವ ಆಧರಿಸಿ ಜೀವನಪದ್ಧತಿ ರೂಢಿಸುವುದರಕಡೆಗೂ ಗಮನ ಹರಿಸುವುದು ಸನಾತನ ಧರ್ಮದ ವಿಶೇಷತೆಯಾಗಿದೆ. ಪ್ರಕೃತಿಯ ಅನುಲ್ಲಂಘನೀಯ ನಿಯಮಗಳನ್ನು ಅನುಷ್ಠಾನ–ಸಾಧ್ಯವಾಗುವ ರೀತಿಯಲ್ಲಿ, ನಿರಂತರ ವಿಕಾಸಶೀಲ ನಿಯಮಗಳಾಗಿ ಅಳವಡಿಸಿದಾಗ, ಅವೇ 'ಧರ್ಮ' ಎನಿಸಿದವು. ಈ ದೃಷ್ಟಿಕೋನದಿಂದ ಪರಿಕಲ್ಪಿತ ಧರ್ಮವೇ ಮಾನವರ ವೈಶಿಷ್ಟ್ಯವಾಗಿದೆ ಹಾಗೂ ಅವರು ವಾಸಿಸುವ ಸಮಾಜದ ಸೃಜನಶೀಲತೆ ಹಾಗೂ ಕ್ರಿಯಾಶಕ್ತಿಯನ್ನು ನಿರ್ಧರಿಸುತ್ತದೆ. ಇದನ್ನು ಸಹಿಸದ, ಒಪ್ಪಿಕೊಳ್ಳದ ವಾಮಪಂಥೀಯರು, ವ್ಯಕ್ತಿಯನ್ನು ತೃಣಸಮಾನಗೊಳಿಸಿ, ರಾಜ್ಯಾಡಳಿತವೇ ಸರ್ವಸ್ವ ಎಂದು ಬಗೆದುದರ ಪರಿಣಾಮವಾಗಿ ಭಾರತವು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿನ್ನಡೆಗೆ ಒಳಗಾಯಿತು.

ವಿಸ್ತರಣಾವಾದಿ ಸೆಮೆಟಿಕ್ ಮತಗಳ ಸೀಮಿತ ಜೀವನ ದೃಷ್ಟಿಯಿಂದ, ಕಮ್ಯುನಿಸಂ, ಸೋಷಿಯಲಿಸಂ, ಕ್ಯಾಪಿಟಲಿಸಂನಂಥ ಬೇಧ–ನಿರ್ಮಾಣ ಸಿದ್ಧಾಂತಗಳಿಂದ ಹೊರತಾಗಿ ಮನುಕುಲದ ಏಳಿಗೆ ಬಯಸುವ ಪ್ರತಿಯೊಬ್ಬರೂ ಇಂದು ಸನಾತನ ಧರ್ಮದ ಆಚರಣೆ ಹಾಗೂ ಪ್ರಸಾರದಲ್ಲಿ ನಿರತರಾಗಬೇಕಾಗಿದೆ. 'ಸನಾತನ ಧರ್ಮವು ಭಾರತವರ್ಷದ ಜನಾಂಗದ ಗುರುತು; ಈ ಶಬ್ದವು ಯಾವುದೇ ವಿಶಿಷ್ಟ ಮತಧರ್ಮ ಅಥವಾ ಆರಾಧನಾ ವಿಧಾನದ ಅರ್ಥ ಹೊಂದಿರಲಿಲ್ಲ... ಒಂದು ಧರ್ಮ ಎಂದು ಗುರುತಿಸಿದರೂ 'ಹಿಂದೂಯಿಸಂ' ಎಂಬುದು ಸೆಮೆಟಿಕ್ ಧರ್ಮಗಳೊಂದಿಗೆ ಹೋಲಿಕೆಯಾಗದು. ಅದರಲ್ಲೂ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಹೋಲಿಸಲಾಗದು... ಈ ಸೆಮೆಟಿಕ್ ಮತಪ್ರಚಾರದ ಕಾರ್ಯೋದ್ದೇಶಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಹಿಂದೂ ದೃಷ್ಟಿ ಇರುವುದು' ಎಂಬುದಾಗಿ ಸರ್ವೇಪಲ್ಲಿ ರಾಧಾಕೃಷ್ಣನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಉಪನ್ಯಾಸದಲ್ಲಿ ತಿಳಿಸಿರುವರು.

ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ: 'ಹಿಂದೂ ಧರ್ಮವು ತತ್ವಶಃ ಎಲ್ಲ ವಿಧದ ಶ್ರದ್ಧೆ ಮತ್ತು ಆರಾಧನೆಗಳ ರೂಪಗಳನ್ನು, ಯಾವುದೊಂದನ್ನೂ ಅನಿವಾರ್ಯವಾಗಿ ಸ್ವೀಕಾರಾರ್ಹ ಅಥವಾ ತ್ಯಾಜ್ಯವೆಂದೆಣಿಸದೆ ಒಳಗೊಳ್ಳುತ್ತದೆ. ದೈವತ್ವದ ಪ್ರಕಟೀಕರಣ, ಅದಾವುದೇ ಇರಲಿ, ಅದನ್ನು ಹಿಂದೂವು ಗೌರವಿಸುವ ಒಲವುಳ್ಳವನು, ಸೈದ್ಧಾಂತಿಕ ಸಹಿಷ್ಣುತೆ ಉಳ್ಳವನು, ಸಮನ್ವಯ ದೃಷ್ಟಿಕೋನ ಅವನ ಸ್ವಭಾವವಾಗಿದೆ. ಅತ್ಯುನ್ನತ ದೈವೀ ಶಕ್ತಿಗಳು ಜಗತ್ತಿನ ಮತ್ತು ಮಾನವಕುಲದ ಕಲ್ಯಾಣಕ್ಕಾಗಿ ಪರಸ್ಪರ ಪೂರಕವಾಗಿವೆ ಎಂಬುದನ್ನು ನಂಬುವುದು ಅವನ ಒಲವು.... ಹಿಂದೂ ಧರ್ಮ ಒಂದು ಸಂಸ್ಕೃತಿಯೂ ಹೌದು, ಅನಾದಿಯಾದ, ಸ್ಥಾಪಕನೋರ್ವನಿರದ, ಒಂದು ಕೇಂದ್ರೀಯ ಅಧಿಕಾರಪೀಠವಿರದ, ವಂಶಪಾರಂಪರ್ಯ ಅಥವಾ ಸಂಘಟಿತ ಸಂಸ್ಥಾರೂಪವಿಲ್ಲದ ಧರ್ಮಗಳ–ಸಮ್ಮಿಶ್ರಣವೂ ಹೌದು.'

ಈಗ ಹೇಳಿ, ಸನಾತನ ಧರ್ಮ ಸ್ವೀಕಾರಾರ್ಹವೋ? ತಿರಸ್ಕಾರಾರ್ಹವೋ?

ಲೇಖಕ: ವ್ಯವಸ್ಥಾಪಕ ಟ್ರಸ್ಟಿ, ಶ್ರೀ ಅರಬಿಂದೋ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ (ಸಾಕ್ಷಿ)

ಕೊಲೆಯ ಕಾಡದ ಕಥೆ

ಮೇಘನಾ ರಾಜ್, ಪ್ರಜ್ವಲ್ ದೇವರಾಜ್

ನಾವು ನೋಡಿದ ಸಿನಿಮಾ

ತತ್ಸಮ ತದ್ಭವ (ಕನ್ನಡ)

- **ನಿರ್ದೇಶನ:** ವಿಶಾಲ್ ಅತ್ರೇಯ
- **ನಿರ್ಮಾಪಕರು:** ಪನ್ನಗಭರಣ
- **ಪಾತ್ರವರ್ಗ:** ಮೇಘನಾ ರಾಜ್, ಪ್ರಜ್ವಲ್ ದೇವರಾಜ್, ನಾಗಾಭರಣ, ಅರವಿಂದ್ ಅಯ್ಯರ್ ಮತ್ತಿತರರು

ಒಂದು ಕಾಲಕ್ಕೆ ರೇಡಿಯೊ ಸಿನಿಮಾಗಳು ಬಹಳ ಪ್ರಸಿದ್ಧಿ ಪಡೆದಿದ್ದವು. ಏನೋ ಕೆಲಸ ಮಾಡುತ್ತ ಸಿನಿಮಾ ಕೇಳುವುದು ಒಂದು ರೀತಿ ಮಜವಾದ ಅನುಭವ ನೀಡುತ್ತಿತ್ತು. ಬಹಳಷ್ಟು ದೃಶ್ಯಗಳಲ್ಲಿ ಅಂಥದ್ದೇ ಅನುಭವ ನೀಡುವ ಚಿತ್ರ 'ತತ್ಸಮ–ತದ್ಭವ'. ಒಂದು ಕೊಲೆಯ ಸುತ್ತ ನಡೆಯುವ ಕಥೆ ಒಳಗೊಂಡ ಸಿನಿಮಾ ಇದು. ಆದರೆ ಸಂಭಾಷಣೆಯಲ್ಲಿ, ಕಥೆಯಲ್ಲಿ ಇರುವ ಕುತೂಹಲ ಇಡೀ ಚಿತ್ರದುದ್ದಕ್ಕೂ ದೃಶ್ಯವತ್ತಾಗಿ ಕಾಣಿಸುವುದಿಲ್ಲ. ಎಷ್ಟೋ ದೃಶ್ಯಗಳು ನೋಡುವುದಕ್ಕಿಂತ ಕೇಳಿಸಿಕೊಂಡರೆ ಸಾಕು ಎನ್ನುವ ಅನುಭವ ನೀಡುತ್ತವೆ.

ನಟಿ ಮೇಘನಾ ರಾಜ್ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತನ್ನ ಗಂಡ ಕಾಣೆಯಾಗಿದ್ದಾನೆ ಎಂದು ಪೊಲೀಸ್ ಠಾಣೆಗೆ ದೂರು ನೀಡಲು ಆರಿಕ ಬರುತ್ತಾಳೆ ಎಂಬಲ್ಲಿಂದ ಕಥೆ ಪ್ರಾರಂಭವಾಗುತ್ತದೆ. ಈ ಆರಿಕ ಪಾತ್ರಧಾರಿ ಮೇಘನಾ. ಪ್ರಜ್ವಲ್ ದೇವರಾಜ್ ಆ ಠಾಣೆಯ ಇನ್‌ಸ್ಪೆಕ್ಟರ್ ಅರವಿಂದ್ ಅಶ್ವತ್ಥಾಮನ ಪಾತ್ರದಲ್ಲಿದ್ದಾರೆ.

ಸಸ್ಪೆನ್ಸ್ ಥ್ರಿಲ್ಲರ್‌ನ ಕಥೆಯ ಅರ್ಧದಷ್ಟು ಭಾಗ ಪೊಲೀಸ್ ಠಾಣೆಯ ವಿಚಾರಣೆಯಲ್ಲಿಯೇ ಕಳೆದುಹೋದರೆ, ಇನ್ನರ್ಧ ಆರಿಕ ಮನೆಯಲ್ಲಿ ನಡೆಯುತ್ತದೆ. ಸಿನಿಮಾದುದ್ದಕ್ಕೂ ಅತಿಯಾದ ಕ್ಲೋಸಪ್ ಶಾಟ್‌ಗಳು ಧಾರಾವಾಹಿಯ ಅನುಭವ ನೀಡಿ ದೃಶ್ಯಗಳ ತೀವ್ರತೆಗೆ ಭಂಗ ತರುತ್ತವೆ.

ಅಶ್ವತ್ಥಾಮ ಮಾಮೂಲಿ ಇನ್‌ಸ್ಪೆಕ್ಟರ್ ಅಲ್ಲ. ಪ್ರಕರಣಗಳನ್ನು ಅಡುಗೆಯೊಂದಿಗೆ ಹೋಲಿಸುತ್ತಾ, ತನಿಖೆ ನಡೆಸುವ ಈತ ಕೆಲ ಇಂಗ್ಲಿಷ್ ಸಿನಿಮಾಗಳ ಇನ್‌ಸ್ಪೆಕ್ಟರ್ ಪಾತ್ರವನ್ನು ನೆನಪಿಸುತ್ತಾನೆ. ಆತನ ಅಡುಗೆಮನೆಯ ಸೆಟಪ್ ಕೂಡ ಇದಕ್ಕೆ ಇಂಬುನೀಡುತ್ತದೆ. ಇಂತಹ ಚಾಣಾಕ್ಷ ಇನ್‌ಸ್ಪೆಕ್ಟರ್‌ಗೆ ಆರಿಕ ಗಂಡನ ನಾಪತ್ತೆ ಕಗ್ಗಂಟಿನ ಪ್ರಕರಣವಾಗುತ್ತದೆ. ಅದನ್ನು ಹೇಗೆ ಬಗೆಹರಿಸುತ್ತಾನೆ, ನಿಜವಾದ ಕೊಲೆಗಾರ ಯಾರು ಎಂಬುದೇ ಚಿತ್ರದ ಕಥೆ.

ಸಾಮಾನ್ಯವಾದ ಕಥೆಯನ್ನು ಚಿತ್ರಕಥೆಯಲ್ಲಿ ರೋಚಕವಾಗಿಸುವ ಯತ್ನ ಮಾಡಿದ್ದಾರೆ ನಿರ್ದೇಶಕ ವಿಶಾಲ್ ಅತ್ರೇಯ. ಆದರೆ ದೃಶ್ಯಗಳ ಕಟ್ಟು ಆ ರೋಚಕ ಅನುಭವ ನೀಡುವಂತಿಲ್ಲ. ಸಾಕಷ್ಟು ಕಡೆ ಲಾಜಿಕ್ ಕಳೆದುಹೋಗಿ, ಕಥೆಯನ್ನು ಸಮರ್ಥಿಸಲು ಸನ್ನಿವೇಶಗಳನ್ನು ತುರುಕಿದಂತೆ ಭಾಸವಾಗುತ್ತದೆ. 'ಸಿಂಗಲ್ ರೂಂ ಡ್ರಾಮಾ'ದಂತಹ ಕಥಾವಸ್ತುವಿದು. ನುರಿತ ಪಾತ್ರವರ್ಗದೊಂದಿಗೆ, ಇರುವ ಇತಿಮಿತಿಗಳಲ್ಲೇ ಪ್ರೇಕ್ಷಕನಿಗೆ ರೋಚಕ ಅನುಭವ ನೀಡುವ ಅವಕಾಶ ನಿರ್ದೇಶಕರಿಗಿತ್ತು.

ಒಂದು ವಿರಾಮದ ಬಳಿಕ ಮತ್ತೆ ನಟನೆಗೆ ಮರಳಿರುವ ಮೇಘನಾ ಪಾತ್ರಕ್ಕೆ ಒಗ್ಗಿಕೊಳ್ಳಲು ಸಿನಿಮಾ ವಿರಾಮದವರೆಗೂ ಸಮಯ ತೆಗೆದುಕೊಳ್ಳುತ್ತಾರೆ. ತಂಗಿ ಅಕಿರಾ ಪಾತ್ರದಲ್ಲಿ ಕಾಣಿಸಿಕೊಳ್ಳುವ ಹೊತ್ತಿಗೆ ಮೇಘನಾ ನಟನೆ ಲಯ ಕಂಡುಕೊಳ್ಳುತ್ತದೆ. ಅಕಿರಾಳ ಬಾಯ್‌ಫ್ರೆಂಡ್ ಮಾಥ್ಯೂ ಆಗಿ ಅರವಿಂದ್ ಅಯ್ಯರ್ ನೆನಪಿನಲ್ಲಿ ಉಳಿಯುತ್ತಾರೆ. ಯಾವುದೇ ಹೊಡಿಬಡಿ ದೃಶ್ಯಗಳಿಲ್ಲದೆ, ಕುಣಿತವಿಲ್ಲದೆ ಇನ್‌ಸ್ಪೆಕ್ಟರ್ ಆಗಿ ಪ್ರಜ್ವಲ್ ದೇವರಾಜ್ ಬಹಳ ಇಷ್ಟವಾಗುತ್ತಾರೆ.

ವಾಸುಕಿ ವೈಭವ್ ದೃಶ್ಯಗಳಿಗೆ ಪೂರಕವಾದ ಸಂಗೀತ ನೀಡಿದ್ದಾರೆ. ಆದರೆ ಚಿತ್ರದಲ್ಲಿರುವ ಎರಡೇ ಎರಡು ಹಾಡುಗಳು ಕೂಡ ಥಿಯೇಟರ್‌ನಿಂದ ಹೊರಬರುವ ಹೊತ್ತಿಗೆ ಮರೆತುಹೋಗಿರುತ್ತವೆ. 'ಒಲೆ ಹಚ್ಚಲಾ' ಎಂಬ ಇನ್‌ಸ್ಪೆಕ್ಟರ್ ಮಾತು ಕೊನೆವರೆಗೂ ನೆನಪಿನಲ್ಲಿ ಉಳಿಯುತ್ತದೆ. ಸಂಭಾಷಣೆ ಹಿತಮಿತವಾಗಿದ್ದು, ಎರಡು–ಮೂರು ಕಡೆ ಸಹಜವಾಗಿ ನಗು ತರಿಸುತ್ತದೆ. ಕ್ಲೈಮ್ಯಾಕ್ಸ್ ಗೊಂದಲದ ಗೂಡಾಗಿದೆ. 'ಈ ಸಿನಿಮಾ ಬುದ್ಧಿವಂತರಿಗೆ ಮಾತ್ರ!' ಎಂಬ ಕ್ಲೈಮ್ಯಾಕ್ಸ್ ಚಿತ್ರದ ಶೀರ್ಷಿಕೆಗೆ ಅನ್ವರ್ಥ.

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5443 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅನೀರಿಕ್ಷಿತವಾಗಿ ಬಂದ ವ್ಯಕ್ತಿ (4)
2. ಸಮರಸದ ಭಾವ (4)
4. ಸಾರದೊಳಗೇ ಮೂರ್ತೀಭವಿಸುವುದು! (4)
6. ಸಂಗನ ಸಂಗಡವಿದ್ದಾಗ ನಡೆದ ಘಟನೆ! (3)
7. ನೆನಪಲ್ಲೇ ಇರುವ ಕಾರಣ! (2)
9. ಕನ್ನ ಹಾಕಿ ದೋಚಿರುವ ಚಿನ್ನ (3)
11. ಸೂರ್ಯ ಇಲ್ಲಿ ಮೂಡಿದ್ದಾನೆ (2)
13. ಕಾವಲಿದ್ದರೂ ಎರಡಾಗಿ ಸೀಳಿದುದು! (3)
14. ಮೋಸಗಾರಿಕೆಯನ್ನು ಹೀಗೂ ಹೇಳುವರು (4)
16. ಮನದಲ್ಲಿರುವ ವಂಶ (4)
17. ಯಾವುದೇ ಆಯುಧವಿಲ್ಲದಿರುವಿಕೆ (4)

ಮೇಲಿಂದ ಕೆಳಕ್ಕೆ
1. ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಪ್ರಯತ್ನ (5)
2. ಶಾರೀರಿಕ ವ್ಯಾಯಾಮ (2)
3. ನೇತ್ರರು ಪ್ರವಹಿಸುವಿಕೆ (5)
5. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8. ಈ ಪರಿ ಆಗಿರುವ ಬದಲಾವಣೆ! (5)
10. ಕೈಯಲ್ಲಿ ಹಿಡಿದಿರುವ ಚಿಪ್ಪು (3)
12. ವಿಧಾನ ಸಭೆ ಸೇರುವ ಮಹಲು (5)
15. ಮಾತಿಲ್ಲದ ನೀರವತೆ (2)

1				■	2		3	
	■	■	■	■		■		■
4			5	■	■	6		
	■	■		■	■	■		■
7	8	■	9		10	■	11	12
■		■	■	■		■	■	
13			■	■	14			
■		■	15	■	■	■	■	
16				■	17			

5442ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
3.ಕಿತಾಪತಿ
5.ಜಾಯಮಾನ
6.ಕುದುಗೋಲು
8.ಮಡಿವಾಳ 12.ವನಸುಮ
14.ಅಭಿಮಾನ
15.ಅನುಕಂಪ 16.ತರಗತಿ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು 2.ಸಮಾಗಮ
3.ಕಿರುಕುಳ 4.ತಿಕ್ಕಲು
7.ಗೋರಿ 9.ವಾಮನ
10.ಉಷ್ಣಮಾಪಕ
11.ನಾಭಿ 12.ವನಸ್ಪತಿ
13.ಮರುನುಡಿ
14.ಅನೃತ

ಸುಡೊಕು 5829

4	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
		4	1		9		3	

5828 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಸೆಪ್ಟೆಂಬರ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪ್ರತಿಪದ್ ಗಂ.09-18 ನಕ್ಷತ್ರ: ಉತ್ತರಫಲ್ಗುನಿ ಗಂ.07-36 ಯೋಗ: ಶುಕ್ಲ (ಶುಕ್ರ) ಗಂ. 28-12 ಕರಣ: ಬವ ಗಂ.09-18, ಸಿಂಹ ಮಾಸದ 30 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 1. ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-23 ಸೂರ್ಯಾಸ್ತ : 06-28, ಮುಸ್ಲಿಂ ದಿನಾಂಕ : 30 ಸಫರ್
ದಿನ ವಿಶೇಷ : ಸಾಮವೇದ ಉಪಾಕರ್ಮ, ಜ್ಯೂಯಿಷ್ ಹೊಸ ವರ್ಷ (ರೋಷ್ ಹಶ್ನಾಹ್)
ಅದೃಷ್ಟ ಸಂಖ್ಯೆ : 5, 12

ಮೇಷ: ಕೈಮಗ್ಗದ ವಸ್ತುಗಳ ವ್ಯಾಪಾರಿಗಳಿಗೆ ವಿದೇಶದಿಂದ ಹೆಚ್ಚಿನ ಪ್ರಾಮುಖ್ಯ ಸಿಗುತ್ತದೆ. ಮುಂದಿನ ಯೋಜನೆಗಳ ಕುರಿತು ಪರಿಣಿತರ ಜತೆ ಚರ್ಚೆಯನ್ನು ನಡೆಸಿ. ಹಂತ ಹಂತವಾಗಿ ವಿವಾದಗಳು ನಿವಾರಣೆ ಆಗಲಿವೆ.

ವೃಷಭ: ಸಮಾಜಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಪ್ರಚಾರ ಸಿಗುವುದು. ವ್ಯವಹಾರಗಳಲ್ಲಿ ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆ ನೀಡಬೇಡಿ.

ಮಿಥುನ: ಆದಾಯಕ್ಕಿಂತ ಜಾಸ್ತಿ ಅನಿವಾರ್ಯ ಖರ್ಚುಗಳು ಎದುರಾಗಬಹುದು ಆದ್ದರಿಂದ ಹಣಕಾಸಿನ ವಿಚಾರದಲ್ಲಿ ಜಾಗ್ರತೆ ವಹಿಸಿ. ನವದಂಪತಿಗಳಿಗೆ ಶುಭಪ್ರದವಾದ ಸಂತಾನ ಭಾಗ್ಯ ದೊರೆತು ಸಂತೋಷವಾಗುವುದು.

ಕರ್ಕಾಟಕ: ಹೂವಿನ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಲಾಭವಿರುವುದರಿಂದ ಜೀವನ ನಡೆಸುವುದು ಕಷ್ಟವೆನಿಸದು. ಪ್ರಾರಂಭಿಸಿದ ಎಲ್ಲಾ ಕೆಲಸಗಳಲ್ಲಿಯೂ ಯಶಸ್ಸು, ಲಾಭ, ಅಭಿವೃದ್ಧಿಗಳಿಂದ ಮನಸ್ಸಿಗೆ ಸಂತೋಷ ಸಿಗಲಿದೆ.

ಸಿಂಹ: ಅರ್ಹತೆಗೆ ತಕ್ಕಂಥ ಸ್ಥಾನಮಾನ ಲಭಿಸುವವರೆಗೆ ತಾಳ್ಮೆಯಿಂದ ಇರುವುದು ಉತ್ತಮ. ನರರೋಗ ತಜ್ಞರಿಗೆ ಹೊಸ ಅನುಭವಗಳೊಂದಿಗೆ ವಿದೇಶ ಪ್ರಯಾಣದ ಸಾಧ್ಯತೆಗಳು ಮತ್ತು ವೃತ್ತಿ ನಡೆಸಲು ಅವಕಾಶ ಸಿಗಲಿದೆ.

ಕನ್ಯಾ: ಬಂಧು ಜನರಿಗೆ ಅಥವಾ ಸಹಾಯ ಅಪೇಕ್ಷಿಗಳಿಗೆ ಸಹಾಯಹಸ್ತ ತೋರುವುದು ದೇವರು ಮೆಚ್ಚುವ ಕೆಲಸವೆಂದು ತಿಳಿದುಬರಲಿದೆ. ಹೊಸದನ್ನು ಕಲಿಯುವ ಉತ್ಸಾಹದಿಂದ ಮುನ್ನುಗ್ಗಿದಲ್ಲಿ ಯಶಸ್ಸು ಲಭಿಸುವುದು.

ತುಲಾ: ಅವಿವಾಹಿತರಿಗೆ ನಿಮ್ಮ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ. ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿದ್ದರೂ ಅಣ್ಣ ತಮ್ಮಂದಿರ ನಡುವೆ ಸಣ್ಣ-ಪುಟ್ಟ ಮಾನಸಿಕ ಕಿರಿಕಿರಿಗಳು ತಪ್ಪದಂತಾಗಲಿದೆ.

ವೃಶ್ಚಿಕ: ಗೃಹಾಲಂಕಾರ ವಸ್ತುಗಳ ಅಥವಾ ಪೀಠೋಪಕರಣಗಳ ವ್ಯಾಪಾರದಿಂದ ಅಧಿಕ ಲಾಭ ಹೊಂದುವಿರಿ. ಅನ್ಯರಿಂದ ಆರ್ಥಿಕ ಸಹಾಯ ನಿರೀಕ್ಷಿಸುವುದು ಸರಿಯಲ್ಲ ಹಾಗೂ ಅದು ಸಾಧ್ಯವಾಗುವುದೂ ಇಲ್ಲ.

ಧನು: ವೃತ್ತಿಯಲ್ಲಿ ಅಧಿಕಾರಿಗಳು ನಿಮ್ಮ ಕಾರ್ಯಸಾಧನೆ ಗುರುತಿಸಿ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿಯಮವನ್ನು ಸಡಿಲಗೊಳಿಸುವರು ಹಾಗೂ ಹೆಚ್ಚಿನ ಸೌಲಭ್ಯ ಒದಗಿಸಿ ಕೊಡುವರು.

ಮಕರ: ವ್ಯವಹಾರದಲ್ಲಿ ಲಾಭ ನಷ್ಟ ಸುಧಾರಿಸಿಕೊಂಡು ಹೋಗುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಅನಿವಾರ್ಯ. ನೀವಿಂದು ಮಾಡುವ ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು.

ಕುಂಭ: ಉಳಿತಾಯದ ವಿಷಯದಲ್ಲಿ ಆರಿಸಿಕೊಳ್ಳುವ ನಿರ್ಧಾರಕ್ಕೆ ಅಡೆತಡೆ ಉಂಟಾಗಿ ಹಲವು ರೀತಿಯಲ್ಲಿ ಹಣ ವ್ಯಯವಾಗುತ್ತದೆ. ವೃತ್ತಿಪರ ಗೊತ್ತಿಲ್ಲದ ವಿಚಾರ ಕೇಳಿ ತಿಳಿದುಕೊಳ್ಳುವ ಮೂಲಕ ಕೆಲಸಗಳು ಸುಗಮವಾಗುವುದು.

ಮೀನ: ಬಂದಿರುವ ಅವಕಾಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಯೋಚಿಸಿ ಉಪಯೋಗಿಸಿಕೊಂಡರೆ ಒಳ್ಳೆಯದಾಗುವುದು. ಸರಕುಸಾಗಾಣಿಕೆ ಮತ್ತು ಸಾರಿಗೆ ವ್ಯವಸ್ಥೆಯವರಿಗೆ ಆದಾಯ ಇರುತ್ತದೆ.

ಷೇರುಪೇಟೆ ವಹಿವಾಟು ▲319



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,103
ಇಂದಿನ ಅಂತ್ಯ	20,192
▲	89
ದಿನದ ಗರಿಷ್ಠ	20,222

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840 (1810)
ಸೋಯಾ (ರಿಫೈನ್ಡ್)	₹890 (890)
ಸೂರ್ಯಕಾಂತಿ (ರಿಫೈನ್ಡ್)	₹885 (885)
ಪಾಮೋಲಿನ್	₹820 (820)

ವಿನಿಮಯ ದರ

$ ಡಾಲರ್	83.16
£ ಪೌಂಡ್	103.42
€ ಯುರೊ	88.72
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-8360
ತುರುವೇಕೆರೆ	—
ಕೆ.ಆರ್. ಪೇಟೆ	₹8000-8000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹137.50
ಗುಡ್ ಲಾಟ್	₹125.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹175-485
ದ್ವಿತಳಿ (ಬಿ.ವಿ)	₹355-639

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಬಿ.ಜಿ. ಭಾಸ್ಕರ್ ನಾಯ್ಡು
ಜನನ : 13-9-1948 ನಿಧನ : 16-9-2013
Chairman : SLN GROUP & M/s. Enviro Green Alloys Inc.

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳು ಕಳೆದರೂ ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ

ಧರ್ಮಪತ್ನಿ : ಶ್ರೀಮತಿ ಬಿ. ವರಲಕ್ಷ್ಮಿ, ಮಕ್ಕಳು ಮತ್ತು ಬಂಧು-ಮಿತ್ರರು

ಪೆಟ್ರೋಲಿಯಂ, ಚಿನ್ನಾಭರಣಕ್ಕೆ ತಗ್ಗಿದ ಬೇಡಿಕೆ

ಶೇ 7ರಷ್ಟು ಇಳಿಕೆ ಕಂಡ ರಫ್ತು

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಆಗಸ್ಟ್ ತಿಂಗಳಿನಲ್ಲಿ ಶೇಕಡ 6.86ರಷ್ಟು ಇಳಿಕೆ ಕಂಡು ₹3.07 ಲಕ್ಷ ಕೋಟಿಗೆ ತಲುಪಿದೆ. ಪೆಟ್ರೋಲಿಯಂ, ರತ್ನ ಮತ್ತು ಚಿನ್ನಾಭರಣಕ್ಕೆ ಜಾಗತಿಕವಾಗಿ ಬೇಡಿಕೆ ಕಡಿಮೆ ಆಗಿರುವುದರಿಂದ ರಫ್ತು ಇಳಿಕೆ ಕಂಡಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಆಮದು ವಹಿವಾಟು ಸಹ ಶೇ 5.23ರಷ್ಟು ಇಳಿಕೆಯಾಗಿ ₹4.87 ಲಕ್ಷ ಕೋಟಿ ಆಗಿದೆ. 2022ರ ಆಗಸ್ಟ್‌ನಲ್ಲಿ ₹5.14 ಲಕ್ಷ ಕೋಟಿ ಮೌಲ್ಯದ ಆಮದು ವಹಿವಾಟು ನಡೆದಿತ್ತು ಎಂದು ಸರ್ಕಾರ ಮಾಹಿತಿ ನೀಡಿದೆ.

ಆಮದು ಮತ್ತು ರಫ್ತು ವಹಿವಾಟಿನ

ನಡುವಣ ಅಂತರವನ್ನು ತಿಳಿಸುವ ವ್ಯಾಪಾರ ಕೊರತೆಯು ಆಗಸ್ಟ್‌ನಲ್ಲಿ ₹2 ಲಕ್ಷ ಕೋಟಿ ಆಗಿದೆ. ಜುಲೈಗೆ ಹೋಲಿಸಿದರೆ (₹1.71 ಲಕ್ಷ ಕೋಟಿ) ಏರಿಕೆ ಕಂಡಿದೆ.

ಏಪ್ರಿಲ್-ಆಗಸ್ಟ್ ಅವಧಿಯಲ್ಲಿ ರಫ್ತು ಶೇ 11.9ರಷ್ಟು ಮತ್ತು ಆಮದು ಶೇ 12ರಷ್ಟು ಇಳಿಕೆ ಕಂಡಿದೆ.

ಜುಲೈನಲ್ಲಿ ರಫ್ತು ವಹಿವಾಟು ಶೇ 15.88ರಷ್ಟು ಇಳಿಕೆ ಕಂಡಿತ್ತು. ಜುಲೈವರೆಗೆ ಬೆಳವಣಿಯು ನಿರಾಶಾದಾಯಕ ಆಗಿತ್ತು. ಆದರೆ ಇದೀಗ ಚೇತರಿಕೆಯ ಲಕ್ಷಣಗಳು ಗೋಚರಿಸುತ್ತಿವೆ. ಅಂದರೆ, ಜಾಗತಿಕ ಪರಿಸ್ಥಿತಿಯು ಸುಧಾರಿಸುತ್ತಿದೆ. ಆಗಸ್ಟ್ ತಿಂಗಳ ಅಂಕಿ-ಅಂಶಗಳು ಸಮಾಧಾನ ತರುವಂತಿವೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಬಿ. ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಯುರೋಪ್‌ನಲ್ಲಿ ಬಡ್ಡಿದರ ಏರಿಕೆ ಆಗುತ್ತಿರುವುದು ಆತಂಕದ ವಿಷಯ. ಅದರಿಂದಾಗಿ ಅಲ್ಲಿನ ತಯಾರಿಕೆ ಮತ್ತು ಭಾರತದ ರಫ್ತು ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಅದಾನಿ ಪವರ್‌ಗೆ ಪರಿಸರ ಅನುಮತಿ

ಒಂದನೇ ಪುಟದಿಂದ

ಪರಿಸರ ಸಚಿವಾಲಯದ ನಿರ್ಧಾರವನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ (ಎನ್‌ಜಿಟಿ) ಪ್ರಶ್ನಿಸಲಾಗಿತ್ತು. ಇದರ ಮಧ್ಯೆಯೇ ಹೊಸದಾಗಿ 800 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳನ್ನು ಸ್ಥಾಪಿಸಲು ಸಚಿವಾಲಯವು ಕಂಪನಿಗೆ ಅನುಮಿತಿ ನೀಡಿತ್ತು. ಸಚಿವಾಲಯದ ಈ ನಿರ್ಧಾರವನ್ನೂ ಎನ್‌ಜಿಟಿಯಲ್ಲಿ ಪ್ರಶ್ನಿಸಲಾಗಿತ್ತು.

ಯುಪಿಸಿಎಲ್ ಅನ್ನು ಅದಾನಿ ಪವರ್ ಲಿಮಿಟೆಡ್‌ನೊಂದಿಗೆ ವಿಲೀನ ಮಾಡಲಾಗಿತ್ತು.

ಯುಪಿಸಿಎಲ್‌ನ ಧಾರಣಾ ಸಾಮರ್ಥ್ಯ ವರದಿ ಮತ್ತು ತಜ್ಞರ ಸಮಿತಿಯು ತೀವ್ರ ವಾಯುಮಾಲಿನ್ಯ ಮತ್ತು ಜಲಮಾಲಿನ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಎನ್‌ಜಿಟಿ, ಯುಪಿಸಿಎಲ್‌ಗೆ ₹53.02 ಕೋಟಿ ಮೊತ್ತದ ಪರಿಸರ ಪರಿಹಾರ ದಂಡವನ್ನು ವಿಧಿಸಿತ್ತು. ಜತೆಗೆ, ಈ ಕಲ್ಲಿದ್ದಲು ಉಷ್ಣ ವಿದ್ಯುತ್ ಘಟಕಗಳಿಂದ ಪರಿಸರದ ಮೇಲಾಗುವ ಪರಿಣಾಮದ ಅಂದಾಜಿಗಾಗಿ ವಿಸ್ತೃತ ಅಧ್ಯಯನ ನಡೆಸುವಂತೆ 2022ರ ಮೇನಲ್ಲಿ ತೀರ್ಪು ನೀಡಿತ್ತು. ಇದರ ವಿರುದ್ಧ ಅದಾನಿ ಪವರ್ ಲಿಮಿಟೆಡ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯು ಸುಪ್ರೀಂ ಕೋರ್ಟ್‌ನಲ್ಲಿ ಇನ್ನೂ ಇತ್ಯರ್ಥವಾಗಿಲ್ಲ.

ಪ್ರತಿಕ್ರಿಯೆಗಾಗಿ ಪರಿಸರ ಸಚಿವಾಲಯವನ್ನು ಸಂಪರ್ಕಿಸಲಾಯಿತಾದರೂ, ಪ್ರತಿಕ್ರಿಯೆ ಲಭ್ಯವಾಗಲಿಲ್ಲ.

ಸಿಟಿಬ್ಯಾಂಕ್: ತಾಯಂದಿರಿಗೆ ಮನೆಯಿಂದ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಂದಿರಿಗೆ ತಮ್ಮ ಮಾತೃತ್ವ ರಜೆ ಪೂರ್ಣಗೊಂಡ ನಂತರ ಒಂದು ವರ್ಷದ ಅವಧಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು ಸಿಟಿಬ್ಯಾಂಕ್ ಕಲ್ಪಿಸಿದೆ.

‘ಕೇಂದ್ರ ಸರ್ಕಾರದ ಸೂಚನೆಗೆ ಅನುಗುಣವಾಗಿ, ತಾಯಂದಿರಿಗೆ ಈ ರೀತಿಯಲ್ಲಿ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸಿರುವ ಮುಂಚೂಣಿ ಸಂಸ್ಥೆಗಳ ಪೈಕಿ ಸಿಟಿಬ್ಯಾಂಕ್ ಒಂದು’ ಎಂದು ಪ್ರಕಟಣೆ ತಿಳಿಸಿದೆ.

‘ಮಹಿಳೆಯರನ್ನು ಉದ್ಯೋಗದಲ್ಲಿ ಉಳಿಸಿಕೊಳ್ಳಲು ಹಾಗೂ ಅವರ ವೃತ್ತಿ ಬದುಕಿಗೆ ನೆರವಾಗಲು ಇದೊಂದು ಬಹುದೊಡ್ಡ ಹೆಜ್ಜೆ’ ಎಂದು ಸಿಟಿ ಇಂಡಿಯಾ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಆದಿತ್ಯ ಮಿತ್ತಲ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

15-9-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1820)
ಒಂದು ವಾರದ ಡೆಲಿವರಿ	1845(1815)
ಸೋಯಾ ಕಚ್ಚಾ	845(845)
ಪಾಮ್ ವಾರದ ಡೆಲಿವರಿ	818(818)
ಸೂರ್ಯಕಾಂತಿ ಎಣ್ಣೆ ಕಚ್ಚಾ	800(800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,900 (58,2350)
ಬೆಳ್ಳಿ ಕೆ.ಜಿ
71,900 (70,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಾಹನ, ತಂತ್ರಜ್ಞಾನ ಕಂಪನಿಗಳ ಷೇರುಗಳ ಮಾರಾಟ ಹೆಚ್ಚಳ

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ಗರಿಷ್ಠ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಏರಿಕೆ ಮತ್ತು ವಿದೇಶಿ ಬಂಡವಾಳ ಒಳಹರಿವಿನಿಂದಾಗಿ ಮುಂಬೈ ಷೇರುಪೇಟೆ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ.

ದೂರಸಂಪರ್ಕ, ವಾಹನ ಮತ್ತು ತಂತ್ರಜ್ಞಾನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದು ಷೇರುಪೇಟೆಗಳ ಗಳಿಕೆಗೆ ನೆರವಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸತತ 11ನೇ ದಿನವೂ ಗಳಿಕೆ ಓಟ ಮುಂದುವರಿಸಿತು. ಶುಕ್ರವಾರ 319 ಅಂಶ ಹೆಚ್ಚಾಗಿ 67,838 ಅಂಶಗಳ ದಾಖಲೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 89 ಅಂಶ ಏರಿಕೆ ಕಂಡು 20,192 ಅಂಶಗಳ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತು.

ಸೆನ್ಸೆಕ್ಸ್‌ನಲ್ಲಿ ಭಾರ್ತಿ ಏರ್‌ಟೆಲ್ ಶೇ 2.37ರಷ್ಟು ಗಳಿಕೆ ಕಂಡಿದೆ. ದೂರಸಂಪರ್ಕವು ವಲಯದ ಸೂಚ್ಯಂಕ

ಶೇ 1.67ರಷ್ಟು ಏರಿಕೆ ಕಂಡಿದೆ.

‘2007ರ ಅಕ್ಟೋಬರ್ ಬಳಿಕ ಇದೇ ಮೊದಲ ಬಾರಿಗೆ ಸೆನ್ಸೆಕ್ಸ್ ಸತತ 11ನೇ ದಿನವೂ ಏರಿಕೆ ಕಂಡಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

‘ಚೀನಾ ಮತ್ತು ಅಮೆರಿಕದ ಆರ್ಥಿಕ ಬೆಳವಣಿಗೆಯು ಮಾರುಕಟ್ಟೆ ನಿರೀಕ್ಷೆಗಿಂತಲೂ ಉತ್ತಮವಾಗಿ ಇರುವುದು ದೇಶಿ ಷೇರುಪೇಟೆಗಳಲ್ಲಿ ಗಳಿಕೆ ಓಟ ಮುಂದುವರಿಯುವಂತೆ ಮಾಡಿದೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ತಿಳಿಸಿದ್ದಾರೆ.

‘ಹಬ್ಬದ ಋತುವಿನಲ್ಲಿ ಬೇಡಿಕೆ ಹೆಚ್ಚಾಗುವ ಮತ್ತು ಹೊಸ ಒಪ್ಪಂದಗಳು ಆಗುವ ನಿರೀಕ್ಷೆಯಿಂದಾಗಿ ವಾಹನ ಮತ್ತು ಐ.ಟಿ. ಷೇರುಗಳು ಹೆಚ್ಚಿನ ಖರೀದಿ ವಹಿವಾಟಿಗೆ ಒಳಗಾದವು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.26ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 93.94 ಡಾಲರ್‌ಗೆ ತಲುಪಿತು.

‘ಸದ್ಯಕ್ಕೆ ಏಕಕಂತಿನ ಹೂಡಿಕೆ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕಕಂತಿನಲ್ಲಿ ಹೂಡಿಕೆ ಮಾಡುವುದು ಸದ್ಯದ ಮಟ್ಟಿಗೆ ಅಪಾಯಕರ. ಹೆಚ್ಚಿನ ಕುಸಿತದಿಂದ ರಕ್ಷಣೆ ಪಡೆಯಲು ವ್ಯವಸ್ಥಿತ ವರ್ಗಾವಣೆ ಯೋಜನೆಗಳ (ಎಸ್‌ಟಿಪಿ) ಕಡೆಗೆ ಹೂಡಿಕೆದಾರರು ಗಮನ ಹರಿಸಬಹುದು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಮಾರುಕಟ್ಟೆ ಮೌಲ್ಯವು ಒಟ್ಟಾರೆಯಾಗಿ ಗರಿಷ್ಠ ಮಟ್ಟದಲ್ಲಿ ಇದ್ದರೂ ಫಾರ್ಮಾ, ಸಿಮೆಂಟ್ ಮತ್ತು ಬ್ಯಾಂಕಿಂಗ್ ವಲಯಗಳ ಷೇರುಗಳು ನೈಜ ಮೌಲ್ಯ ಹೊಂದಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮೌಲ್ಯವು ಆಕರ್ಷಕವಾಗಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಿಫ್ಟಿಯು 20,200ರ ಸನಿಹ ಬಂದಿರುವುದರಿಂದ ಹೊಸ ಹೂಡಿಕೆದಾರರು ದುಬಾರಿಯಲ್ಲದ ಷೇರುಗಳನ್ನು ಖರೀದಿಸಲು ಗಮನ ಹರಿಸುವುದು ಒಳಿತು. ಶುದ್ಧ ಇಂಧನ ಮತ್ತು ವಿದ್ಯುತ್ ಚಾಲಿತ ವಾಹನ ವಲಯದಲ್ಲಿ ಹೂಡಿಕೆ ಮಾಡಬಹುದು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ತಿಳಿಸಿದ್ದಾರೆ.

ಭಾರತದಲ್ಲಿನ ಸ್ಥಿತಿ • ಅಮೆರಿಕದ ಯುಎಸ್‌ಸಿಐಆರ್‌ಎಫ್ ಹೇಳಿಕೆ

ಧಾರ್ಮಿಕ ಹಕ್ಕು ಉಲ್ಲಂಘನೆ: 20ಕ್ಕೆ ವಿಚಾರಣೆ

ವಾಷಿಂಗ್ಟನ್ (ಪಿಟಿಐ): ‘ಭಾರತದಲ್ಲಿ ಧಾರ್ಮಿಕ ಹಕ್ಕು ಸ್ವಾತಂತ್ರ್ಯ ಉಲ್ಲಂಘನೆ ಕುರಿತಂತೆ ಸೆಪ್ಟೆಂಬರ್ 20ರಂದು ವಿಚಾರಣೆ ನಡೆಸಲಾಗುವುದು’ ಎಂದು ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್‌ಸಿಐಆರ್‌ಎಫ್) ಪ್ರಕಟಿಸಿದೆ.

ಧಾರ್ಮಿಕ ಸ್ವಾತಂತ್ರ್ಯ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಭಾರತದ ಸರ್ಕಾರದ ಜೊತೆಗೂಡಿ ಅಮೆರಿಕವು ಹೇಗೆ ಕಾರ್ಯನಿರ್ವಹಿಸಬಹುದು ಎಂಬುದನ್ನು ಕುರಿತು ವಿಚಾರಣೆ ನಡೆಯಲಿದೆ ಎಂದು ತಿಳಿಸಿದೆ.

ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದನ್ನು ಈ ಹಿಂದೆ ಭಾರತ ತಳ್ಳಿಹಾಕಿತ್ತು. ಮೇ 2ರಂದು ನೀಡಿದ್ದ ಹೇಳಿಕೆಯಲ್ಲಿ ‘ಇದು ಪಕ್ಷಪಾತತನದ ಹಾಗೂ ಉದ್ದೇಶಪೂರ್ವಕವಾದ

ಹೇಳಿಕೆಯಾಗಿದೆ’ ಎಂದು ಭಾರತ ಪ್ರತಿಕ್ರಿಯಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಜೋ ಬೈಡನ್ ಅವರು ಕಳೆದ ಜೂನ್ ತಿಂಗಳಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಇತ್ತೀಚೆಗೆ ಜಿ20 ಶೃಂಗಸಭೆಯಲ್ಲೂ ಭೇಟಿಯಾಗಿದ್ದರು. ಅದರ ಹಿಂದೆಯೇ ಈ ತೀರ್ಮಾನ ಹೊರಬಿದ್ದಿರುವುದು ಗಮನಾರ್ಹ.

ಅಲ್ಪಸಂಖ್ಯಾತರ ವಿಷಯಗಳಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಕಾರ್ಯ ಕಲಾಪ ವರದಿಗಾರ ಫೆರ್ನಾಂಡ್ ಡೆ ವೆರೆನ್ನಾಸ್, ಅಮೆರಿಕ ಸಂಸತ್ತಿನ ಕಾನೂನು ಗ್ರಂಥಾಲಯದ ವಿದೇಶ ಕಾಯ್ದೆಗಳ ಪರಿಣತ ತಾರೀಕ್ ಅಹ್ಮದ್, ಹ್ಯೂಮನ್ ರೈಟ್ಸ್ ವಾಚ್ ಸಂಘಟನೆಯ ವಾಷಿಂಗ್ಟನ್‌ನ ನಿರ್ದೇಶಕ ಸಾರಾ ಯಾಗಿರ್, ಹಿಂದೂಸ್ ಫಾರ್ ಹ್ಯೂಮನ್ ರೈಟ್ಸ್ ಸಂಘಟನೆಯ ಕಾರ್ಯ ನಿರ್ವಾಹಕ ನಿರ್ದೇಶಕಿ ಸುನಿತಾ ವಿಶ್ವನಾಥ್, ಜಾರ್ಜ್‌ಟೌನ್ ಯುನಿವರ್ಸಿಟಿಯ ಪ್ರೊ. ಹಮದ್ ಬಿನ್ ಖಾಲಿಫಾ ಅಲ್ ಥಾನಿ ಅವರನ್ನು ಆಹ್ವಾನಿಸಲಾಗಿದೆ.

‘ಕಳೆದ ಒಂದು ದಶಕದಲ್ಲಿ ಭಾರತ ಸರ್ಕಾರವು ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ತಾರತಮ್ಯವಾದ ನೀತಿಯನ್ನು ರೂಪಿಸಿ, ಜಾರಿಗೊಳಿಸಿದೆ. ಇದರಲ್ಲಿ ಮತಾಂತರ ತಡೆ ಕಾಯ್ದೆ, ಗೋವು ಹತ್ಯೆ ನಿಯಂತ್ರಣ ಕಾಯ್ದೆ, ಧರ್ಮದ ಆಧಾರದಲ್ಲಿ ಪೌರತ್ವ ನೀಡುವುದು, ನಾಗರಿಕ ಸಂಘಟನೆಗಳು ವಿದೇಶಿ ದೇಣಿಗೆ ಪಡೆಯಲು ಕಡಿವಾಣ ಸೇರಿವೆ’ ಎಂದು ಯುಎಸ್‌ಸಿಐಆರ್‌ಎಫ್ ತಿಳಿಸಿದೆ.

ಇತ್ತೀಚಿನ ದಿನಗಳಲ್ಲಿ ಹರಿಯಾಣದಲ್ಲಿ ಹಿಂದೂ-ಮುಸ್ಲಿಂರ ನಡುವೆ ಸಂಘರ್ಷ ನಡೆದಿದೆ. ಮಣಿಪುರದಲ್ಲಿ ಕ್ರೈಸ್ತ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ದಾಳಿ ನಡೆದಿವೆ. ಈ ಎಲ್ಲವು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ ದೌರ್ಜನ್ಯವನ್ನು ತಡೆಯಲು ಹೊಸ ಕಾರ್ಯತಂತ್ರ ಅಗತ್ಯವಾಗಿದೆ ಎಂಬುದನ್ನು ಪುಷ್ಟಿಕರಿಸಲಿದೆ ಎಂದು ಯುಎಸ್‌ಸಿಐಆರ್‌ಎಫ್ ಪ್ರತಿಪಾದಿಸಿದೆ.

ಭಾರತದಲ್ಲಿ ವ್ಯವಸ್ಥಿತವಾಗಿ, ನಿರಂತರವಾಗಿ ಮತ್ತು ತೀವ್ರ ಪ್ರಮಾಣದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತಿದೆ. ಇದು, ವಿಶೇಷವಾಗಿ ಗಮನಿಸಬೇಕಾದ ದೇಶವಾಗಿದೆ ಎಂದು ಯುಎಸ್‌ಸಿಐಆರ್ ಎಫ್ 2020ರಿಂದಲೂ ಶಿಫಾರಸು ಮಾಡುತ್ತಿದೆ.

ಬಾಹ್ಯಾಕಾಶ ನಿಲ್ದಾಣದತ್ತ ರಷ್ಯಾದ ಇಬ್ಬರು, ಅಮೆರಿಕದ ಒಬ್ಬ ಗಗನಯಾತ್ರಿ

ಮಾಸ್ಕೊ (ಎ.ಪಿ): ರಷ್ಯಾದ ಇಬ್ಬರು ಮತ್ತು ಅಮೆರಿಕದ ಒಬ್ಬರು ಗಗನಯಾತ್ರಿಗಳು ಶುಕ್ರವಾರ ರಷ್ಯಾದ ಬಾಹ್ಯಾಕಾಶ ನೌಕೆಯಲ್ಲಿ ಕಜಕಸ್ತಾನದ ಬೈಕೊನುರ್ ಕಾಸ್ಮೊಡ್ರೊಮ್‌ನಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದತ್ತ ಪ್ರಯಾಣ ಆರಂಭಿಸಿದರು.

ನಾಸಾದ ಗಗನಯಾತ್ರಿ ಲೊರಲ್ ಒ‘ಹರಾ ಮತ್ತು ರಷ್ಯಾ ಬಾಹ್ಯಾಕಾಶ ಸಂಸ್ಥೆ ರೊಸ್ಕೊಮೊಸ್‌ನ ಗಗನಯಾತ್ರಿಗಳಾದ ಒಲೆಗ್ ಕೊನೊನೆಂಕೊ ಮತ್ತು ನಿಕೊಲಾಯ್ ಚುಬ್ ಅವರನ್ನು ಹೊತ್ತ ಸೋಯುಜ್ ಎಂಎಸ್-24 ಗಗನನೌಕೆ ನಭದತ್ತ ಚಿಮ್ಮಿತು.

ಇವರಲ್ಲಿ ಒ‘ಹರಾ ಅವರು ಆರು ತಿಂಗಳು ಹಾಗೂ ಉಳಿದ ಇಬ್ಬರು ಗಗನಯಾತ್ರಿಗಳು ಒಂದು ವರ್ಷ ಕಾಲ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿಯಲಿದ್ದಾರೆ. ಒ‘ಹರಾ ಮತ್ತು ಚುಬ್ ಇದೇ ಮೊದಲ ಬಾರಿಗೆ ಗಗನಯಾತ್ರೆ ಕೈಗೊಂಡಿದ್ದಾರೆ. ಉಳಿದಂತೆ ಕೊನೊನೆಂಕೊ ಅವರು ಅನುಭವಿಯಾಗಿದ್ದು, ಈಗಾಗಲೇ ನಾಲ್ಕು ಬಾರಿ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ದರು.

ನಾಸಾದ ಗಗನಯಾತ್ರಿ ಲೊರಲ್ ಒ‘ಹರಾ ಮತ್ತು ರಷ್ಯಾದ ಗಗನಯಾತ್ರಿಗಳಾದ ಒಲೆಗ್ ಕೊನೊನೆಂಕೊ ಮತ್ತು ನಿಕೊಲಾಯ್ ಚುಬ್ –ಎಎಫ್‌ಪಿ ಚಿತ್ರ

ಲಿಬಿಯಾ: 11 ಸಾವಿರ ದಾಟಿದ ಮೃತರ ಸಂಖ್ಯೆ

ಡೆರ್ನಾ,ಲಿಬಿಯಾ (ಎ.ಪಿ): ‘ಡೇನಿಯಲ್’ ಚಂಡಮಾರುತ ಹಾಗೂ ಆ ನಂತರ ಸುರಿದಿದ್ದ ಧಾರಾಕಾರ ಮಳೆ, ಪ್ರವಾಹದ ಪರಿಣಾಮ ಲಿಬಿಯಾದಲ್ಲಿ ಮೃತಪಟ್ಟವರ ಸಂಖ್ಯೆ 11 ಸಾವಿರ ದಾಟಿದೆ. 10 ಸಾವಿರ ಜನರು ನಾಪತ್ತೆಯಾಗಿದ್ದಾರೆ.

ಡೆರ್ನಾ ಸೇರಿದಂತೆ ತೀವ್ರ ಬಾಧಿತವಾಗಿರುವ ಪ್ರದೇಶಗಳಲ್ಲಿ ಲಿಬಿಯಾ ಆಡಳಿತವು ಶೋಧ ಕಾರ್ಯವನ್ನು ಚುರುಕುಗೊಳಿಸಿದೆ. ಸಾಂಕ್ರಾಮಿಕ ರೋಗ ಹರಡುವ ಭೀತಿ ಇದ್ದು, ಸಾವಿನ ಸಂಖ್ಯೆ ಏರಬಹುದು ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರವಾಹದಿಂದಾಗಿ ಎರಡು ಜಲಾಶಯಗಳು ಹಾನಿಗೊಂಡಿದೆ. ಹೆಚ್ಚುವರಿ ನೀರು ಏಕಾಏಕಿ ಡೆರ್ನಾ ನಗರದತ್ತ ಹರಿದಿದ್ದರಿಂದಾಗಿ ಹಾನಿ ಪ್ರಮಾಣ ಏರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

ನ್ಯಾಯಮಂಡಳಿಗೆ ಅಧಿಸೂಚನೆ

ಒಂದನೇ ಪುಟದಿಂದ

ರಾಜ್ಯಗಳ ಮಟ್ಟದಲ್ಲಿ ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿ ರಚನೆಯಿಂದ, ವ್ಯಾಜ್ಯಗಳ ತ್ವರಿತ ವಿಲೇವಾರಿಗೆ ಅವಕಾಶವಾಗುತ್ತದೆ. ಆ ಮೂಲಕ ಉದ್ದಿಮೆಗಳಿಗೆ, ವರ್ತಕರಿಗೆ ಸಹಾಯ ಆಗುತ್ತದೆ. ಅಧಿಸೂಚನೆಯ ಪ್ರಕಾರ ಕರ್ನಾಟಕದಲ್ಲಿ ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿಯ ಎರಡು ಪೀಠಗಳು ರಚನೆಯಾಗಲಿವೆ.

ಇಂತಹ ನ್ಯಾಯಮಂಡಳಿ ಇಲ್ಲದಿದ್ದ ಸಂದರ್ಭದಲ್ಲಿ ಉದ್ದಿಮೆಗಳು, ವರ್ತಕರು ಹೈಕೋರ್ಟ್ ಮೊರೆ ಹೋಗಬೇಕಿತ್ತು. ಅಲ್ಲಿ ವ್ಯಾಜ್ಯ ಇತ್ಯರ್ಥವಾಗುವುದಕ್ಕೆ ದೀರ್ಘಕಾಲ ಬೇಕಾಗುತ್ತಿತ್ತು ಎಂದು ಭಾರತೀಯ ಕೈಗಾರಿಕಾ ಮಹಾಸಂಘದ (ಸಿಐಐ) ಮಹಾನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	620
ಅಡಿಕೆ	
ಕುಮಟಾ	
ಚಿಪ್ಪು	32509-34509
ಕೋಕ	20169-33019
ಹಳೆಚಾಲಿ	40009-40829
ಹೊಸಚಾಲಿ	37869-40509
ಹೊಸನಗರ	
ಚಾಲಿ	36599-37639
ಕೆಂಪುಗೋಟು	28899-36521
ರಾಶಿ	46699-49699
ಸಿದ್ದಾಪುರ	
ಬಿಳಿಗೋಟು	32109-35409
ಕೋಕ	29019-35049
ಚಾಲಿ	37609-40899
ಕೆಂಪುಗೋಟು	316889-34189
ರಾಶಿ	43209-49009
ತಟ್ಟಿಬೆಟ್ಟೆ	40709-48699
ಶಿರಸಿ	
ಬೆಟ್ಟೆ	40801-44000
ಬಿಳಿಗೋಟು	25696-36119
ಚಾಲಿ	36010-41598
ರಾಶಿ	45508-50169
ಕೆಂಪುಗೋಟು	21679-35521
ತೀರ್ಥಹಳ್ಳಿ	
ಬೆಟ್ಟೆ	49500-50500
ಗೊರಬಲು	36500-36500
ರಾಶಿ	47000-48800
ಸರಕು	64000-72500
ಯಲ್ಲಾಪುರ	
ಬಿಳಿಗೋಟು	24899-35269
ಕೋಕ	22612-32869
ಚಾಲಿ	37389-41411
ಕೆಂಪುಗೋಟು	28011-34627
ರಾಶಿ	47689-54089
ತಟ್ಟಿಬೆಟ್ಟೆ	38109-45009
ಆಪಿ	57610-66899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12400	12500	-	154 ಸೆಂಟ್ಸ್
ಎಸಿ	6860	6200	-	
ಆರ್‌ಪಿ	10100	10000	10000	ಲಂಡನ್
ಆರ್‌ಸಿ	5830	238	5900	2495 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಟಿಕ್‌ಟಾಕ್ ಆ್ಯಪ್‌ಗೆ ₹ 3 ಸಾವಿರ ಕೋಟಿ ದಂಡ

ಲಂಡನ್ (ಎ.ಪಿ): ಯೂರೋಪ್‌ನ ಕಠಿಣ ದತ್ತಾಂಶ ಖಾಸಗೀತನ ನಿಯಮದ ಅನುಸಾರ ಟಿಕ್ ಟಾಕ್‌ಗೆ ಮೊಬೈಲ್ ಆ್ಯಪ್ ಸಂಸ್ಥೆಗೆ ಐರ್ಲೆಂಡ್‌ನ ತನಿಖಾ ಆಯೋಗವು, ಸುಮಾರು ₹3000 ಕೋಟಿ (368 ಮಿಲಿಯನ್ ಡಾಲರ್) ದಂಡ ವಿಧಿಸಿದೆ.

ಐರ್ಲೆಂಡ್‌ನ ದತ್ತಾಂಶ ರಕ್ಷಣಾ ಆಯೋಗವು, ‘2020 ದ್ವಿತೀಯಾರ್ಧದಲ್ಲಿ ಆಗಿರುವ ನಿಯಮ ಉಲ್ಲಂಘನೆಗಾಗಿ ಈ ದಂಡ ವಿಧಿಸಲಾಗಿದೆ’ ಎಂದು ತಿಳಿಸಿದೆ.

ನೊಬೆಲ್ ಪ್ರಶಸ್ತಿ ಮೊತ್ತ ₹ 8.18 ಕೋಟಿ

ಸ್ಟಾಕ್‌ಹೋಂ (ಎ.ಪಿ): ನೊಬೆಲ್ ಪ್ರತಿಷ್ಠಾನವು ಈ ವರ್ಷದಿಂದ ಅನ್ವಯವಾಗುವಂತೆ ನೊಬೆಲ್ ಪ್ರಶಸ್ತಿಯ ಬಹುಮಾನದ ಮೊತ್ತವನ್ನು ₹ 8.18 ಕೋಟಿಗೆ (11 ಮಿಲಿಯನ್ ಕ್ರೊನಾರ್) ಹೆಚ್ಚಿಸಿದೆ.

ಪ್ರತಿಷ್ಠಾನವು ಈಗ ಆರ್ಥಿಕವಾಗಿ ಸಬಲವಾಗಿರುವ ಕಾರಣ ಬಹುಮಾನ ಮೊತ್ತ ಏರಿಸಲು ನಿರ್ಧರಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ. 1901ರಲ್ಲಿ ನೊಬೆಲ್ ಪ್ರಶಸ್ತಿ ಸ್ಥಾಪಿಸಿದಾಗ, ಬಹುಮಾನದ ಮೊತ್ತ ₹ 11.22 ಲಕ್ಷ (150,782 ಕ್ರೊನಾರ್) ಆಗಿತ್ತು.

₹ 9.14 ಕೋಟಿಗೆ ರಾಜಕುಮಾರಿ ಸ್ವೆಟರ್ ಹರಾಜು

ಲಂಡನ್ (ಎ.ಪಿ): ರಾಜಕುಮಾರಿ ಡಯಾನಾ ಅವರು ಬಳಸುತ್ತಿದ್ದ, ಕುರಿಯ ಉಣ್ಣೆಯನ್ನು ಬಳಸಿ ತಯಾರಿಸಲಾಗಿದ್ದ ಕೆಂಪು ಬಣ್ಣದ ಸ್ವೆಟರ್ ಹರಾಜಿನಲ್ಲಿ ದಾಖಲೆಯ ₹ 9.14 ಕೋಟಿಗೆ (1.1 ಮಿಲಿಯನ್ ಡಾಲರ್) ಮಾರಾಟವಾಗಿದೆ. ಆನ್‌ಲೈನ್ ಮೂಲಕ ನಡೆದ ಸೂತ್‌ಬೈ ಫ್ಯಾಷನ್ ಐಕನ್ ಮಾರಾಟದಲ್ಲಿ ಅಪರಿಚಿತ ಬಿಡ್‌ದಾರರು ಸ್ವೆಟರ್ ಖರೀದಿಸಿದ್ದಾರೆ.

ಈಸ್ಟರ್ ದಾಳಿ ಕೃತ್ಯ: ತನಿಖೆಗೆ ಸಮಿತಿ

ಕೊಲಂಬೊ (ಪಿಟಿಐ): 2019ರಲ್ಲಿ ಈಸ್ಟರ್ ದಿನ ವಿವಿಧೆಡೆ ನಡೆದಿದ್ದ ಭಯೋತ್ಪಾದಕರ ದಾಳಿ ಕೃತ್ಯ ಕುರಿತು ಬ್ರಿಟಿಷ್‌ನ ಚಾನಲ್ 4 ಮಾಡಿದ್ದ ಆರೋಪಗಳ ತನಿಖೆಗೆ ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ನ್ಯಾಯಾಂಗ ಸಮಿತಿಯನ್ನು ರಚಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕೂಡಲೇ ಬೇಕಾಗಿದ್ದಾರೆ: 7th 8th 10th ಪಿಯುಸಿ, ಐಟಿಐ, ಡಿಪ್ಲೋಮ ಯಾವುದೇ ಪದವಿ ಪಾಸ್/ಫೇಲ್ ಹುದ್ದೆಗೆ ಕೂಡಲೇ ನೇರನೇಮಕಾತಿಗಾಗಿ ಕರೆಮಾಡಿ. 8884997575, 8884553030

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಬೇಕಾಗಿದ್ದಾರೆ: ರಾಜ್ಯಾದ್ಯಂತ ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–47,000/–. PUC Degree. 8861041526, 9945791526

ಛಾಬ್ರಿಯಾ & ಸನ್ಸ್ ಕಂಪನಿಗೆ ಡೆಲಿವರಿ ಮತ್ತು ಆಫೀಸ್ ಬಾಯ್ಸ್ ಬೇಕಾಗಿದ್ದಾರೆ.ಸ್ಯಾನಿಟರಿ, ಟೈಲ್ಸ್ ಶೋರೂಂಗಾಗಿ. ಕಮರ್ಷಿಯಲ್ ಸ್ಟ್ರೀಟ್ ಹತ್ತಿರ. ESI& PF. ಕರೆ: 9164887571

Drivers

ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ 'ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ' ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗೂ ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುವುದು ಆಸಕ್ತಿಯುಳ್ಳವರು ಮಿಸ್ ಕಾಲ್ ನೀಡಿ 08068960971 / 8496991633

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Residential/ Commercial

Vijayanagar

SALE HOUSE 25 X 40 G 2 floor HVR Layout Near Prashantnagar Vasthu, Rs.1.70 Cr Sterling 9483061784

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967

ಪ್ರವಾಸ

Travel

ದಸರಾ ವಿಶೇಷ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ: 7ದಿನಗಳ ಸಿಂಗಾಪುರ್ ಮತ್ತು ಮಲೇಶಿಯಾ. 8 ದಿನಗಳ ಮುಕ್ತಿನಾಥ ಪ್ರವಾಸ ನೇಪಾಳ. 5ದಿನಗಳ ಕಾಶ್ಮೀರ್. 9 ದಿನಗಳ ವಿಯೆಟ್ನಾಂ,ಕಾಂಬೋಡಿಯ. 6ದಿನಗಳ ದುಬೈ,ಅಬುದಾಬಿ,ಶಾರ್ಜಾ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9880079588

19/10/23 ಗುಜರಾತ್ ಟೂರ್ ವಿಮಾನದಲ್ಲಿ 34000/ ಮತ್ತು 3/12/23 ರಿಂದ ನೇಪಾಳ ಕಾಶಿ ಪ್ರಯಾಗ್ 26000/. ಶ್ರೀ ರಾಮ್ ಟೂರ್. 9108933383, 9606600383.

7 ದಿನಗಳ ಶ್ರೀಲಂಕಾ, 6 ದಿನಗಳ ಬಾಲಿ, 10 ದಿನಗಳ ಕಾಂಬೋಡಿಯಾ & ವಿಯಟ್ನಾಂ, 7/11 ದಿನಗಳ ಸಿಂಗಪುರ, ಮಲೇಷ್ಯಾ & ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ಸ್ :9844037295

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ವೈಯಕ್ತಿಕ

Lost

ದಾಖಲಾತಿಗಳು ಕಳೆದಿದೆ

ಲಲಿತಾ ಕೋಂ. ವೆಂಕಟರಾಮು ಎಂಬ ನಾನು, ಚಿನ್ನತಿಮ್ಮನಪಾಳ್ಯ, ಗೊಟ್ಟಿಗೆರೆ ದಾಖಲೆ, ಬಿದನಗೆರೆ ಅಂಚೆ, ಹುತ್ರಿದುರ್ಗ, ಕುಣಿಗಲ್ ತಾಲ್ಲುಕು, ತುಮಕೂರು ಜಿಲ್ಲೆ ನಿವಾಸಿಯಾಗಿದ್ದು, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಸಾಣೆಗುರುವನಹಳ್ಳಿ ದಾಖಲೆ, ಕಾಮಾಕ್ಷಿಪಾಳ್ಯದ ಸರ್ವೆ ನಂ. 65/2 ರಲ್ಲಿರುವ, ಉ-ದ 40' ಪೂ-ಪ 15' ವಿಸ್ತೀರ್ಣವುಳ್ಳ (ಪೂರ್ವಕ್ಕೆ-ಚೇರಿಯವರ ಸ್ವತ್ತು, ಪಶ್ಚಿಮಕ್ಕೆ-ಇತರರ ಸ್ವತ್ತು, ಉತ್ತರಕ್ಕೆ-ಗೋಪಾಲಕೃಷ್ಣೆಗೌಡರ ಸ್ವತ್ತು, ದಕ್ಷಿಣಕ್ಕೆ-ರಸ್ತೆ) ನಿವೇಶನಕ್ಕೆ ಸಂಬಂಧಿತ, ಕೆ.ಸಿ. ಗಂಗಾಧರಯ್ಯ ಇವರಿಂದ ನನ್ನ ತಾಯಿ ಗಂಗಮ್ಮ ನವರ ಹೆಸರಿಗೆ ದಿನಾಂಕ 27.08.1986 ರಂದು ಹೊರಡಿಸಲಾಗಿರುವ, ಡಾಕ್ಯುಮೆಂಟ್ ನಂ. 3683-84 ಹೊಂದಿರುವ ಜಿಪಿಎ ಪತ್ರ ಕಳೆದಿರುತ್ತದೆ. ಆನ್‌ಲೈನ್ ಮುಖಾಂತರ ಪೊಲೀಸ್ ದೂರು ದಾಖಲಿಸಲಾಗಿದ್ದು ಲಾಸ್ಟ್ ರಿಪೋರ್ಟ್ ನಂ. 713087 ಆಗಿರುತ್ತದೆ. ಯಾರಿಗಾದರೂ ಸದರಿ ಜಿಪಿಎ ಪತ್ರ ಸಿಕ್ಕಿದ್ದಲ್ಲಿ, ದಯವಿಟ್ಟು 9945966721, 7022104613 ಸಂಖ್ಯೆಗಳಿಗೆ ಸಂಪರ್ಕಿಸಿರಿ ಅಥವಾ ನಿಮ್ಮ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕೆಂದು ವಿನಂತಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
JOB
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ರಿಕೆಟ್: ಮಿಂಚಿದ ಶಕೀಬ್, ಮುಸ್ತಫಿಜುರ್; ನೆರವಿಗೆ ಬಾರದ ಶುಭಮನ್ ಗಿಲ್ ಶತಕ

ಬಾಂಗ್ಲಾದೇಶಕ್ಕೆ ಮಣಿದ ಭಾರತ

ಕೊಲಂಬೊ (ಪಿಟಿಐ): ಶುಭಮನ್ ಗಿಲ್ ಅವರ ಸೊಗಸಾದ ಶತಕದ ಹೊರತಾಗಿಯೂ ಭಾರತ ತಂಡ, ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಬಾಂಗ್ಲಾದೇಶಕ್ಕೆ ಶರಣಾಯಿತು.

ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬಾಂಗ್ಲಾ ಆರು ರನ್‌ಗಳಿಂದ ಗೆದ್ದು ಬೀಗಿತು. ಅಂತಿಮ ಪಂದ್ಯ ಜಯಿಸಿ ಭಾನುವಾರದ ಫೈನಲ್‌ಗೆ ಮುನ್ನ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕೆಂಬ ರೋಹಿತ್ ಶರ್ಮಾ ಬಳಗದ ಗುರಿ ಈಡೇರಲಿಲ್ಲ.

ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ ತಂಡ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 ರನ್ ಕಲೆಹಾಕಿತು. ನಾಯಕ ಶಕೀಬ್ ಅಲ್ ಹಸನ್ (80 ರನ್; 85 ಎ., 4X6, 6X3), ತೌಹೀದ್ ಹೃದಯ್ (54 ರನ್; 81 ಎ., 4X5, 6X2) ಮತ್ತು ನಸುಮ್ ಅಹ್ಮದ್ (44 ರನ್; 45 ಎ.) ತಂಡದ ನೆರವಿಗೆ ನಿಂತರು.

ಸಾಧಾರಣ ಗುರಿ ಬೆನ್ನಟ್ಟಿದ ಭಾರತ, 49.5 ಓವರ್‌ಗಳಲ್ಲಿ 259 ರನ್‌ಗಳಿಗೆ ಅಲೌಟಾಯಿತು. ಗಿಲ್ (121 ರನ್; 133 ಎ., 4X8, 6X5) ಅವರ ಶತಕ ಮತ್ತು ಕೊನೆಯಲ್ಲಿ ಅಕ್ಷರ್ ಪಟೇಲ್ (42 ರನ್; 34 ಎ.) ಅವರು ತೋರಿದ ಹೋರಾಟ ಸಾಕಾಗಲಿಲ್ಲ.

ರೋಹಿತ್ (0) ಮತ್ತು ತಿಲಕ್ ವರ್ಮಾ (5) ಅವರನ್ನು ಬೇಗನೇ ಕಳೆದುಕೊಂಡ ಭಾರತ ಆರಂಭದಲ್ಲೇ ಆಘಾತ ಅನುಭವಿಸಿತು. ಕೆ.ಎಲ್.ರಾಹುಲ್ (19 ರನ್, 39 ಎ.) ಹಾಗೂ ಇಶಾನ್ ಕಿಶನ್ (5) ಕೂಡಾ ವಿಫಲರಾದರು.

ಒಂದು ಬದಿಯಲ್ಲಿ ವಿಕೆಟ್ ಬೀಳುತ್ತಿದ್ದರೂ, ಗಿಲ್ ಲೀಲಾಜಾಲವಾಗಿ ರನ್ ಗಳಿಸುತ್ತಿದ್ದರು. ಸೂರ್ಯಕುಮಾರ್ ಜತೆ ಐದನೇ ವಿಕೆಟ್‌ಗೆ 45 ರನ್ ಸೇರಿಸಿದರು. ಸೂರ್ಯಕುಮಾರ್ ವಿಕೆಟ್ ಪಡೆದ ಶಕೀಬ್ ಈ ಜತೆಯಾಟ ಮುರಿದರು. ರವೀಂದ್ರ ಜಡೇಜ (7) ಕೂಡಾ ಬೇಗನೇ ಔಟಾದರು.

44ನೇ ಓವರ್‌ನಲ್ಲಿ ಗಿಲ್ ಅವರನ್ನು ಪೆವಿಲಿಯನ್‌ಗಟ್ಟಿದ ಮೆಹದಿ ಹಸನ್, ಬಾಂಗ್ಲಾಕ್ಕೆ ಮೇಲುಗೈ ತಂದಿತ್ತರು. ಗಿಲ್ ಅವರಿಗೆ ಇದು ಏಕದಿನ ಕ್ರಿಕೆಟ್‌ನಲ್ಲಿ 5ನೇ ಶತಕ. ಅಕ್ಷರ್ ಮತ್ತು ಶಾರ್ದೂಲ್ (11) ಛಲದ ಆಟವಾಡಿದರೂ ಭಾರತಕ್ಕೆ ಗೆಲುವು ಒಲಿಯಲಿಲ್ಲ.

ಇದಕ್ಕೂ ಮುನ್ನ ಟಾಸ್ ಗೆದ್ದ ರೋಹಿತ್, ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಶಾರ್ದೂಲ್ ಠಾಕೂರ್ (65ಕ್ಕೆ 3) ಮತ್ತು ಮೊಹಮ್ಮದ್ ಶಮಿ (32ಕ್ಕೆ 2) ಅವರ ಆರಂಭಿಕ ದಾಳಿಗೆ ನಲುಗಿದ ಬಾಂಗ್ಲಾ 59 ರನ್ ಗಳಿಸುವಷ್ಟರಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಜತೆಯಾದ ಶಕೀಬ್ ಮತ್ತು ತೌಹೀದ್ ಐದನೇ ವಿಕೆಟ್‌ಗೆ 101 ರನ್ ಸೇರಿಸಿ ತಂಡವನ್ನು ಕುಸಿತದಿಂದ ಪಾರು ಮಾಡಿದರು. ಕೊನೆಯಲ್ಲಿ ನಸುಮ್ ಅಹ್ಮದ್ ಜವಾಬ್ದಾರಿಯುತ ಆಟವಾಡಿ ಮೊತ್ತವನ್ನು 250ರ ಗಡಿ ದಾಟಿಸಲು ನೆರವಾದರು.

ಈಗಾಗಲೇ ಫೈನಲ್ ಪ್ರವೇಶಿಸಿದ್ದ ಭಾರತ ತಂಡ ಈ ಪಂದ್ಯದಲ್ಲಿ ಐದು ಬದಲಾವಣೆಗಳೊಂದಿಗೆ ಕಣಕ್ಕಿಳಿದಿತ್ತು. ವಿರಾಟ್ ಕೊಹ್ಲಿ, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ಕುಲದೀಪ್ ಯಾದವ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ತಿಲಕ್ ವರ್ಮಾ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.

ಫೈನಲ್‌ನಲ್ಲಿ ಭಾರತ-ಲಂಕಾ ಪೈಪೋಟಿ: ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ಮತ್ತು ಶ್ರೀಲಂಕಾ ತಂಡಗಳು ಪೈಪೋಟಿ ನಡೆಸಲಿವೆ.

ಗುರುವಾರ ನಡೆದಿದ್ದ ಪಂದ್ಯದಲ್ಲಿ ಲಂಕಾ ತಂಡ ಪಾಕಿಸ್ತಾನ ವಿರುದ್ಧ 2 ವಿಕೆಟ್‌ಗಳ ರೋಚಕ ಜಯ ಸಾಧಿಸಿತ್ತು. ಮಳೆಯಿಂದ ತೊಂದರೆಗೊಳಗಾದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಪಾಕ್ ನಿಗದಿತ 42 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 252 ರನ್ ಗಳಿಸಿತ್ತು. ಡಕ್ವರ್ಥ್ ಲೂಯಿಸ್ ನಿಯಮದಂತೆ ಆತಿಥೇಯರ ಗೆಲುವಿಗೆ 42 ಓವರ್‌ಗಳಲ್ಲಿ 252 ರನ್‌ಗಳ ಗುರಿ ನಿಗದಿಪಡಿಸಲಾಗಿತ್ತು. ಲಂಕಾ ತಂಡ ಎಂಟು ವಿಕೆಟ್ ಕಳೆದುಕೊಂಡು ಅಂತಿಮ ಎಸೆತದಲ್ಲಿ ಗೆಲುವು ಒಲಿಸಿಕೊಂಡಿತ್ತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 (ಶಕೀಬ್ ಅಲ್ ಹಸನ್ 80, ತೌಹೀದ್ ಹೃದಯ್ 54, ನಸುಮ್ ಅಹ್ಮದ್ 44, ಮೆಹದಿ ಹಸನ್ ಔಟಾಗದೆ 29, ತಂಜೀಮ್ ಹಸನ್ ಔಟಾಗದೆ 14, ಶಾರ್ದೂಲ್ ಠಾಕೂರ್ 65ಕ್ಕೆ 3, ಮೊಹಮ್ಮದ್ ಶಮಿ 32ಕ್ಕೆ 2, ಪ್ರಸಿದ್ಧ ಕೃಷ್ಣ 43ಕ್ಕೆ 1, ರವೀಂದ್ರ ಜಡೇಜ 53ಕ್ಕೆ 1).
ಭಾರತ: 49.5 ಓವರ್‌ಗಳಲ್ಲಿ 259 (ಶುಭಮನ್ ಗಿಲ್ 121, ಸೂರ್ಯಕುಮಾರ್ ಯಾದವ್ 26, ಅಕ್ಷರ್ ಪಟೇಲ್ 42, ಮುಸ್ತಫಿಜುರ್ ರಹ್ಮಾನ್ 50ಕ್ಕೆ 3, ತಂಜೀಮ್ ಹಸನ್ 32ಕ್ಕೆ 2)
ಫಲಿತಾಂಶ: ಬಾಂಗ್ಲಾದೇಶಕ್ಕೆ 6 ರನ್ ಗೆಲುವು

ಬಾಂಗ್ಲಾದೇಶ ತಂಡದ ಶಕೀಬ್ ಅಲ್ ಹಸನ್ ಬ್ಯಾಟಿಂಗ್ –ಪಿಟಿಐ ಚಿತ್ರ

ಏಷ್ಯಾ ಕಪ್ 2023

ಜಡೇಜಗೆ 200 ವಿಕೆಟ್

ಆಲ್‌ರೌಂಡರ್ ರವೀಂದ್ರ ಜಡೇಜ (53ಕ್ಕೆ 1) ಅವರು ಈ ಪಂದ್ಯದ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ 200 ವಿಕೆಟ್ ಪಡೆದ ಸಾಧನೆ ಮಾಡಿದರು. ಮಾತ್ರವಲ್ಲ, ಏಕದಿನ ಕ್ರಿಕೆಟ್‌ನಲ್ಲಿ 200 ವಿಕೆಟ್ ಮತ್ತು 2 ಸಾವಿರಕ್ಕೂ ಅಧಿಕ ರನ್ ಗಳಿಸಿದ ಭಾರತದ ಎರಡನೇ ಆಟಗಾರ ಎನಿಸಿಕೊಂಡರು. ದಿಗ್ಗಜ ಆಟಗಾರ ಕಪಿಲ್ ದೇವ್ ಮಾತ್ರ (253 ವಿಕೆಟ್ ಮತ್ತು 3,783 ರನ್) ಈ ಸಾಧನೆ ಮಾಡಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 200 ವಿಕೆಟ್‌ಗಳ ಗಡಿ ದಾಟಿದ ಭಾರತದ ಏಳನೇ ಬೌಲರ್ ಎಂಬ ಗೌರವವನ್ನೂ ಎಡಗೈ ಸ್ಪಿನ್ನರ್ ತಮ್ಮದಾಗಿಸಿಕೊಂಡರು. ಕಪಿಲ್ ದೇವ್ ಅಲ್ಲದೆ ಅನಿಲ್ ಕುಂಬ್ಳೆ (334 ವಿಕೆಟ್), ಜಾವಗಲ್ ಶ್ರೀನಾಥ್ (315), ಅಜಿತ್ ಅಗರ್ಕರ್ (288), ಜಹೀರ್ ಖಾನ್ (269) ಮತ್ತು ಹರಭಜನ್ ಸಿಂಗ್ (265) ಈ ಸಾಧನೆ ಮಾಡಿದ್ದಾರೆ.

ಯಶಸ್ಸಿನ ಹಿಂದೆ ತ್ಯಾಗದ ಕಥೆ...

ಏಷ್ಯನ್ ಗೇಮ್ಸ್ ಚಿನ್ನದ ಗುರಿಯಲ್ಲಿ ಭಾರತ ಮಹಿಳಾ ತಂಡ

ಭಾರತ ಮಹಿಳಾ ಹಾಕಿ ತಂಡ

ನವದೆಹಲಿ (ಪಿಟಿಐ): ಭಾರತದ ಹಾಕಿ ತಂಡದ ಆಟಗಾರ್ತಿಯರ ಯಶಸ್ಸಿನ ಹಿಂದೆ ತ್ಯಾಗ ಮತ್ತು ಸ್ಫೂರ್ತಿಯ ಕಥೆಗಳಿವೆ. ಒಬ್ಬ ಆಟಗಾರ್ತಿಯ ಕುಟುಂಬ ಬರೇ ₹800 ಗಳಿಸಲು ತಿಂಗಳಿಡೀ ದುಡಿಯಬೇಕಾಗಿತ್ತು. ಹಾಲಿ ತಂಡದ ಒಬ್ಬ ಆಟಗಾರ್ತಿ ಸುಮಾರು ಹತ್ತು ವರ್ಷ ನಿರುದ್ಯೋಗಿಯಾಗಿದ್ದರು. ಮತ್ತೊರ್ವ ಆಟಗಾರ್ತಿ ಹಾಕಿ ಸ್ಟಿಕ್ ಖರೀದಿಸಲಾಗದೇ ಬಿದಿರಿನ ತುಂಡನ್ನೇ ಬಳಸಿ ರಸ್ತೆ ಬದಿ ಆಡಿ ಬೆಳೆದವರು.

ಸವಿತಾ ಪೂನಿಯಾ, ನೇಹಾ ಗೋಯಲ್ ಮತ್ತು ನಿಕಿ ಪ್ರಧಾನ್ ಅವರ ಬದುಕಿನಲ್ಲಿ ಹಾಕಿ ಆಟ ಭರವಸೆಯ ಕಿರಣಗಳನ್ನು ಮೂಡಿಸಿದೆ. ವೈಯಕ್ತಿಕ ನೋವುಗಳು ಆಟದ ಮೇಲೆ ಒಂದಿನಿತೂ ಪರಿಣಾಮ ಬೀರದಂತೆ ಈ ಆಟಗಾರ್ತಿಯರು ನೋಡಿಕೊಂಡಿದ್ದಾರೆ. ಈಗ ತಂಡದ ಯಶಸ್ಸಿಗಾಗಿ ಹಸಿದಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳಾ ತಂಡಕ್ಕೆ ಕಂಚಿನ ಪದಕ ಸ್ವಲ್ಪದರಲ್ಲೇ ಕೈತಪ್ಪಿತ್ತು. ಈಗ ಏಷ್ಯನ್ ಗೇಮ್ಸ್‌ನಲ್ಲಿ ಪದಕದ ಕನಸನ್ನು ನನಸು ಮಾಡಲು ಹೆಜ್ಜೆಯಿಟ್ಟಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯುವುದು ಅವರ ಮುಂದಿನ ಹೆಜ್ಜೆಯಾಗಿದೆ. ಇದಕ್ಕಾಗಿ ಇನ್ನಿಲ್ಲದ ಪ್ರಯತ್ನದಲ್ಲಿ ತೊಡಗಿದ್ದಾರೆ. ಮನೋಬಲ ಹೆಚ್ಚಿಸಲು ಬಾಯಿರುಚಿಗೆ ಕಡಿವಾಣ ಹಾಕಿದ್ದಾರೆ.

‘ಟೋಕಿಯೊ ಒಲಿಂಪಿಕ್ಸ್ ನಂತರ ನಮ್ಮಿಂದ ಬಹಳಷ್ಟು ನಿರೀಕ್ಷಿಸಲಾಗುತ್ತಿದೆ. ಹಾಂಗ್ ಜೌನಲ್ಲಿ ಈ ತಂಡ ಚಿನ್ನದ ಪದಕ ಗೆಲ್ಲುವ ಸಾಮರ್ಥ್ಯ ಮತ್ತು ದೈಹಿಕ ಕ್ಷಮತೆ ಹೊಂದಿದೆ’ ಎನ್ನುತ್ತಾರೆ ತಂಡದ ನಾಯಕಿ ಹಾಗೂ ಗೋಲ್‌ಕೀಪರ್ ಸವಿತಾ.

‘ನಾನು ಏಷ್ಯನ್ ಗೇಮ್ಸ್ ಮುಗಿಯುವವರೆಗೆ ಪಿಜ್ಜಾ ಅಥವಾ ಪಾನಿಪುರಿ ತಿನ್ನುವುದಿಲ್ಲ’ ಎಂದು 33 ವರ್ಷದ ಸವಿತಾ ಸುದ್ದಿಸಂಸ್ಥೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ ತಿಳಿಸಿದರು.

ಈಗ ವಿಶ್ವದ ಅತ್ಯುತ್ತಮ ಗೋಲ್‌ಕೀಪರ್‌ಗಳಲ್ಲಿ ಒಬ್ಬರಾಗಿರುವ ಸವಿತಾ, ತಮ್ಮ ಕ್ರೀಡಾಬದುಕಿನ ಆರಂಭದ ದಿನಗಳನ್ನು ಮರೆತಿಲ್ಲ. ಉದ್ಯೋಗಕ್ಕಾಗಿ ಅವರು ಒಂಬತ್ತು ವರ್ಷ ಅಲೆದಾಡಿದ್ದರು. ನಾನು 2008ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದೆ, ಮರುವರ್ಷವೇ ಏಷ್ಯಾಕಪ್‌ನಲ್ಲಿ ಬೆಳ್ಳಿಯ ಪದಕ ತಂಡಕ್ಕೆ ಬಂದಿತ್ತು. ಎಲ್ಲರೂ ನನಗೆ ಉದ್ಯೋಗ ಸಿಗುತ್ತದೆ ಎಂದು ಯೋಚಿಸಿದ್ದರು. ತಾಯಿಗೆ ಅನಾರೋಗ್ಯವಿದ್ದರೂ ನನ್ನನ್ನು ಆಡಲು ಕಳಿಸುತ್ತಿದ್ದರು. ನನ್ನ ಕುಟುಂಬ, ನನ್ನ ಬೆನ್ನೆಲುಬಾಗಿ ನಿಂತ ಕಾರಣ ಆಟದ ಮೇಲೆ ಅದರ ಪರಿಣಾಮ ಆಗಲಿಲ್ಲ’ ಎಂದು ಸಿರ್ಸಾದ (ಹರಿಯಾಣ) ಆಟಗಾರ್ತಿ ಹೇಳಿದರು.

‘2018ರಲ್ಲಿ ನನಗೆ ಅರ್ಜುನ ಪ್ರಶಸ್ತಿ ಬಂದಾಗ, ನನ್ನ ತಾಯಿ ಕೇಳಿದ್ದು ‘ಮಗಳೇ ಈಗ ನಿನಗೆ ನೌಕರಿ ಸಿಗುತ್ತಲ್ವಾ?’. ನನಗೆ ಆಗ ಏನು ಹೇಳಬೇಕೆಂದು ತೋಚಲಿಲ್ಲ’ ಎಂದು ಸವಿತಾ ಹೇಳಿದರು.

‘2018ರಲ್ಲಿ ಒಲಿಂಪಿಯನ್‌ಗಳನ್ನು ಭಾರತ ಕ್ರೀಡಾ ಪ್ರಾಧಿಕಾರವು ನೇಮಕಾತಿ ಮಾಡಿಕೊಳ್ಳಲು ತೊಡಗಿದ ಮೇಲೆ ನನಗೂ ಉದ್ಯೋಗ ದೊರಕಿತು. ಈ ಅವಧಿಯನ್ನು ಮರೆಯುವುದು ಕಷ್ಟ. ಆದರೆ ಇದು ನನ್ನಿಂದ ಉತ್ತಮ ಆಟ ಹೊರಬರಲು ಪ್ರೇರೇಪಿಸಿತು. ಆದರೆ ಈಗ ಪರಿಸ್ಥಿತಿ ಮೊದಲಿಗಿಂತ ಸುಧಾರಿಸಿದೆ’ ಎಂದರು.

ಕಷ್ಟದಲ್ಲಿ ಬೆಂದ ನೇಹಾ: ತಂಡದ ಮಿಡ್‌ಫೀಲ್ಡರ್ ಆಗಿರುವ ನೇಹಾ ಗೋಯಲ್ ಅವರೂ ಕಷ್ಟಪಟ್ಟು ಮೇಲೆಬಂದವರು. ಸೋನೆಪತ್‌ನಲ್ಲಿ ಜನಿಸಿದ ನೇಹಾ ತಾಯಿ ಮತ್ತು ಸಹೋದರಿಯರ ಜೊತೆ ಸೈಕಲ್ ತಯಾರಿಕೆ ಘಟಕದಲ್ಲಿ ₹ 800ಕ್ಕೆ ದುಡಿಯುತ್ತಿದ್ದರು. ‘ಶೂ ಮತ್ತು ಸಮವಸ್ತ್ರಕ್ಕಾಗಿ ಹಾಕಿ ಆಡುತ್ತಿದ್ದೆ. ಸೈಕಲ್ ಚಕ್ರದ ಕಡ್ಡಿಗಳನ್ನು ನೇರಗೊಳಿಸುತ್ತಿದ್ದೆವು. ಹಾಕಿ ತರಬೇತಿ ಪಡೆಯಲು ಆಟೊಕ್ಕೆ ₹ 20 ಕೇಳಲು ನನಗೆ ಮುಜುಗರವಾಗುತಿತ್ತು’ ಎಂದು ಅವರು ಹಳೆಯ ದಿನಗಳನ್ನು ನೆನಪಿಸುತ್ತಾರೆ.

‘ಭೋಪಾಲ್‌ನಲ್ಲಿ ನನಗೆ ಟೂರ್ನಿಯೊಂದರಲ್ಲಿ ಪ್ರಶಸ್ತಿ ಬಂದಾಗ ನನ್ನ ಕುಟುಂಬವನ್ನು ಈ ನರಕದಿಂದ ಪಾರು ಮಾಡಲು ನಿರ್ಧರಿಸಿದೆ. 2015ರಲ್ಲಿ ನನಗೆ ರೈಲ್ವೆಯಲ್ಲಿ ಕೆಲಸ ದೊರೆಯಿತು. ಅಂದಿನಿಂದ ಕುಟುಂಬದ ಹೊಣೆ ಹೊತ್ತಿದ್ದೇನೆ’ ಎನ್ನುತ್ತಾರೆ 26 ವರ್ಷದ ನೇಹಾ.

‘ಹಾಕಿ ನನ್ನ ಬದುಕಿಗೆ ಘನತೆ ಮತ್ತು ವಿಶ್ವಾಸ ಮೂಡಿಸಿದೆ. ನನ್ನ ಏಕೈಕ ಕನಸು ಎಂದರೆ ದೇಶಕ್ಕೆ ಒಲಿಂಪಿಕ್ ಪದಕ ಗೆದ್ದುಕೊಡುವುದು. ನಾನು ಅಲ್ಲಿಯವರೆಗೆ ಬೇಕರಿ ಪದಾರ್ಥ, ಅಚ್ಚುಮೆಚ್ಚಿನ ಪಿಜ್ಜಾ ತಿನ್ನದೇ ಇರಲು ತೀರ್ಮಾನಿಸಿದ್ದೇನೆ’ ಎಂದು ಹೇಳಿದ್ದಾರೆ.

ಜಾರ್ಖಂಡ್‌ನ ನಕ್ಸಲ್ ಪೀಡಿತ, ಬುಡಕಟ್ಟು ಜನಾಂಗದವರೇ ಇರುವ ಖುಂತಿ ಜಿಲ್ಲೆಯ ನಿಕ್ಕಿ ಪ್ರಧಾನ್ ಒಲಿಂಪಿಕ್ಸ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ ಮೊದಲ ಆಟಗಾರ್ತಿಯಾಗಿದ್ದಾರೆ.

‘ನಾನು ಆಡಲು ಆರಂಭಿಸಿದ ದಿನಗಳಲ್ಲಿ ಹಳ್ಳಿಯಲ್ಲಿ ಒಂದೂ ಮೈದಾನವಿರಲಿಲ್ಲ. ನನ್ನ ತಂದೆ ಪೊಲೀಸ್ ಕಾನ್‌ಸ್ಟೆಬಲ್. ಹಾಕಿ ಸ್ಟಿಕ್ ಖರೀದಿಸಲೂ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಬಿದಿರಿನ ತುಂಡುಗಳನ್ನು ಬಳಸಿ ನಾನು ರಸ್ತೆ ಮತ್ತು ಖಾಲಿಬಿದ್ದ ಹೊಲಗಳಲ್ಲಿ ಆಟ ಅಭ್ಯಾಸ ಮಾಡುತ್ತಿದ್ದೆ’ ಎಂದು ಮೆಲುಕು ಹಾಕಿದರು.

ತಂಡದ ಹಿರಿಯ ರಕ್ಷಣಾ ಆಟಗಾರ್ತಿ ದೀಪ್ ಗ್ರೇಸ್ ಎಕ್ಕಾ ಅವರು ಭಾರತದ ಹಾಕಿ ನರ್ಸರಿ ಎನಿಸಿದ ಒಡಿಶಾದ ಸುಂದರಗಢ ಜಿಲ್ಲೆಯವರು. ಅವರು ಹಾಂಗ್‌ಜೌ ಕ್ರೀಡೆಗಳು ಮುಗಿಯುವತನಕ ಸಿಹಿತಿನಿಸು ತಿನ್ನದಿರಲು ನಿರ್ಧರಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಮಹಿಳಾ ಹಾಕಿ ಆರಂಭವಾಗಿದ್ದು 1982ರ ದೆಹಲಿ ಕ್ರೀಡೆಗಳಲ್ಲಿ. ಭಾರತ ಚೊಚ್ಚಲ ಯತ್ನದಲ್ಲೇ ಚಿನ್ನದ ಪದಕ ಗೆದ್ದುಕೊಂಡಿತ್ತು. ನಂತರದ ಕ್ರೀಡೆಗಳಲ್ಲಿ ಭಾರತ ಎರಡು ಬೆಳ್ಳಿ (1998, 2018) ಮತ್ತು ಮೂರು ಕಂಚಿನ ಪದಕಗಳನ್ನು (1986, 2006, 2014) ಗೆದ್ದುಕೊಂಡಿದೆ.

ಒಂದು ತಂಡಕ್ಕಾಗಿ ನಿಯಮ ಬದಲು ಸಲ್ಲ: ರಣತುಂಗ

ಕೊಲಂಬೊ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್‌ನಲ್ಲಿ ಭಾರತ–ಪಾಕಿಸ್ತಾನ ಪಂದ್ಯಕ್ಕೆ ಮಾತ್ರ ಮೀಸಲು ದಿನ ನಿಗದಿ ಮಾಡಿದ್ದ ನಿರ್ಧಾರದ ವಿರುದ್ಧ ಶ್ರೀಲಂಕಾದ ಮಾಜಿ ನಾಯಕ ಅರ್ಜುನ ರಣತುಂಗ ಶುಕ್ರವಾರ ಕೆಂಡಾಮಂಡಲ ಆಗಿದ್ದಾರೆ. ಒಂದು ತಂಡಕ್ಕೆ ಮಾತ್ರ ಅನುಕೂಲ ಮಾಡಿ ಕೊಡುವ ಕ್ರಮ ಕ್ರಿಕೆಟ್‌ನ ಅವಸಾನಕ್ಕೆ ಕಾರಣವಾಗಬಹುದು ಎಂದಿದ್ದಾರೆ.

ಪ್ರತಿಕೂಲ ಹವಾಮಾನದ ಕಾರಣ ನೀಡಿ, ಭಾರತ– ಪಾಕ್ ಪಂದ್ಯಕ್ಕೆ ಮೀಸಲು ದಿನ ನಿಗದಿಪಡಿಸಿದ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಕ್ರಮ ಕೆಲವು ಮಾಜಿ ಆಟಗಾರರ ಹುಬ್ಬೇರಿಸಿತ್ತು.

‘ಟೂರ್ನಿಗೆ ಮೊದಲೇ ನಿಯಮಗಳನ್ನು ರೂಪಿಸಲಾಗಿರುತ್ತದೆ. ಆದರೆ ಆ ಒಂದು ಪಂದ್ಯಕ್ಕೆ (ಭಾರತ–ಪಾಕಿಸ್ತಾನ) ಮುನ್ನ ಅವರು ನಿಯಮ ಬದಲಾಯಿಸಿದರು. ಎಸಿಸಿ ಎಲ್ಲಿದೆ? ಐಸಿಸಿ ಎಲ್ಲಿದೆ?’ ಎಂದು ಆಯ್ದ ಮಾಧ್ಯಮಗಳ ಜೊತೆ ಸಂವಾದದ ವೇಳೆ ರಣತುಂಗ ಅಸಮಾಧಾನ ವ್ಯಕ್ತಪಡಿಸಿದರು.

ಒಂದು ಅಥವಾ ಎರಡು ತಂಡಗಳ ಅನುಕೂಲಕ್ಕೆ ನಿಯಮ ಬದಲಾಯಿಸುವುದು ಈ ಆಟವನ್ನು ಅಪಾಯಕ್ಕೆ ಈಡುಮಾಡುತ್ತದೆ ಎಂದು 1996ರ ವಿಶ್ವಕಪ್ ವಿಜೇತ ತಂಡದ ಲಂಕಾ ನಾಯಕ ಹೇಳಿದರು.

‘ಐಸಿಸಿ ಮತ್ತು ಎಸಿಸಿ ಬಗ್ಗೆ ನನಗೆ ಅನುಕಂಪವಿದೆ. ಅವರು ತಮ್ಮ ಸ್ಥಾನ ಉಳಿಸಿಕೊಳ್ಳುವುದರ ಕಡೆಗೇ ಗಮನ ನೀಡುತ್ತಾರೆ’ ಎಂದು ಟೀಕಿಸಿದರು.

ವ್ಯಂಗ್ಯ: ‘ವಿಶ್ವಕಪ್‌ನಲ್ಲಿ ಭಾರತ–ಪಾಕಿಸ್ತಾನ ಪಂದ್ಯಕ್ಕೆ ಒಂದು ದಿನ ಇರುವಾಗ ನಿಯಮ ಬದಲಾಯಿಸಿದರೂ ನನಗೇನೂ ಅಚ್ಚರಿಯಾಗದು. ಐಸಿಸಿ ಬಾಯಿಮುಚ್ಚಿಕೊಂಡು ತಲೆಯಾಡಿಸುತ್ತದೆ’ ಎಂದು ವ್ಯಂಗ್ಯವಾಡಿದರು.

ಡೇವಿಸ್ ಕಪ್ ಟೆನಿಸ್: ಭಾರತ– ಮೊರೊಕ್ಕೊ ಹಣಾಹಣಿ ಇಂದಿನಿಂದ

ವಿದಾಯ ಪಂದ್ಯಕ್ಕೆ ಬೋಪಣ್ಣ ಸಜ್ಜು

ಲಖನೌ (ಪಿಟಿಐ): ಭಾರತ ಮತ್ತು ಮೊರೊಕ್ಕೊ ನಡುವಣ ಶನಿವಾರ ಆರಂಭವಾಗುವ ಡೇವಿಸ್ ಕಪ್ ಟೆನಿಸ್ ವಿಶ್ವಗುಂಪು–2ರ ಹಣಾಹಣಿಯು ರೋಹನ್ ಬೋಪಣ್ಣ ಅವರ ವಿದಾಯ ಪಂದ್ಯಕ್ಕೆ ವೇದಿಕೆಯೊದಗಿಸಲಿದೆ.

ಕರ್ನಾಟಕದ ಬೋಪಣ್ಣ ಅವರ 21 ವರ್ಷಗಳ ಡೇವಿಸ್ ಕಪ್ ವೃತ್ತಿಜೀವನಕ್ಕೆ ಈ ಪಂದ್ಯದೊಂದಿಗೆ ತೆರೆಬೀಳಲಿದೆ. ಭಾರತ ತಂಡವು ಅವರಿಗೆ ಗೆಲುವಿನ ಉಡುಗೊರೆ ನೀಡಲು ಸಜ್ಜಾಗಿದೆ.

ಶನಿವಾರ ಸಿಂಗಲ್ಸ್ ಪಂದ್ಯಗಳು ಆಯೋಜನೆಯಾಗಿದ್ದು, 43 ವರ್ಷದ ಬೋಪಣ್ಣ ಅವರು ಭಾನುವಾರ ನಡೆಯಲಿರುವ ಡಬಲ್ಸ್ ಪಂದ್ಯದಲ್ಲಿ ಯೂಕಿ ಭಾಂಬ್ರಿ ಅವರೊಂದಿಗೆ ಕಣಕ್ಕಿಳಿಯಲಿದ್ದಾರೆ.

ಶನಿವಾರ ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಶಶಿಕಿರಣ್ ಮುಕುಂದ್, ಮೊರಕ್ಕೊದ ಯಾಸಿನ್ ದ್ಲಿಮಿ ಅವರನ್ನು ಎದುರಿಸುವರು. ಎರಡನೇ ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್– ಆ್ಯಡಮ್ ಮೌಂಡಿರ್ ಹಣಾಹಣಿ ನಡೆಸಲಿದ್ದಾರೆ.

ಡೇವಿಡ್ ಕಪ್‌ನಲ್ಲಿ ಈಚೆಗಿನ ವರ್ಷಗಳಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲವಾಗಿರುವ ಭಾರತ, ಇದೇ ಫೆಬ್ರುವರಿ ತಿಂಗಳಲ್ಲಿ ವಿಶ್ವಗುಂಪು –2ಕ್ಕೆ ಹಿಂಬಡ್ತಿ ಪಡೆದುಕೊಂಡಿತ್ತು. 2019 ರಲ್ಲಿ ಟೂರ್ನಿಗೆ ಹೊಸ ಮಾದರಿ ಅಳವಡಿಸಿದ ಬಳಿಕ, ಭಾರತ ತಂಡ ಇದೇ ಮೊದಲ ಬಾರಿ ವಿಶ್ವಗುಂಪು–2ಕ್ಕೆ ಕುಸಿತ ಕಂಡಿತ್ತು. ಡೆನ್ಮಾರ್ಕ್ ಎದುರಿನ ತನ್ನ ಕೊನೆಯ ಡೇವಿಸ್ ಕಪ್ ಪಂದ್ಯವನ್ನು 2–3 ರಿಂದ ಸೋತಿತ್ತು.

ಬೋಪಣ್ಣ ಅವರು ಕಳೆದ ವಾರ ಅಮೆರಿಕ ಓಪನ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದ್ದನ್ನು ಹೊರತುಪಡಿಸಿದರೆ, ಭಾರತದ ಟೆನಿಸ್‌ಗೆ ಈ ಋತುವಿನಲ್ಲಿ ಯಾವುದೇ ಸ್ಮರಣೀಯ ಕ್ಷಣಗಳು ಲಭಿಸಿಲ್ಲ.

ಕೊಡಗಿನ ಆಟಗಾರ 2002 ರಲ್ಲಿ ಡೇವಿಡ್ ಕಪ್ ಪದಾರ್ಪಣೆ ಮಾಡಿದ್ದರು. ಇದುವರೆಗೆ ಒಟ್ಟು 32 ಪಂದ್ಯಗಳನ್ನು ಆಡಿದ್ದು, 10 ಸಿಂಗಲ್ಸ್ ಸೇರಿದಂತೆ 22ರಲ್ಲಿ ಗೆದ್ದಿದ್ದಾರೆ. ಡೇವಿಸ್ ಕಪ್‌ನಿಂದ ವಿರಮಿಸಿದರೂ ಅವರು ಎಟಿಪಿ ಟೂರ್ನಿಗಳಲ್ಲಿ ಆಟ ಮುಂದುವರಿಸಲಿದ್ದಾರೆ. ಡಬಲ್ಸ್ ವಿಭಾಗದ ವಿಶ್ವ ರ‍್ಯಾಂಕಿಂಗ್‌ನಲ್ಲಿ 7ನೇ ಸ್ಥಾನದಲ್ಲಿದ್ದಾರೆ.

ಬೋಪಣ್ಣ ವಿದಾಯ ಪಂದ್ಯವನ್ನು ಬೆಂಗಳೂರಿನಲ್ಲಿ ಆಡಲು ಬಯಸಿದ್ದರಲ್ಲದೆ, ಅಖಿಲ ಭಾರತ ಟೆನಿಸ್ ಫೆಡರೇಷನ್‌ಗೂ (ಎಐಟಿಎ) ಮನವಿ ಮಾಡಿದ್ದರು. ಆದರೆ ಮೊರೊಕ್ಕೊ ವಿರುದ್ಧದ ಪಂದ್ಯವನ್ನು ಲಖನೌದಲ್ಲಿ ಆಯೋಜಿಸಲು ಎಐಟಿಎ ಈ ಮೊದಲೇ ನಿರ್ಧರಿಸಿತ್ತು.

ನಗಾಲ್‌ಗೆ ಗೆಲುವಿನ ವಿಶ್ವಾಸ: ಸಿಂಗಲ್ಸ್‌ನಲ್ಲಿ ಭಾರತದ ನಂ.1 ಆಟಗಾರ ಎನಿಸಿರುವ ಸುಮಿತ್ ನಗಾಲ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆಸ್ಟ್ರಿಯಾದಲ್ಲಿ ಈಚೆಗೆ ನಡೆದಿದ್ದ ಚಾಲೆಂಜರ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ಅವರು ತಮ್ಮ ಎರಡೂ ಸಿಂಗಲ್ಸ್ ಪಂದ್ಯಗಳಲ್ಲಿ ಗೆಲ್ಲುವ ವಿಶ್ವಾಸ ಹೊಂದಿದ್ದಾರೆ. ಶಶಿಕಿರಣ್ ಮುಕುಂದ್, ಈ ಪಂದ್ಯದೊಂದಿಗೆ ಡೇವಿಸ್ ಕಪ್‌ಗೆ ಪದಾರ್ಪಣೆ ಮಾಡಲಿದ್ದಾರೆ.

ಮೊರೊಕ್ಕೊ ತಂಡದ ಪ್ರಮುಖ ಆಟಗಾರ ಎಲಿಯೊಟ್ ಬೆಂಚಿತ್ರಿತ್, ಡಬಲ್ಸ್ ಪಂದ್ಯದಲ್ಲಿ ಮಾತ್ರ ಆಡಲಿದ್ದಾರೆ. 24 ವರ್ಷದ ಅವರು ಈಗ ಎಟಿಪಿ ರ‍್ಯಾಂಕಿಂಗ್‌ನಲ್ಲಿ 465ನೇ ಸ್ಥಾನದಲ್ಲಿ ದ್ದರೂ, 2020 ರಲ್ಲಿ 198ನೇ ಸ್ಥಾನಕ್ಕೇರಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 50 ರೊಳಗಿನ ಸ್ಥಾನದಲ್ಲಿರುವ ಆಟಗಾರರನ್ನು ಮಣಿಸಿರುವ ಅವರು, ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲೂ ಆಡಿದ್ದಾರೆ.

ಲಖನೌದಲ್ಲಿ ಗುರುವಾರ ರಾತ್ರಿ ಎಐಟಿಎ ವತಿಯಿಂದ ರೋಹನ್ ಬೋಪಣ್ಣ (ಎಡದಿಂದ ಎರಡನೆಯವರು) ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಎಐಟಿಎ ಕಾರ್ಯದರ್ಶಿ ಅನಿಲ್ ದೂಪಾರ್, ಅಧ್ಯಕ್ಷ ಅನಿಲ್ ಜೈನ್ ಹಾಗೂ ಭಾರತ ಡೇವಿಸ್ ಕಪ್ ತಂಡದ ನಾಯಕ ರೋಹಿತ್ ರಾಜ್‌ಪಾಲ್ ಇದ್ದಾರೆ –ಪಿಟಿಐ ಚಿತ್ರ

ವೇಳಾಪಟ್ಟಿ

ಶನಿವಾರದ ಪಂದ್ಯಗಳು
ಶಶಿಕಿರಣ್ ಮುಕುಂದ್– ಯಾಸಿನ್ ದ್ಲಿಮಿ
ಸುಮಿತ್ ನಗಾಲ್– ಆ್ಯಡಮ್ ಮೌಂಡಿರ್
ಭಾನುವಾರದ ಪಂದ್ಯಗಳು
ರೋಹನ್ ಬೋಪಣ್ಣ/ಯೂಕಿ ಭಾಂಬ್ರಿ– ಎಲಿಯೊಟ್ ಬೆಂಚಿತ್ರಿತ್/ ಯೂನೆಸ್ ಲಲಾಮಿ ಲಾರೋಸಿ
ಸುಮಿತ್ ನಗಾಲ್– ಯಾಸಿನ್ ದ್ಲಿಮಿ
ಶಶಿಕಿರಣ್ ಮುಕುಂದ್– ಆ್ಯಡಮ್ ಮೌಂಡಿರ್

‘ಬ್ರೆಜಿಲ್ ವಿರುದ್ಧದ ಪಂದ್ಯ ಸ್ಮರಣೀಯ’

‘2010 ರಲ್ಲಿ ಚೆನ್ನೈನಲ್ಲಿ ನಡೆದಿದ್ದ ಬ್ರೆಜಿಲ್ ವಿರುದ್ಧದ ಹಣಾಹಣಿ, ಡೇವಿಸ್ ಕಪ್ ವೃತ್ತಿಜೀವನದ ಸ್ಮರಣೀಯ ಪಂದ್ಯ’ ಎಂದು ಬೋಪಣ್ಣ ಹೇಳಿದರು. ಆ ಪಂದ್ಯದಲ್ಲಿ ಮೊದಲ ಸಿಂಗಲ್ಸ್‌ನಲ್ಲಿ ಸೋತಿದ್ದ ಬೋಪಣ್ಣ, ಐದನೇ ಹಾಗೂ ನಿರ್ಣಾಯಕ ಸಿಂಗಲ್ಸ್‌ನಲ್ಲಿ ಗೆದ್ದಿದ್ದರು.

‘ಆ ಪಂದ್ಯದಲ್ಲಿ 0–2 ರಿಂದ ಹಿನ್ನಡೆಯಲ್ಲಿದ್ದ ನಾವು ಮರು ಹೋರಾಟ ನಡೆಸಿ ಗೆದ್ದು (3–2), ವಿಶ್ವ ಗುಂಪಿನ ಪ್ಲೇ ಆಫ್ ಪ್ರವೇಶಿಸಿದ್ದೆವು. ಮೊದಲ ಸಿಂಗಲ್ಸ್‌ನಲ್ಲಿ ಮ್ಯಾಚ್ ಪಾಯಿಂಟ್ ಅವಕಾಶ ಪಡೆದಿದ್ದರೂ, ಸೋತಿದ್ದೆ. ಆದರೆ ಅದಾದ 48 ಗಂಟೆಗಳ ಬಳಿಕ ಶ್ರೇಷ್ಠ ಆಟವಾಡಿ ಭಾರತ ತಂಡವನ್ನು ಜಯದತ್ತ ಮುನ್ನಡೆಸಿದ್ದು ಅಮೋಘವೇ ಸರಿ’ ಎಂದರು.

‘ಇಂದಿನ ತಲೆಮಾರಿನ ಆಟಗಾರರು ಡೇವಿಸ್ ಕಪ್ ಟೂರ್ನಿಯ ಮೇಲಿನ ಪ್ರೀತಿ ಕಳೆದುಕೊಂಡಿದ್ದಾರೆ. ಇತರ ಟೂರ್ನಿಗಳಂತೆ ಇದೂ ಒಂದು ಟೂರ್ನಿ ಎಂದಷ್ಟೇ ಭಾವಿಸಿದ್ದಾರೆ. ಯಾಂತ್ರಿಕವಾಗಿ ಬಂದು ಆಡಿ ಹೋಗುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಗಾಲ್ಫ್ ಟೂರ್: ನೇಹಾ ತ್ರಿಪಾಠಿಗೆ ಪ್ರಶಸ್ತಿ

ಗುರುಗ್ರಾಮ (ಪಿಟಿಐ): ನೇಹಾ ತ್ರಿಪಾಠಿ ಅವರು ಹೀರೊ ಮಹಿಳಾ ಪ್ರೊಫೆಷನಲ್ ಗಾಲ್ಫ್ ಟೂರ್‌ನ (ಡಬ್ಲ್ಯುಪಿಜಿಟಿ) 12ನೇ ಲೆಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಇಲ್ಲಿನ ಗೋಲ್ಡನ್ ಗ್ರೀನ್ಸ್ ಗಾಲ್ಫ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್ ಕೋರ್ಸ್‌ನಲ್ಲಿ ನಡೆದ ಟೂರ್ನಿಯ ಮೂರು ಸುತ್ತುಗಳನ್ನು ಅವರು ಒಟ್ಟು 208 (8 ಅಂಡರ್) ಅವಕಾಶಗಳಲ್ಲಿ ಪೂರ್ಣಗೊಳಿಸಿದರು.

ಶುಕ್ರವಾರ ನಡೆದ ಕೊನೆಯ ಸುತ್ತಿನಲ್ಲಿ ಅವರು 73 ಸ್ಟ್ರೋಕ್‌ಗಳನ್ನು ಬಳಸಿಕೊಂಡರು. ಮೊದಲ ಎರಡು ಸುತ್ತುಗಳಲ್ಲಿ ಕ್ರಮವಾಗಿ 68, 67 ಸ್ಕೋರ್ ಮಾಡಿದ್ದರು.

ನೇಹಾ ತ್ರಿಪಾಠಿ

ನೇಹಾ ಅವರಿಗೆ ಪ್ರಬಲ ಪೈಪೋಟಿ ನೀಡಿದ ತ್ವೇಸಾ ಮಲಿಕ್ (211) ಎರಡನೇ ಸ್ಥಾನ ಪಡೆದರು. ಮೊದಲ ಎರಡು ಸುತ್ತುಗಳನ್ನು ಕೊನೆಗೊಳಿಸಲು (75-70) ಅಧಿಕ ಸ್ಟ್ರೋಕ್‌ಗಳನ್ನು ಬಳಸಿದ್ದು ಅವರಿಗೆ ಮುಳುವಾಗಿ ಪರಿಣಮಿಸಿತು. ರಿಧಿಮಾ ದಿಲಾವರಿ ಮತ್ತು ರಿಯಾ ಯಾದವ್ (ತಲಾ 212) ಅವರು ಜಂಟಿ ಮೂರನೇ ಸ್ಥಾನ ಪಡೆದರು.

ನೇಹಾ, ಈ ಋತುವಿನ ಡಬ್ಲ್ಯುಪಿಜಿಟಿನಲ್ಲಿ ತಾವು ಪಾಲ್ಗೊಂಡ ಮೂರು ಟೂರ್ನಿಗಳಲ್ಲಿ ಎರಡನ್ನು ಗೆದ್ದುಕೊಂಡಿದ್ದಾರೆ. ಇದಕ್ಕೂ ಮುನ್ನ ಅವರು 10ನೇ ಲೆಗ್‌ನಲ್ಲಿ ಚಾಂಪಿಯನ್ ಆಗಿದ್ದರು.

ಡೈಮಂಡ್ ಲೀಗ್ ಫೈನಲ್ಸ್: ಚೋಪ್ರಾ ಮೇಲೆ ನಿರೀಕ್ಷೆ

ಯೂಜಿನ್, ಅಮೆರಿಕ (ಪಿಟಿಐ): ಭಾರತದ ‘ಸೂಪರ್‌ಸ್ಟಾರ್’ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಪ್ರತಿಷ್ಠಿತ ಡೈಮಂಡ್ ಲೀಗ್ ಫೈನಲ್ಸ್ ಕಿರೀಟವನ್ನು ತಮ್ಮಲ್ಲೇ ಉಳಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಈ ಬಾರಿಯ ಫೈನಲ್ಸ್ ಅಮೆರಿಕದ ಯೂಜಿನ್‌ನಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ. ಜಾವೆಲಿನ್ ಥ್ರೋ ಸ್ಪರ್ಧೆ ಶನಿವಾರ ನಿಗದಿಯಾಗಿದೆ. ಕಳೆದ ವರ್ಷ ಜೂರಿಚ್‌ನಲ್ಲಿ ನಡೆದಿದ್ದ ಡೈಮಂಡ್ಸ್ ಲೀಗ್ ಫೈನಲ್ಸ್‌ನಲ್ಲಿ ನೀರಜ್ ಚಾಂಪಿಯನ್ ಆಗಿದ್ದರು.

ಬುಡಾಪೆಸ್ಟ್‌ನಲ್ಲಿ ಆಗಸ್ಟ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ ಕೂಟದಲ್ಲಿ ಚಿನ್ನ ಜಯಿಸಿದ್ದ 25 ವರ್ಷದ ನೀರಜ್, ಉತ್ತಮ ಫಾರ್ಮ್‌ನಲ್ಲಿದ್ದಾರೆ. ಡೈಮಂಡ್ ಲೀಗ್‌ನ ದೋಹಾ ಮತ್ತು ಲೂಸಾನ್ ಲೆಗ್‌ನಲ್ಲಿ ಅವರು ಗೆದ್ದಿದ್ದರು.

ನೀರಜ್, ಪ್ರಶಸ್ತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳುವ ಜತೆಯಲ್ಲೇ ಮೊದಲ ಬಾರಿ 90 ಮೀ. ಸಾಧನೆ ಮಾಡಲು ಪ್ರಯತ್ನಿಸಲಿದ್ದಾರೆ. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 89.4 ಮೀ. ಆಗಿದೆ.

ಭಾರತದ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಮತ್ತು 3000 ಮೀ. ಸ್ಟೀಪಲ್ ಚೇಸ್ ಸ್ಪರ್ಧಿ ಅವಿನಾಶ್ ಸಬ್ಳೆ ಅವರು ಡೈಮಂಡ್ ಲೀಗ್ ಫೈನಲ್ಸ್ ಅರ್ಹತೆ ಪಡೆದುಕೊಂಡಿದ್ದರು. ಆದರೆ ಏಷ್ಯನ್ ಗೇಮ್ಸ್‌ಗೆ ಸಜ್ಜಾಗುವ ನಿಟ್ಟಿನಲ್ಲಿ ಇಬ್ಬರೂ ಕೂಟದಿಂದ ಹಿಂದೆ ಸರಿದಿದ್ದಾರೆ.

ನೀರಜ್ ಚೋಪ್ರಾ

ಸಂಕ್ಷಿಪ್ತ ಸುದ್ದಿ

ಚೆಸ್: ಗ್ರೆಬ್ನೇವ್‌ಗೆ ಪ್ರಶಸ್ತಿ

ಜಮಷೆಡ್‌ಪುರ: ಕೊನೆಯ ಸುತ್ತಿನಲ್ಲಿ ಭಾರತದ ಅಲಿಖ್ಯ ಮುಖೋಪಾಧ್ಯಾಯ ಅವರನ್ನು ಸೋಲಿಸಿದ ಅಗ್ರ ಶ್ರೇಯಾಂಕದ ಅಲೆಕ್ಸಿ ಗ್ರೆಬ್ನೇವ್ (ರಷ್ಯಾ) ಅವರು ಏಷ್ಯನ್ ಜೂನಿಯರ್ ಚೆಸ್ ಚಾಂಪಿ ಯನ್‌ಷಿಪ್‌ನಲ್ಲಿ ಶುಕ್ರವಾರ ಪ್ರಶಸ್ತಿ ಗೆದ್ದು ಕೊಂಡರು. ಅವರು 9 ಸುತ್ತುಗಳಿಂದ ಏಳು ಪಾಯಿಂಟ್ಸ್ ಸಂಗ್ರಹಿಸಿದರು.

ಭಾರತದ ಫಿಡೆಮಾಸ್ಟರ್ ಎಸ್. ಅಶ್ವಥ್ ಅವರೂ ಏಳು ಪಾಯಿಂಟ್ಸ್ ಸಂಗ್ರಹಿಸಿದರೂ ಟೈಬ್ರೇಕ್ ಸ್ಕೋರ್ ಕಡಿಮೆಯಿದ್ದ ಕಾರಣ ಎರಡನೇ ಸ್ಥಾನ ಪಡೆದರು. ಭಾರತದ ರೋಹಿತ್ ಕೃಷ್ಣ ಎಸ್., ಆಯುಷ್ ಶರ್ಮಾ, ಕ್ಯಾಂಡಿಡೇಟ್ ಮಾಸ್ಟರ್ ಮಯಂಕ್ ಚಕ್ರವರ್ತಿ ಅವರು ತಲಾ ಆರೂವರೆ ಪಾಯಿಂಟ್ಸ್ ಪಡೆದರೂ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ಗಳಿಸಿದರು. ಭಾರತದ ಇನ್ನೊಬ್ಬ ಆಟಗಾರ ಮನೀಷ್ ಕ್ರಿಸ್ಟಿಯಾನೊ (6) ಆರನೇ ಸ್ಥಾನ ಪಡೆದರು.

ಮೊದಲ ಬೋರ್ಡ್‌ನಲ್ಲಿ 11ನೇ ಶ್ರೇಯಾಂಕದ ಆಯುಷ್, ರೋಹಿತ್‌ಕೃಷ್ಣ ಜೊತೆ ಡ್ರಾ ಮಾಡಿಕೊಂಡರು. 13ನೇ ಶ್ರೇಯಾಂಕದ ಅಶ್ವಥ್ 3ನೇ ಬೋರ್ಡ್ ನಲ್ಲಿ ಸ್ವದೇಶದ ಸಂಭಿತ್ ಪಾಂಡಾ (5.5) ಅವರನ್ನು ಸೋಲಿಸಿದರು.

ಸಬ್ ಜೂನಿಯರ್ ತಂಡಕ್ಕೆ ಅದ್ವಿಕಾ ನಾಯಕಿ

ಬೆಂಗಳೂರು: ಅದ್ವಿಕಾ ಕನೋಜಿಯಾ ಅವರು, ಬೆಳಗಾವಿಯಲ್ಲಿ ಶುಕ್ರವಾರ ಆರಂಭವಾದ ಹೀರೊ 13 ವರ್ಷದೊಳಗಿನವರ ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡದ ನೇತೃತ್ವ ವಹಿಸಿದ್ದಾರೆ.

ಸೆ. 24ರವರೆಗೆ ಟೂರ್ನಿ ನಡೆಯಲಿದೆ. ಕರ್ನಾಟಕ ತನ್ನ ಮೊದಲ ಪಂದ್ಯವನ್ನು 18ರಂದು ಮಧ್ಯಪ್ರದೇಶ ವಿರುದ್ಧ ಆಡಲಿದೆ. 20ರಂದು ಜಮ್ಮು ಮತ್ತು ಕಾಶ್ಮೀರ ವಿರುದ್ಧ ಆಡಲಿದೆ.

ತಂಡ ಹೀಗಿದೆ: ಅದ್ವಿಕಾ ಕನೋಜಿಯಾ (ನಾಯಕಿ), ಅಕೈಶಾ ಶ್ರಾಫ್ (ಉಪನಾಯಕಿ), ಪ್ರಯುಕ್ತಾ ಆರ್ಯ, ಆ್ಯಂಜೆಲ್ ಕೆ., ಪರಿ ವೋರಾ, ಕೈರಾ ಸೇಠ್ ಸೈಯ್ಯದ್, ಶ್ರಾವಣಿ ಅಶೋಕ ಸುತಾರ, ಅಮಾನತ್ ಭಂಡಾಲ್, ಗೋಪಿಕಾ ಆರ್., ಲಶಾ ಕೆನೆತ್ ರಾಜ್, ಟಿಯಾ ಝುಮೊರಾ ಫರ್ನಾಂಡಿಸ್, ನಿಯತಾ ರಮೇಶ್, ಯಾಶಿಕಾ ಎಚ್, ಕಾಕುಳವರಪು ಕೃಷ್ಣ ಮನೋಜ್ಞ, ಸಯಾಲಿ ವಿ. ಕುಡ್ತೂರ್ಕರ್, ಟಿ.ಕರಿಷ್ಮಾ ಲೋಯಿಸ್, ಮಮತಾ ಮೂಲಾ, ಸಾನ್ಯಾ ಸಮೀರ್ ಶಾ, ರಿಯಾನಾ ಲಿಜ್ ಜಾಕೋಬ್, ನಿಹಿತಾ ಕರ್ಚಿ, ಆದ್ಯಾ ಬಿಂಜೋಲ, ವಂಶಿಕಾ ಶಾಣಪ್ಪ ಸಾಹುಕಾರ. ಪ್ರಿಯಾಂಕಾ ಕಂಗ್ರಾಲ್ಕರ್ (ಮುಖ್ಯ ಕೋಚ್), ಹೇಮಾನ್ನಿ ಗೌರ್ (ಸಹಾಯಕ ಕೋಚ್), ಸುಧಾಕರ ಡಿ. (ಮ್ಯಾನೇಜರ್)

ಕ್ರಿಕೆಟ್: ಶಿವು ದ್ವಿಶತಕ

ಬೆಂಗಳೂರು: ಪ್ರೆಸಿಂಡೆಟ್ಸ್ ಇಲೆವೆನ್ ತಂಡದ ಆರ್.ಶಿವು ಅವರು ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ಶುಕ್ರವಾರ ನಡೆದ ಕೆಎಸ್‌ಸಿಎ 16 ವರ್ಷದೊಳಗಿನ ಬಾಲಕರ ಅಂತರ ವಲಯ ಟೂರ್ನಿಯ ಪಂದ್ಯದಲ್ಲಿ ದ್ವಿಶತಕ ದಾಖಲಿಸಿದರು.

ಪ್ರೆಸಿಂಡೆಟ್ಸ್ ಇಲೆವೆನ್ ತಂಡವು 90 ಓವರ್‌ಗಳಲ್ಲಿ 4 ವಿಕೆಟ್‌ಗೆ 381 ರನ್ ಗಳಿಸಿತು. ಶಿವು ಅವರು 256 ಎಸೆತಗಳಲ್ಲಿ 30 ಬೌಂಡರಿಗಳ ನೆರವಿನಿಂದ 213 ರನ್ ಗಳಿಸಿದರು. ಅವರಿಗೆ ಎಸ್. ರಾಹುಲ್ (61;93ಎ), ನವನೀತ್ ವಿ.ರಾಜ್ (63;140ಎ) ಸಾಥ್ ನೀಡಿದರು.

ಸವಾಲನ್ನು ಬೆನ್ನಟ್ಟಿದ ಧಾರವಾಡ ವಲಯ ತಂಡವು 90 ಓವರ್‌ಗಳಲ್ಲಿ 7 ವಿಕೆಟ್‌ಗೆ 303 ರನ್‌ಗಳಿಸಿ ಡ್ರಾ ಸಾಧಿಸಿತು. ಪ್ರೆಸಿಂಡೆಟ್ಸ್ ತಂಡ 3 ಪಾಯಿಂಟ್ ಗಳಿಸಿದರೆ, ಧಾರವಾಡ ತಂಡ 1 ಪಾಯಿಂಟ್ ಸಂಪಾದಿಸಿತು.

ಏಷ್ಯನ್ ಕ್ರೀಡಾಕೂಟ: ಪದಕದ ವಿಶ್ವಾಸದಲ್ಲಿ ಕಿದಂಬಿ ಶ್ರೀಕಾಂತ್

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಕಿದಂಬಿ ಶ್ರೀಕಾಂತ್ ಮೊದಲಿನಷ್ಟು ಉತ್ತಮ ಲಯದಲ್ಲಿ ಇಲ್ಲ. ಆದರೆ ಮೂರನೇ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವ ಅವರು ಚೀನಾದ ಹಾಂಗ್‌ಜೌನಲ್ಲಿ ಪದಕದ ನಿರೀಕ್ಷೆಯಲ್ಲಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಅವರಿಗೆ ಈ ವರ್ಷ ಫಲಪ್ರದವೇನೂ ಆಗಿಲ್ಲ. ವಿಶ್ವ ಕ್ರಮಾಂಕ ದಲ್ಲಿ 21ನೇ ಸ್ಥಾನಕ್ಕೆ ಇಳಿದಿದ್ದಾರೆ. 2014ರ ಇಂಚಿಯೋನ್ ಕ್ರೀಡೆಗಳಲ್ಲಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದ್ದ ಅವರು, 2018ರ ಜಕಾರ್ತಾ ಕ್ರೀಡೆಗಳಲ್ಲಿ 32ರ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಮತ್ತು ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಪದಕಗಳನ್ನು ಗೆದ್ದಿರುವ ಗುಂಟೂರಿನ ಆಟಗಾರ ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಏಷ್ಯನ್ ಗೇಮ್ಸ್ ತಂಡದಲ್ಲಿ ಸ್ಥಾನ ಖಚಿತಪಡಿಸಿಕೊಂಡಿದ್ದಾರೆ. ಈಗ ಈ ಅವಕಾಶದ ಸದುಪಯೋಗ ಪಡೆಯಲು 30 ವರ್ಷದ ಆಟಗಾರನಿಗೆ ಒಳ್ಳೆಯ ಅವಕಾಶ ಒದಗಿದೆ.

‘ಏಷ್ಯನ್ ಗೇಮ್ಸ್ ನನ್ನ ಪಾಲಿಗೆ ಅವಿಸ್ಮರಣೀಯವಾಗಿಲ್ಲ. ಕಳೆದ ಎರಡು ಕ್ರೀಡೆಗಳಲ್ಲಿ ನನ್ನಿಂದ ಉತ್ತಮ ಪ್ರದರ್ಶನ ಬಂದಿಲ್ಲ. ಹೀಗಾಗಿ ಇಲ್ಲಿ ಉತ್ತಮ ಆಟವಾಡಿದರೆ ಅದು ನನ್ನ ಪಾಲಿಗೆ ಸ್ಮರಣೀಯವಾಗಲಿದೆ’ ಎಂದು ಸುದ್ದಿಸಂಸ್ಥೆಗೆ ತಿಳಿಸಿದರು.

‘ಏಷ್ಯನ್ ಮತ್ತು ಒಲಿಂಪಿಕ್ ಕ್ರೀಡೆಗಳನ್ನು ಬಿಟ್ಟರೆ ಇತರೆಲ್ಲ ಮಹತ್ವದ ಕ್ರೀಡೆಗಳಲ್ಲಿ ನಾನು ಪದಕಗಳನ್ನು ಗೆದ್ದುಕೊಂಡಿದ್ದೇನೆ. ಈ ಎರಡೂ ಕೂಟಗಳು ನಾಲ್ಕು ವರ್ಷಕ್ಕೊಮ್ಮೆ ಬರುವಂಥವು. ಹೀಗಾಗಿ ಈ ಬಾರಿಯ ಕೂಟದ ಪೂರ್ಣ ಉಪಯೋಗ ಪಡೆಯುವ ಅವಕಾಶ ನನಗೆ ಒದಗಿದೆ’ ಎಂದರು.

ಭಾರತದ ಪರ ಏಷ್ಯನ್ ಗೇಮ್ಸ್‌ನಲ್ಲಿ ಇದುವರೆಗೆ ಸೈಯ್ಯದ್ ಮೋದಿ ಮಾತ್ರ ಪದಕ ಗೆದ್ದಿದ್ದಾರೆ. 1982ರ ಕೂಟದಲ್ಲಿ ಅವರು ಕಂಚಿನ ಪದಕ ಗಳಿಸಿದ್ದರು.

ಭಾರತ 37 ವರ್ಷಗಳಲ್ಲಿ ಒಮ್ಮೆಯೂ ಪುರುಷರ ತಂಡ ವಿಭಾಗದಲ್ಲಿ ಪದಕ ಗೆದ್ದುಕೊಂಡಿಲ್ಲ. ಭಾರತ ಪುರುಷರ ತಂಡ ವಿಭಾಗದಲ್ಲಿ ಮೂರು ಬಾರಿ– 1974ರಲ್ಲಿ ಟೆಹರಾನ್, 1982ರಲ್ಲಿ ನವದೆಹಲಿ ಮತ್ತು 1986ರಲ್ಲಿ ಸೋಲ್ ಕ್ರೀಡೆಗಳಲ್ಲಿ ಕಂಚಿನ ಪದಕಗಳನ್ನು ಪಡೆದಿದೆ.

ಆದರೆ ಈ ಬಾರಿ ಥಾಮಸ್ ಕಪ್ ವಿಜೇತರಾಗಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ವಿಶ್ವಾಸ ಮೂಡಿದೆ. ‘ಥಾಮಸ್ ಕಪ್ ಗೆದ್ದ ಮರುವರ್ಷವೇ ನಾವು ಈ ಕ್ರೀಡೆಗಳಲ್ಲಿ ಕಣಕ್ಕಿಳಿಯುತ್ತಿದ್ದೇವೆ. ನಾವು ಉತ್ತಮ ಪ್ರದರ್ಶನ ನೀಡಲು ಸಾಧ್ಯವಿದೆ’ ಎಂದಿದ್ದಾರೆ.

ಕಿದಂಬಿ ಶ್ರೀಕಾಂತ್

ಫುಟ್‌ಬಾಲ್ ಲೀಗ್: ಅಗ್ನಿಪುತ್ರ ತಂಡ ಜಯಭೇರಿ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 2–1 ರಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಸುಕ್‌ರಾಜ್ ಸುಬ್ಬ (24ನೇ) ಮತ್ತು ದಾವಾ ಲೆಂಡಪ್ ಶೆರ್ಪಾ (73ನೇ) ತಲಾ ಒಂದು ಗೋಲು ಗಳಿಸಿದರು. ನೌರೋಬಾಮ್ ಪ್ರೇಮ್‌ಜಿತ್ ಸಿಂಗ್ (90 + 1ನೇ) ಬಿಯುಎಫ್‌ಸಿ ಪರ ಏಕೈಕ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 3–0ಯಿಂದ ಕೊಡಗು ಎಫ್‌ಸಿ ತಂಡವನ್ನು ಮಣಿಸಿತು. ಯುನೈಟೆಡ್ ತಂಡದ ಪರವಾಗಿ ಜೈಸನ್ ಜೋರ್ಡನ್ ವಾಜ್ (1, 48ನೇ) ಎರಡು ಗೋಲು ಗಳಿಸಿದರೆ, ಚೆಸ್ಟರ್‌ಪೋಲ್ ಲಿಂಗ್ಡೊ (90 + 1ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.



ರ್‍ಯಾಂಕಿಂಗ್: 2ನೇ ಸ್ಥಾನಕ್ಕೆ ಭಾರತ

ದುಬೈ (ಪಿಟಿಐ): ಏಷ್ಯಾ ಕಪ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿರುವ ಭಾರತ ತಂಡ, ಏಕದಿನ ರ್‍ಯಾಂಕಿಂಗ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿದೆ. ಇನ್ನೊಂದೆಡೆ ಟೂರ್ನಿಯಿಂದ ಹೊರಬಿದ್ದಿರುವ ಪಾಕಿಸ್ತಾನ ಅಗ್ರಸ್ಥಾನ ಕಳೆದುಕೊಂಡಿದೆ.

ಸೂಪರ್‌ಫೋರ್ ಹಂತದ ರೋಚಕ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಕೊನೆಯ ಎಸೆತದಲ್ಲಿ ಸೋಲನುಭವಿಸಿದ ಬಾಬರ್ ಆಜಂ ನೇತೃತ್ವದ ತಂಡ ಮೊದಲ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಸರಿದಿದೆ. ವಾರದ ಮಧ್ಯ ಪ್ರಕಟವಾದ ಐಸಿಸಿ ರ್‍ಯಾಂಕಿಂಗ್‌ನಲ್ಲಿ ಪಾಕ್ ತಂಡ 115 ಪಾಯಿಂಟ್ಸ್ ಕಲೆಹಾಕಿದೆ.

ಮುಂದಿನ ತಿಂಗಳ ವಿಶ್ವಕಪ್ ಸಮೀಪಿಸುತ್ತಿರುವಂತೆ, 116 ಪಾಯಿಂಟ್ಸ್ ಗಳಿಸಿರುವ ಭಾರತ ಎರಡನೇ ಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾ 118 ಪಾಯಿಂಟ್ಸ್ ಹೊಂದಿದ್ದು ಅಗ್ರಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ಬೆನ್ನುಬೆನ್ನಿಗೆ ಗಳಿಸಿದ ಜಯಗಳಿಂದ ಬಡ್ತಿಪಡೆದಿದೆ.

ಸಂಕ್ಷಿಪ್ತ ಸುದ್ದಿ

ಕೊಕೇನ್ ಮಾರಾಟ ಆರೋಪ: ಮೆಕ್‌ಗಿಲ್ ಬಂಧನ

ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ಲೆಗ್‌ಸ್ಪಿನ್ನರ್ ಸ್ಟುವರ್ಟ್ ಮೆಕ್‌ಗಿಲ್ ಅವರನ್ನು ಮಾದಕ ದ್ರವ್ಯ ಕೊಕೇನ್ ಮಾರಾಟದಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಇಬ್ಬರು ವ್ಯಕ್ತಿಗಳಿಗೆ ₹ 2.74 ಕೋಟಿಗೂ ಹೆಚ್ಚು ಮೌಲ್ಯದ ಕೊಕೇನ್ ಮಾರಾಟದ ವ್ಯವಹಾರ ಕುದುರಿಸಿರುವ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಶಸ್ತ್ರಸಜ್ಜಿತ ಗುಂಪೊಂದು 2021ರ ಏಪ್ರಿಲ್‌ನಲ್ಲಿ ಮೆಕ್‌ಗಿಲ್ ಅವರನ್ನು ಉತ್ತರ ಸಿಡ್ನಿಯಲ್ಲಿರುವ ಅಪಾರ್ಟ್‌ಮೆಂಟ್ ಬಳಿಯಿಂದ ಅಪಹರಿಸಿದ್ದ ಘಟನೆ ನಡೆದಿತ್ತು.

‘ಅಪಹರಣಕಾರರು ನನ್ನನ್ನು ವಿವಸ್ತ್ರಗೊಳಿಸಿ, ಥಳಿಸಿದ್ದರಲ್ಲದೆ ಬೆದರಿಕೆ ಹಾಕಿದ್ದರು’ ಎಂದು ಮೆಕ್‌ಗಿಲ್ ಅಂದು ದೂರಿದ್ದರು.

ಆ ಘಟನೆ ಬಗ್ಗೆ ವಿಸ್ತೃತ ತನಿಖೆ ನಡೆಸಿರುವ ಪೊಲೀಸರು, ‘ಮೆಕ್‌ಗಿಲ್ ಅವರ ಅಪಹರಣ ಘಟನೆಗೂ ಮಾದವ ದ್ರವ್ಯ ಮಾರಾಟ ವ್ಯವಹಾರಕ್ಕೂ ನಂಟು ಇದೆ’ ಎಂದು ಆರೋಪಿಸಿದ್ದಾರೆ.

ವಿಯೆಟ್ನಾಂ ಓಪನ್: ಭಾರತದ ಸವಾಲಿಗೆ ತೆರೆ

ಹೊ ಚಿ ಮಿನ್ ಸಿಟಿ (ಪಿಟಿಐ): ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಕಣದಲ್ಲಿದ್ದ ಸಿಮ್ರಾನ್ ಸಿಂಘಿ– ರಿತಿಕಾ ಠಕ್ಕರ್ ಜೋಡಿ ಶುಕ್ರವಾರ ನಿರ್ಗಮಿಸುವುದರೊಂದಿಗೆ ವಿಯೆಟ್ನಾಂ ಓಪನ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿದೆ.

ಮೂರನೇ ಶ್ರೇಯಾಂಕದ ಭಾರತದ ಜೋಡಿಯು ಕ್ವಾರ್ಟರ್ ಫೈನಲ್ ಹಂತದ ಪಂದ್ಯದಲ್ಲಿ 21-18, 15-21, 15-21ರಿಂದ ಶ್ರೇಯಾಂಕರಹಿತ ಜೋಡಿ ಜಿಯಾಂಗ್ ಯಿ ಹುವಾ ಮತ್ತು ಲಿ ಝಿ ಕ್ವಿಂಗ್ (ಚೀನಾ ತೈಪೆ) ಅವರಿಗೆ ಶರಣಾಯಿತು.

ಟೈರ್‌ಗಳಿಂದ ಒಳಾಂಗಣ ವಿನ್ಯಾಸಕ್ಕೆ ಮೆರುಗು

ಖುತ ರಾಘವಿ

ವಾಹನಗಳ ಅನುಪಯೋಗಿ ಟೈರ್‌ಗಳನ್ನು ವಿಷಕಾರಿ ಅನುಪಯೋಗಿ ಪಟ್ಟಿಗೆ ಸೇರಿಸಲಾಗಿದೆ. ಆದರೆ, ಇಂಥದ್ದೇ ಅನುಪಯೋಗಿ ಟೈರ್‌ಗಳನ್ನು ಬಳಸಿ ಮನೆಯ ಒಳಾಂಗಣವನ್ನು ಅಂದಗೊಳಿಸಬಹುದು. ಸ್ವಲ್ಪ ಆಸಕ್ತಿಯಿದ್ದು, ಸೃಜನಶೀಲವಾಗಿ ಯೋಚಿಸುವ ಮನಸ್ಥಿತಿ ಇದ್ದರೆ, ಟೈರ್ ಜತೆ ಮನೆಯಲ್ಲಿ ಸಿಗುವ ಅತ್ಯಲ್ಪ ವಸ್ತುಗಳನ್ನು ಬಳಸಿಯೇ ಅತ್ಯಾಕರ್ಷಕ ಒಳಾಂಗಣ ವಿನ್ಯಾಸ ಮಾಡಬಹುದು.

ಲಭ್ಯವಿರುವ ವಿವಿಧ ಆಕಾರಗಳ ಟೈರ್‌ಗಳಿಂದಾಗಿ ಏನೆಲ್ಲ ಮಾಡಬಹುದು ಇಲ್ಲಿದೆ ಕೆಲವು ಮಾದರಿಗಳು;

> ಒಳಾಂಗಣ ವಿನ್ಯಾಸವೆಂಬುದು ಕೇವಲ ದುಬಾರಿ ಸಂಗತಿಯೇನಲ್ಲ. ಆಸಕ್ತಿ ಇದ್ದರೆ ಮನೆಯಲ್ಲಿಯೇ ಸಿಗುವ ಸರಳ ವಸ್ತುಗಳಿಂದ ಆಕರ್ಷಕವಾಗಿ ವಿನ್ಯಾಸ ಮಾಡಬಹುದು. ಇವುಗಳನ್ನೊಮ್ಮೆ ಮಾಡಲು ಪ್ರಯತ್ನಿಸಿ.

ಓಟೋಮನ್ ಕುರ್ಚಿ

ಹಗ್ಗ ಹಾಗೂ ಟೈರ್ ಬಳಸಿ ಓಟೋಮನ್ ಕುರ್ಚಿ ತಯಾರಿಸಬಹುದು. ಟೈರ್‌ಗೆ ಹೊಂದಿಕೆಯಾಗುವ ಅರ್ಧ ಇಂಚಿನ ದಪ್ಪದ ಪ್ಲೈವುಡ್, ಡ್ರಿಲ್ ಮಷಿನ್, ಸ್ಕ್ರೂ, ಸ್ಕ್ರೂಡ್ರೈವರ್ , ಹಾಟ್ ಗ್ಲೂ, ಹಗ್ಗ, ಸ್ಪಾಂಜ್, ಬಟ್ಟೆ, ಕತ್ತರಿ ಇವುಗಳಿದ್ದರೆ ಸಾಕು.

ಟೈರ್ ಸುತ್ತ ಹಗ್ಗವನ್ನು ಗ್ಲೂ ಬಳಸಿ ಸುತ್ತಿ. ಅದರ ಮೇಲ್ಭಾಗ ಹಾಗೂ ಕೆಳಭಾಗಕ್ಕೆ ಆಚೆ ಈಚೆ ಡ್ರಿಲ್ ಮಾಡಿ ಸ್ಕ್ರೂನಿಂದ ಪ್ಲೈವುಡ್ ಹಾಕಿ. ಪ್ಲೈವುಡ್ ಆಕಾರಕ್ಕೆ ಸ್ಪಾಂಜ್ ಅನ್ನು ಕತ್ತರಿಸಿ ಇಟ್ಟರೆ ಕುಳಿತುಕೊಳ್ಳಲು ಓಟೋಮನ್ ಕುರ್ಚಿ ಸಿದ್ಧಗೊಳ್ಳುತ್ತದೆ. ಲಾಂಜ್‌ನಲ್ಲಿ, ವರಾಂಡಗಳಲ್ಲಿ ಈ ಕುರ್ಚಿಯನ್ನಿಟ್ಟರೆ ಒಳಾಂಗಣದ ಅಂದ ಹೆಚ್ಚುತ್ತದೆ.

ಟೈರ್ ಕೊಡೆ ಸ್ಟ್ಯಾಂಡ್

ಮಳೆ ಇರಲಿ, ಬಿಸಿಲು ಬರಲಿ ಕೊಡೆಯಂತೂ ಬೇಕೇ ಬೇಕು. ಮನೆಯ ಹಲವು ಸದಸ್ಯರು ತರಹೇವಾರಿ ಕೊಡೆ ಬಳಸುತ್ತಿದ್ದರೆ ಅದನ್ನು ಇಡಲು ಒಂದು ಸ್ಥಳ ಬೇಡವೇ?. ಅದಕ್ಕೆ ಈ ಟೈರ್ ಕೊಡೆಯ ಸ್ಟ್ಯಾಂಡ್ ಉಪಯೋಗಕ್ಕೆ ಬರುತ್ತದೆ.

ಚೂಪಾದ ಕತ್ತರಿಯಿಂದ ಕೊಡೆ ಹಿಡಿಸುವಷ್ಟು ಜಾಗದಲ್ಲಿ ಟೈರ್ ಒಳಭಾಗದಲ್ಲಿ ನಾಲ್ಕು ರಂಧ್ರ ಮಾಡಿ. ಆ ರಂಧ್ರದ ಮಧ್ಯೆ ಪ್ಲಾಸ್ಟಿಕ್ ಅಥವಾ ಮರದ ಮುಚ್ಚಳವನ್ನು ಸಿಕ್ಕಿಸಿ. ಅದರಲ್ಲಿ ಬೇಕಾದ ಹಾಗೆ ಕೊಡೆಗಳನ್ನು ಇಡಬಹುದು.

ಟೈರ್ ಮಿರರ್ ಫ್ರೇಮ್

ಟೈರ್ ಮಧ್ಯಭಾಗದಲ್ಲಿ ಉರುಟಾಕಾರದ ಕನ್ನಡಿಯನ್ನು ಇಟ್ಟು ಗ್ಲೂ ಹಾಕಿ ಅಂಟಿಸಿದರೆ ಸಾಕು ಟೈರ್ ಮಿರರ್ ಫ್ರೇಮ್ ಸಿದ್ಧಗೊಳ್ಳುತ್ತದೆ. ಮನೆಯ ಖಾಲಿ ಜಾಗದಲ್ಲಿ ಟೈರ್ ಈ ಕನ್ನಡಿಯು ಉತ್ತಮವಾಗಿ ಕಾಣುತ್ತದೆ. ಉರುಟಾಕಾರದ ಕನ್ನಡಿ ಹಾಗೂ ಉರುಟಾಕಾರದ ಮರದ ಫ್ರೇಮ್, ಹಳೆಯ ಟೈರ್‌ನಿಂದ ಇದನ್ನು ಬಹಳ ಸರಳವಾಗಿ ಸಿದ್ಧಪಡಿಸಬಹುದು.

ಟೈರ್ ಹೂಕುಂಡ

ಹೂಕುಂಡಗಳ ಖರೀದಿಗೆ ಆಗಾಗ ನರ್ಸರಿಗೆ ಭೇಟಿ ನೀಡುವ ಬದಲು ಮನೆಯಲ್ಲಿ ಟೈರ್‌ಗಳನ್ನು ಬಳಸಿ ಹೂಕುಂಡ ಮಾಡಬಹುದು. ಈ ಟೈರ್‌ಗಳಿಗೆ ಥೀಮ್ ಆಧಾರಿತ ಬಣ್ಣ ಬಳಿದರೆ ಹೂಗಳ ಮಧ್ಯೆ ಟೈರ್ ಕೂಡ ಆಕರ್ಷಕವಾಗಿ ಕಾಣುತ್ತದೆ ಮತ್ತು ಹೂದೋಟಕ್ಕೆ ಹೊಸ ಕಳೆ ತರುತ್ತದೆ. ಸಾಮಾನ್ಯ ಟೈರ್‌ಗಳಿಗೆ ಬಣ್ಣ ಬಳಿದು, ಕೆಳಗೆ ನೀರು ತೊಟ್ಟಿಕ್ಕಲು ರಂಧ್ರವಿರುವ ಹಲಗೆಯನ್ನು ಇಟ್ಟು, ಅದಕ್ಕೆ ಮಣ್ಣು ತುಂಬಿಸಿಯೂ ಹೂಕುಂಡ ಮಾಡಬಹುದು. ಇಲ್ಲವಾದರೆ ಹಾಟ್ ಗ್ಲೂ ಬಳಸಿ ಅನುಪಯುಕ್ತ ಬಾಟಲಿಗಳನ್ನು ಹೂಕುಂಡಕ್ಕೆ ಅಂಟಿಸಿ ಸ್ಟ್ಯಾಂಡ್‌ನಂತೆಯೂ ಬಳಸಬಹುದು.

ಹಬ್ಬಕ್ಕೆ ಸಿಹಿ ಉಂಡೆಗಳ ಸವಿ

ಸಿಹಿ ಉಂಡೆಗಳಲ್ಲಿ ಹಲವು ಬಗೆಗಳಿವೆ. ಪ್ರಾದೇಶಿಕವಾಗಿ ವಿಭಿನ್ನವಾಗಿಯೂ ಇರುತ್ತವೆ. ಅಂಥ ಉಂಡೆಗಳ ರೆಸಿಪಿಗಳನ್ನು ಕೆ.ವಿ. ರಾಜಲಕ್ಷ್ಮಿಯವರು ಇಲ್ಲಿ ಪರಿಚಯಿಸಿದ್ದಾರೆ.

ಸವಿ ರುಚಿ

1. ಕೆಂಪಕ್ಕಿ ಉಂಡೆ

ಬೇಕಾಗುವ ಸಾಮಗ್ರಿ: ಕೆಂಪಕ್ಕಿ ಒಂದು ಕಪ್, ಹೆಸರುಬೇಳೆ ಎರಡು ಚಮಚ, ಒಣಕೊಬ್ಬರಿ ತುರಿ 1 ಚಮಚ, ಬೆಲ್ಲದಪುಡಿ ಮುಕ್ಕಾಲು ಕಪ್, ಚಿಟಕಿ ಏಲಕ್ಕಿ ಪುಡಿ, ತುಪ್ಪ ಎರಡು ಚಮಚ.

ಮಾಡುವ ವಿಧಾನ: ಕೆಂಪಕ್ಕಿಯನ್ನು ತೊಳೆದು, ತೇವ ಇಂಗುವವರೆಗೆ ನೆರಳಲ್ಲಿ ಆರಿಸಿ ಹುರಿದುಕೊಳ್ಳಿ. ಜಿಡ್ಡು ಸೋಕಿಸದೆ ಹೆಸರುಬೇಳೆಯನ್ನು ಪರಿಮಳ ಬರುವವರೆಗೆ ಹುರಿಯಿರಿ. ಹುರಿದ ಕೆಂಪಕ್ಕಿ ಮತ್ತು ಹೆಸರುಬೇಳೆಯನ್ನು ಚಿರೋಟಿರವೆಯ ಹದಕ್ಕೆ ಅರೆದುಕೊಳ್ಳಿ. ಬಾಣಲೆಯಲ್ಲಿ ಬೆಲ್ಲದಪುಡಿ ಹಾಕಿ ಸ್ವಲ್ಪ ನೀರು ಹಾಕಿ ಕರಗಿಸಿ, ಅರೆದ ಹಿಟ್ಟು ಸೇರಿಸಿ ಸಣ್ಣ ಉರಿಯಲ್ಲಿ ಐದು ನಿಮಿಷ ಗೊಟಾಯಿಸಿ, ಉರಿ ಆರಿಸಿ. ನಂತರ ಏಲಕ್ಕಿ ಪುಡಿ, ತುಪ್ಪ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಬಿಸಿಯಿರುವಾಗಲೇ ಸಣ್ಣ ಸಣ್ಣ ಉಂಡೆಗಳಾಗಿ ಕಟ್ಟಿ.

3. ಗೋಡಂಬಿ-ಶೇಂಗಾ ಉಂಡೆ

ಬೇಕಾಗುವ ಸಾಮಗ್ರಿ: ಗೋಡಂಬಿ ತುಂಡು ಕಾಲು ಕಪ್, ಹುರಿದು ಸಿಪ್ಪೆ ಬಿಡಿಸಿದ ಶೇಂಗಾ ಬೀಜ ಅರ್ಧ ಕಪ್, ಹುರಿಗಡಲೆ ಪುಡಿ ಎರಡು ಚಮಚ, ಬೆಲ್ಲ ಅರ್ಧ ಕಪ್.

ಮಾಡುವ ವಿಧಾನ: ಬಾಣಲೆಯಲ್ಲಿ ಬೆಲ್ಲ ಹಾಕಿ ಸ್ವಲ್ಪ ನೀರು ಹಾಕಿ ಸಣ್ಣ ಉರಿಯಲ್ಲಿಡಿ. ಬೆಲ್ಲ ಅಂಟು ಪಾಕದ ಹದಕ್ಕೆ ಬಂದ ಕೂಡಲೇ ಉರಿ ಆರಿಸಿ. ಮೇಲೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನೂ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅಗಲವಾದ ತಟ್ಟೆಗೆ ವರ್ಗಾಯಿಸಿ. ನಂತರ ಅಂಗೈಯಲ್ಲಿ ತುಪ್ಪ ಸವರಿಕೊಂಡು ಸಣ್ಣಸಣ್ಣಉಂಡೆಗಳನ್ನು ಕಟ್ಟಿ. ಈಗ ಗೋಡಂಬಿ-ಶೇಂಗಾ ಉಂಡೆ ಸವಿಯಲು ಸಿದ್ಧ.

2. ಬೆಲ್ಲದ ಪುರಿ

ಬೇಕಾಗುವ ಸಾಮಗ್ರಿ: ಸಾದಾ ಪುರಿ ಎರಡು ಕಪ್, ಬೆಲ್ಲ ಒಂದು ಕಪ್.

ಮಾಡುವ ವಿಧಾನ: ಬಾಣಲೆಯಲ್ಲಿ, ಬೆಲ್ಲ ಹಾಕಿ ಅರ್ಧ ಕಪ್ ನೀರು ಸೇರಿಸಿ, ಸಣ್ಣ ಉರಿಯಲ್ಲಿಡಿ. ಅಂಟಿನ ನೊರೆ ಬರುವಾಗ ಪುರಿ ಹಾಕಿ ಒಂದೆರಡು ಬಾರಿ ತಿರುವಿ ಮಿಶ್ರಣ ಮಾಡಿ ಅಗಲವಾದ ಪಾತ್ರೆಗೆ ವರ್ಗಾಯಿಸಿ ಹರಡಿ ತಣಿಸಿ. ನಂತರ ಗಾಳಿಯಾಡದ ಡಬ್ಬದಲ್ಲಿ ಶೇಖರಿಸಿಡಿ. ಸಂಜೆಯ ವೇಳೆ ಸ್ನ್ಯಾಕ್ಸ್‌ಗಾಗಿ ಬೆಲ್ಲದ ಪುರಿ ಹೇಳಿ ಮಾಡಿಸಿದ ತಿನಿಸು.



ಪರಿಸರಸ್ನೇಹಿ ಗೌರಿ–ಗಣೇಶ ಹಬ್ಬ

ಎಲ್ಲೆಡೆ ಗೌರಿ–ಗಣೇಶ ಹಬ್ಬ ಆಚರಣೆಯ ಸಂಭ್ರಮ ಶುರುವಾಗಿದೆ. ಸಂಭ್ರಮದ ಜತೆಗೆ, ‘ಪರಿಸರಸ್ನೇಹಿ’ಯಾಗಿರಬೇಕು. ಪರಿಸರ ಪೂರಕ ಹಬ್ಬ ಆಚರಣೆ, ಪೂಜೆಯಷ್ಟೇ ಪವಿತ್ರವಾದದು !

ಹೇಗೆ ಆಚರಿಸಬೇಕು ?

- ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಒ.ಪಿ) ಮತ್ತು ಬಣ್ಣದ ವಿಗ್ರಹಗಳನ್ನು ಬಳಸಬೇಡಿ. ಬಣ್ಣ ರಹಿತ ಮಣ್ಣಿನ ವಿಗ್ರಹಗಳನ್ನೇ ಪ್ರತಿಷ್ಠಾಪಿಸಿ ಪೂಜಿಸಿ.
- ಈಗೀಗ ಕೆಲವು ಸಂಸ್ಥೆಗಳು ತರಕಾರಿ, ಹೂವಿನ ಬೀಜಗಳನ್ನಿಟ್ಟು ಗಣಪತಿ ವಿಗ್ರಹಗಳನ್ನು ತಯಾರಿಸುತ್ತಿದ್ದಾರೆ. ಅಂಥ ಮೂರ್ತಿಗಳನ್ನು ಕೂರಿಸಿ. ನಿಮ್ಮ ಮನೆಯ ಅಂಗಳದ ಕುಂಡದಲ್ಲೋ, ಕೈತೋಟದಲ್ಲೋ ವಿಸರ್ಜನೆ ಮಾಡಿ. ನೀವು ಪೂಜಿಸಿದ ಗಣಪ ಸಸ್ಯದ ರೂಪದಲ್ಲಿ ನಿಮ್ಮ ಮನೆಯಲ್ಲೇ ಇರುತ್ತಾನೆ.
- ಪೆಂಡಾಲ್, ಮಂಟಪದ ಅಲಂಕಾರಕ್ಕೆ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬೇಡಿ. ಮಣ್ಣಿನಲ್ಲಿ ಕರಗುವಂತಹ ಎಲೆ, ಹೂವಿನಂತಹ ವಸ್ತುಗಳನ್ನೇ ಬಳಸಿ.
- ಉತ್ಸವ ಮುಗಿದ ಮೇಲೆ, ಸಂಗ್ರಹವಾಗುವ ಕಸವನ್ನು ಒಣಕಸ, ಹಸಿಕಸ(ಮಣ್ಣಿನಲ್ಲಿ ಕರಗುವ, ಕರಗದ) ಬೇರ್ಪಡಿಸಿ, ವಿಲೇವಾರಿ ಮಾಡಿ.

fabindia
60 YEARS OF CELEBRATING INDIA
ESTABLISHED 1960
CLEARANCE SALE
FLAT 50% OFF* ON SELECT MERCHANDISE
10 am - 8 pm
Venue :
Saudhamini Kalyana Mantapa, New Bank Colony, Anjanapura Main Road, Opp. Reliance Fresh, Konanakunte, Bangalore - 62
Safina Plaza, No.84/85, Infantry Road, Bangalore - 01
fabfamily | fabindia.com | ALL COVID-19 PROTOCOLS WILL BE TAKEN CARE OF
*T&C Apply
Surya Agency Private Limited

THE BIG DISCOUNT SALE
LAST 2 DAYS
SINCE 1960
hakoba®
FABRICS • SUITS • CUT PIECES • SAREES • KURTIS
PREMA CHANDRA KALYANA MAHAL
264, T. Mariyappa Road, 2nd Block, Jayanagar, Near Ashoka Pillar, Bangalore - 560 011.
CLEARANCE SALE
SALE now in PROGRESS
UPTO 50% OFF
www.hakoba.in
FRESH ARRIVALS NOW ON DISPLAY
All Cards Accepted • 10 am to 9 pm • 7080904360 • CAR PARKING AVAILABLE

Off-Campus Center of
ICFAI Foundation for Higher Education
(Deemed-to-be University under Section 3 of the UGC Act, 1956)
Accredited by NAAC with 'A++' Grade
ICFAI LAW SCHOOL
ADMISSIONS OPEN 2023
ICFAI Law School, Bengaluru
brings to you
A Unique Program
First of its kind in India
BAJ-LLB (Hons.)
5 Year Integrated Program with a great blend of Arts, Journalism & Law
&
BBA-LLB (Hons.)



Eligibility: Pass in Class XII or equivalent with an aggregate of 50% and above marks (any discipline) with English as medium of instruction.
Highlights
- Packaged programs, blend of theory and practice.
- Research orientation and continuing education.
- Strong, in-depth, dynamic and quality curriculum.
- Developing and sharpening the soft skill sets.
- Internships with the law firms and professionals.
- Learning with live projects.
- Special focus on advocacy and awareness programs.
- Regular activities such as simulations, competitions.
- Mock sessions (Moot Court, Mediation and Client Counselling) and simulations
Contact: 9440386133
Toll Free: 1800 599 0767
Campus: ICFAI Law School, Bengaluru, The ICFAI Foundation for Higher Education (Off Campus Centre at Bengaluru) # 231, Near Check Post, Mysore Road, Kengeri, Bengaluru - 560 060
For more details please visit: www.ifheindia.org/folblr/

‘ಸೂರ್ಯಕಾಂತಿ’ ಎಂದು ಕುಣಿದ ಅಮೃತಾ

ನಾಗಭೂಷಣ್ ಹಾಗೂ ಅಮೃತಾ ಪ್ರೇಮ್ ನಟನೆಯ ‘ಟಗರು ಪಲ್ಯ’ ರಿಲೀಸ್‌ಗೆ ಸಜ್ಜಾಗುತ್ತಿದೆ. ಚಿತ್ರದ ಎರಡನೇ ಹಾಡು ‘ಸೂರ್ಯಕಾಂತಿ’ ಬಿಡುಗಡೆಯಾಗಿದ್ದು, ಹಳ್ಳಿ ಸೊಗಡಿನ ಹಾಡಿಗೆ ಜನರು ಫಿದಾ ಆಗಿದ್ದಾರೆ.

ನಟ ಡಾಲಿ ಧನಂಜಯ ಅವರು ‘ಡಾಲಿ ಪಿಕ್ಚರ್ಸ್ ’ ಸಂಸ್ಥೆಯಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈಗಾಗಲೇ ಚಿತ್ರದ ಟೈಟಲ್ ಟ್ರ್ಯಾಕ್ ಬಿಡುಗಡೆಯಾಗಿದ್ದು, ವೀಕ್ಷಕರಿಂದ ಮೆಚ್ಚುಗೆ ಪಡೆದಿದೆ. ಇದೀಗ ಚಿತ್ರತಂಡ ‘ಸೂರ್ಯಕಾಂತಿ ನಾನು..’ ಎಂಬ ಹಾಡನ್ನು ಅನಾವರಣ ಮಾಡಿದೆ. ಸ್ವತಃ ಧನಂಜಯ ಅವರೇ ಈ ಹಾಡಿನ ಸಾಹಿತ್ಯ ಬರೆದಿದ್ದು, ಮಾಧುರಿ ಶೇಷಾದ್ರಿ ಧ್ವನಿಯಿದೆ. ವಾಸುಕಿ ವೈಭವ್ ಈ ಹಾಡಿಗೆ ಸಂಗೀತ ನೀಡಿದ್ದು, ‘ಲವ್ಲಿ ಸ್ಟಾರ್’ ಪ್ರೇಮ್ ಪುತ್ರಿ ಅಮೃತಾ ಪ್ರೇಮ್ ಹೆಜ್ಜೆ ಹಾಕಿದ್ದಾರೆ.

ಉಮೇಶ್ ಕೆ.ಕೃಪ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಈ ಸಿನಿಮಾ ಮೂಲಕ ಅನೇಕ ಹೊಸಬರು ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ. ನಟ ಪ್ರೇಮ್ ಅವರ ಪುತ್ರಿಗೆ ಇದು ಚೊಚ್ಚಲ ಸಿನಿಮಾ. ರಂಗಾಯಣ ರಘು, ತಾರಾ, ಶರತ್ ಲೋಹಿತಾಶ್ವ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ಪ್ರಚಾರ ಕಾರ್ಯ ಆರಂಭಿಸಿರುವ ‘ಟಗರು ಪಲ್ಯ’ ತಂಡ ರಾಜ್ಯೋತ್ಸವಕ್ಕೆ ಸಿನಿಮಾ ರಿಲೀಸ್ ಮಾಡಲು ಸಿದ್ಧತೆ ನಡೆಸುತ್ತಿದೆ.

ಅಮೃತಾ ಪ್ರೇಮ್

‘ಮ್ಯಾಟ್ನಿ’ ಶೂಟಿಂಗ್ ಪೂರ್ಣ

ನಟ ಸತೀಶ್ ನೀನಾಸಂ ನಟನೆಯ ‘ಮ್ಯಾಟ್ನಿ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಇತ್ತೀಚೆಗಷ್ಟೇ ಸಿನಿಮಾದ ‘ಸಂಜೆ ಮೇಲೆ ಸುಮ್ನೆ ಫೋನ್ ಮಾಡ್ಲ ನಿಂಗೆ...’ ಎಂಬ ಹಾಡು ಬಿಡುಗಡೆಯಾಗಿತ್ತು. ಇದರಲ್ಲಿ ನಟಿ ರಚಿತಾ ರಾಮ್ ಜೊತೆ ಸತೀಶ್ ಹೆಜ್ಜೆ ಹಾಕಿದ್ದರು. ಇದೀಗ ಅದೇ ಚಿತ್ರದ ಮತ್ತೊಂದು ಹಾಡಿಗೆ ಗೆಳೆಯರ ಜೊತೆಗೂಡಿ ಪಾರ್ಟಿ ಮಾಡಿದ್ದಾರೆ ನಟ ಸತೀಶ್.

‘ಅಯೋಗ್ಯ’ ಸಿನಿಮಾ ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ಜೋಡಿ ಮತ್ತೊಮ್ಮೆ ತೆರೆ ಮೇಲೆ ಮೋಡಿ ಮಾಡಲು ಈ ಸಿನಿಮಾ ಮೂಲಕ ಬರುತ್ತಿದೆ. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಹೈಕ್ಲಾಸ್ ಹುಡುಗನ ಪಾತ್ರದಲ್ಲಿ ಸತೀಶ್ ಅವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಮನೋಹರ್ ಕಾಂಪಲ್ಲಿ ಆ್ಯಕ್ಷನ್ ಕಟ್ ಹೇಳಿರುವ ‘ಮ್ಯಾಟ್ನಿ’ ಸಿನಿಮಾ ಶೀಘ್ರದಲ್ಲೇ ತೆರೆಗೆ ಬರಲಿದೆ. ಇತ್ತೀಚೆಗಷ್ಟೇ ‘ಬಾರೋ ಬಾರೋ ಬಾರೋ..’ ಎಂಬ ಪಾರ್ಟಿ ಹಾಡಿನ ಚಿತ್ರೀಕರಣ ಬೆಂಗಳೂರಿನ ಪಬ್ ಒಂದರಲ್ಲಿ ನಡೆಯಿತು. ಸುಮಾರು 200 ಜನರು ಈ ಹಾಡಿನ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ನಟರಾದ ನಾಗಭೂಷಣ್, ಶಿವರಾಜ್ ಕೆ.ಆರ್.ಪೇಟೆ, ಪೂರ್ಣಚಂದ್ರ ಮೈಸೂರು ಅವರೂ ಸತೀಶ್ ಅವರಿಗೆ ಸಾಥ್ ನೀಡಿದ್ದರು.

ಈ ಹಾಡಿನ ಶೂಟಿಂಗ್ ಪೂರ್ಣಗೊಳ್ಳುವ ಮೂಲಕ ಚಿತ್ರೀಕರಣವೂ ಪೂರ್ಣಗೊಂಡಿದ್ದು, ಸದ್ಯ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಆರಂಭಿಸಿದೆ.

ನಿಶ್ಚಿತ್ ಕರೋಡಿ, ದೀಪಿಕಾ ಆರಾಧ್ಯ

‘ಸಪ್ಲೇಯರ್ ಶಂಕರ’ನ ಪ್ರೇಮಗೀತೆ

ಸಿನಿ ಹನಿ

ತ್ರಿನೇತ್ರ ಫಿಲಂಸ್ ಲಾಂಛನದಲ್ಲಿ ಎಂ. ಚಂದ್ರಶೇಖರ್ ಹಾಗೂ ಎಂ.ನಾಗೇಂದ್ರ ಸಿಂಗ್ ನಿರ್ಮಿಸಿರುವ ಹಾಗೂ ರಂಜಿತ್ ನಿರ್ದೇಶನದಲ್ಲಿ ನಿಶ್ಚಿತ್ ಕರೋಡಿ ನಾಯಕನಾಗಿ ನಟಿಸಿರುವ ‘ಸಪ್ಲೇಯರ್ ಶಂಕರ’ ಚಿತ್ರದ ಎರಡನೇ ಹಾಡು ಆನಂದ್ ಆಡಿಯೋ ಯೂಟ್ಯೂಬ್ ನಲ್ಲಿ ಬಿಡುಗಡೆಯಾಗಿದೆ.

ಪ್ರಮೋದ್ ಮರವಂತೆ ಬರೆದಿರುವ ‘ಮಾಡೊ ಕೆಲಸವ ನೀನು ಮರೆಸಿದೆ’ಎಂಬ ಈ ಪ್ರೇಮಗೀತೆ ನಕುಲ್ ಅಭಯಂಕರ್ ಹಾಗೂ ಐಶ್ವರ್ಯ ರಂಗರಾಜನ್ ಅವರ ಕಂಠದಲ್ಲಿ ಸುಮಧುರವಾಗಿ ಮೂಡಿಬಂದಿದೆ. ಆರ್ .ಬಿ ಭರತ್ ಸಂಗೀತ ನೀಡಿದ್ದಾರೆ. ಹಾಡು ಬಿಡುಗಡೆಯಾದ ತಕ್ಷಣದಿಂದಲೇ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ‘ಸಪ್ಲೇಯರ್ ಶಂಕರ’ ಬಾರ್ ಸಪ್ಲೇಯರ್ ಒಬ್ಬನ ಸುತ್ತ ನಡೆಯುವ ಕಥೆ. ‘ಗಂಟು ಮೂಟೆ’ ಮತ್ತು ‘ಟಾಮ್ & ಜೆರ್ರಿ’ ಚಿತ್ರಗಳ ಮೂಲಕ ಜನಪ್ರಿರಾಗಿರುವ ನಿಶ್ಚಿತ್ ಕರೋಡಿ ಈ ಚಿತ್ರದಲ್ಲಿ ‘ಸಪ್ಲೇಯರ್ ಶಂಕರ’ ನಾಗಿ ಕಾಣಿಸಿಕೊಂಡಿದ್ದಾರೆ. ದೀಪಿಕಾ ಆರಾಧ್ಯ ಈ ಚಿತ್ರದ ನಾಯಕಿ. ಗೋಪಾಲಕೃಷ್ಣ ದೇಶಪಾಂಡೆ, ನವೀನ್ ಪಡೀಲ್, ಜ್ಯೋತಿ ರೈ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ನಿರ್ದೇಶಕ ರಂಜಿತ್ ಅವರೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ಲವ್, ಕಾಮಿಡಿ, ತಾಯಿ-ಮಗನ ಸೆಂಟಿಮೆಂಟ್, ಬಾರ್ ಸಪ್ಲೇಯರ್ ಜೀವನದ ಜೊತೆಗೆ ಸಸ್ಪೆನ್ ಥ್ರಿಲ್ಲರ್ ಕಥಾಹಂದರವನ್ನು ಈ ಚಿತ್ರ ಒಳಗೊಂಡಿದೆ.

ಸತೀಶ್ ಕುಮಾರ್ ಛಾಯಾಚಿತ್ರಗ್ರಹಣ , ಸತೀಶ್ ಚಂದ್ರಯ್ಯ ಅವರ ಸಂಕಲನ ಹಾಗೂ ಬಾಲಾಜಿ ಅವರ ಕಲಾ ನಿರ್ದೇಶನ ‘ಸಪ್ಲೇಯರ್ ಶಂಕರ’ ಚಿತ್ರಕ್ಕಿದೆ. ಈ ವರ್ಷದ ಕೊನೆಗೆ ತೆರೆಯ ಮೇಲೆ ರಾರಾಜಿಸಲಿದ್ದಾನೆ.

ಎಸ್.ಆರ್.ಪ್ರಮೋದ್, ಅರ್ಚನಾ

‘ಕುಮಾರ’ ಪಯಣ ಪ್ರಾರಂಭ

‘ಅಸ್ಥಿರ’,‘ಆತ್ಮ’ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದ ಎಸ್.ಆರ್.ಪ್ರಮೋದ್ ನಿರ್ದೇಶನದ ‘ಕುಮಾರ’ ಚಿತ್ರದ ಚಿತ್ರೀಕರಣ ಇತ್ತೀಷೆಗಷ್ಟೇ ಪ್ರಾರಂಭಗೊಂಡಿದೆ. ಕೆಲ ಸಿನಿಮಾಗಳಲ್ಲಿ ನಾಯಕರಾಗಿಯೂ ಕಾಣಿಸಿಕೊಂಡಿದ್ದ ಪ್ರಮೋದ್ ಈ ಚಿತ್ರದಲ್ಲಿ ನಟಿಸುವುದರ ಜೊತೆಗೆ ತಮ್ಮದೇ ಪ್ರಮೋದ್ ಪಿಕ್ಚರ್ಸ್ ಸಂಸ್ಥೆ ಮೂಲಕ ಬಂಡವಾಳ ಹೂಡುತ್ತಿದ್ದಾರೆ.

‘ಹಳ್ಳಿಯಲ್ಲಿ ನಡೆಯುವ ದ್ವೇಷದ ಕಾಲ್ಪನಿಕ ಕಥೆಯಾಗಿದೆ. ಊರಿನ ಜಮೀನ್ದಾರನ ಮನೆಗೆ ಅಪರಿಚಿತ ಬರುವ ಉದ್ದೇಶವೇನು? ಜಮೀನ್ದಾರನ ಮಗಳು ಕಾಣೆಯಾಗುವುದೇಕೆ? ಎಂಬುದರ ಸುತ್ತ ಕಥೆ ಸಾಗುತ್ತದೆ. ಈ ಎಲ್ಲಾ ಕುತೂಹಲಗಳ ನಡುವೆ ಸುಂದರ ಪ್ರೇಮಕಥೆ ಇರಲಿದೆ’ ಎಂದಿದ್ದಾರೆ ನಿರ್ದೇಶಕರು.

ಯುವ ಪ್ರತಿಭೆ ಅರ್ಚನಾ ನಾಯಕಿ. ಕೆ.ವಿ.ಎನ್. ಎಂ ಸಂಗೀತ ಸಂಯೋಜನೆ, ರಣಧೀರನಾಯಕ್ ಛಾಯಾಗ್ರಹಣ ಚಿತ್ರಕ್ಕಿದೆ.

‘ಜಲಪಾತ’ ಚಿತ್ರದ ಹಾಡು ಬಿಡುಗಡೆ

ಇಂಡಸ್ ಹರ್ಬ್ಸ್‌ನ ಟಿ .ಸಿ. ರವೀಂದ್ರ ತುಂಬರಮನೆ ನಿರ್ಮಿಸಿ, ರಮೇಶ್ ಬೇಗಾರ್ ಶೃಂಗೇರಿ ರಚಿಸಿ ನಿರ್ದೇಶಿಸಿರುವ ಜಲಪಾತ ಚಿತ್ರದ 2 ನೇ ಹಾಡು (ಲವ್ ಸಾಂಗ್) ಇದೀಗ ಎ - 2 ಮ್ಯೂಸಿಕ್ ವಾಹಿನಿಯ ಮುಖಾಂತರ ಬಿಡುಗಡೆಯಾಗಿದೆ.

ಇತ್ತೀಚೆಗೆ ಸಿನಿಮಾ ನಿರ್ಮಾಣ ತಂಡ ಆಯೋಜಿಸಿದ್ದ ‘ಜಲಪಾತ ಮಲೆನಾಡು ಉತ್ಸವ’ ಎಂಬ ಸಾಂಸ್ಕೃತಿಕ ಮೇಳದಲ್ಲಿ ಖ್ಯಾತ ನಟಿ ಜಯಮಾಲ ಅವರು ‘ಎಲ್ಲಿ ಹೋದನೇ ಸಖಿ’ ಎಂಬ ಹಾಡನ್ನು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತಾಡಿದ ಜಯಮಾಲ ತನ್ನ ಮಲೆನಾಡು ಮೂಲ ಚಿಕ್ಕಮಗಳೂರನ್ನು ನೆನಪಿಸಿಕೊಂಡರು. ಚಿತ್ರದ ನಾಯಕ ನಟಿ ನಾಗಶ್ರೀಗೆ ಯಶಸ್ಸು ಸಿಗಲಿ ಎಂದು ಹಾರೈಸಿದರು.

ಇಡೀ ಸಿನಿಮಾದ ಆಶಯವೇ ವಿನಾಶದಂಚಿಗೆ ಸರಿದಿರುವ ಪರಿಸರದ ಕುರಿತು ಕಾಳಜಿ ಮೂಡಿಸುವಂಥದ್ದು. ವ್ಯಾವಹಾರಿಕ ಉದ್ದೇಶಗಳಿಲ್ಲದೇ ನಿಜವಾದ ಪ್ರಕೃತಿ ಪ್ರೀತಿಯಿಂದ ನಿರ್ಮಿಸಿದ ಈ ಚಿತ್ರ ಖಂಡಿತಾ ಜನರ ಮನಸ್ಸು ಗೆಲ್ಲಲಿದೆ ಎಂದರು ಜಯಮಾಲ.

ನಿರ್ಮಾಪಕ ಟಿ ಸಿ ರವೀಂದ್ರ ತುಂಬರಮನೆ ಮಾತನಾಡಿ ‘ನಾವು ಸಿನಿಮಾದಲ್ಲಿ ಹೆಚ್ಚು ಗ್ರಾಮೀಣ ಪ್ರತಿಭೆಗಳನ್ನೇ ಬಳಸಿಕೊಂಡು ಅವರಿಗೊಂದು ವೇದಿಕೆ ಒದಗಿಸಿದ್ದೇವೆ. ಬಹಳ ಅರ್ಥಪೂರ್ಣವಾದ ಈ ಪ್ರೇಮ ಗೀತೆಯನ್ನು ವನಿತಾ ವೆಂಕಟೇಶ್ ಬರೆದಿದ್ದಾರೆ ಎಂದರು

ನಿರ್ದೇಶಕ ರಮೇಶ್ ಬೇಗಾರ್ ಮತ್ತು ಸಂಗೀತ ನಿರ್ದೇಶಕಿ ಸಾಧ್ವಿನಿ ಕೊಪ್ಪ ಈ ಸಂದರ್ಭ ಮಾತನಾಡಿದರು

‘ಎಲ್ಲಿಹೋದನೇ ಸಖಿ’ ಹಾಡನ್ನು ವನಿತಾ ವೆಂಕಟೇಶ್ ಬರೆದಿದ್ದು ಸಾಧ್ವಿನಿ ಕೊಪ್ಪ ಸಂಗೀತ ಸಂಯೋಜನೆ ಮಾಡಿ ಶ್ರೀನಿಧಿ ಶಾಸ್ತ್ರೀ ಅವರೊಂದಿಗೆ ಡ್ಯುಯೆಟ್ ಹಾಡಿದ್ದಾರೆ. ಸೆಪ್ಟೆಂಬರ್ 29 ಕ್ಕೆ ’ಜಲಪಾತ’ ತೆರೆಕಾಣಲಿದೆ.

‘ಜಲಪಾತ’ ಸಿನಿಮಾದ ಪ್ರೇಮಗೀತೆ ಬಿಡುಗಡೆ ಸಮಾರಂಭದಲ್ಲಿ ನಟಿ ಜಯಮಾಲ ಮಾತನಾಡಿದರು. ಚಿತ್ರದಲ್ಲಿ ಸಿನಿಮಾ ನಿರ್ಮಾಣ ತಂಡದ ಸದಸ್ಯರಿದ್ದಾರೆ.

‘ರಾಜರಾಣಿ’ ಯಲ್ಲಿ ಯೋಗಿ ಡ್ಯಾನ್ಸ್

ಬಳ್ಳಾರಿಯ ರಣಧೀರ್ ನಿರ್ದೇಶನದ ‘ರಾಜರಾಣಿ’ ಚಿತ್ರದಲ್ಲಿ ನಟ ಲೂಸ್ ಮಾದ ಯೋಗಿ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ರಾಜನಕುಂಟೆಯಲ್ಲಿನ ಕಲರ್‌ಫುಲ್ ಸೆಟ್‌ನಲ್ಲಿ ಇತ್ತೀಚೆಗಷ್ಟೇ ಹಾಡಿನ ಚಿತ್ರೀಕರಣ ನಡೆಯಿತು.

ರವಿತಪಸ್ವಿ ಸಾಹಿತ್ಯ, ಪ್ರಭು ನೃತ್ಯ ಸಂಯೋಜನೆಯಲ್ಲಿ ಲೂಸ್‌ಮಾದ ಯೋಗಿ ಹಾಗೂ ರಣಧೀರ್ ನೃತ್ಯಕಲಾವಿದರೊಂದಿಗೆ ’ತಳ ತಳ, ಎಲ್ಲಾ ಕಡೆ ನಿನ್ನ ಹಾಡೇ’ ಸಾಲಿನ ಗೀತೆಗೆ ಹೆಜ್ಜೆ ಹಾಕಿದರು.

‘ನಾನು ಮೂಲತ: ಫೋಟೋಗ್ರಾಫರ್. ಒಮ್ಮೆ ಕಿರುಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ನಟನೆ ಬಾರದೆ ಅವಮಾನ ಅನುಭವಿಸಿದೆ. ಅದನ್ನೇ ಸವಾಲಾಗಿ ಸ್ವೀಕರಿಸಿ ತಮಿಳು ಚಿತ್ರಕ್ಕೆ ನಾಯಕನಾದೆ. ನಂತರ ಕನ್ನಡದಲ್ಲಿ ಮೂರು ಚಿತ್ರಗಳಲ್ಲಿ ಅಭಿನಯಿಸಿದೆ. ಅದರ ಅನುಭವದಿಂದಲೇ ಈ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ನಾಯಕನಾಗಿ ಕಾಣಿಸಿಕೊಂಡಿದ್ದೇನೆ’ ಎಂದರು ನಿರ್ದೇಶಕರು.

‘ಇಬ್ಬರು ನಾಯಕರಿದ್ದಾರೆ. ನಾಯಕಿ ಕಾಣೆಯಾಗುವುದರ ಸುತ್ತ ಕಥೆ ಸಾಗಲಿದೆ. ಕುತೂಹಲ ಹಾಗೂ ಪ್ರೀತಿಯನ್ನು ಒಳಗೊಂಡ ಕುಟುಂಬ ಸಮೇತ ನೋಡಬಹುದಾದ ಚಿತ್ರವಾಗಿದೆ’ ಎಂದಿದೆ ಚಿತ್ರತಂಡ.

ಮಂಡ್ಯ ಮೂಲದ ರಿತನ್ಯ ಶೆಟ್ಟಿ ಚಿತ್ರದ ನಾಯಕಿ. ಗಿರಿಜಾಲೋಕೇಶ್, ಶೋಭರಾಜ್, ಬಿರಾದಾರ್, ಕಿಲ್ಲರ್‌ವೆಂಕಟೇಶ್ ಮುಂತಾದವರು ನಟಿಸಿದ್ದಾರೆ.



ಸ್ವಪ್ನ ಶೆಟ್ಟಿಗಾರ್, ದಿಲೀಪ್ ಪೈ, ಕುಂಕುಮ

ಸಿನಿ ಹನಿ

ವಿಭಿನ್ನ ಕಥೆಯ ‘ರಾವೆನ್’ ಸಿನಿಮಾ

ವಿಶ್ವ ಪ್ರೊಡಕ್ಷನ್ಸ್ ಹಾಗೂ ಆತ್ಮ ಸಿನಿಮಾಸ್ ಲಾಂಛನದಲ್ಲಿ ವಿಶ್ವನಾಥ್.ಜಿ.ಪಿ ಹಾಗೂ ಪ್ರಬಿಕ್ ಮೊಗವೀರ್ ಅವರು ನಿರ್ಮಿಸುತ್ತಿರುವ, ವೇದ್ ನಿರ್ದೇಶನದ ‘ರಾವೆನ್’ ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು.

ಶಾಸಕ ಗೋಪಲಯ್ಯ ಚಿತ್ರದ ಮೊದಲ ದೃಶ್ಯಕ್ಕೆ ಆರಂಭ ಫಲಕ ತೋರಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ನಿರ್ದೇಶಕ ಎಂ.ಡಿ.ಶ್ರೀಧರ್ ಸೇರಿದಂತೆ ಅನೇಕ ಗಣ್ಯರು ಮುಹೂರ್ತ ಸಮಾರಂಭಕ್ಕೆ ಆಗಮಿಸಿ ಚಿತ್ರತಂಡಕ್ಕೆ ಶುಭ ಕೋರಿದರು. ‘ರಾವೆನ್’ ಎಂದರೆ ಕಾಗೆಯ ಹೆಸರು. ಸಾಮಾನ್ಯವಾಗಿ ಕಾಗೆ ತಾಕಿದ್ದರೆ ಸ್ನಾನ ಮಾಡಬೇಕು. ಅದು ವಾಹನದ ಮೇಲೆ ಕೂರಬಾರದು ಮುಂತಾದ ನಂಬಿಕೆಗಳು ರೂಢಿಯಲ್ಲಿದೆ. ಆದರೆ ನಮ್ಮ ಸಿನಿಮಾ ದಲ್ಲಿ ಕಾಗೆಯೇ ಪ್ರಮುಖ ಪಾತ್ರಧಾರಿ. ಕಾಗೆಯಿಂದ ಸಾಕಷ್ಟು ಒಳ್ಳೆಯದಾಗುತ್ತದೆ ಎಂಬುದನ್ನು ತೋರಿಸುತ್ತಿದ್ದೇವೆ. ಈ ತಿಂಗಳ 21ರಿಂದ ಚಿತ್ರೀಕರಣ ಆರಂಭವಾಗಲಿದೆ. ದಿಲೀಪ್ ಪೈ ನಾಯಕನಾಗಿ ನಟಿಸುತ್ತಿದ್ದಾರೆ. ಸ್ವಪ್ನ ಶೆಟ್ಟಿಗಾರ್, ಕುಂಕುಮ ನಾಯಕಿಯರು. ಸುಚೇಂದ್ರ ಪ್ರಸಾದ್, ಲೀಲಾ ಮೋಹನ್, ಶ್ರೇಯಾ ಆರಾಧ್ಯ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಚಿತ್ರದ ನಾಯಕಿಯರಾದ ಸ್ವಪ್ನ ಶೆಟ್ಟಿಗಾರ್, ಕುಂಕುಮ್ , ಸಂಗೀತ ನಿರ್ದೇಶಕ ಕ್ರಿಸ್ಟಫರ್ ಹಾಗೂ ಛಾಯಾಗ್ರಾಹಕ ಆರ್ ಸಿ ಟಿ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು .

ಮುಟ್ಟಿನಸ್ರಾವ ಎಷ್ಟಿದ್ದರೆ ಆರೋಗ್ಯ?

ಆ ದಿನಗಳು ಎಷ್ಟು ತ್ರಾಸದಾಯಕ ಎಂಬುದು ವಿವರಣೆಗೆ ನಿಲುಕದ್ದು. ಮುಟ್ಟಿನಸ್ರಾವ ಎಷ್ಟು ಪ್ರಮಾಣದಲ್ಲಿ, ಯಾವ ಬಣ್ಣದಲ್ಲಿದ್ದರೆ ಆರೋಗ್ಯ ಎಂಬುದನ್ನು ಮಂಗಳೂರಿನ ಕೆಎಂಸಿ ಆಸ್ಪತ್ರೆಯ ಪ್ರಸೂತಿತಜ್ಞೆ ಡಾ. ಸಮೀನಾ ಎಚ್. ಇಲ್ಲಿ ವಿವರಿಸಿದ್ದಾರೆ.

ಆರೋಗ್ಯ

ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳು ಮುಟ್ಟಾಗುವುದು ಅಥವಾ ಋತುಸ್ರಾವವಾಗುವುದು ನೈಸರ್ಗಿಕ ಕ್ರಿಯೆ. ಸರಳವಾಗಿ ಹೇಳುವುದಾದರೆ ಅಂಡಾಶಯಗಳು ಬಿಡುಗಡೆ ಮಾಡುವ ಅಂಡಾಣುಗಳು ಫಲಿತಗೊಳ್ಳದೇ ಹೊರಹಾಕುವ ಪ್ರಕ್ರಿಯೆಯನ್ನು ಮುಟ್ಟಾಗುವುದು ಎನ್ನಲಾಗುತ್ತದೆ. ಈ ಋತುಸ್ರಾವದ ಸಮಯದಲ್ಲಿ ಎಷ್ಟು ಪ್ರಮಾಣದ ರಕ್ತಸ್ರಾವವಾದರೆ ಅದು ಸಾಮಾನ್ಯ, ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆದರೆ ಅದನ್ನು ಅಸಹಜವೆಂದೇ ಎಂದು ಪರಿಗಣಿಸಲಾಗುತ್ತದೆ.

ಡಾ. ಸಮೀನಾ

ರಕ್ತಸ್ರಾವದ ಸಾಮಾನ್ಯಮಟ್ಟ

ಋತುಸ್ರಾವದ ಸಮಯದಲ್ಲಿ ಸರಾಸರಿ 30 ರಿಂದ 40 ಮಿ.ಲೀಟರ್‌ನಷ್ಟು (ಎಂಎಲ್) ರಕ್ತ ನಷ್ಟವಾಗುತ್ತದೆ. ಇದು 2 ರಿಂದ 3 ಟೇಬಲ್ ಸ್ಪೂನ್‌ಗೆ ಸಮನಾಗಿರುತ್ತದೆ. ಈ ಅಳತೆಯಲ್ಲಿ ವೈಯಕ್ತಿಕವಾಗಿ ತುಸು ಹೆಚ್ಚು ಕಡಿಮೆಯಾಗಬಹುದು.

ಅತಿ ರಕ್ತಸ್ರಾವವಾಗುತ್ತಿದ್ದರೆ, ಅದನ್ನು ಗುರುತಿಸುವುದು ಮುಖ್ಯವಾಗಿರುತ್ತದೆ. ಅತಿಯಾದ ರಕ್ತಸ್ರಾವವನ್ನು ಮೆನೊರೇಜಿಯಾ ಎಂದು ಕರೆಯಲಾಗುತ್ತದೆ. ಗುರುತಿಸುವಿಕೆಯಿಂದ ಇದು ಸಾಮಾನ್ಯ ಮಟ್ಟದಲ್ಲಿದೆಯೇ? ಅಥವಾ ಬೇರೆ ಆರೋಗ್ಯ ಸಮಸ್ಯೆಗಳನ್ನು ಸೂಚಿಸುತ್ತಿವೆಯೇ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

ಅತಿಸ್ರಾವದ ಲಕ್ಷಣಗಳು

- ಗಂಟೆಗೊಮ್ಮೆ ಅಥವಾ ಅದಕ್ಕೂ ಮೊದಲು ಪ್ಯಾಡ್ ಅಥವಾ ಟ್ಯಾಂಪೂನ್ ಬದಲಾವಣೆ. ಹರಿವನ್ನು ನಿಯಂತ್ರಿಸಲು ದುಪಟ್ಟು ಸಂರಕ್ಷಣೆ (ಎರಡು ಮೂರು ಪ್ಯಾಡ್‌ಗಳ ಬಳಕೆ)
- ಅತಿಯಾದ ಹೆಪ್ಪುಗಟ್ಟಿದ ರಕ್ತದ ತುಣುಕುಗಳು
- ಏಳು ದಿನಕ್ಕೂ ಹೆಚ್ಚಿನ ಅವಧಿಯ ರಕ್ತಸ್ರಾವ
- ಅತಿಯಾದ ಆಯಾಸ, ದೌರ್ಬಲ್ಯ, ರಕ್ತಹೀನತೆ ಕೆಲವು ಸಾಮಾನ್ಯ ಕಾರಣಗಳು
- ಹಾರ್ಮೋನ್‌ಗಳಲ್ಲಿ ಅದರಲ್ಲೂ ವಿಶೇಷವಾಗಿ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟೆರೋನ್‌ಗಳಲ್ಲಿ ಏರುಪೇರು ಆಗುವುದರಿಂದ ಅತಿಯಾದ ರಕ್ತಸ್ರಾವ ಉಂಟಾಗಬಹುದು.
- ಗರ್ಭಾಶಯದಲ್ಲಿ ಫೈಬ್ರಾಯ್ಡ್ ಗಡ್ಡೆಗಳಿಂದ ಅತಿಯಾದ ರಕ್ತಸ್ರಾವ ಮತ್ತು ನೋವಿಗೆ ಕಾರಣವಾಗಬಹುದು.
- ಹಾರ್ಮೋನ್ ಸಂಬಂಧಿತ ಸಮಸ್ಯೆಯಾದ ಪಾಲಿಸಿಸ್ಟಿಕ್ ಒವರಿ ಸಿಂಡ್ರೋಮ್ (ಪಿಸಿಓಎಸ್)ನಿಂದ ಅನಿಗದಿತ ಅವಧಿಗೆ ಅತಿಯಾದ ರಕ್ತಸ್ರಾವವಾಗಬಹುದು.
- ಅಡೆನೊಮಯೋಸಿಸ್: ಗರ್ಭಾಶಯದ ಮಾಂಸಖಂಡಗಳ ಗೋಡೆಯ ಒಳಗೆ ಗರ್ಭಾಶಯ ಪದರಗಳಲ್ಲಿನ ಅಂಗಾಂಶಗಳು ಬೆಳೆಯಲು ಆರಂಭವಾಗುವ ಸ್ಥಿತಿ ಇದಾಗಿದ್ದು, ಮುಟ್ಟಿನ ಅವಧಿಯಲ್ಲಿ ಅತಿಯಾದ ರಕ್ತಸ್ರಾವ ಇರಲಿದೆ.

ಪರಿಹಾರ ಏನು ?

ರಕ್ತವನ್ನು ತಿಳಿಗೊಳಿಸುವ ಮತ್ತು ಹಾರ್ಮೋನ್ ಮಟ್ಟಗಳ ಮೇಲೆ ಪರಿಣಾಮ ಉಂಟುಮಾಡುವ ಔಷಧಗಳು ಅತಿಯಾದ ರಕ್ತಸ್ರಾವಕ್ಕೆ ಕೊಡುಗೆ ನೀಡಬಹುದು.

ರಕ್ತಸ್ರಾವದ ನಿರ್ವಹಣೆ

- ಋತುಸ್ರಾವದ ಸಮಯದಲ್ಲಿ ಸೂಕ್ತ ಪ್ಯಾಡ್, ಟ್ಯಾಂಪೂನ್, ಮೆನುಸ್ಟ್ರುಯಲ್ ಕಪ್, ಪಿರಿಯೆಡ್ ಅಂಡರ್‌ವೇರ್‌ಗಳ ಬಳಕೆ ಮಾಡಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಇದರಿಂದ ಅಪಾಯಕಾರಿ ಸೋಂಕುಗಳನ್ನು ತಪ್ಪಿಸಬಹುದು.
- ದೈನಂದಿನ ಜೀವನಕ್ಕೆ ತೊಂದರೆ ಉಂಟುಮಾಡುತ್ತಿದ್ದರೆ, ಇದಕ್ಕಾಗಿ ವೈದ್ಯಕೀಯ ಚಿಕಿತ್ಸಾ ವಿಧಾನಗಳಿವೆ.

ಬಣ್ಣದ ಬದಲಾವಣೆಯಲ್ಲಿದೆ ಆರೋಗ್ಯ !

ಋತುಸ್ರಾವದ ಸಮಯದಲ್ಲಿ ರಕ್ತದ ಬಣ್ಣದಲ್ಲಿ ಬದಲಾವಣೆ ಸಹಜ. ಆರಂಭದಲ್ಲಿ ಅದು ಪ್ರಖರ ಕೆಂಪು ಬಣ್ಣ ಹೊಂದಿರುತ್ತದೆ. ಗರ್ಭಾಶಯದ ಆರಂಭಿಕ ಹೊರಪದರ ಕಳಚಿಹೋಗುತ್ತಿರುವುದರಿಂದ ಈ ಬಣ್ಣ ಪ್ರಖರವಾಗಿರುತ್ತದೆ. ದಿನಗಳದಂತೆ ದೇಹದ ಹಳೆಯ ರಕ್ತ ಹೊರಹೋಗುವುದರಿಂದ ಗಾಢವಾದ ಕೆಂಪು ಅಥವಾ ಕಂದು ಬಣ್ಣಕ್ಕೆ ತಿರುಗುತ್ತದೆ.

ಅಲ್ಪಪ್ರಮಾಣದ ಋತುಸ್ರಾವವಿರುವಾಗ ಗುಲಾಬಿ ಬಣ್ಣ ಇರಬಹುದು. ಅತಿಯಾದ ಋತುಸ್ರಾವವಿದ್ದರೆ ಗಾಢ ಹೆಪ್ಪುಗಟ್ಟಿದ ರೀತಿಯಲ್ಲಿ ರಕ್ತಸ್ರಾವವಾಗಬಹುದು. ಆ ಐದು ಅಥವಾ ಏಳು ದಿನಗಳ ಅಂತರದಲ್ಲಿ ತಿಳಿ ಗುಲಾಬಿ ಅಥವಾ ಕಂದುಬಣ್ಣದ ರಕ್ತವಿರಬಹುದು. ಹಾರ್ಮೋನ್‌ನಲ್ಲಿನ ವ್ಯತ್ಯಾಸ, ಹರಿವಿನ ಪ್ರಮಾಣದಿಂದ ಅದರ ಬಣ್ಣ ಬದಲಾಗುತ್ತಿರುತ್ತದೆ. ಇದಲ್ಲದೇ ರಕ್ತದ ಬಣ್ಣದಲ್ಲಿ ಬೇರೆ ವ್ಯತ್ಯಾಸ ಕಂಡುಬಂದರೆ ಆರೋಗ್ಯತಜ್ಞರ ಸಲಹೆ ಪಡೆಯುವುದು ಒಳಿತು.

ನೆನಪಿಡಬೇಕಾದ ಅಂಶಗಳು

- ನಾಲ್ಕು ಗಂಟೆಗಳಿಗೊಮ್ಮೆ ಸ್ಯಾನಿಟರಿ ನ್ಯಾಪ್‌ಕಿನ್ ಬದಲಿಸಿ. ಸೂಕ್ತ ರೀತಿಯಲ್ಲಿ ಸ್ವಚ್ಛಮಾಡಿಕೊಳ್ಳಿ. ಯೋನಿಯ ಒಳಗೆ ಸೋಂಕಾಗಾದಂತೆ ನೋಡಿಕೊಳ್ಳಿ. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಸೂಕ್ತವಾಗಿ ವಿಲೇವಾರಿ ಮಾಡಿ.
- ಅತಿಯಾದ ರಕ್ತಸ್ರಾವವಾಗುತ್ತಿದ್ದರೆ ಮನೆಮದ್ದು ಎಂದು ಸುಮ್ಮನೆ ಕೂರಬೇಡಿ. ಕೂಡಲೇ ತಜ್ಞ ವೈದ್ಯರನ್ನು ಸಂಪರ್ಕಿಸಿ.
- ವಾರಕ್ಕೆ ಕನಿಷ್ಠ ಮೂರು ಬಾರಿ 30 ನಿಮಿಷಗಳ ಕಾಲ ವ್ಯಾಯಾಮ ಮಾಡಿರಿ. ದೈಹಿಕವಾಗಿ ಚಟುವಟಿಕೆ ಹೊಂದಿರುವಾಗ ಅದರಿಂದ ದೇಹ ದಾರ್ಢ್ಯತೆ ಹೆಚ್ಚುತ್ತದೆ. ಆತ್ಮವಿಶ್ವಾಸ ಬರುತ್ತದೆ. ಆತಂಕ, ಖಿನ್ನತೆ ಕಡಿಮೆಯಾಗುತ್ತದೆ. ❖



'ಗನ್ಸ್ ಆ್ಯಂಡ್ ರೋಸಸ್' ಬಿರುಸಿನ ಚಿತ್ರೀಕರಣ

ಸಿನಿ ಬಿಟ್ಸ್

ಅಂಡರ್ ವರ್ಲ್ಡ್ ಮತ್ತು ಪ್ರೀತಿಯ ಕಥಾಹಂದರ ಹೊಂದಿರುವ 'ಗನ್ಸ್ ಅಂಡ್ ರೋಸಸ್' ಚಿತ್ರಕ್ಕೆ ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಬಿರುಸಿನಿಂದ ಸಾಗಿದೆ. ಕೆಂಗೇರಿ ಸುತ್ತಮುತ್ತ, ಉಲ್ಲಾಳದ ವಿಶ್ವೇಶ್ವರಯ್ಯ ಲೇಔಟ್ ಮುಂತಾದ ಕಡೆ ಚಿತ್ರೀಕರಣ ನಡೆದಿದೆ.

ರಾಜಕೀಯದಲ್ಲಿ ಸಕ್ರಿಯರಾಗಿರುವ ಉದ್ಯಮಿ ಹೆಚ್ ಆರ್ ನಟರಾಜ್ ನಿರ್ಮಾಣ ಮಾಡುತ್ತಿರುವ ಈ ಚಿತ್ರವನ್ನು ಹೆಚ್ ಎಸ್ ಶ್ರೀನಿವಾಸಮೂರ್ತಿ ನಿರ್ದೇಶಿಸುತ್ತಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಶರತ್ ಎಸ್ ಅವರದು. ಶಶಿಕುಮಾರ್ ಸಂಗೀತ ನಿರ್ದೇಶನ, ಆರ್ ಜನಾರ್ದನ್ ಛಾಯಾಗ್ರಹಣ, ಸಂಜೀವ ರೆಡ್ಡಿ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಕನ್ನಡ ಚಿತ್ರರಂಗದ ಖ್ಯಾತ ಕಥೆಗಾರರಾದ ಅಜಯ್ ಕುಮಾರ್ ಅವರ ಪುತ್ರ ಅರ್ಜುನ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ನಾಯಕಿ ಯಶ್ವಿಕ ನಿಷ್ಕಲ. ಶೋಭ್ ರಾಜ್, ಅವಿನಾಶ್, ಅಶ್ವಥ್ ನೀನಾಸಂ, ಹರೀಶ್, ಜೀವನ್ ರಿಚಿ, ವೀಣಾ ಸುಂದರ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖



ನಿಶ್ಚಿತ
ಕಡಿಮೆ
ಬೆಲೆಯಲ್ಲಿ
TRIPLE DHAMAKA
CELEBRATIONS
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
52nd
ANNIVERSARY
CELEBRATIONS
GIFTS WORTH 11 CRORES
ಮಹೋನ್ನತ ಪ್ರಾರಂಭೋತ್ಸವ
139ನೇ ಮೆಗಾ ಸ್ಟೋರ್
ತಿಪಟೂರು ನಲ್ಲಿ
#602 ಎಸ್ ಆರ್ ಆರ್ಕೇಡ್, ರೈಲ್ವೇ ಸ್ಟೇಷನ್ ರಸ್ತೆ
(ಎಸ್‌ಬಿಐ ಬ್ಯಾಂಕ್ ಎದುರು)
ತಿಪಟೂರು–572201, ದೂ: 90362 89548
ಇಂದು ಬೆಳಗ್ಗೆ 10.40 ಗಂಟೆಗೆ ಮಹೋನ್ನತ ಪ್ರಾರಂಭೋತ್ಸವ
Ganesha Habba Sale
ಉಚಿತ* FIRE-BOLTT SMART CALLING WATCH Worth ₹20,000
1 CRORE
HAPPY CUSTOMERS
SLIM SERIES
8GB RAM
512GB SSD
15,6
WIN11 MSO 21
JUST ₹115 PER DAY*
ಉಚಿತ: ₹4,999 ಮೌಲ್ಯದ GIFTS
GAMING
8GB RAM
512GB SSD
4 GB GFX NVIDIA GTX/
15.6" FHD
WIN 11
JUST ₹155 PER DAY*
ಉಚಿತ: ₹9,999 ಮೌಲ್ಯದ GIFTS
EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ*
5G mela
GET YOUR FAVOURITE 5G PHONE
JUST ₹42 PER DAY*
UPTO 80% OFF
ON PURCHASE OF ACCESSORIES
vivo SAMSUNG ONEPLUS oppo mi
13/14
GET APPLE PHONE @ JUST ₹86 PER DAY* ONWARDS
ಉಚಿತ: ₹1,990 ಮೌಲ್ಯದ APPLE 20W ADAPTOR
EXCLUSIVE ONLY @ GIRIAS
LG NanoCell
NANOCELL TV NANO77 43 4K SMART TV EMI: ₹2999
NANOCELL TV NANO77 55 4K SMART TV EMI: ₹3999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 55 OLED 4K SMART TV 55S90C
SPECIAL ಇ.ಎಮ್.ಐ ₹2,990
CASHBACK BONANZA
UPTO 20%*
AXIS BANK ICICI Bank Credit Cards SBI card Bank of Baroda Credit Card Standard Chartered HDFC BANK
Haier 630 ಲೀ INVERTER ಸೈಡ್ ಬೈ ಸೈಡ್
SPECIAL ಇ.ಎಮ್.ಐ ₹5,538
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Godrej 233 ಲೀ ಫ್ರಾಸ್ಟ್ ಫ್ರೀ
SPECIAL ಇ.ಎಮ್.ಐ ₹1,973
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SONY 55 BRAVIA XR 4K HDR OLED TV XR-55A80L
SPECIAL ಇ.ಎಮ್.ಐ ₹12,812
Panasonic 55 SMART 4K OLED
SPECIAL ಇ.ಎಮ್.ಐ ₹6,541
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
FINANCE BONANZA
1 ಇ.ಎಮ್.ಐ ಉಚಿತ*
Upto ₹10,000 ಕ್ಯಾಶ್ ಬ್ಯಾಕ್*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
EXCLUSIVE ONLY @ GIRIAS
"LARGEST CAPACITY WASHER IN INDIA"
LG 15 ಕೆಜಿ ಫ್ರಂಟ್ ಲೋಡಿಂಗ್ FHT1415ZTM
SPECIAL ಇ.ಎಮ್.ಐ ₹7,083
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Electrolux 7.5 ಕೆಜಿ ಫ್ರಂಟ್ ಲೋಡಿಂಗ್
SPECIAL ಇ.ಎಮ್.ಐ ₹3,166
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 1.5 TON 5 STAR INVERTER AC SPLIT RS-Q19HNZP
SPECIAL ಇ.ಎಮ್.ಐ ₹5,333
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
MONSTER SIZE LEDs UPTO 57% OFF*
55 ANDROID TV FRAMELESS 4K UHD LED ₹29,900 Or EMI: ₹2,492
65 ANDROID TV FRAMELESS 4K UHD LED ₹50,540 Or EMI: ₹4,212
75 ANDROID TV FRAMELESS 4K UHD LED ₹79,780 Or EMI: ₹6,648
86 ANDROID TV FRAMELESS 4K UHD LED ₹1,86,700 Or EMI: ₹15,558
KAFF CHIMNEY MAINZ DHC 60
SPECIAL OFFER PRICE ₹13,990
ಉಚಿತ: ₹3,249 ಮೌಲ್ಯದ BUTTERFLY PRESSURECOOKER COMBO PACK IB (2,3 & 5 LTR)
EUREKA FORBES WATER PURIFIERS SUPERIO RO+UV+MTDS+SS
SPECIAL OFFER PRICE ₹18,990
ಉಚಿತ: ₹3,999 ಮೌಲ್ಯದ NIRLEP NON STICK COOKWARE 4 Pc SET
BOSCH 14 PLACE SETTINGS DISHWASHER
SPECIAL ಇ.ಎಮ್.ಐ ₹4,129
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 28 ಲೀ ಕನ್‌ವೆಂಕ್ಷನ್ ಮೈಕ್ರೋವೇವ್ MC2846BR
SPECIAL ಇ.ಎಮ್.ಐ ₹1,291
AMAZING PARTY SPEAKERS
₹10,990 ಮೇಲ್ಪಟ್ಟು
ಇ.ಎಮ್.ಐ ₹916
LG SAMSUNG SONY PHILIPS JBL ZEBRONICS
LG ASSURED GIFTS* BT SPEAKER INDUCTION COOKER STEAM IRON KETTLE DRY IRON
SAMSUNG SONY Panasonic Haier IFB Godrej LLOYD Whirlpool BOSCH PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS beko Butterfly Preethi ULTRA EUREKA FORBES pureit Livpure FABER KENSTAR BAJAJ Crompton V-GUARD ZEBRONICS KAFF
GIRIAS THE CONSUMER DURABLE PEOPLE Since 1971
ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
STORE LOCATOR
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.10,000 Bajaj cash back / vouchers valid only in selected cities & valid only on Selected REF & AC'S. EMI offer on above products based on 12,16,24 & fixed emi schemes. Exchange offer valid on MRP and Product as to be in good working condition. Free smart watch valid on 20000 & above Purchase on select models & brands
139 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA